ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮೇ 15, 2013 ಪುಟ 20 ರೂ. 14/-



ನನ್ನ ಇಷ್ಟ ನನ್ನ ಸ್ಟೈಲ್

ಅತಂತ್ರದ ಅಂತ್ಯ?

ಮಕೂರು: ಕಾಂಗ್ರೆಸ್ ಮುನ್ನಡೆ, ಜೆಡಿಎಸ್ ಹಿನ್ನಡೆ, ಬಿಜೆಪಿ ಮಕಾಡೆ!



ಚಳ್ಳಕೆರೆ:
ರಘುಮೂರ್ತಿ ಎಂಬ ಸಜ್ಜನನಿಗೆ ಗೆಲುವು




ಮಂಡ್ಯ: ಅಂಬಿಯೇ
'ರೆಬಲ್' ಸ್ಟಾರ್



ಯಲಹಂಕ: ಚಂದ್ರಪ್ಪ
ಅನುಕಂಪದ ಅಲೆ

ಬೊಮ್ಮನಹಳ್ಳಿ: ಸತೀಶ್ ರೆಡ್ಡಿ
ಅಟ್ಟಹಾಸ ಅಂತ್ಯ





ಶಿಗ್ಗಾಂವಿ: ಬೊಮ್ಮಾಯಿ ಮುಂದೆ
ಕಾಂಗ್ರೆಸ್ ಖತಂ!

ನರಸಿಂಹರಾಜ: ತನ್ವೀರ್ ಮನೆಗೆ
ಸಂದೇಶ್‌ಸ್ವಾಮಿ ಗೆಲುವು



ಚುನಾವಣೆ ಸಮೀಕ್ಷೆ



ಮಳವಳ್ಳಿ: ನರೇಂದ್ರಸ್ವಾಮಿ
ಗೆಲುವಿನತ್ತ

ಹಾಸನ: ರೇವಣ್ಣನ
ದರ್ಬಾರಿಗೆ ಅಂಕುಶ!





ಕೃಷ್ಣರಾಜ:
ಾಮದಾಸನ
ೋಲು ಗ್ಯಾರಂಟಿ!





ಶಿವಮೊಗ್ಗ:
ದುಷ್ಟ ಯಡ್ಡಿ ವಿರುದ್ಧ
ಅಸಹಾಯಕ ಈಶ್ವರಿ




ಕಾರವಾರ:
ಅದಿರುಕಳ್ಳ ಸೈಲ್‌ನ
ಶಾಸಕಗಿರಿ ಸರ್ಕಸ್!



ವರುಣ:
ಜಾತಿವಾದ
ಹಣದ ಹೊಳೆ

ರಾವಳಿ: ಯಾರು ಗೆಲ್ಲಬೇಕು? ಯಾಕೆ ಗೆಲ್ಲಬೇಕು?



ಅಂಚಿನಿಂದ

ಡಾ. ವಾಸು ಎಚ್.ವಿ.

ಚುನಾವಣೆಗಳು, ಅಭಿವೃದ್ಧಿ, ಪ್ರಣಾಳಿಕೆಗಳು ಮತ್ತು ಅಪಾಯಕಾರಿ ಮಧ್ಯಮ ವರ್ಗ

ಗುಜರಾತ್ ಚುನಾವಣೆ ನಡೆದಾಗ ಟಿ.ವಿ. ಚರ್ಚಾ ಕಾರ್ಯಕ್ರಮವೊಂದರಲ್ಲಿ ಮಾತನಾಡಲು ನನ್ನನ್ನು ಕರೆದಿದ್ದರು. ಸ್ವತಃ ಕೋಮುವಾದಿಯಲ್ಲದ ಚರ್ಚೆಯ ನಿರೂಪಕನಿಗೆ ಒಂದು ವಿಚಾರ ಸ್ಪಷ್ಟವಿತ್ತು: 'ಗುಜರಾತ್‌ನ ಜನರೇ 2002ರ ನರಮೇಧವನ್ನು ಮರೆತಿದ್ದಾರೆ, ನೀವ್ಯಾಕೆ ಅದನ್ನು ಇನ್ನೂ ಮರೆತಿಲ್ಲ'. ಅದಕ್ಕಿಂತಲೂ ಖಚಿತವಾದ ಇನ್ನೂ ಒಂದು ಸಂಗತಿ ಇತ್ತು: 'ಈಗ ಅಭಿವೃದ್ಧಿಯೋ, ಅಭಿವೃದ್ಧಿ, ಅದರದ್ದೇ ಚರ್ಚೆ'. ಟಿ.ವಿ. ಚರ್ಚೆಯಲ್ಲಿ ಹೆಚ್ಚೇನೂ ಸಾಧನೆಯಾಗಲಿಲ್ಲ. ಸ್ಟುಡಿಯೋದಿಂದ ಕೆಳಗೆ ಇಳಿದು ಬಂದು ಸ್ವಲ್ಪ ದೂರ ಹೋದಕೂಡಲೇ ಪಾನಿಪೂರಿಗಳನ್ನು ಪೇರಿಸಿಟ್ಟುಕೊಂಡಿದ್ದ (ಗೋಲ್‌ಗಪ್ಪಾ) ಒಬ್ಬ ವ್ಯಾಪಾರಿ ಕಾಣಿಸಿದ. ಆತನೊಂದಿಗೆ ಮಾತನಾಡುತ್ತಾ, ಯಾವ ರಾಜ್ಯದವನೆಂದು ಕೇಳಿದೆ. 'ಗುಜರಾತ್' ಎಂದ. ಅಲ್ಲೇ ಪಕ್ಕದಲ್ಲೇ ಬೆಂಗಳೂರಿನ ಸ್ಟುಡಿಯೋದಲ್ಲಿ ಗುಜರಾತ್‌ನ ಚುನಾವಣೆಯಲ್ಲಿ ಮೋದಿಯ ವಿಜಯಯಾತ್ರೆಯ ಬಗ್ಗೆ ಪತ್ರಕರ್ತರು ಸಂಭ್ರಮಿಸುತ್ತಿದ್ದಾರೆ. ಆದರೆ ಈತನಿಗೆ ಅದರ ರುಚಿಯೇ ಇಲ್ಲ.

ಆ ನಂತರ ಇಲ್ಲಿಯವರೆಗೆ ಹುಡುಕುತ್ತಾ, ಹುಡುಕುತ್ತಾ ಕನಿಷ್ಠ 50 ಜನ ಗೋಲ್‌ಗಪ್ಪಾಗಳು ಮತ್ತು ಜಿಲೇಬಿಯವರನ್ನು ಕಂಡಿದ್ದೇನೆ. 50ರಲ್ಲಿ ಶೇ. 40 ಜನ ಗುಜರಾತ್‌ನವರು. ಬರೀ ಇಷ್ಟು ಡಾಟಾವನ್ನಿಟ್ಟುಕೊಂಡು ಗುಜರಾತ್‌ನಿಂದ ಉದ್ಯೋಗಕ್ಕಾಗಿ ದೊಡ್ಡ ಪ್ರಮಾಣದ ವಲಸೆ ದಕ್ಷಿಣ ಭಾರತಕ್ಕೆ ಆಗುತ್ತಿದೆಯೆಂದೂ, ನಿತೀಶ್ ಕುಮಾರ್‌ರ ಅಭಿವೃದ್ಧಿಯಿಂದ ಬಿಹಾರದ ಕಾರ್ಮಿಕರು ದೇಶದೆಲ್ಲೆಡೆಯಿಂದ ವಾಪಸ್ ಹೋಗುತ್ತಿದ್ದಾರೆಂದೂ ಹೇಳಲು ಬರುವುದಿಲ್ಲ. ಅವೆಲ್ಲಕ್ಕೆ ಖಚಿತವಾದ ಅಧ್ಯಯನಗಳು ಮತ್ತು ವಾಸ್ತವವನ್ನು ಬಿಂಬಿಸುವ ಅಂಕಿ-ಅಂಶಗಳ ನೆರವು ಬೇಕು. ಅಂತಹ ಸಾಕಷ್ಟು ಅಂಕಿ-ಅಂಶಗಳು ಗುಜರಾತ್‌ನ ವಾಸ್ತವದ ಸ್ಥಿತಿಯನ್ನು ಬಿಚ್ಚಿಡುತ್ತವೆ. (ಬಾಕ್ಸ್ ನೋಡಿ). ಆದರೆ ಅಭಿವೃದ್ಧಿ ವ್ಯಾಧಿ ಅಂಟಿಸಿಕೊಂಡಿರುವ ಮಧ್ಯಮ ವರ್ಗದ ಮನಸ್ಸುಗಳು ಅವ್ಯಾವನ್ನೂ ಕೇಳುವ ಸ್ಥಿತಿಯಲ್ಲೇ ಇಲ್ಲ.

ಆ ನಿಟ್ಟಿನಲ್ಲಿ ನೀವೇನಾದರೂ ವಾದ ಮಂಡಿಸಲು ಹೊರಟರೆ, ಅವರು ಕಿವಿ ಮುಚ್ಚಿಕೊಳ್ಳುತ್ತಾರೆ ಅಥವಾ ನಿಮ್ಮ ಮೈಕ್‌ಅನ್ನು ಆಫ್ ಮಾಡಿಬಿಡುತ್ತಾರೆ ಅಥವಾ ವ್ಯಂಗ್ಯವಾಗಿ ನಗಲು ಆರಂಭಿಸುತ್ತಾರೆ. ಎರಡು ದಿನಗಳ ಕೆಳಗೆ ಇಂಗ್ಲಿಷ್ ಟಿವಿ ಚರ್ಚೆಯೊಂದರಲ್ಲಿ ಮೋಹನ್‌ದಾಸ್ ಪೈ ಮತ್ತು ಕಿರಣ್ ಮಜುಂದಾರ್ ಶಾ ಮಾಡಿದಂತೆ. ಆ ಚರ್ಚೆಯಲ್ಲಿ ಕರ್ನಾಟಕದ ಚುನಾವಣೆಯ ಕುರಿತೇ ಮಾತನಾಡುತ್ತಿದ್ದರು. ಆದರೆ ಇಡೀ ಮಾತು ಬೆಂಗಳೂರಿನ ಸುತ್ತಲೇ ನಡೆಯುತ್ತಿತ್ತು.

ಬೆಂಗಳೂರಿನ ಆಚೆಗೂ ಕರ್ನಾಟಕವಿದೆ ಮತ್ತು ಬೆಂಗಳೂರಿನಲ್ಲೂ ಬಹುಸಂಖ್ಯಾತರು ಕೆಳ ಮಧ್ಯಮ ವರ್ಗದ ಮತ್ತು ಕಾರ್ಮಿಕ ವರ್ಗದ ಜನರೇ ಆಗಿದ್ದಾರೆ ಎಂಬುದು ಅವರ ಕಾಳಜಿಯ ಕೇಂದ್ರವಾಗಿರಲಿಲ್ಲ. ತಮ್ಮದೇ ಓಟ್‌ಬ್ಯಾಂಕ್‌ಗಳ ಕಾರಣಕ್ಕೆ ಜೆಡಿಎಸ್‌ನ 'ರಾಷ್ಟ್ರೀಯ' ನಾಯಕರಲ್ಲೊಬ್ಬರಾದ ಡ್ಯಾನಿಷ್ ಅಲಿ ಅದನ್ನು ಪ್ರಸ್ತಾಪ ಮಾಡಲು ಶುರು ಮಾಡಿದರೆ, ವ್ಯಂಗ್ಯದ ನಗೆ ಶುರುವಾಗುತ್ತಿತ್ತು, ಆ ಚರ್ಚೆಗೆ ಪ್ರೇಕ್ಷಕರಾಗಿ ಅಲ್ಲೇ ಕುಂತಿದ್ದ ಬೆಂಗಳೂರಿನ ಇಂಗ್ಲಿಷ್ ಕಾಲೇಜೊಂದರ ವಿದ್ಯಾರ್ಥಿಗಳೂ ಆ ವ್ಯಂಗ್ಯದಲ್ಲಿ ಮತ್ತು ಲೇವಡಿಯ ಚಪ್ಪಾಳೆಯಲ್ಲಿ ಭಾಗಿಯಾಗುತ್ತಿದ್ದರು.

ಇಂಥವರನ್ನೆಲ್ಲ ಎಚ್ಚರಿಸಲು ಈಗ ಚುನಾವಣಾ ಜಾಗೃತಿ ಜೋರಾಗಿಯೇ ಸಾಗಿದೆ. ಭಾರತ ಅಮೆರಿಕಾ ಆಗಬೇಕೆಂದರೆ ಅವೆಲ್ಲಾ ಅನಿವಾರ್ಯವೇ ತಾನೇ? ಹಾಗಾಗಿಯೇ ಎಲ್ಲರೂ ಮತದಾನ ಮಾಡಲೇಬೇಕು. ಆ ಮೂಲಕ ಮುಂದಿನ ಐದು ವರ್ಷಗಳಲ್ಲಿ ಏನೆಲ್ಲಾ ಆಗುತ್ತದೋ, ಅದಕ್ಕೆಲ್ಲ ಹೊಣೆಗಾರರಾಗಲು ಸಿದ್ಧರಾಗಬೇಕು. ಎಂಥವರನ್ನು ಚುನಾಯಿಸಬೇಕೆಂದೂ ಹೇಳಲು ಇದೇ ಪೈ ಮತ್ತು ಹಾಗಳ 'ಬಿ' ಪ್ಯಾಕ್ ಸಿದ್ಧವಾಗಿದೆ. ಇದ'ರ ಕಾರ್ಯದರ್ಶಿಯಾಗಿರುವುದು, ತನ್ನ ಸರ್ವೀಸ್‌ನುದ್ದಕ್ಕೂ ಇಂಥವರಿಗೆ ಸೇವೆ ಸಲ್ಲಿಸಿದ್ದ ನಿವೃತ್ತ ಐಎಎಸ್ ಅಧಿಕಾರಿ ಜೈರಾಜ್. ಇವರೆಲ್ಲಾ ಸೇರಿ ಬೆಂಗಳೂರಿನಲ್ಲಿ ಯಾವ್ಯಾವ ಕ್ಷೇತ್ರದಲ್ಲಿ ಯಾರ್‍ಯಾರನ್ನು ಬೆಂಗಳೂರು ಸಿಟಿಜನ್ಸ್ ಗೆಲ್ಲಿಸಬೇಕೆಂದು ತಿಳಿ ಹೇಳಿದ್ದಾರೆ. ಸುಮ್ಮನೆ ಕುತೂಹಲಕ್ಕೆ ನೋಡಿದರೆ, ಅವರ ಆಯ್ಕೆಯ ಅಭ್ಯರ್ಥಿಗಳಲ್ಲಿ ಹೆಚ್ಚಿನವರು ಇಂಗ್ಲಿಷನ್ನು ನಿರರ್ಗಳವಾಗಿ ಮಾತನಾಡಬಲ್ಲವರು. ಗ್ಲೋಬಲ್ ಸಿಟಿ ಬೆಂಗಳೂರನ್ನು ಪ್ರತಿನಿಧಿಸುವವರಿಗೆ ಇಂಗ್ಲಿಷ್ ಕಡ್ಡಾಯವಿರಬಹುದು!

ಮೋದಿಯ ವಿಚಾರದಲ್ಲಿ, ಅಭಿವೃದ್ಧಿಯ ವಿಚಾರದಲ್ಲಿ ಮೇಲೆ ಕಂಡ ಟಿವಿ ನಿರೂಪಕ ಮತ್ತು ಈ ಬಿ ಪ್ಯಾಕ್‌ನ ಮಂದಿಗೆ ಸಾಮ್ಯವಿರುತ್ತದೆನ್ನುವುದು ಕಾಕತಾಳೀಯವೇನಲ್ಲ. ಚುನಾವಣೆಯ ಸಂದರ್ಭದಲ್ಲಿ ಇಡೀ ಪ್ರಜಾಪ್ರಭುತ್ವವನ್ನೇ ತನ್ನ ಕೈಗೆತ್ತಿಕೊಳ್ಳುವ ಐಎಎಸ್ ಅಧಿಕಾರಿ ವರ್ಗವು ಇದೇ ಮನಸ್ಥಿತಿಯನ್ನು ಹೊಂದಿರುವುದೂ ಅಕಸ್ಮಾತ್ತೇನಲ್ಲ. ಇಂತಹದೊಂದು ಅಧಿಕಾರಿ ವರ್ಗ, 'ಬಿ'ಪ್ಯಾಕ್‌ನ ನೇತಾರರು, ಎಲ್ಲಾ ಮಾಧ್ಯಮಗಳನ್ನೂ ಆವರಿಸಿಕೊಳ್ಳುತ್ತಿರುವ ಒಂದು ನಿರ್ದಿಷ್ಟ ಬಗೆಯ ಚಿಂತನೆಯ ಜರ್ನಲಿಸ್ಟುಗಳು, ಇವರೆಲ್ಲರೂ ಸೇರಿ ಪ್ರಭಾವಿಸುತ್ತಿರುವ ಮೇಲ್ಮಧ್ಯಮ ವರ್ಗ. ಇದು ಈ ಸಾರಿಯ ಚುನಾವಣೆಯಲ್ಲಿ ತಣ್ಣಗೆ ಕೂತಿಲ್ಲ. ಪ್ರಜಾಪ್ರಭುತ್ವವನ್ನು ಕೈಗೆತ್ತಿಕೊಳ್ಳಲು ಇನ್ನೂ ಸಂಪೂರ್ಣವಾಗಿ ಸಜ್ಜಾಗಿಲ್ಲವಾದ್ದರಿಂದ ತಮ್ಮದೇ ರೀತಿಯಲ್ಲಿ ಮಾತಾಡಲು ಶುರು ಮಾಡಿದ್ದಾರೆ. ಇಂಥವರಿಗೆಲ್ಲಾ ಮೋದಿಯೇ ಮಾದರಿ. ಅಭಿವೃದ್ಧಿಯೋ ಅಭಿವೃದ್ಧಿ.

ಒಂದು ಸೋಜುಗ: ಇಂಥವರಿಗೆಲ್ಲಾ 1 ರೂ.ಗೆ ಒಂದು ಕೆ.ಜಿ.ಯಂತೆ ಅಕ್ಕಿ ನೀಡುವ ಚುನಾವಣಾ ಪ್ರಣಾಳಿಕೆಗಳ 'ಜನಪ್ರಿಯ' ಕಾರ್ಯಕ್ರಮಗಳನ್ನು ನೋಡಿದರೆ ಏನೆಲ್ಲಾ ಅನ್ನಿಸಬಹುದು? ಜನರನ್ನು ಸೋಮಾರಿಗಳನ್ನಾಗಿಸುವ, ಕೂಲಿಗೇ ಹೋಗದಂತೆ ಮಾಡಿ ರೈತರಿಗೆ ಹಾಗೂ ಉದ್ದಿಮೆದಾರರಿಗೆ ಸವಾಲಾಗಿರುವ ಒಂದು ದೊಡ್ಡ ಪಿಡುಗು ಎನ್ನಿಸಬಹುದು. ಜನಸಾಮಾನ್ಯರ ಬಗ್ಗೆ ಆ ರೀತಿ



ಸಿಟ್ಟಿರದವರಿಗೆ ಜನರ ಸ್ವಾಭಿಮಾನವನ್ನು ಕಿತ್ತುಕೊಳ್ಳುವ ಆಳುವ ಜನರ ಹುನ್ನಾರ ಎನ್ನಿಸಬಹುದು. ಇನ್ನೂ ಕೆಲವರಿಗೆ ಇದು ಜನರ ಬಹುವೈವಿಧ್ಯದ ಆಹಾರ ಪದ್ಧತಿಯನ್ನು ಏಕರೂಪಿಯನ್ನಾಗಿಸಿದ ಸಂಸ್ಕೃತಿ ವಿರೋಧಿ ನಡೆ ಎಂತಲೂ ಅನ್ನಿಸಬಹುದು.

ಈ ರೀತಿ ಜನರಿಗೆ 'ಪುಗಸಟ್ಟೆ' ಅಕ್ಕಿ ಕೊಡುತ್ತಾ ಹೋದರೆ, ಅವರು ಸೋಮಾರಿಗಳಾಗುತ್ತಾರೆಂಬ ವಾದ ಹೊಸದೇನೂ ಅಲ್ಲ. ಆದರೆ, ಇಂದು ಕೃಷಿಯ ಉತ್ಪಾದನೆ ಮತ್ತು ಕೈಗಾರಿಕೆಯ ಉತ್ಪಾದನೆಗಳಲ್ಲಿ ಪ್ರತೀ ವರ್ಷವೂ ಹೆಚ್ಚಳವಾಗುತ್ತಿದೆಯಲ್ಲ, ಅದೆಲ್ಲವೂ ಕೇವಲ ಸಂಪೂರ್ಣ ಸ್ವಯಂಚಾಲಿತ ಯಂತ್ರಗಳಿಂದ ಆಗುತ್ತಿದೆಯೇ? ತ... ದುಡಿಮೆಯ ಮೌಲ್ಯದಲ್ಲಿ ಶೇ.10ನ್ನೂ ವಾಪ... ಪಡೆಯಲಾಗದ ಕಾರ್ಮಿಕ ವರ್ಗವು ದುಡಿದು ಈ ದೇಶ... ಹೊಟ್ಟೆಯನ್ನೂ, ದುರಾಸೆಯನ್ನೂ ತುಂಬಿಸಲು ಹೆಣಗುತ್ತಿ... ಅವರೆಲ್ಲ ಸೋಮಾರಿಗಳೇ? ಹಳ್ಳಿಗಳಲ್ಲಿ ಯಾವ ಕನಸನ್ನು... ಇಟ್ಟುಕೊಳ್ಳಲು ಸಾಧ್ಯವಾಗದ ದುಡಿಯಬಲ್ಲ ವರ್ಗ... ಪಟ್ಟಣದೆಡೆಗೆ ಮುಖ ಮಾಡಿದೆ. ಇದನ್ನೇ ಇಟ್ಟುಕೊಂಡು... ಸಿಟಿಯಲ್ಲಿ ಬೇರೆಯವರ ಮನೆ ಬಾಗಿಲು ಕಾಯಬೇಕಾದ... ಇವರು ಸಿದ್ಧರಿದ್ದಾರೆ; ಆದರೆ ಮಣ್ಣಿಗಿಳಿದು ಕೆಲಸ ಮಾಡಲು... ಸಿದ್ಧರಿಲ್ಲ ಎಂಬ ಬೀಸು ಹೇಳಿಕೆಯನ್ನು ಬಹಳಷ್ಟು ಜನರು... ಹೇಳುತ್ತಾರೆ. ಯಾವ ಹಳ್ಳಿಯೂ (ಕಾಫಿ ಥರದ ಆರ್ಥಿಕ... ಹೊಂದಿರುವ ಕೆಲವು ನಿರ್ದಿಷ್ಟ ಪ್ರದೇಶಗಳನ್ನು ಬಿಟ್ಟು...) ವರ್ಷದಲ್ಲಿ 120 ದಿನಕ್ಕಿಂತಲೂ ಹೆಚ್ಚಿನ ಕೆಲಸವನ್ನು ತನ್ನ... ದುಡಿಯುವ ಕೈಗಳಿಗೆ ಸೃಷ್ಟಿಸುತ್ತಿಲ್ಲ.


ಕರ್ನಾಟಕದಲ್ಲಿ ಜೀತ ವ್ಯಾಪಕವಾಗಿ... ಹಳ್ಳಿಗಳನ್ನು ಒಮ್ಮೆ ಸುತ್ತಿ ಮಾಜಿ ಜೀತಗಾರರನ್ನು ಮಾತಾಡಿ... ನೋಡಿದರೆ ಒಂದು ಅಂಶವಂತೂ ಸ್ಪಷ್ಟವಾಗುತ್ತದೆ. ... ರಾಜ್ಯದಲ್ಲಿ ಜೀತ ಇಲ್ಲವಾಗಿದ್ದು, ಜೀತ ವಿಮು... ಕಾಯ್ದೆಯಿಂದಲ್ಲ. ಹಸಿವು ತಾಳಿಕೊಳ್ಳುವ ಶ... ಅಥವಾ ನಾಲ್ಕು ದಿನಕ್ಕೆ ಸಾಕಾಗುವಷ್ಟು ಅಕ್ಕಿಯನ್ನು ಆ ಕುಟುಂಬಗಳ... ಪಡೆದುಕೊಂಡಿದ್ದರಿಂದ. ಅದಕ್ಕೆ ಪಡಿತ... ವ್ಯವಸ್ಥೆಯೂ ತನ್ನ ಪಾಲು ಕೊಟ್ಟಿದೆ. ಆದ... ಈ ಪಡಿತರ ವ್ಯವಸ್ಥೆಯು ಜನರ ಎಲ... ಸಮಸ್ಯೆಗಳನ್ನು ಹೋಗಲಿ, ಕನಿಷ್ಠ ಆಹಾರ... ಸಮಸ್ಯೆಯನ್ನೂ ಇಂಗಿಸುವುದಿಲ್ಲ. ನಾಲ... ಜನರಿರುವ ಒಂದು ಕುಟುಂಬಕ್ಕೆ (ಒಂದ... ವ್ಯಕ್ತಿಗೆ ಒಂದು ಹೊತ್ತಿಗೆ 150 ಗ್ರಾ... ಅಕ್ಕಿಯಂತೆ: 150 X 4 X 3 X 3... = 54,000) 54 ಕೆ.ಜಿ ಅಕ್ಕಿ ಬೇಕಾಗುತ್ತ... ಇಂದು ಬಿಪಿಎಲ್ ಕಾರ್ಡ್ ಇರು... ಕುಟುಂಬಕ್ಕೆ 20 ಕೆ.ಜಿ. ಅಕ್ಕಿ ದೊರೆಯುತ್ತಿ... (60 ರೂ.ಗೆ). ಇನ್ನು ಮುಂದೆ 25 ಅಥವಾ 30 ರೂ.ಗೆ 25 ಅಥವಾ 30 ಕೆ.ಜಿ. ಸಿಗುತ್ತ... (ಕ್ರಮವಾಗಿ ಬಿ.ಜೆ.ಪಿ ಮತ್ತು ಕಾಂಗ್ರೆಸ್ ಪಕ್ಷಗಳ... ಪ್ರಣಾಳಿಕೆಯಂತೆ) ಎಂದಿಟ್ಟುಕೊಳ್ಳೋಣ. ಆಗಲೂ ಅದ... ಅವರ ಅನ್ನದ (ಸಾಂಬಾರಿನ ಅಲ್ಲ) ಸಮಸ್ಯೆಯನ್ನು... ನೀಗಿಸುವುದಿಲ್ಲ, ಆದರೆ ಜೀತದ ಅಗತ್ಯವನ್ನು ಇಲ್ಲದಂ... ಮಾಡುತ್ತದೆ.

ಇಂದು ನಮ್ಮ ಹೆಚ್ಚಿನ ಕಲ್ಯಾಣ ಕಾರ್ಯಕ್ರಮಗಳು... ಸಾಧಿಸಿರುವುದು ಇದನ್ನು. ಅಂದರೆ ಅತ್ಯಂತ ಶೋಚನೀಯ... ಅವಸ್ಥೆಯಲ್ಲಿದ್ದ ಜನರಿಗೆ ಸ್ವಾಭಿಮಾನವನ್ನು ತಂದುಕೊಡಲು... ಸರ್ಕಾರದ ಇಂತಹ ಕಾರ್ಯಕ್ರಮಗಳು ಅನುಕೂ... ಮಾಡಿಕೊಟ್ಟವು. ಇದನ್ನೇ ಸ್ವಾಭಿಮಾನ ಕಿತ್ತುಕೊಂಡ... ಎಂದೂ ಅರ್ಥೈಸಬಹುದು. ದುಡಿದು ತಿನ್ನುತ್ತಿದ್ದವ... ಇಂದು ಆಳುವವರ ಮರ್ಜಿಗೆ ಒಳಪಟ್ಟಿದ್ದಾರೆ ಅಂ... ವಾಸ್ತವ ಅದಲ್ಲ. ಈ ಸಾರಿಯ ಪ್ರಣಾಳಿಕೆಗಳನ್ನೇ ಗಮನಿ... ಒಂದೇ ಒಂದು ಪ್ರಣಾಳಿಕೆಯೂ ಎಲ್ಲಾ ಅಸಂಘಟಿ... ವಲಯದ ಕಾರ್ಮಿಕರ ಕನಿಷ್ಠ ವೇತನವನ್ನು ರೂ. 10,000ಕ್ಕಿಂತ ಹೆಚ್ಚು ಏರಿಸುವ ಬಗ್ಗೆ ಮಾತಾಡಿಲ್ಲ. ಕೃ... ಕಾರ್ಮಿಕರೂ ಸೇರಿದಂತೆ 3 ಕೋಟಿಗೂ ಹೆಚ್ಚಿರುವ ... ಕಾರ್ಮಿಕರ ವೇತನವು 15,000 ರೂ.ಗಳಿಗಿಂತ ಹೆಚ್ಚಾದ... ಆಗ ಇಂತಹ ಯಾವ 'ಜನಪ್ರಿಯ' ಕಾರ್ಯಕ್ರಮಗಳ... ಅಗತ್ಯವಿಲ್ಲ. ಕಾಯಂ ಕಾರ್ಮಿಕರೊಬ್ಬರಿಗೆ 40 ಸಾವಿ... ಕೊಡುವ ಬದಲು 10 ಜನ ಗುತ್ತಿಗೆ ಕಾರ್ಮಿಕರ... 4,000 ರೂ.ಗಳಿಗೆ (ಸರ್ಕಾರವೇ ನಿಗದಿಪಡಿಸಿರುವ ಕನಿ... ವೇತನ) ನೇಮಕ ಮಾಡಿಕೊಳ್ಳುತ್ತಿರುವ ಟಾಟಾ, ಬಿರ್ಲಾ... ಅಂಬಾನಿ, ಅದ್ಮಾನಿ, ಸುಜುಕಿ, ಮೈಕೋ, ಕಿನ್ನಾಮೆಟ... ಇತ್ಯಾದಿ ಕಂಪೆನಿಗಳ ಮಾಲೀಕರ ಪರವಾಗಿದೆ ಕಾರ್ಮಿ... ನೀತಿ. ಕಾರ್ಮಿಕರಿಗೆ 30 ಕೆ.ಜಿ. ಅಕ್ಕಿ, ಈ ವಿಪರ್ಯಾಸವ... ನಾವು ವಿರೋಧಿಸಬೇಕಿದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಬೆಂಗಳೂರಿಗೇ ಪ್ರತ್ಯೇಕ... ಪ್ರಣಾಳಿಕೆ ಬಿಡುಗಡೆ ಮಾಡಿರುವ ಎಲ್ಲಾ ಪಕ್ಷಗಳ... ಮಧ್ಯಮವರ್ಗಕ್ಕೆ ಬೇಕಾದ ಗುಣಮಟ್ಟದ ಬದುಕನ್ನು... ಖಾತರಿಗೊಳಿಸಲು 'ವಿದೇಶೀ ಬಂಡವಾಳಕ್ಕೆ ಪೂರ... ವಾತಾವರಣ', 'ನಗರಗಳ ನೈರ್ಮಲ್ಯ', 'ದಟ್ಟಣೆ ರಹಿ... ಟ್ರಾಫಿಕ್ ವ್ಯವಸ್ಥೆ', 'ನೀರು ಮತ್ತು ನಿರಂತರ ವಿದ್ಯುತ್... ಇತ್ಯಾದಿಗಳೆಲ್ಲವನ್ನೂ ಹೇಳಿವೆ. ಬಹುಶಃ ಯಾವ ಪ... ಅಧಿಕಾರಕ್ಕೆ ಬಂದರೂ ಅಭಿವೃದ್ಧಿಯೋ ಅಭಿವೃದ್ಧಿ. 3... ಕೆ.ಜಿ. ಅಕ್ಕಿಯನ್ನು ಕೊಡುವುದರಿಂದ ಸರ್ಕಾರಕ್ಕೆ ನಷ್ಟವೇನ... ಇಲ್ಲ; ಜನಸಾಮಾನ್ಯರಿಗೆ ದೊಡ್ಡ ಲಾಭವೂ ಇಲ್ಲ. ಕನಿ... ವೇತನವನ್ನು ಸ್ವಾಭಿಮಾನದ ವೇತನವನ್ನಾಗಿ ಬದಲಿಸು... ಹೋರಾಟ ಮಾಡದೇ ಬೇರೆ ದಾರಿಯೂ ಇಲ್ಲ, ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ...

ಮೋದಿಯ ಗುಜರಾತ್ ಎಷ್ಟು ಅಭಿವೃದ್ಧಿಯಾಗಿದೆ?

- 2011ರ "ಭಾರತದ ಮಾನವ ಅಭಿವೃದ್ಧಿ ವರದಿ"ಯ ಪ್ರಕಾರ ಭಾರತದ ಅಭಿವೃದ್ಧಿಶೀಲ 12 ರಾಜ್ಯಗಳಲ್ಲಿ ಗುಜರಾತಿನ ಮಾನವ ಅಭಿವೃದ್ಧಿ 11ನೆಯ ಸ್ಥಾನದಲ್ಲಿತ್ತು, ಕರ್ನಾಟಕದ ಸ್ಥಾನ ಅದರ ನಂತರದಲ್ಲಿತ್ತು, ಕೇರಳ, ದೆಹಲಿ, ಹರ್ಯಾಣ, ಇಡೀ ಈಶಾನ್ಯ ರಾಜ್ಯಗಳೂ ಸಹ ಬಿಜೆಪಿ ಆಡಳಿತದ ಗುಜರಾತ್ ಮತ್ತು ಕರ್ನಾಟಕಕ್ಕಿಂತ ಈ ಅವಧಿಯಲ್ಲಿ ಉತ್ತಮ ಸ್ಥಾನದಲ್ಲಿತ್ತು.
- ಅದೇ ವರದಿಯ ಪ್ರಕಾರ "ಹಸಿವಿನ ಸೂಚ್ಯಂಕ"ದಲ್ಲಿ ಭಾರತದ 10 "ಅಭಿವೃದ್ಧಿ" ರಾಜ್ಯಗಳಲ್ಲಿ ಗುಜರಾತ್ 10ನೇ ಸ್ಥಾನದಲ್ಲಿತ್ತು, ಅದರಲ್ಲೂ ಆ ರಾಜ್ಯದ ದಲಿತರ "ಮಾನವ ಅಭಿವೃದ್ಧಿ" ಸೂಚ್ಯಂಕ ಆಫ್ರಿಕಾ ದೇಶಗಳ ದಟ್ಟ ದರಿದ್ರರ ಪರಿಸ್ಥಿತಿಗೆ ಹೋಲುವಂತಿದೆ.
- ವಿಶ್ವಸಂಸ್ಥೆಯ UNICEF ನ ವರದಿಯ ಪ್ರಕಾರ "ಗುಜರಾತಿನ ಐದು ವರ್ಷದ ಕೆಳಗಿನ ಪ್ರತಿ ಎರಡನೇ ಮಗು ಅಪೌಷ್ಟಿಕತೆಯಿಂದ ನರಳುತ್ತಿದೆ ಮತ್ತು ಪ್ರತಿ ನಾಲ್ಕು ಮಕ್ಕಳಲ್ಲಿ ಮೂವರು ರಕ್ತಹೀನತೆಯಿಂದ ನರಳುತ್ತಿವೆ. ವಿಶ್ವಸಂಸ್ಥೆಯ UNDP ಯ ಮತ್ತೊಂದು ವರದಿಯ ಪ್ರಕಾರ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದರಲ್ಲಿ ಗುಜರಾತಿಗೆ 18ನೇ ಸ್ಥಾನ.
- ಅದಕ್ಕಿಂತ ಹೀನಾಯವಾದ ಮತ್ತೊಂದು ಸಂಗತಿ ಇದೆ. ಗುಜರಾತಿನಲ್ಲಿ ಪ್ರತಿ ಸಾವಿರ ಗಂಡಸರಿಗೆ ಹೆಂಗಸರ ಅನುಪಾತ ದೇಶದ ಸರಾಸರಿ (940)ಕ್ಕಿಂತ 22 ರಷ್ಟು ಇಳಿದಿದೆ. (918). ಇನ್ನು 5 ವರ್ಷದೊಳಗಿನ ಹೆಣ್ಣು ಮಕ್ಕಳ ಅನುಪಾತದಲ್ಲಂತೂ ಗುಜರಾತಿಗೆ ದೇಶದಲ್ಲಿ 27ನೇ ಸ್ಥಾನ!
- NSSO ಮತ್ತೊಂದು ವರದಿಯ ಪ್ರಕಾರ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆಯನ್ನು ಕಡಿಮೆ ಮಾಡಿರುವ ರಾಜ್ಯಗಳಲ್ಲಿ ಮಹಾರಾಷ್ಟ್ರ ಮತ್ತು ತಮಿಳುನಾಡುಗಳಿಗಿಂತಲೂ ತುಂಬಾ ಹಿಂದೆ ಇದೆ.
- 2011 ರ NSSO ವರದಿಯ ಪ್ರಕಾರ ಅಭಿವೃದ್ಧಿಶೀಲ ರಾಜ್ಯಗಳಲ್ಲಿ ಕೂಲಿ ತಾರತಮ್ಯ ಗುಜರಾತಿನಲ್ಲೇ ಹೆಚ್ಚು, ಅದಕ್ಕೇ ಕಾರ್ಪೊರೇಟ್ ಉದ್ಯಮಿಗಳಿಗೆ ಗುಜರಾತ್ ಅಚ್ಚುಮೆಚ್ಚು, ಒಬ್ಬ ನಗರದ ಕೂಲಿ ಕೇರಳದಲ್ಲಿ ರೂ. 218 ಪಡೆದರೆ, ಗುಜರಾತಿನಲ್ಲಿ ಕೇವಲ ರೂ.116 ಪಡೆಯಬಲ್ಲ, ಒಬ್ಬ ಗ್ರಾಮೀಣ ಕೂಲಿ ಪಂಜಾಬಿನಲ್ಲಿ ರೂ.152 ಪಡೆದರೆ ಗುಜರಾತಿನಲ್ಲಿ ರೂ. 83 ಮಾತ್ರ ಪಡೆಯಲು ಸಾಧ್ಯ.



- ಆದರೆ ಒಬ್ಬ ಕಾರ್ಪೊರೇಟ್ ಉದ್ಯಮಿ ಪ್ರತಿ ಲಕ್ಷ ರೂಪಾಯಿ ಬಂಡವಾಳಕ್ಕೆ ಕನಿಷ್ಠ 50,000 ರೂ ರಿಯಾಯಿತಿ ಪಡೆಯಬಲ್ಲ! ಒಂದು ಸ್ವತಂತ್ರ ಅಧ್ಯಯನದ ಪ್ರಕಾರ ಟಾಟಾನ ನ್ಯಾನೋ ಕಾರಿನ ಪ್ರತಿ ಒಂದು ಲಕ್ಷ ರೂಪಾಯಿ ಬಂಡವಾಳಕ್ಕೆ 63,000 ರೂ ರಿಯಾಯಿತಿ ಮತ್ತು ವಿನಾಯಿತಿಗಳಿಂದ ವಾಪಸ್ ಪಡೆಯುವಂತೆ ಗುಜರಾತ್ ಸರ್ಕಾರ "ಮೂಲಭೂತ ಸೌಲಭ್ಯಗಳನ್ನು" ಒದಗಿಸಿದೆ. ಹೀಗಾಗಿಯೇ ಅಂಬಾನಿಗಳು, ಟಾಟಾಗಳು, ಅದ್ವಾನಿ ತರಹದ ಕಂಪನಿಗಳು ಮೋದಿಯನ್ನು ನರನಲ್ಲ ಇಂದ್ರ ಎಂದು ಹಾಡಿ ಹೊಗಳುತ್ತವೆ.
- ಇನ್ನು ವಿದೇಶಿ ಬಂಡವಾಳ ಮತ್ತು ಜಿಡಿಪಿಗಳು ಅಭಿವೃದ್ಧಿಯ ಮಾನದಂಡವಲ್ಲವಾದರೂ ಮೋದಿಯವರು ಅದನ್ನೂ ಒಂದು ಮಾನದಂಡವಾಗಿ ಪರಿಗಣಿಸಿ ಗುಜರಾತಿನ ಹೆಗ್ಗಳಿಕೆಯನ್ನು ಹೇಳಿಕೊಳ್ಳುವುದರಿಂದ ಪರಿಶೀಲಿಸಬೇಕಿದೆ. RBI ಬಿಡುಗಡೆ ಮಾಡಿರುವ ವರದಿಗಳ ಪ್ರಕಾರ 2000-2012ರ ಅವಧಿಯಲ್ಲಿ ಅತಿ ಹೆಚ್ಚು ವಿದೇಶಿ ಬಂಡವಾಳ ಬಂದಿದ್ದು ಕಾಂಗ್ರೆಸ್ ಆಡಳಿತದ ಮಹಾರಾಷ್ಟ್ರ ಮತ್ತು ದೆಹಲಿಗೆ. ಗುಜರಾತ್‌ಗೆ ಅದರಲ್ಲಿ 5ನೇ ಸ್ಥಾನ. ಮೂರಕ್ಕೂ ಹೆಚ್ಚು ಜಾಗತಿಕ ಬಂಡವಾಳ ಸಮಾವೇಶಗಳಲ್ಲಿ 20 ಲಕ್ಷ ಕೋಟಿ ಬಂಡವಾಳದ ಭರವಸೆ ಬಂದಿದೆ ಎಂದು ಕೊಚ್ಚಿಕೊಂಡರೂ ಗುಜರಾತ್ ಸರ್ಕಾರದ ವರದಿಯೇ ಹೇಳುವಂತೆ ವಾಸ್ತವವಾಗಿ ಬಂದಿದ್ದು ಕೇವಲ 29,೮13 ಕೋಟಿ. (ಮೂಲ: Socio-Economic Review, Gujarat Government, 2012)
- ಯೋಜನಾ ಆಯೋಗದ 2011ರ ವರದಿಯ ಪ್ರಕಾರ ತಲಾವಾರು ಆದಾಯದಲ್ಲೂ ಗುಜರಾತ್‌ಗೆ ದೆಹಲಿ, ಮಹಾರಾಷ್ಟ್ರಗಳ ನಂತರದ 8ನೇ ಸ್ಥಾನ.

(ಆಧಾರ: ಕೆ.ಎಲ್. ಅಶೋಕ ಅವರ 'ವಿಜಯ ಕರ್ನಾಟಕ'ದ ಬರಹ)

ಚುನಾವಣೆಯ ಅವಕಾಶ ಬಳಸಿಕೊಂಡು ಬಿಜೆಪಿಗೆ ಮಣ್ಣುಮುಕ್ಕಿಸಬೇಕಿದೆ



• ಗೌರಿ ಲಂಕೇಶ್
editorlankesh@gmail.com

ರಾಜ್ಯಾದ್ಯಂತ ಮತದಾನ ಇದೇ ಭಾನುವಾರ ನಡೆಯುವುದರಿಂದ ನಮ್ಮ ಪ್ರಜಾಪ್ರಭುತ್ವದ ಪ್ರಮುಖ ರೂಪದ ಒಂದಿಷ್ಟು ಅನಿಸಿಕೆಗಳನ್ನು ಹಂಚಿಕೊಳ್ಳಬೇಕೆನಿಸುತ್ತಿದೆ. ...ಗೂ ಗೊತ್ತಿರುವಂತೆ ನಮ್ಮಲ್ಲಿರುವುದು ಪಕ್ಷಾಧಾರಿತ ...ತಂತ್ರವಾದ್ದರಿಂದ ಇಲ್ಲಿ ವ್ಯಕ್ತಿಗಳ ಬದಲಾಗಿ ಪಕ್ಷಗಳೇ ...ಖ್ಯವಾಗುತ್ತವೆ. ಅಂದರೆ ಪ್ರತಿ ಕ್ಷೇತ್ರದಲ್ಲಿ ವಿವಿಧ ...ರ್ಥಿಗಳು ಸ್ಪರ್ಧಿಸುತ್ತಿದ್ದರೂ ಅವರು ಯಾವ ಪಕ್ಷವನ್ನು ...ಧಿಸುತ್ತಿದ್ದಾರೆಂಬುದೂ ಬಹಳ ಮುಖ್ಯವಾಗುತ್ತದೆ. ...3 ಈ ವ್ಯವಸ್ಥೆಯ ದುರಂತ ಎಂತಹದ್ದೆಂದರೆ ಎಲ್ಲಾ ...ಳಲ್ಲೂ ನಿಜವಾಗಲೂ ಜನಪರ, ಅಭಿವೃದ್ಧಿ ಪರ ...ಉಳ್ಳ ಕೆಲವರಾರೂ ಅಭ್ಯರ್ಥಿಗಳಿದ್ದರೂ ನಮ್ಮ ...ವೆ ಅಷ್ಟೇ ಜನಪರ, ಪ್ರಗತಿಪರ ಬದ್ಧತೆಯನ್ನು ...ದಿರುವ ರಾಜಕೀಯ ಪಕ್ಷಗಳಿಲ್ಲ, ಹಾಗಾಗಿ ಈ ...ವಣೆ ಒಂದು ರೀತಿಯಲ್ಲಿ ಈ ರಾಜ್ಯ ಕಂಡಿರುವ ...ತ ಆಯ್ಕೆರಹಿತ ಚುನಾವಣೆ ಎಂದರೂ ತಪ್ಪಾಗಲಾರದು.

...ದರೂ ಒಂದು ಮುಖ್ಯ ವ್ಯತ್ಯಾಸವನ್ನು ಎಲ್ಲರೂ ...ನದಲ್ಲಿಟ್ಟುಕೊಳ್ಳುವುದು ಅಗತ್ಯ. ಅದೇನೆಂದರೆ ಈ ...ಧಾರಿತ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮುಂದಿರುವ ...ತ ದುಷ್ಟ ಪಕ್ಷವೆಂದರೆ ಅದು ಬಿಜೆಪಿ. ಹಾಗಾಗಿ ...ಲ್ಲಿ ಬೆರಳೆಣಿಕೆಯಷ್ಟು ಒಳ್ಳೆಯವರಿದ್ದರೂ, ಅಭಿವೃದ್ಧಿಪರ ...ನ್ನು ಹೊಂದಿರುವವರಿದ್ದರೂ, ನಿಷ್ಕಳಂಕ ವ್ಯಕ್ತಿಗಳಿದ್ದರೂ ...ಲ್ಲರೂ ಅದೇ ಬಿಜೆಪಿಯ ಕೆಸರಿನಲ್ಲಿರುವ ಕಮಲಗಳೇ. ...ಂದ ಅವರ್‍ಯಾರೂ ತಮ್ಮ ವೈಯಕ್ತಿಕ ವರ್ಚಸ್ಸಿನಿಂದ ...ಗಾಗಲಿ, ಈ ರಾಜ್ಯಕ್ಕಾಗಲಿ ಒಳ್ಳೆಯದನ್ನು ...ತಲಿಕ್ಕಾಗುವುದಿಲ್ಲ. ಬದಲಾಗಿ ಅವರು ಗೆಲ್ಲುವ ಮೂಲಕ ...ಪಿಯ ದುಷ್ಟತನಕ್ಕೆ ಸಂಖ್ಯಾಬಲವನ್ನು ನೀಡಿ ರಾಜ್ಯಕ್ಕೆ ...ಜನರಿಗೆ ಹೆಚ್ಚು ಹಾನಿ ಮಾಡುವವರೇ ಆಗುತ್ತಾರೆ.

...ಬಿಜೆಪಿ ದುಷ್ಟ ಪಕ್ಷವಾದರೆ ಇತರೆ ಪಕ್ಷಗಳು ಸಾಚಾನಾ' ...ಎ ಕೆಲವರು ಕೇಳಬಹುದು. ಇಲ್ಲ, ಇತರೆ ರಾಜಕೀಯ ಪಕ್ಷಗಳು ಪ್ರಾಮಾಣಿಕ, ಶುದ್ಧ, ದಕ್ಷ ಎಂದು ಯಾರೂ ಈಗಿನ ಕಾಲದಲ್ಲಿ ಹೇಳುವುದಿಲ್ಲ. ಆದರೆ ಬಿಜೆಪಿಗೂ, ಇತರೆ ಪಕ್ಷಗಳಿಗೂ ಇರುವ ಒಂದು ಮುಖ್ಯ ಭಿನ್ನತೆ ಯಾವುದೆಂದರೆ ಬಿಜೆಪಿಯ ರಾಜಕೀಯ ಉದ್ದೇಶದಲ್ಲೇ ದುಷ್ಟತೆ ಅಡಕವಾಗಿದ್ದರೆ ಇತರೆ ಪಕ್ಷಗಳ ದುಷ್ಟತನ ಇರುವುದು ಅವುಗಳ ಕ್ರಿಯೆಗಳ ಪರಿಣಾಮದಲ್ಲಿ. ಅಂದರೆ ಬಿಜೆಪಿಯ ಸಿದ್ಧಾಂತದಲ್ಲಿ, ಚಿಂತನೆಯಲ್ಲಿ, ಕ್ರಿಯೆಯಲ್ಲಿ ಕೋಮುವಾದಿ ವಿಷ, ಸ್ತ್ರೀ-ದಲಿತ-ಅಲ್ಪಸಂಖ್ಯಾತ ವಿರೋಧಿ ಧೋರಣೆ ಹಾಸುಹೊಕ್ಕಾಗಿದೆ. ಜೊತೆಜೊತೆಗೆ ಪುರೋಹಿತಶಾಹಿ ಮತ್ತು ಬಂಡವಾಳಶಾಹಿ ಪರ ನಿಲುವು ಗಟ್ಟಿಯಾಗಿದೆ. ಇವೆಲ್ಲವೂ ನಮ್ಮ ದೇಶದ ಜಾತ್ಯತೀತ ಸಂವಿಧಾನಕ್ಕೂ ನಮ್ಮ ರಾಜ್ಯದ ಸೌಹಾರ್ದ ಸಂಸ್ಕೃತಿಗೂ ವಿರೋಧಿ ಆಗಿದೆ.

ಬಿಜೆಪಿಯ ಇಂತಹ ಸಿದ್ಧಾಂತದಿಂದಾಗಿ ಉಂಟಾಗುವ ದುಷ್ಟ ಪರಿಣಾಮಗಳನ್ನು ನಾವೆಲ್ಲ ಕಳೆದ ಐದು ವರ್ಷ ಕಣ್ಣಾರೆ ಕಂಡಿದ್ದೇವೆ. ಭ್ರಷ್ಟಾಚಾರದ ಆರೋಪದ ಮೇಲೆ ಮುಖ್ಯಮಂತ್ರಿ ಅಲ್ಲದೆ ನಾಲ್ಕೈದು ಮಂತ್ರಿಗಳು ಜೈಲುಪಾಲಾದರು, ಮೂವರು ಮಂತ್ರಿಗಳು ವಿಧಾನಸಭೆಯಲ್ಲೇ ಬ್ಲೂಫಿಲಂ ನೋಡಿ ಮಾಧ್ಯಮಗಳ ಕ್ಯಾಮೆರಾಗಳಲ್ಲಿ ಸಿಕ್ಕಿಹಾಕಿಕೊಂಡರು, ತಮ್ಮದು 'ರಾಮಭಕ್ತರ ಪಕ್ಷ' ಎಂದು ಹೇಳುವ ಬಿಜೆಪಿ ಪರಸ್ತ್ರೀಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದ ಓರ್ವ ಶಾಸಕನನ್ನು ಒದ್ದೋಡಿಸುವ ಬದಲು ಆತನಿಗೆ ಮಂತ್ರಿ ಸ್ಥಾನವನ್ನು ನೀಡಿತು. ಮಿತ್ರನ ಮಡದಿಯ ಮೇಲೆ ಅತ್ಯಾಚಾರವೆಸಗಿ ಜೈಲುಪಾಲಾಗಿದ್ದ ಮತ್ತೋರ್ವ ಮಂತ್ರಿ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದಾಗ ಆತನನ್ನು ಜೈಕಾರ ಹಾಕಿ ಸ್ವಾಗತಿಸಿತು, ಹೆಂಡತಿಯ ಸಾವಿಗೆ ಕಾರಣನಾದ ಮತ್ತೊಬ್ಬ ಶಾಸಕನಿಗೆ ಎಲ್ಲ ರೀತಿಯಲ್ಲೂ ರಕ್ಷಣೆಯನ್ನು ಒದಗಿಸಿತು. ಕಳೆದ ಬಾರಿ 'ನಮಗೂ ಒಂದು ಛಾನ್ಸ್ ಕೊಟ್ಟು ನೋಡಿ, ರಾಜ್ಯವನ್ನು ಅಭಿವೃದ್ಧಿ ಮಾಡುತ್ತೇವೆ' ಎಂದಿದ್ದ ಪಕ್ಷದ ಸದಸ್ಯರೇ ಅಧಿಕಾರ ಸಿಕ್ಕೊಡನೆ ನಡೆದುಕೊಂಡ ರೀತಿ ಇದು.

ಇನ್ನು ಬಿಜೆಪಿಯಂತೆ ಕೋಮುವಾದಿ ಆರೆಸ್ಸೆಸ್ಸಿನ ಅಂಗ ಸಂಘಟನೆಗಳಿಗೆ ಲಂಗುಲಗಾಮು ಇಲ್ಲದಂತಾಯಿತು. ಚರ್ಚ್‌ಗಳ ಮೇಲೆ ದಾಳಿ ಮಾಡಿದರು. ಪಬ್‌ನಲ್ಲಿದ್ದ ಯುವತಿಯರನ್ನು ಹೊರಗೆಳೆದು ಹೊಡೆದರು. ಹಿಂದೂ ಹುಡುಗಿಯರನ್ನು ಮಾತನಾಡಿಸಿದ್ದಕ್ಕೆ ಮುಸಲ್ಮಾನ ಯುವಕರನ್ನು ಬಡಿದರು. ದನ ಸಾಗಿಸುತ್ತಿದ್ದಾರೆಂದು ಆರೋಪಿಸಿ ಮುಸಲ್ಮಾನರ ಮೇಲೆ ದಾಳಿ ಮಾಡಿದರು. ಪಾಕಿಸ್ತಾನದ ಧ್ವಜವನ್ನು ತಾವೇ ಏರಿಸಿ ಕೋಮುಗಲಭೆಯನ್ನು ಸೃಷ್ಟಿಸಲು ಯತ್ನಿಸಿದರು. ಹುಟ್ಟುಹಬ್ಬ ಆಚರಿಸುತ್ತಿದ್ದ ಅಮಾಯಕ ಯುವಕಯುವತಿಯರನ್ನು ಸಂಸ್ಕೃತಿ ರಕ್ಷಣೆಯ ಹೆಸರಲ್ಲಿ ಅರೆಬೆತ್ತಲೆಗೊಳಿಸಿದರು. ಅದನ್ನು ಬಹಿರಂಗಪಡಿಸಿದ ಪತ್ರಕರ್ತನನ್ನೇ ಜೈಲಿಗೆ ದೂಡಿದರು. ಹಿಂದೂತ್ವವಾದಿಗಳನ್ನು ಕೊಲ್ಲುವ ಸಂಚು ರೂಪಿಸಿದ್ದಾರೆಂಬ ಕಪೋಲಕಲ್ಪಿತ ಆರೋಪ ಹೊರಿಸಿ ಅಮಾಯಕ ಮುಸಲ್ಮಾನರನ್ನು ಬಂಧಿಸಿದರು.


ಭಯೋತ್ಪಾದನೆ ಬಗ್ಗೆ ಜಾಗೃತಿ ಹೆಸರಲ್ಲಿ, ಭಗವದ್ಗೀತೆ ನೆಪದಲ್ಲಿ, ಪಠ್ಯಪುಸ್ತಕಗಳನ್ನು ನವೀಕರಿಸುವ ಸೋಗಿನಲ್ಲಿ ಕೋಮುದ್ವೇಷವನ್ನು ಹಬ್ಬಿದರು. ಅಭಿವೃದ್ಧಿ ಹೆಸರಿನಲ್ಲಿ ಭೂಲೂಟಿ ಮಾಡಿದರು. ಆಡಳಿತದ ನೆಪದಲ್ಲಿ ಡೀಲ್‌ಗಳನ್ನು ಕುದುರಿಸಿದರು. ರೈತರ ಹಿತ ಕಾಯುತ್ತೇವೆನ್ನುತ್ತಲೇ ರೈತಾಪಿಗಳ ವಿರೋಧಿಯಾದ ಜಾನುವಾರು ಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತರಲು ಯತ್ನಿಸಿದರು. ಜನಪ್ರತಿನಿಧಿಗಳನ್ನು ಖರೀದಿಸುವ ಮೂಲಕ ಪ್ರಜಾತಂತ್ರವನ್ನೇ ಅವಮಾನಿಸಿದರು. ಜಾತಿರಾಜಕಾರಣವನ್ನು ಎಂದೂ ಇಲ್ಲದಷ್ಟು ಹೆಚ್ಚಿಸಿದರು.

ಐದು ವರ್ಷಗಳ ಹಿಂದೆ ಬಿಜೆಪಿಯ ದುಷ್ಟತನ ಗೊತ್ತಿಲ್ಲದಿದ್ದ, ಅದನ್ನೂ ಮತ್ತೊಂದು ರಾಜಕೀಯ ಪಕ್ಷ ಎಂದೇ ಭಾವಿಸಿದ್ದ ಜನರಿಗೆ ಮಂಕುಬೂದಿ ಎರಚಿ ಅವಕಾಶ ಗಿಟ್ಟಿಸಿಕೊಂಡಿದ್ದ ಬಿಜೆಪಿಯ ಅಸಲಿ ಮುಖ ಈಗ ಸಂಪೂರ್ಣವಾಗಿ ಬಯಲಾಗಿದ್ದು ರಾಜ್ಯದ ಜನರಲ್ಲಿ ಇವತ್ತು ಬಿಜೆಪಿ ಎಂದರೆ ಹೇಸಿಗೆ ಹುಟ್ಟಿಸುವಂತಾಗಿದೆ.

ಈಗಿನ ಚುನಾವಣೆಯಿಂದಾಗಿ ಬೇರೆ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಇಲ್ಲಿ ಸುವರ್ಣಯುಗ ಪ್ರಾರಂಭವಾಗುವುದಿಲ್ಲ ನಿಜ. ಆದರೆ ನಮ್ಮ ರಾಜ್ಯ ಈಗಿನ ಸ್ಥಿತಿಗಿಂತ ಕೆಟ್ಟ ಸ್ಥಿತಿಗೆ ಹೋಗಬಾರದೆಂದರೆ, ನಮ್ಮ ಜನರ ಬದುಕು ಇನ್ನಷ್ಟು ಕಹಿ ಆಗಬಾರದೆಂದರೆ ಮತದಾನ ಎಂಬ ಅವಕಾಶವನ್ನು ಜನ ಸರಿಯಾಗಿ ಉಪಯೋಗಿಸಿಕೊಂಡು ಬಿಜೆಪಿಗೆ ಮಣ್ಣುಮುಕ್ಕಿಸಬೇಕಿದೆ.

○

ಮೈಸೂರು: ರಾಮದಾಸನ ಸೋಲು ಗ್ಯಾರಂಟಿ!




ಮೈಸೂರಿನ ಪ್ರತಿಷ್ಠಿತ ಕೃಷ್ಣರಾಜ ಮತಕ್ಷೇತ್ರದಲ್ಲಿ ...ವಣೆಯ ಕಾವು ದಿನದಿಂದ ದಿನಕ್ಕೆ ಏರುತ್ತಲೇ ಇದೆ. ...ಅಭ್ಯರ್ಥಿಗಳು ತಮ್ಮದೇ ಆದ ಲೆಕ್ಕಾಚಾರದಲ್ಲಿ ...ರಿ ಪ್ರಚಾರದಲ್ಲಿ ಮುಳುಗಿದ್ದಾರೆ. ಬಿಜೆಪಿಯಿಂದ ...ರಾಮದಾಸ್ ಮಗದೊಮ್ಮೆ ಅದೃಷ್ಟ ಪರೀಕ್ಷೆಗೆ ...ದ್ದರೆ, ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎಂ.ಕೆ. ...ಮಶೇಖರ್, ಕೆಜೆಪಿಯಿಂದ ಎಚ್.ವಿ.ರಾಜೀವ್, ...ಸ್‌ನಿಂದ ಎಚ್.ವಾಸು ಕಣದಲ್ಲಿದ್ದಾರೆ. ಚುನಾವಣೆ ...ಷಣೆಗು ಮುನ್ನವೇ ತರೇವಾರಿ ಯೋಜನೆ, ವಿಚಿತ್ರ ...ಮುಗಳ ಮೂಲಕ ವೋಟ್ ಬ್ಯಾಂಕ್ ಗಟ್ಟಿ ...ಕೊಳ್ಳಲು ಹವಣಿಸಿದ್ದ ರಾಮದಾಸ್‌ಗೆ ಗೆಲುವು ದೌಟು, ...ಲು ಗ್ಯಾರಂಟಿ ಎನ್ನುವ ವೈಪರೀತ್ಯದ ಸನ್ನಿವೇಶ ...ವಾಗಿದೆ.

ರಾಮದಾಸ ಈ ಚುನಾವಣೆಯನ್ನು ತನ್ನ ಬೋಗಸ್ ...ಜನೆಗಳು, ಅಪೂರ್ಣ ಕಾಮಗಾರಿಗಳು, ಸಂಬಂಧವೇ ...ದ ಸಾಧನೆಗಳ ಮರೆಯಲ್ಲಿ ಎದುರಿಸುತ್ತಿದ್ದರೆ, ಕಾಂಗ್ರೆಸ್ ...ಚರ್ ಅಟ್ಯಾಕ್' ಮೂಲಕ ರಾಮದಾಸನ ಸುಳ್ಳು, ...ಸ, ಭ್ರಷ್ಟಾಚಾರವನ್ನು ಬಯಲಿಗೆಳೆಯುತ್ತಾ ಜನರ ...ಟು ಕೇಳುತ್ತಿದೆ. ಇನ್ನು ಕೆಜೆಪಿ, ಯಡ್ಡಿ ಮುಖ್ಯಮಂತ್ರಿ ...ಗಿದ್ದಾಗ ಅನುಷ್ಠಾನಗೊಳಿಸಿದ ಯೋಜನೆಗಳನ್ನಲ್ಲದೆ ...ಪ್ಪಿನ ಮುಖವಾಣಿ ಮೇಲೆ ಕಣ್ಣಿಟ್ಟು ಎಲೆಕ್ಷನ್ ಎದುರು ...ಸುತ್ತಿದೆ. ಅಟಕುಂಟು ಲೆಕ್ಕಕ್ಕಿಲ್ಲ ಎನ್ನುವಂತಿರುವ ...ಸ್‌ಗೆ ಕುಮಾರಸ್ವಾಮಿಯೇ ಅಜೆಂಡಾ!

'ಬೋಗಸ್' ಪುಟ್ಟ ರಾಮದಾಸನ ಸೋಲಿಗೆ ಕೃಷ್ಣರಾಜ ...ಸಭಾ ಕ್ಷೇತ್ರ ತವಕಿಸುತ್ತಿರುವಂತೆಯೇ ಕಾಣುತ್ತಿದೆ. ...ಹಿಂದು ಶಿಕ್ಷಣ ಸಚಿವ ಕಮ್ ಜಿಲ್ಲಾ ಉಸ್ತುವಾರಿ ...ಯಾಗಿದ್ದುಕೊಂಡೂ ಕ್ಷೇತ್ರಕ್ಕೆ ರಾಮದಾಸ ಕಡಿದು ...ಹಾಕಿದ್ದು ಅಷ್ಟರಲ್ಲೇ ಇದೆ. ಎಲೆಕ್ಷನ್ ಸನಿಹದಲ್ಲಿ ...ಗಳ ಯೋಜನೆಗಳ ಮೂಲಕ ಮಿಂಚಿದ್ದು ಬಿಟ್ಟರೆ. ...ಶ್ರೀಮಂತಿಕೆ ಹೆಸರಲ್ಲಿ ರಿಯಲ್ ಎಸ್ಟೇಟ್ ದಂಧೆ, ವಸೂಲಿ ಕಮಾಯಿಗಳನ್ನು ನಡೆಸಿದ್ದೇ ಹೆಚ್ಚು. ರಾಮದಾಸನ ಪ್ರತಿಸ್ಪರ್ಧಿಗಳು ಈ ಲೂಪ್‌ಹೋಲ್‌ಗಳನ್ನೇ ಪ್ರಮುಖ ಅಸ್ತ್ರವನ್ನಾಗಿಸಿಕೊಂಡಿರೋದು ರಾಮದಾಸನಿಗೆ ಮತ್ತೊಂದು ತಲೆ ನೋವು ತಂದಿಟ್ಟಿದೆ. ಅಲ್ಲದೆ ಕಳೆದ ಬಾರಿ ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಬ್ರಾಹ್ಮಣ ಮತಗಳನ್ನೆಲ್ಲ ಸಾಲಿಡ್ಡಾಗಿ ಬಾಚಿಕೊಂಡು ಗೆಲುವಿನ ನಗೆ ಬೀರಿದ್ದ ರಾಮದಾಸನಿಗೆ ಈ ಸಲ ಮತ್ತೊಬ್ಬ ಬ್ರಾಹ್ಮಣ ಸ್ಪರ್ಧಿ ಎಚ್.ವಿ.ರಾಜೀವ್ ಕೆಜೆಪಿಯಿಂದ ಸ್ಪರ್ಧಿಸಿರೋದು ನುಂಗಲಾರದ ತುತ್ತಾಗಿದೆ. ಅಲ್ಲದೆ ಇತ್ತೀಚೆಗೆ ನೇರವಾಗಿ ಸುದ್ದಿಗೋಷ್ಠಿಯನ್ನೇ ನಡೆಸಿದ ಬ್ರಾಹ್ಮಣರು 'ರಾಮದಾಸ್ ನಮ್ಮವನೆಂದು ಮತ ಹಾಕಿ ಗೆಲ್ಲಿಸಿದ್ದಕ್ಕೆ ಇಡೀ ಸಮುದಾಯಕ್ಕೇ ನಂಬಿಕೆ ದ್ರೋಹ ಮಾಡಿದ್ದಾನೆ. ಮೂರು ಬಾರಿ ಶಾಸಕನಾಗಿ, ಸಚಿವನಾಗಿ ಅಧಿಕಾರ ಅನುಭವಿಸಿದರೂ ಜನಾಂಗಕ್ಕೆ ಕಿಂಚಿತ್ತೂ ಕೊಡುಗೆ ನೀಡಿಲ್ಲ. ಬದಲಾಗಿ ಬ್ರಾಹ್ಮಣ ಮುಖಂಡರಿಗೆ ವಿಪರೀತ ಉಪಟಳ ನೀಡಿದ್ದಾನೆ. ಆದ್ದರಿಂದ ಈ ಚುನಾವಣೆಯಲ್ಲಿ ರಾಮದಾಸ್‌ಗೆ ಮತ ಹಾಕುವ ಬದಲು ಮತ್ತೊಬ್ಬ ಬ್ರಾಹ್ಮಣ ಅಭ್ಯರ್ಥಿಯಾದ ಕೆಜೆಪಿಯ ಎಚ್.ವಿ ರಾಜೀವ್‌ನನ್ನು ಬೆಂಬಲಿಸುತ್ತೇವೆ' ಎಂದು ಘೋಷಿಸಿದ್ದಾರೆ.

ಬ್ರಾಹ್ಮಣ ಮಹಾ ಸಭಾದಿಂದ ಇಂತದ್ದೊಂದು ಅಧಿಕೃತ ಪತ್ರಿಕಾ ಹೇಳಿಕೆ ಹೊರ ಬಿದ್ದ ಕೂಡಲೆ ಗಾಬರಿ ಆದ ರಾಮದಾಸ ಮುಸ್ಲಿಮ್ ಮತಗಳ ಖರೀದಿಗೆ ಮುಂದಾಗಿದ್ದಾನೆ. ರಾಮದಾಸ್ ತನ್ನ ಬೆಂಬಲಿಗರೊಂದಿಗೆ ಮೊನ್ನೆ ಮಹಿಳಾ ಮೋರ್ಚಾ ಕಾರ್ಯಕರ್ತೆ ನೂರ್ ಫಾತೀಮಾಳ ಮನೆಯಲ್ಲಿ ಹಣ, ನಮಾಜಿಗೆ ಬೇಕಾಗುವ ಮ್ಯಾಟ್, ಜಪಮಣಿ ಇತ್ಯಾದಿಗಳನ್ನು ಹಂಚುವಾಗ ಚುನಾವಣಾಧಿಕಾರಿಗಳ ಕೈಗೆ ತಗುಲಿಕೊಂಡು ಕೇಸನ್ನೂ ಜಡಿಸಿಕೊಂಡದ್ದು ಇದಕ್ಕೆ ತಾಜಾ ಸಾಕ್ಷಿ.



ರಾಜೀವ್

ಮೈಸೂರು ಜಿಲ್ಲೆಯಲ್ಲಿ ರಾಮದಾಸನನ್ನು ಮೇನ್ ಟಾರ್ಗೆಟ್ ಮಾಡಿಕೊಂಡಿರುವ ಕಾಂಗ್ರೆಸ್ ಈಗಾಗಲೇ ರಾಮದಾಸನ ಅಕ್ರಮ, ಭ್ರಷ್ಟಾಚಾರ, ಸುಲಿಗೆಕೋರತನ, ನಂಬಿಕೆ ದ್ರೋಹದ ಒಂದೊಂದೇ ಹಗರಣಗಳನ್ನು ಹೊರಗೆಳೆದು ಜನರ ಮುಂದಿಟ್ಟಿದೆ. ಇದರಿಂದ ರಾಮದಾಸನ ವರ್ಚಸ್ಸು ಕುಸಿದಿರುವುದು ಮಾತ್ರವಲ್ಲದೆ ಸೋಲಿನ ಭೀತಿಯೂ ಶುರುವಾಗಿದೆ.

ಬೋಗಸ್ ಸ್ಕೀಮುಗಳು

ತನ್ನ ಗೆಲುವನ್ನು ಖಾತ್ರಿಪಡಿಸಿಕೊಳ್ಳಲು ಅಧಿಕಾರ ದುರುಪಯೋಗ ಪಡಿಸಿಕೊಂಡು ರಾಮದಾಸ್ ಜಾರಿಗೆ ತರಲು ಯತ್ನಿಸಿದ್ದ ಹತ್ತಾರು ಬೋಗಸ್ ಸ್ಕೀಮುಗಳೇ ಈಗವನಿಗೆ ಮುಳುವಾಗುವ ಸಂಭವವಿದೆ. ಅದರಲ್ಲೂ ಮೆಗಾ ವಂಚನೆಯಾದ 'ಸ್ವಂತ ಸೂರಿನ ಊರು ಮೈಸೂರು' ಎನ್ನುವ ಬೋಗಸ್ ಯೋಜನೆಯನ್ನು ನಂಬಿ ಮೋಸ ಹೋಗಿರುವ ಮತದಾರರು ರಾಮದಾಸನಿಗೆ ತಕ್ಕ ಪಾಠ ಕಲಿಸಲು ಸಜ್ಜಾಗಿದ್ದಾರೆ.

ಇತ್ತೀಚೆಗೆ ಕಾರ್ಯನಿರತ ಪತ್ರಕರ್ತರ ಸಹಯೋಗದಲ್ಲಿ ನಡೆದ ಚುನಾವಣಾ ಸಂವಾದ ಕಾರ್ಯಕ್ರಮದಲ್ಲಿ ಬಾಕಿ ಮೂರೂ ಪಕ್ಷಗಳ ಅಭ್ಯರ್ಥಿಗಳು ರಾಮದಾಸನ 'ಸ್ವಂತ ಸೂರಿನ' ಸ್ಕೀಮಿನ ಮೇಲೆ ಮುರಕೊಂಡು ಬಿದ್ದಾಗ ರಾಮದಾಸ ಅಕ್ಷರಶಃ ತಬ್ಬಿಬ್ಬಾಗಿ ತೊದಲಲು ಶುರುಮಾಡಿದ್ದ. ಈ ಸಂಬಂಧ ಅಧಿಕೃತ ದಾಖಲೆಗಳೇನಾದರು ಇದ್ದಲ್ಲಿ ಬಿಡುಗಡೆ ಮಾಡುವಂತೆ ಎಲ್ಲರೂ ಒಕ್ಕೊರಲಿನಿಂದ ಒತ್ತಾಯಿಸಿದಾಗಲೂ ರಾಮದಾಸ್ ಬಾಯಿ ಮಾತಿನ ನೆಪವನ್ನು ಬಿಟ್ಟು ದೃಢವಾದ ಮಾತನ್ನೇ ಆಡದಿದ್ದದ್ದು ಅವನ ಯೋಜನೆಯ ಪ್ರಾಮಾಣಿಕತೆಯನ್ನೆ ಬೆತ್ತಲುಗೊಳಿಸಿತ್ತು.

ಅಲ್ಲದೇ ಚುನಾವಣಾ ನೀತಿ ಸಂಹಿತೆಯ ಆಸುಪಾಸಿನಲ್ಲೇ ರಾಮದಾಸ್ ಘೋಷಿಸಿದ 'ಮೈಸೂರು ನಗರ ಬೀದಿ ಬದಿ ವ್ಯಾಪಾರಿಗಳ ವಿವಿದೋದ್ದೇಶ ಸಹಕಾರ ಸಂಘ' ಎನ್ನುವುದೂ ಸಹಾ ಮತ್ತೊಂದು ಎಲೆಕ್ಷನ್ ಗಿಮಿಕ್ ಆಗಿತ್ತು, ಇದೂ ಒಂದು ಬೋಗಸ್ ಯೋಜನೆ ಎನ್ನುವುದು ಕೆಲವೆ ದಿನದಲ್ಲಿ ಸಾಬೀತಾಗಿದೆ.

ಸೀರೆ ಹಂಚುವ ನಾಟಕ, ಪಡ್ಡೆ ಹುಡುಗರನ್ನು ಗೋವಾ ಟ್ರಿಪ್ಪಿಗೆ ಕರೆದೊಯ್ಯುವ ಸ್ಕೀಮು.... ಹೀಗೆ ಹತ್ತಾರು ಸ್ಕೀಮುಗಳ ಮೂಲಕವೇ ರಾಮದಾಸ ಚುನಾವಣೆಯ ಸನಿಹದಲ್ಲಿ ಚಲಾವಣೆಗೆ ಬರಲೆತ್ನಿಸಿದ್ದ. ಇದೆಲ್ಲವೂ ಮತದಾರರಿಗೆ ಸ್ಪಷ್ಟವಾಗಿ ಅರ್ಥವಾಗಿದೆ.

ರಾಮದಾಸನ ವಂಚನೆ ಕೇವಲ ಮತದಾರರ ಮಟ್ಟಿಗೆ ಮಾತ್ರ ಸೀಮಿತವಲ್ಲ, ಖುದ್ದು ತನ್ನದೇ ಕಾರ್ಯಕರ್ತರಿಗೂ ಈತ ನಾಮ ಹಾಕಿದ್ದಿದೆ. ಇತ್ತೀಚೆಗೆ ಬಿಜೆಪಿಯ ಮೂಲ ಕಾರ್ಯಕರ್ತರನ್ನು ರಾಮದಾಸ್ ನಿರ್ಲಕ್ಷಿಸಿದ್ದ, ಅವರೆಲ್ಲ ಮುನಿಸಿಕೊಂಡು ಪ್ರಚಾರದಿಂದ ಹಿಂದೆ ಸರಿದರು. ಆಗ ಅವರನ್ನು ಓಲೈಸುವ ಸಲುವಾಗಿ 198 ವಾರ್ಡ್‌ಗಳಲ್ಲಿ ತನ್ನ ಗೆಲುವಿಗೆ ಶ್ರಮಿಸುವ ಕಾರ್ಯಕರ್ತರಿಗೆಂದು 8 ಕೋಟಿಯ ಪ್ಯಾಕೇಜ್ ಎತ್ತಿಟ್ಟಿದ್ದೇನೆಂಬ ಸುದ್ದಿ ಹಬ್ಬಿಸಿದ. ಆದರೆ ರಾಮದಾಸನ ಡಬಲ್ ಗೇಮ್ ಕಂಡಿರುವ ಕಾರ್ಯಕರ್ತರ್‍ಯಾರು ಎಂಟು ಕೋಟಿಯ ಗಂಟಿಗೆ ಮುಗಿಬಿದ್ದಿಲ್ಲ ಎನ್ನುವುದೇ ತಾಜಾ ಸುದ್ದಿ...

ಹೀಗೆ ಸಾಲು ಸಾಲು ವಂಚನೆ, ಸುಲಿಗೆ, ಸಣ್ಣ ಸ್ಕೀಮುಗಳ ಮೂಲಕವೇ ಅಧಿಕಾರ ಗಿಟ್ಟಿಸಿಕೊಳ್ಳುತ್ತಾ ಬಂದಿದ್ದ ರಾಮದಾಸನಿಗೆ ಈ ಬಾರಿ ರಾಜಕಾರಣದ ಎಲ್ಲಾ ಸಮೀಕರಣಗಳೂ ಒಟ್ಟಿಗೇ ಉಲ್ಟಾ ಹೊಡೆದಿವೆ. ಫಲಿತಾಂಶದಲ್ಲೂ ಇದು ಪ್ರತಿಫಲಿತವಾಗುತ್ತಾ....... ಕಾದು ನೋಡಬೇಕಿದೆ!

– ಗಿರೀಶ್ ತಾಳಿಕಟ್ಟೆ

ರಾಮದಾಸ ನಿರ್ಗತಿಕನಂತೆ!

ರಾಮದಾಸ ಬೇನಾಮಿಯಾಗಿ ಗಳಿಸಿರುವ ಆಸ್ತಿಯೇ ನೂರಾರು ಕೋಟಿ ದಾಟಬಹುದು ಎಂಬ ಸುದ್ದಿ ಇದೆ. ರಾಮದಾಸನನ್ನು ಹತ್ತಿರದಿಂದ ಬಲ್ಲವರು ಮತ್ತು ಕೆ.ಆರ್ ಕ್ಷೇತ್ರದ ಮತದಾರರಿಗೆ ಆತ ಎಷ್ಟಕ್ಕೆ ಬಾಳುತ್ತಾನೆ ಎಂಬ ಅಂದಾಜಿದೆ, ಅಂತಹದ್ದರಲ್ಲಿ ಚುನಾವಣಾ ಆಯೋಗಕ್ಕೆ ಇತ್ತೀಚೆಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ತನ್ನ ಹೆಸರಿನಲ್ಲಿ ಕೇವಲ 45 ಲಕ್ಷ ಆಸ್ತಿ ಮಾತ್ರ ಇದೆಯೆಂದು ಘೋಷಿಸಿಕೊಂಡಿದ್ದಾನೆ.

ಅವನ ಘೋಷಣೆಯಂತೆ ಅವನ ಬಳಿ ಇರೋದು 1 ಲಕ್ಷ ಕ್ಯಾಶ್ ಮಾತ್ರವಂತೆ. ಇನ್ನು ರಾಮದಾಸನ ಹೆಸರಲ್ಲಿ ನಾಲ್ಕು ಬ್ಯಾಂಕ್ ಅಕೌಂಟ್‌ಗಳಿದ್ದು ಅವುಗಳಲ್ಲಿ ಒಟ್ಟಾರೆಯಾಗಿ 15.65 ಲಕ್ಷ ಮಾತ್ರ ಇದೆಯಂತೆ! ರಾಮದಾಸನ ಬಳಿ ಇರುವುದು ಕೇವಲ ಒಂದೇ ಒಂದು ವಾಹನ. ಅದು 1992 ಮಾಡೆಲ್‌ನ ಹೀರೋ ಹೋಂಡಾ ಬೈಕ್ ಆಗಿದ್ದು ಅದರ ಈಗಿನ ಬೆಲೆ 14,000 ರೂಪಾಯಿ ಅಷ್ಟೆ. ಇನ್ನುಳಿದಂತೆ ಅವನ ಬಳಿ ವಾಹನಗಳೇ ಇಲ್ಲ.

ಅಚ್ಚರಿ ಅಂತಂದರೆ ಮೈಸೂರು ಜಿಲ್ಲೆಯಲ್ಲಿ ರಾಮದಾಸನಿಗೆ ಒಂದಿಂಚೂ ಜಮೀನಿಲ್ಲವಂತೆ, ಅಷ್ಟರ ಮಟ್ಟಿಗೆ ಆತ ನಿರ್ಗತಿಕನಂತೆ. ಮಳ್ಳವಳ್ಳಿ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ 3.5 ಎಕರೆ ಪಿತ್ರಾರ್ಜಿತ ಜಮೀನಿದೆಯಾದರು ಅದನ್ನು ಐದು ಭಾಗ ಮಾಡಿದರೆ ರಾಮದಾಸನಿಗೆ ಸೇರಬೇಕಾದ್ದು ಒಂದು ಭಾಗ ಮಾತ್ರವಂತೆ. ಅದರ ಬೆಲೆಯೂ 3.20 ಲಕ್ಷ ಅಷ್ಟೆ! ರಿಯಲ್ ಎಸ್ಟೇಟ್ ವ್ಯವಹಾರದಲ್ಲೇ ತೊಡಗಿದ್ದ ರಾಮದಾಸನಿಗೆ ಮೈಸೂರಿನಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಒಂದೇ ಒಂದು ಸ್ವಂತ ಸೂರಿಲ್ಲವಂತೆ!

ಆತ ಘೋಷಿಸಿಕೊಂಡಿರುವುದನ್ನೇ ಪರಿಗಣಿಸಿದರೆ ರಾಮದಾಸ ಇಡೀ ರಾಜ್ಯದಲ್ಲಿ ಅತ್ಯಂತ ಬಡ ಎಂ.ಎಲ್.ಎ ಕಮ್ ಮಿನಿಸ್ಟ್ರು! ನೀವು ನಂಬ್ತೀರಾ?

ಕರಾವಳಿ: ಯಾರು ಗೆಲ್ಲಬೇಕು? ಯಾಕೆ ಗೆಲ್ಲಬೇಕು

ಕರಾವಳಿಯ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭ್ರಷ್ಟರ, ಭಂಡರ ಬಿಜೆಪಿ ವಿರುದ್ಧ ಅಲೆಯೊಂದು ಎದ್ದಿದೆ! ಕಳೆದ ಒಂದು ದಶಕದಿಂದ ಪ್ರತಿ ಚುನಾವಣೆಯಲ್ಲೂ ಅನಾಹುತಕಾರಿ ಹಿಂದೂತ್ವದ ಕುಟಿಲ ಕಾರಸ್ಥಾನಿಗಳು ಮತದಾರರನ್ನು ಯಾಮಾರಿಸಿ ಅರ್ಭಟಿಸಿದ್ದಾರೆ. ಆದರೆ ಈ ಬಾರಿ ಕರಾವಳಿಯ ಮತದಾರರಿಗೆ ಸಂಘಪರಿವಾರದ ಶಕುನಿಗಳ ಅಸಲಿ ಅವತಾರ ಅರ್ಥವಾಗಿದೆ. ಹಿಂದೂತ್ವದ ಮುಖವಾಡದಲ್ಲಿ ಹಿಂದೂ ಹುಡುಗಿಯರನ್ನೇ ಬೆತ್ತಲೆ ಮಾಡಿದ, ವಿನಾಕಾರಣ ಚರ್ಚ್-ಮಸೀದಿ-ಪಬ್-ಹೋಮ್‌ಸ್ಟೇಗಳ ಮೇಲೆ ಮುಗಿಬಿದ್ದು ತರಹೇವಾರಿ "ದಾಹ" ತೀರಿಸಿಕೊಂಡ, ಗೋರಕ್ಷಣೆಯ ಹೆಸರಲ್ಲಿ ಹಿಂಸಾಚಾರ ನಡೆಸಿ ದುಡ್ಡು ದೋಚಿದ ಚೆಡ್ಡಿ-ಕಾವಿ-ಭಜರಂಗಿ ಧೂರ್ತರ ಸ್ವಯಂಕೃತಾಪರಾಧದಿಂದ ಬಿಜೆಪಿ ಬಾಡಿಹೋಗಿದೆ!!

ಕರಾವಳಿಯ ಮೂರೂ ಜಿಲ್ಲೆಯ 19 ಕ್ಷೇತ್ರಗಳಲ್ಲಿ ನೇರಹಣಾಹಣಿಯಲ್ಲಿ ಕಾಂಗ್ರೆಸ್ ಮುನ್ನುಗ್ಗಿದೆ. ಬಿಜೆಪಿಯ ಭದ್ರಕೋಟೆ ಛಿದ್ರವಾಗುವ ಬಗ್ಗೆಯೇ ಜನ ಮಾತಾಡಿಕೊಳ್ಳುತ್ತಿದ್ದಾರೆ. ಜಾತಿಗಿಂತ ಧರ್ಮವೇ ಮುಖ್ಯ ಎನ್ನುತ್ತಿದ್ದ ಹಿಂದುಳಿದವರು-ಶೋಷಿತರು ಈಗ ಬದಲಾವಣೆ ಬಯಸಿದ್ದಾರೆ. ಹಿಂದೂವಾದಿಗಳು ಮಾಡಿದ ಹರಾಮಿತನ, ಬಿಜೆಪಿ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರ, ಅನಾಚಾರ, ಹಾದರ, ಸ್ವಜನಪಕ್ಷಪಾತದಿಂದ ಹೇಸಿರುವ ಮತದಾರ ಬಿಜೆಪಿ ಬೇಡವೇ ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದಾನೆ.


'ಪತ್ರಿಕೆ' ಕಂಗಾಲಾದ ಕರಾವಳಿಗೆ ಹಿತವಾಗಬೇಕೆಂದರೆ ಯಾರು ಗೆಲ್ಲಬೇಕು? ಯಾಕೆ ಗೆಲ್ಲಬೇಕು? ಎಂದು ಸಮೀಕ್ಷೆ ಮಾಡಿದಾಗ ಬಂದ ಫಲಿತಾಂಶ ಇಲ್ಲಿದೆ.



ಮಂಗಳೂರು (ಉ)

ಇಲ್ಲಿಯ ಬಿಜೆಪಿ ಕ್ಯಾಂಡಿಡೇಟ್ ಕೃಷ್ಣ ಪಾಲೆಮಾರ್ ಶಾಸಕನಾಗಲು ಅಯೋಗ್ಯ. ಈತ ಗೆದ್ದರೆ ಮಂಗಳೂರಿಗೆ ಕಂಟಕ. ಖತರ್‌ನಾಕ್ ಬಿಲ್ಡರ್‌ಗಳು, ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಈತನಿಂದ ಲಾಭವಾಗುತ್ತದೆಯೇ ಹೊರತು ಜನಸಾಮಾನ್ಯರಿಗೆ ಪ್ರಯೋಜನವಿಲ್ಲ, ಹಾಗೆಯೇ ಈ ಮಂಗಳೂರಿನ ರಿಯಲ್ ಎಸ್ಟೇಟ್ ಉದ್ಯಮದ ಕಿಂಗ್‌ಪಿನ್ ನೈತಿಕವಾಗೂ ಅಧಃಪತನ ಕಂಡವನು. ಎರಡು ಬಾರಿ ಗೆದ್ದಿರುವ ಪಾಲೆಮಾರ್ ಸುರತ್ಕಲ್‌ಗೆ ಕೆಟ್ಟದ್ದು ಮಾಡಿದ್ದೇ ಹೆಚ್ಚು. ಈತನಿಗಿಂತ ಕಾಂಗ್ರೆಸ್‌ನ ಮೊಯ್ದೀನ್ ಬಾವಾ ಬೆಟರ್. ಹೊಸ ಮುಖ. ಒಂದು ಛಾನ್ಸ್ ಕೊಟ್ಟು ನೋಡಬಹುದು.

ಮಂಗಳೂರು (ದ)



ಬಿಜೆಪಿಯ ಹೇತ್ಲಾಂಡಿ ಯೋಗೀಶ್ ಭಟ್ ನಾಲ್ಕು ಬಾರಿ ಗೆದ್ದರೂ ಮಂಗಳೂರು ನಗರ ಕ್ಷೇತ್ರಕ್ಕೆ ನೆಮ್ಮದಿ ಕೊಟ್ಟವನಲ್ಲ. ಅಭಿವೃದ್ಧಿಯ ಕನಸುಗಳೇ ಇಲ್ಲದ ಪಕ್ಕಾ ವ್ಯಾಪಾರಿ ಬುದ್ಧಿಯ ಜಡಭಂಡ ಭಟ್‌ಗಿಂತ ಕಾಂಗ್ರೆಸ್‌ನ ಜೆ.ಆರ್. ಲೋಬೋ ಶಾಸಕರಾಗಲು ಅರ್ಹ. ಸರ್ಕಾರಿ ಅಧಿಕಾರಿಯಾಗಿ ಕ್ಷೇತ್ರದ ಬೇಕು-ಬೇಡ ಗೊತ್ತು ಮಾಡಿಕೊಂಡಿರುವ ಲೋಬೋ ಕೆಲಸಗಾರ. ಜನಪರ. ಈತ ಗೆದ್ದರೆ ನಿಂತ ನೀರಂತೆ ಮಲಿನವಾಗಿರುವ ಮಂಗಳೂರಲ್ಲಿ ಒಂಚೂರು ಸಂಚಲನ ಮೂಡಬಲ್ಲದು.



ಮಂಗಳೂರು

ಕಾಂಗ್ರೆಸ್‌ನ ಕ್ಯಾಂಡಿಡೇಟ್ ಯು.ಟಿ. ಖಾದರ್ ಗೆಲ್ಲಲೇಬೇಕಾದ ಹುಡುಗ. ತನ್ನ ಕ್ಷೇತ್ರದಲ್ಲಿ ಶೇ. 56 ರಷ್ಟು ಸ್ವಜಾತಿ ಸಾಬಿಗಳಿದ್ದರೂ ಈತ ಎಂದೂ ಕಮ್ಯುನಲ್ ಕಿತಾಪತಿ ಮಾಡಿದವನಲ್ಲ. ಹಿಂದೂ-ಕ್ರಿಶ್ಚಿಯನ್ ಜನರೊಂದಿಗೂ ಸುಮಧುರ ಸಖ್ಯ ಸಾಧಿಸಿರುವುದೇ ಈತನ ಹೈನೆಸ್. ವಿರೋಧ ಪಕ್ಷದ ಶಾಸಕನಾದರೂ ಸಾಕಷ್ಟು ಕೆಲಸ ಮಾಡಿದ್ದಾನೆ. ಈತನ ಎದುರು ನಿಂತಿರುವ ಬಿಜೆಪಿಯ ಚಂದ್ರಹಾಸ ಉಳ್ಳಾಲ್ ಗೋಲ್‌ಮಾಲ್ ಮನುಷ್ಯ. ಗ್ರಾಮ ಪಂಚಾಯತ್ ಮಟ್ಟದ ಅರ್ಹತೆಯ ಚಂದ್ರಹಾಸ್ ಉಳ್ಳಾಲ್‌ಗಿಂತ ಖಾದರ್ ಸಾವಿರ ಪಾಲು ವಾಸಿ.

ಬಂಟ್ವಾಳ



ಅನುಭವಿ ಬೆಳ್ಳಿಪಾಡಿ ಬೇಬಿಯಣ್ಣ ಯಾನೆ ರಮಾನಾಥ್ ರೈ ಬಂಟ್ವಾಳದ ಹಿತದೃಷ್ಟಿಯಿಂದ ಗೆಲ್ಲಲೇಬೇಕು. ಈ ಕಾಂಗ್ರೆಸ್ ಹುಲಿ ಎದುರು ನಿಂತಿರುವ ಬಿಜೆಪಿಯ ರಾಜೇಶ್ ನಾಯಕ್ ಸ್ವಂತಿಕೆಯಿಲ್ಲದೆ-ಕಲ್ಲಡ್ಕ ಭಟ್ಟನ ಗುಲಾಮ. ಈತ ಗೆದ್ದರೆ ಬಂಟ್ವಾಳದ ನೆಮ್ಮದಿಗೆ ಭಂಗ ಗ್ಯಾರಂಟಿ. ರೈ ಗೆದ್ದರೆ ಬಂಟ್ವಾಳಕ್ಕೆ ಭಯವಿಲ್ಲ.




ಪುತ್ತೂರು

ಜನಪರ ಚಿಂತನೆಯ ಶಕುಂತಲಾ ಶೆಟ್ಟಿ ಚೆಡ್ಡಿ ಸಹವಾಸ ಬಿಟ್ಟು ಶುದ್ಧರಾಗಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಆಕೆ ಎದುರಾಳಿ ಬಿಜೆಪಿಯ ಸಂಜೀವ ಮಠಂದೂರು ಎಂಬ ಆರೆಸ್ಸೆಸ್ ಫಂಟರ್‌ಗಿಂತ ಎಮ್ಮೆಲ್ಲೆಯಾಗುವ ಅನೇಕ ಅರ್ಹತೆ ಇರುವಾಕೆ. ಹಾಗೆ ನೋಡಿದರೆ ಚೆಡ್ಡಿ ತರಲೆ-ಘಾತುಕತನ ಬಿಟ್ಟರೆ ಮಠಂದೂರ್‌ಗೆ ಯಾವ ಜನಪರ ಚಿಂತನೆಗಳೂ ಇಲ್ಲ. ಶಕು ಶಾಸಕಿಯಾಗಿದ್ದಾಗ ಆರೆಸ್ಸೆಸ್ ಬಾಸ್‌ಗಳ ಎದುರ್ಹಾಕಿಕೊಂಡು ಅಭಿವೃದ್ಧಿ ಕೆಲಸ ಮಾಡಿದ್ದರು. ಆಕೆ ಗೆದ್ದರೆ ಪುತ್ತೂರು ಕಳೆದೈದು ವರ್ಷದಲ್ಲಿ ಕಂಡ ಹಿನ್ನಡೆ ಕಡಿಮೆ ಆದೀತು; ಜನರಿಗೆ ಸ್ಪಂದಿಸುವ ಶಾಸಕಿ ಸಿಗುತ್ತಾರೆ.

ಸುಳ್ಯ




ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ ಬಿಜೆಪಿ ಕ್ಯಾಂಡಿಡೇಟ್-ಹಾಲಿ ಶಾಸಕ ಅಂಗಾರ ಕಾಂಗ್ರೆಸ್ ಪ್ರತಿಸ್ಪರ್ಧಿ ಡಾ. ರಘು ಅವರ ಚಾರ್ಮ್-ಜನಪರ ತುಡಿತ-ಅರ್ಹತೆಗಳಿರುವಾತ ಅಲ್ಲವೇ ಅಲ್ಲ ಎಂಬುದು ಸಾಬೀತಾಗುತ್ತದೆ. ರಘು ಸರ್ಕಾರಿ ವೈದ್ಯರಾಗಿ ಜನಾನುರಾಗಿ ಆಗಿದ್ದವರು. ಸುಳ್ಯದಂಥ ಗುಡ್ಡಗಾಡು ಕ್ಷೇತ್ರಕ್ಕೆ ಏನು ಬೇಕು-ಏನು ಬೇಡ ಎಂದು ಗೊತ್ತಿರುವವರು. ಈತ ಗೆದ್ದರೆ ಸುಳ್ಯ ಚೆಡ್ಡಿ ರೌಡಿಗಳ ದಾಸ್ಯದಿಂದ ಮೋಕಳಿಕ್ ಆಗುತ್ತದೆ. ಹೊಸ ಭರವಸೆ ಸುಳ್ಯದ ಜನರಿಗೀತ.




ಬೆಳ್ತಂಗಡಿ

ಬಿಜೆಪಿಯ ರಂಜನ್ ಗೌಡ ಗೆಲ್ಲಲೇಬಾರದ ಹುಡುಗ. ಈತ ಶಾಸಕನಾದರೆ ಬೆಳ್ತಂಗಡಿಯಲ್ಲಿ ಭಯದ ವಾತಾವರಣ ಸೃಷ್ಟಿಯಾಗುವ ಅಪಾಯವಿದೆ. ಹಾಗೆಯೇ ಬಿಸಿನೆಸ್ ಬುದ್ಧಿಯ ಈತ ಶಾಸಕನಾದರೆ ಬೆಳ್ತಂಗಡಿ ಬರಡಾದಂತೆಯೇ. ಕಾಂಗ್ರೆಸ್ ಹುರಿಯಾಳು-ಹಾಲಿ ಶಾಸಕ ವಸಂತ ಬಂಗೇರಾ ಬೆಳ್ತಂಗಡಿಗೆ ಹೇಳಿಮಾಡಿಸಿದ ಶಾಸಕ. ಈತ ಒರಟನಾದರೂ ಜನದ್ರೋಹಿ ಅಲ್ಲ. ಅಧಿಕಾರಿಗಳ ಕೊರಳಪಟ್ಟಿ ಹಿಡಿದುಕೊಂಡು ಜನರ ಕೆಲಸ ಮಾಡಿಸುವ ತಾಕತ್ತುದಾರ. ದೇವಧೂತರಿಗೂ ಡೊಗ್ಗುಸಲಾಮು ಹಾಕದವರು. ಬೆಳ್ತಂಗಡಿಯ ಎಲ್ಲ ಜಾತಿ-ಧರ್ಮದ ಜನರ ವಿಶ್ವಾಸ ಗಳಿಸಿರುವ ಬಂಗೇರಾ ಗೆಲ್ಲಬೇಕಾದ ಅನುಭವಿ ರಾಜಕಾರಣಿ.

ಮೂಡುಬಿದಿರೆ




ಬಿಜೆಪಿಯ ಉಮಾನಾಥ ಕೋಟ್ಯಾನ್, ಕಾಂಗ್ರೆಸ್‌ನ ಅಭಯಚಂದ್ರ ಜೈನ್ ಮತ್ತು ಜೆಡಿಎಸ್‌ನ ಅಮರನಾಥ ಶೆಟ್ಟಿಯನ್ನು ತೂಗಿ ಯಾರು ಹಿತವರು ಎಂದು ನೋಡಿದರೆ, ಅಭಯನೇ ಬೆಟರ್ ಅನ್ನಿಸುತ್ತದೆ. ಆತ ಮೂಡುಬಿದಿರೆ-ಮೂಲ್ಕಿಯಂಥ ಕ್ರಿಶ್ಚಿಯನ್-ಮುಸ್ಲಿಮ್ ಸಮುದಾಯ ಹೆಚ್ಚಿರುವ ಕ್ಷೇತ್ರದ ಶಾಂತಿ ಹಾಳಾಗದಂತೆ ಎಚ್ಚರ ವಹಿಸಿದಾತ. ಒಂದಿಷ್ಟು ಕೆಲಸವೂ ಮಾಡಿದ್ದಾನೆ. ಕ್ಷೇತ್ರದ ಇತಿಹಾಸ-ಭೂಗೋಳ ಬಲ್ಲಾತ. ಈತನೇ ಗೆಲ್ಲಬೇಕಾದ ಹುರಿಯಾಳು. ಮೂರು ಬಾರಿ ಶಾಸಕನಾಗಿರುವ ಈತ ಜನರಿಗೆ ಬೆನ್ನು ಮಾಡಿ ಎಂದೂ ಹೋದವನಲ್ಲ, ಸಮಸ್ಯೆ ಬಂದಾಗ ಪಲಾಯನ ಮಾಡಿದವನಲ್ಲ, ನಾಲಿಗೆಯೊಂದು ಸರಿಯಿದ್ದರೆ ಈತ ಒಳ್ಳೆಯ ಶಾಸಕ.



ಕಾರ್ಕಳ

ಕಾರ್ಕಳದ ಅಭಿವೃದ್ಧಿ-ನೆಮ್ಮದಿ-ಕೋಮುಸಾಮರಸ್ಯ ಕೆಡಬಾರದೆಂದಿದ್ದರೆ ಕಾಂಗ್ರೆಸ್‌ನ ಗೋಪಾಲ ಭಂಡಾರಿ ಗೆಲ್ಲಬೇಕು. ಆತನ ವಿರುದ್ಧ ನಿಂತು ಜಾತಿ-ಧರ್ಮ-ದೌರ್ಜನ್ಯದ ರಾಜಕಾರಣ ಮಾಡುತ್ತಿರುವ ಭಜರಂಗಿಭೂತ ಸುನಿಲ್‌ಕುಮಾರ್‌ಗೆ ಶಾಸಕನಾಗುವ ಅರ್ಹತೆಯೇ ಇಲ್ಲ. 2004 ರಲ್ಲಿ ಅಚಾನಕ್ ಶಾಸಕನಾಗಿದ್ದಾಗ ಆತನೇ ತಾನು ಎಮ್ಮೆಲ್ಲೆಗಿರಿಗೆ ಅಯೋಗ್ಯನೆಂದು ಸಾಬೀತು ಪಡಿಸಿಕೊಂಡಿದ್ದ. ಭಂಡಾರಿ ಶಾಸಕರಾಗಿದ್ದಾಗ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸಿದ್ದಾರೆ. ವಿರೋಧ ಪಕ್ಷದ ಶಾಸಕನಾದರೂ ಒಳ್ಳೆಯ ಕೆಲಸ ಮಾಡಿದ್ದಾರೆ. ಈತ ಶಾಸಕ ಹೇಗಿರಬೇಕೆಂಬುದಕ್ಕೆ ಮಾದರಿ. ಸರಳ-ಸಜ್ಜನ-ಜನಪರ-ಅಭಿವೃದ್ಧಿ ಚಿಂತಕ. ಇದಕ್ಕೆ ತದ್ವಿರುದ್ಧ ವ್ಯಕ್ತಿತ್ವ ಭಜರಂಗಿ ಸುನಿಲ್‌ದು.

ಕಾಪು



ಎರಡು ಬಾರಿ ಶಾಸಕನಾಗಿರುವ ಬಿಜೆಪಿಯ ಲಾಲಾಜಿ ಮೆಂಡನ್ ನಾಲಾಯಕ್ ಪುಢಾರಿ. ಶಾಸಕನಾಗುವ ಯಾವ ಯೋಗ್ಯತೆಯೂ ಇಲ್ಲದವ. ಕ್ಷೇತ್ರದ ಒಳಿತಿನ ಚಿಂತನೆ ಇಲ್ಲದಿದ್ದರೂ ಸ್ವ-ಜೀರ್ಣೋದ್ಧಾರ ಈತ ಸಕತ್ತಾಗಿ ಮಾಡಿಕೊಂಡಿದ್ದಾನೆ. ಜನರ ನೆಮ್ಮದಿ ಕೆಡಿಸಿರುವ ನಾಗಾರ್ಜುನ (ಯುಪಿಸಿಎಲ್) ಥರ್ಮಲ್ ಪ್ರಾಜೆಕ್ಟ್‌ನ ಪರ ನಿಂತು ಕಾದಿದ ಪ್ರಳಯಾಂತಕನೀತ. ಕಾಂಗ್ರೆಸ್‌ನ ವಿನಯಕುಮಾರ್ ಸೊರಕೆ ಡೈನಮಿಕ್-ಜನಪ್ರತಿನಿಧಿಯೆಂದು ಎಂಪಿಯಾಗಿದ್ದಾಗ ಜನಮನ್ನಣೆ ಗಳಿಸಿದ್ದರು. ಈತ ಗೆದ್ದರೆ ಕಾಪು ಬದಲಾಗುತ್ತದೆ. ಮತಾಂಧ ಕಿತಾಪತಿಗಳಿಗೆ ಕಡಿವಾಣ ಬೀಳಲಿದೆ. ಕಾಪು ಉದ್ಧಾರವಾಗಬೇಕೆಂದಿದ್ದರೆ ಬಿಜೆಪಿಯ ಲಾಲಾಜಿ ಮೆಂಡನ್ ಸೋಲಲೇ ಬೇಕು.




ಉಡುಪಿ

ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಮತ್ತು ಬಿಜೆಪಿಯ ಸುಧಾಕರ ಶೆಟ್ಟಿಯಲ್ಲಿ ಶಾಸಕನಾಗುವ ಅರ್ಹತೆಗಳಿರುವುದು ಪ್ರಮೋದ್‌ಗೆ. ಆತ ತನ್ನ ಹಣವಂತಿಕೆ ಬಡವರಿಗಾಗಿ ವ್ಯಯಿಸುತ್ತ ಬಂದಿರುವಾತ. ಸುಧಾಕರ ಶೆಟ್ಟಿ ಯಾರಿಗೂ ಬಿಲ್ಲೆ ಬಿಡದ ಪಕ್ಕಾ ಬಿಸಿನೆಸ್‌ಮನ್. ಲಾಭವೇ ಧ್ಯೇಯ ಸುಧಾಕರ್‌ಗೆ; ಪ್ರಮೋದ್‌ಗೆ ಜನ ಹಿತವೇ ಧ್ಯೇಯ. ಕ್ರಿಯಾಶೀಲ ತರುಣ ಪ್ರಮೋ[illegible] ಗೆದ್ದರೆ ಬಿಜೆಪಿಯ ರಘುಪತಿ ಭಟ್ಟ-ವಿ.ಎಸ್. ಆಚಾರ್ಯ [illegible] ಚೆಡ್ಡಿ-ಭಜರಂಗಿಗಳು ಮಾಡಿದ ಕೊಳಕನ್ನು ತೊಳೆದು ಉಡುಪಿಯನ್ನು [illegible] ಮಾಡಬಲ್ಲ, ಜನರಿಗೆ ಸ್ಪಂದಿಸುತ್ತ ಅಭಿವೃದ್ಧಿ ಕೆಲಸ ಮಾಡಬಲ್ಲ, ಮತ[illegible] ಬಗ್ಗುಬಡಿದು ಉಡುಪಿಯಲ್ಲಿ ಒಂಚೂರು ಸಾಮರಸ್ಯ ಮೂಡಿಸಬಲ್ಲ, ಸು[illegible] ಶೆಟ್ಟಿ ಗೆದ್ದರೆ ಮತ್ತದೇ ಬಿಜೆಪಿ-ಆರೆಸ್ಸೆಸ್ ಅನಿಷ್ಟ ಉಡುಪಿಗೆ ಗಂಟುಬೀ[illegible]

ಕುಂದಾಪುರ



"ಕುಂದಾಪುರದ ವಾಜಪೇಯಿ" ಎಂಬ ಅಡ್ಡ ಹೆಸರಿನ ಪಕ್ಷೇತರ ಅಭ್ಯರ್ಥಿ ಅರ್ಥಾತ್ ಬಿಜೆಪಿ ಬಂಡಾಯಗಾರ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಮೂರು ಬಾರಿ ಗೆದ್ದು ಶಾಸಕನಾದರೂ ಮೂರು ಬಿಲ್ಲೆ ಕೆಲಸ ಮಾಡಿದವರಲ್ಲ; ಎಲ್ಲರಿಂದಲೂ ಒಳ್ಳೆಯವನೆಂದು ಹೇಳಿಸಿಕೊಳ್ಳುವ "ನೀತಿ"ಯ ಹಾಲಾಡಿಯಿಂದ ಕುಂದಾಪುರ ನಿಂತಲ್ಲೆ ನಿಂತಿದೆ. ಈ ಬಾರಿ ಕುಂದಾಪುರದ ಹಿತದೃಷ್ಟಿ[illegible] ಬದಲಾವಣೆ ಬೇಕಾಗಿದೆ. ಕಾಂಗ್ರೆಸ್‌ನ ಮಲ್ಯಾಡಿ ಶಿವರಾಮ ಶೆಟ್ಟಿ ಹಾಲಾ[illegible] ಒಳ್ಳೆಯ ಶಾಸಕನಾಗಬಲ್ಲರು.




ಬೈಂದೂರು

ಹಿರಿಯರಿರಲಿ-ಕಿರಿಯರಿರಲಿ ಗೌರ[illegible] ಮಾತಾಡದ ಬಿಜೆಪಿ ಹುರಿಯಾಳು ಸುಕ[illegible] ಶೆಟ್ಟಿ ಗೆದ್ದರೆ ಬೈಂದೂರಲ್ಲಿ ಜಾತಿ-[illegible] ರಾಜಕಾರಣ ಶುರುವಾಗುವ ಅಪಾಯ [illegible] ಜನಹಿತದ ರಾಜಕಾರಣದ ಗಂಧವೇ ಇಲ್ಲ[illegible] ಶೆಟ್ಟಿಯದು ಏನಿದ್ದರೂ ದ್ವೇಷಾಸೂಯ[illegible] ಪಾಳೆಗಾರಿಕೆಯ ಪಾಲಿಟಿಕ್ಸ್. ಈತನಿಗಿಂತ ಕಾಂಗ್ರೆಸ್‌ನ ಗೋಪಾಲ [illegible] ಯೋಗ್ಯ ಆಯ್ಕೆ. ಈತ ಒಳ್ಳೆಯದು ಮಾಡದಿದ್ದರೂ ಕೆಟ್ಟದು ಕ್ಷೇತ್ರ[illegible] ಆಗದು.

ಭಟ್ಕಳ



ಭಟ್ಕಳದ ಕೆಜೆಪಿ ಕ್ಯಾಂಡಿಡೇಟ್ ಶಿವಾನಂದ ನಾಯ್ಕ ಈಗ ಮಾಗಿದ್ದಾರೆ. ಬಿಜೆಪಿ ಸಹವಾಸ ಸಾಕಾಗಿ ಕೆಜೆಪಿ ಸೇರಿದ್ದಾರೆ. ಮುಸ್ಲಿಮ್-ಕ್ರಿಶ್ಚಿಯನ್ನರ ವಿಶ್ವಾಸವನ್ನೂ ಗಳಿಸಿದ್ದಾರೆ. ಸೆಕ್ಯೂಲರ್ ನಡೆ-ನುಡಿ ಬೆಳೆಸಿಕೊಂಡಿರುವ ಶಿವಾನಂದ ನಾಯ್ಕ ಎದುರು ಕಾಂಗ್ರೆಸ್‌ನ ಜೆ.ಡಿ. ನಾಯ್ಕ ಹಿಂದೂ ಮತೀಯವಾದಿಯಂತೆ-ಕಾಸಿಗೆ ಬಾಯಿಬಿಡುವ ಶಾಸಕನಂತೆ ಕಾಣಿಸಿ[illegible] ಪಿರ್ಕೀಸ್‌ನಂತೆ ಹಾರಾಡುವ ಜೇಡಿಗಿಂತ ಕೆಜೆಪಿಯ ಶಿವಾನಂದ [illegible] ಭಟ್ಕಳಕ್ಕೆ ಬೇಕಾದ ಶಾಸಕ.



ಕುಮಟಾ

ಕುಮಟಾ ಕ್ಷೇತ್ರದಲ್ಲಿ ಇರುವ ಕ್ಯಾಂಡಿಡೇ[illegible] ಜೆಡಿಎಸ್‌ನ ದಿನಕರ ಶೆಟ್ಟಿ ಶಾಸಕನಾಗ[illegible] ರಾಜಕಾರಣಿ. "ರಂಗೀಲಾ"ಗಿರಿ, ಪುಂಡಾಟ[illegible] ಜನಪರ ಗುಣ-ಧರ್ಮ ಬೆಳೆಸಿಕೊಂಡಿರುವ[illegible] ಶೆಟ್ಟಿ ಆತನ ಎದುರಿಗಿರುವ ಬಿಜೆಪಿ-[illegible] ಅಭ್ಯರ್ಥಿಗಳಿಗಿಂತ ಯೋಗ್ಯ. ಕಾಂಗ್ರೆಸ್‌ನ [illegible] ಶೆಟ್ಟಿ ಗೆದ್ದರೆ ಆತನ ಮಗನ ಪಟಾಲಂ ಮೆರೆಯುವ ಅಪಾಯವಿದೆ; [illegible] ಸೋನಿ ಗೆದ್ದರೆ ಜಾತಿವಾದ-ಬಿಜೆಪಿ ಭಂಡತನ ಮೆರೆಯಲಿದೆ. ಹಾಗಾಗಿ [illegible] ದಿನಕರ ಶೆಟ್ಟಿಯೇ ಕುಮಟೆಗೆ ದಿಕ್ಕು.

ಕಾರವಾರ



ಬಿಜೆಪಿಯ ಆನಂದ್ ಅಸ್ನೋಟಿಕರ್ ಮತ್ತು ಪಕ್ಷೇತರ-ಕಾಂಗ್ರೆಸ್ ಬಂಡಾಯಗಾರ ಸತೀಶ್ ಸೈಲ್ ಒಂದೇ ನಾಣ್ಯದ ಎರಡು ಮುಖ. ಇವರಲ್ಲಿ ಯಾರು ಗೆದ್ದರೂ ಕಾರವಾರ-ಅಂಕೋಲೆಯ ನೆಮ್ಮದಿ ಕೆಡುತ್ತದೆ. ದುಡ್ಡಿನ ರಾಜಕಾರಣ ನಡೆಸುವ ಈ ದಗಲುಬಾಜಿಗಳಿಗೆ ಜನರ ನೋವು-ನಲಿವು ಅರ್ಥವಾಗದು. ಇವರಿಗಿಂತ ಕಾಂಗ್ರೆಸ್ ಅನುಭವಿ ರಾಜಕಾರಣಿ[illegible] ವಿಚಾರವಂತರಾದ ರಮಾನಂದ ನಾಯಕ್ ಯೋಗ್ಯ ಆಯ್ಕೆ. ಅ[illegible] ಕಾರವಾರ-ಅಂಕೋಲ ರಕ್ಕಸರ ಕೈಯಿಂದ ಗೆದ್ದಂತೆ!!





ಹಳಿಯಾಳ


ಕಾಂಗ್ರೆಸ್‌ನ ದೇಶಪಾಂಡೆಗಿಂತಲೂ [illegible] ಸುನಿಲ್ ಹೆಗಡೆ ಬೆಟರ್. ಆತ ಕ್ರಿಯಾಶೀ[illegible] ದೇಶಪಾಂಡೆ ನಿದ್ದೆಬಡುಕ-ಮುದುಕ. ಸಂಸ್ಕಾರ-ಸಂಸ್ಕೃತಿಯ ದೇಶಪಾಂಡೆಗೆ ಕ್ಷೇತ್ರವಾಸಿಗಳ ಬೇಕು-ಬೇಡ ತಿಳಿಯಲು ಆತ ಶಾಸಕ-ಮಂತ್ರಿಯಾಗಿ ವಿಫಲವ[illegible] ಮೂವತ್ತು ವರ್ಷದಲ್ಲಿ ಹಲವು ಅಧಿಕಾರ ಅನುಭವಿಸಿದರೂ [illegible] ಬದಲಾಗಿಲ್ಲ. ಸುನಿಲ್ ತನ್ನ ಒಂದೇ ಅವಧಿಯ ಶಾಸಕಗಿರಿಯಲ್ಲಿ ಕ್ಷೇತ್ರದ ಜನರಿಗೆ ಸ್ಪಂದಿಸಿದ್ದಾರೆ. ಅಭಿವೃದ್ಧಿಗೆ ಸ್ಕೆಚ್ ಹಾಕಿಕೊಂಡು ಮಾಡಿದ್ದಾರೆ. ಸುನಿಲ್ ಹೆಗಡೆಯೇ ಮತ್ತೆ ಶಾಸಕನಾದರೆ ಜನರ ಕೈಗೆ [illegible] ದೇಶಪಾಂಡೆ ಗೆದ್ದರೆ ಸಿಎಂ-ಮಿನಿಸ್ಟರ್ ಆಸೆಯಲ್ಲಿ ದಿಲ್ಲಿ-ಬೆಂ[illegible] ಅಂಡಲೆಯುತ್ತಾನೆ.


>>

ಚಿತ್ರದುರ್ಗ ಜಿಲ್ಲೆ: ಕಾಂಗ್ರೆಸ್ ಪರ ಅಲೆ


ಬಸವರಾಜು ಎಸ್ಕೆ



ತಿಪ್ಪಾರೆಡ್ಡಿ


ಜಿ.ಎಸ್.ಮಂಜುನಾಥ್


ಡಿ. ಸುಧಾಕರ್


ಎ.ಕೃಷ್ಣಪ್ಪ


ಎಚ್.ಆಂಜನೇಯ


ಎಂ.ಚಂದ್ರಪ್ಪ

ಚಿತ್ರದುರ್ಗ ಜಿಲ್ಲೆಯ ಆರು ವಿಧಾನ ಸಭಾಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಪೂರಕ ವಾತಾವರಣ ಇದೆ. ಹಾಗೆಂದು ಎಲ್ಲ ಕಡೆ ಮತದಾರರು ಕೈ ಹಿಡಿಯಲಿದ್ದಾರೆಂದು ಭಾವಿಸುವ ಅಗತ್ಯ ಇಲ್ಲ, ಕೆಲವೆಡೆ ನೀನಾ, ನಾನಾ ಎನ್ನುವಂತೆ ಹೋರಾಹೋರಿ ನಡೆಯುವ ಲಕ್ಷಣಗಳು ಕಂಡುಬರುತ್ತಿವೆ.

...ತ್ರದುರ್ಗ: ಯಾರು ಹಿತವರು ಮೂವರೊಳಗೆ?

ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಶಾಸಕ ಎಸ್.ಕೆ. ...ದರಾಜನ್, ಬಿಜೆಪಿಯಿಂದ ಹಾಲಿ ವಿಧಾನ ಪರಿಷತ್ ಸದಸ್ಯ ...ಚ್.ತಿಪ್ಪಾರೆಡ್ಡಿ, ಕಾಂಗ್ರೆಸ್‌ನಿಂದ ಭೀಮಸಮುದ್ರದ ಅಡಿಕೆ ಧಣಿ ...ಸ್.ಮಂಜುನಾಥ್ ಕಣದಲ್ಲಿದ್ದಾರೆ. ಇಲ್ಲಿ ಮೂವರೂ ವಿಶ್ವಾಸದಿಂದ ...ಡಿದಿದ್ದರೂ ಯಾರಿಗೂ ತನ್ನ ಗೆಲುವೇ ನಿಶ್ಚಿತ ಎನ್ನುವ ಭರವಸೆ ಇಲ್ಲ. ...ಸವರಾಜನ್ ಹೇಳಿಕೊಳ್ಳುವಂತ ಅಭಿವೃದ್ಧಿ ಕೆಲಸಗಳನ್ನೇನೂ ಮಾಡದಿದ್ದರೂ ...ರುವ ಅನುದಾನ ಸಮರ್ಥವಾಗಿ ಬಳಸಿದ್ದಾರೆ. ಗುಂಪುಗಾರಿಕೆ ರಾಜಕೀಯಕ್ಕೆ ... ನೀಡದೆ ಜನಸಾಮಾನ್ಯರಿಗೂ ಸ್ಪಂದಿಸಿದ್ದಾರೆ. ಬಹಳ ಮುಖ್ಯವಾಗಿ ...ಟೇಜ್ ಸಂಸ್ಕೃತಿಯನ್ನು ಎಲ್ಲೂ ಪೋಷಿಸಿಲ್ಲ ಎನ್ನುವ ಹೆಗ್ಗಳಿಕೆ ಇದೆ. ... ಟೀಕೆಗಳೆಲ್ಲಾ ಮುರುಘಾ ಮಠಕ್ಕೆ ಸಂಬಂಧಿಸಿದ ವ್ಯವಹಾರಗಳದ್ದು. ... ನೌಕರರಿಗೆ ಎಲ್ಲೂ ಕಿರುಕುಳ ನೀಡಿದ ಉದಾಹರಣೆಗಳಿಲ್ಲ. ಇದೇ ...ಕ್ಕೆ ನೌಕರರು ಎಸ್‌ಕೆಬಿ ಬೆಂಬಲಕ್ಕೆ ನಿಂತಿದ್ದಾರೆ.

...ಎಸ್.ಮಂಜುನಾಥ್ ಎರಡು ಮೂರು ಬಾರಿ ಸೋತಿದ್ದಾರೆನ್ನುವ ಅನುಕಂಪ ... ಕಾಂಗ್ರೆಸ್ ಅಲೆ ಬೀಸುತ್ತಿರುವುದರಿಂದ ಹೆಚ್ಚಿನ ಭರವಸೆಯಲ್ಲಿ ಕಣಕ್ಕಿಳಿದಿ... ...ಜಿ.ಎಚ್.ತಿಪ್ಪಾರೆಡ್ಡಿ ತಮ್ಮ ಹಿಂದುಳಿದ ವರ್ಗಗಳ ಇಮೇಜನ್ನು ನಂಬಿ ... ಅಖಾಡಕ್ಕಿಳಿದಿದ್ದಾರೆ. ಯಾರೇ ಗೆದ್ದರೂ ಕಡಿಮೆ ಅಂತರದಲ್ಲೇ ಗೆಲ್ಲಬೇಕು.

...ರಿಯೂರು: ಸುಧಾಕರ್/ಎ.ಕೃಷ್ಣಪ್ಪ ಪೈಪೋಟಿ

...ರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಇಡೀ ಜಿಲ್ಲೆಯ ಗಮನ ಸೆಳೆದಿರುವುದು ...ಸ್‌ನ ಸುಧಾಕರ್ ಮತ್ತು ಜೆಡಿಎಸ್‌ನ ಕೃಷ್ಣಪ್ಪ ನಡುವಿನ ನೇರ ಸ್ಪರ್ಧೆ. ...ಪಿಯ ಜಯಣ್ಣನವರೂ ಸಮಬಲದ ಸ್ಪರ್ಧೆ ನೀಡಲು ಸಜ್ಜಾಗಿದ್ದಾರೆ. ...ರುವೆ ಇಲ್ಲಿ ತಾರಕ್ಕೇರಿರುವ ಜಾತಿರಾಜಕಾರಣದಲ್ಲಿ ಅಸ್ತಿತ್ವಕ್ಕಾಗಿ ಹೋರಾಡುವ ಸಮುದಾಯಗಳು ಸುಧಾಕರ್ ಬೆಂಬಲಕ್ಕೆ ನಿಂತಿವೆ. ಸುಧಾಕರ್ ಅವರನ್ನು ಯಾಕೆ ಬೆಂಬಲಿಸಬೇಕು ಎನ್ನುವ ಕಾರಣಗಳಿಗಿಂತ ಪ್ರಬಲರನ್ನು ಅಧಿಕಾರ ಕೇಂದ್ರದಿಂದ ದೂರವಿಡಬೇಕೆನ್ನುವ ಗ್ರಹಿಕೆ ದೊಡ್ಡ ಪ್ರಮಾಣದಲ್ಲಿ ವರ್ಕ್‌ಔಟ್ ಆಗಲಿದೆ. ಆದರೂ ಕಳೆದ ಬಾರಿಗಿಂತ ಈಗ ಹೆಚ್ಚಿನ ಸ್ಪರ್ಧೆ ಎದುರಿಸುತ್ತಿದ್ದಾರೆ. ಕೃಷ್ಣಪ್ಪ ತಮ್ಮ ಸಮುದಾಯ ಹಾಗೂ ಜೆಡಿಎಸ್‌ನ ಪಾರಂಪರಿಕ ಮತಗಳನ್ನು ಅವಲಂಬಿಸಿದ್ದಾರೆ.

ಮೊಳಕಾಲ್ಮೂರು: ಮತ್ತೆ ಎನ್‌ವೈಜಿ?

ಮೊಳಕಾಲ್ಮೂರು ವಿಧಾನಸಭಾಕ್ಷೇತ್ರದಲ್ಲಿ ಮತ್ತೆ ಎನ್.ವೈ ಗೋಪಾಲಕೃಷ್ಣ ಪ್ರತಿಷ್ಠಾಪನೆಯಾಗುವ ಲಕ್ಷಣಗಳು ನಿಚ್ಚಳವಾಗಿವೆ. ಈ ಬಾರಿಯ ಚುನಾವಣೆ ಹಿಂದಿನ ಚುನಾವಣೆಗಳಂತಲ್ಲ ಎನ್ನುವ ಅರಿವು ಎನ್‌ವೈಜಿಗೆ ಆದಂತಿದೆ. ಬಿಎಸ್ಸಾರ್‌ನ ನೇರ್ಲಗುಂಟೆ ತಿಪ್ಪೇಸ್ವಾಮಿ ಮಾತ್ರ ಇಲ್ಲಿ ಸ್ಪರ್ಧಿಯಾಗಿದ್ದಾರೆ. ಗಲಾಟೆ ಗದ್ದಲಗಳಿಲ್ಲದ ಮನುಷ್ಯ ಎಂಬುದೇ ಎನ್‌ವೈಜಿಯನ್ನು ಕಾಪಾಡಬೇಕು.

ಹೊಸದುರ್ಗ: ಬಿಜಿಗೋ/ಗೂಳಿ


ಹೊಸದುರ್ಗ ವಿಧಾನ ಸಭಾಕ್ಷೇತ್ರದಲ್ಲಿ ಮತ್ತೆ ಮಾಜಿ ಶಾಸಕ ಬಿ.ಜಿ.ಗೋವಿಂದಪ್ಪ ಮತ್ತು ಹಾಲಿ ಪಕ್ಷೇತರ ಶಾಸಕ ಗೂಳಿಹಟ್ಟಿ ಶೇಖರ್ ನಡುವೆ ಜಿದ್ದಾಜಿದ್ದಿ ಏರ್ಪಟ್ಟಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇರುವುದರಿಂದ ಗೋವಿಂದಪ್ಪ ತುಂಬಾ ಭರವಸೆಯಲ್ಲಿದ್ದರು. ಆದರೆ ಇತ್ತೀಚೆಗೆ ಗೂಳಿಹಟ್ಟಿಗೆ ಶೇಖರ್‌ಗೆ ವ್ಯಕ್ತವಾಗುತ್ತಿರುವ ವಿವಿಧ ಸಮುದಾಯದ ಮುಖಂಡರ ಬೆಂಬಲ ಒಂದಿಷ್ಟು ಆತಂಕವನ್ನೂ ಹೆಚ್ಚಿಸಿದೆ. ಕೆಜೆಪಿಯ ಲಿಂಗಮೂರ್ತಿ ಕೂಡಾ ಇಬ್ಬರಿಗೂ ಸಮಬಲದ ಸ್ಪರ್ಧೆ ನೀಡಲಿರುವುದರಿಂದ ಗೂಳಿಹಟ್ಟಿ ಶೇಖರ್ ಮತ್ತು ಗೋವಿಂದಪ್ಪ ಫಿಫ್ಟಿ ಫಿಫ್ಟಿ ಅವಕಾಶಗಳಿವೆ.

ಹೊಳಲ್ಕೆರೆ: ಆಂಜನೇಯ/ಎಂ.ಚಂದ್ರಪ್ಪ

ಹೊಳಲ್ಕೆರೆಯಲ್ಲಿ ಕಾಂಗ್ರೆಸ್‌ನ ಎಚ್.ಆಂಜನೇಯ ಹಾಗೂ ಕೆಜೆಪಿಯ ಎಂ.ಚಂದ್ರಪ್ಪ ನಡುವೆ ಮುಖಾಮುಖಿ ಸ್ಪರ್ಧೆ ಇದೆ. ಚಂದ್ರಪ್ಪ ಕ್ಷೇತ್ರಕ್ಕೆ ಸಾಕಷ್ಟು ಕೆಲಸ ಮಾಡಿಸಿದ್ದಾರೆನ್ನುವ ಅಭಿಪ್ರಾಯಗಳಿದ್ದರೂ ಜನರೊಂದಿಗೆ ತಮ್ಮ ನಡವಳಿಕೆ ಕಾರಣಕ್ಕೆ ಈ ಬಾರಿ ಏದುಸಿರು ಬಿಡುವಂತಾಗಿದೆ. ಇಡೀ ಜಿಲ್ಲೆಯಲ್ಲೇ ಪ್ರಧಾನವಾಗಿರುವ ಮಾದಿಗ ಸಮುದಾಯ ಗೆಲ್ಲಬಹುದಾದ ಅಭ್ಯರ್ಥಿ ಇದ್ದರೆ ಅದು ಹೊಳಲ್ಕೆರೆ ಮಾತ್ರ. ಈ ಬಾರಿ ಇತರೆ ಎಲ್ಲ ಸಮುದಾಯಗಳೂ ಆಂಜನೇಯರ ಪರ ಒಲವು ತೋರಿಸುತ್ತಿರುವುದರಿಂದ ಚಂದ್ರಪ್ಪ ಒಂದಿಷ್ಟು ಹೆಚ್ಚಿನ ಕಸರತ್ತನ್ನೇ ನಡೆಸುತ್ತಿದ್ದಾರೆ. ಇದು ಮೀಸಲು ಕ್ಷೇತ್ರವಾಗಿದ್ದು ಇಬ್ಬರು ಅಭ್ಯರ್ಥಿಗಳೂ ದಲಿತರು ದೌರ್ಜನ್ಯಕಾಯ್ದೆ ಬಳಸದಂತೆ ನೋಡಿಕೊಳ್ಳುವ ಭರವಸೆ ನೀಡುತ್ತಿರುವುದು ಮಾತ್ರ ಒಲ್ಯೆಕೆ ರಾಜಕಾರಣದ ಅಸಹ್ಯಕ್ಕೆ ಉತ್ತಮ ಉದಾಹರಣೆಯಂತಿದೆ. ○

ಚಳ್ಳಕೆರೆ: ರಘುಮೂರ್ತಿ ಎಂಬ ಸಜ್ಜನನನ್ನು ತಬ್ಬಿಕೊಳ್ಳಲು ಸಜ್ಜಾಗಿರುವ ಮತದಾರ

ಇಡೀ ಜಿಲ್ಲೆಯಲ್ಲಿ ಸಂಶಯಾತೀತ ಗೆಲುವೊಂದರ ಭರವಸೆಯನ್ನೇನಾದರೂ ಕಾಂಗ್ರೆಸ್ ಇಟ್ಟಿದೆ ಎಂದರೆ ಅದು ಚಳ್ಳಕೆರೆ ವಿಧಾನಸಭಾ ಕ್ಷೇತ್ರ ಅಭ್ಯರ್ಥಿ ರಘುಮೂರ್ತಿಯದು ಮಾತ್ರ. ಎಲ್ಲೆಡೆ ಕಾಂಗ್ರೆಸ್ ಪರ ಅಲೆ ಕೆಲಸ ಮಾಡುತ್ತಿದ್ದರೂ ಇಲ್ಲಿ ಕಾಂಗ್ರೆಸ್ ಅಲೆಯ ಜತೆಗೆ ರಘುಮೂರ್ತಿ ಸಜ್ಜನಿಕೆಯ ಪ್ರಭಾವವೂ ಇದೆ.


ರಘುಮೂರ್ತಿ

ಪಕ್ಷ, ಕಾರ್ಯಕರ್ತರೆಂದರೆ ಚುನಾವಣಾ ಕಾಲದ ಗೆಳೆಯರು ಎಂಬಂತೆ ನೋಡುವ ಸೀಸನ್ ರಾಜಕಾರಣಿಗಳಿಗಿಂತ ಭಿನ್ನವಾಗಿ ನಡೆದುಕೊಂಡ ರಘುಮೂರ್ತಿ ಇಂದು ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಮತದಾರರ ಮನಗೆದ್ದಿದ್ದಾರೆ. ಸತತ ಎಂಟು ವರ್ಷಗಳ ಕಾಲ ತನಗೆ ಟಿಕೆಟ್ ಕೂಡಾ ಸಿಗುವ ಖಾತ್ರಿ ಇಲ್ಲದ ಸಮಯದಲ್ಲೂ ಕಾರ್ಯಕರ್ತರೊಂದಿಗೆ ಜೀವಂತ ಸಂಬಂಧವಿರಿಸಿಕೊಂಡು ಅವರ ಆಗುಹೋಗುಗಳಿಗೆ ಸ್ಪಂದಿಸುತ್ತಾ ಜನರನ್ನು ಅರ್ಥಮಾಡಿಕೊಳ್ಳಲು ಹಾಕಿದ ಪರಿಶ್ರಮ ನಿಜಕ್ಕೂ ಶ್ಲಾಘನೀಯ.

ಕಳೆದ ಐದು ವರ್ಷಗಳಲ್ಲಿ ಪಕ್ಷದ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸುವಲ್ಲಿ ಚಳ್ಳಕೆರೆ ಬ್ಲಾಕ್ ಕಾಂಗ್ರೆಸ್ ಮುಂದುವರಿಸಿರುವುದೇ ರಘುಮೂರ್ತಿ ಪಕ್ಷದ ಬೆನ್ನೆಲುಬಾಗಿರುವುದರಿಂದ. ಇಷ್ಟೆಲ್ಲಾ ಪರಿಶ್ರಮ ಹಾಕಿದ್ದ ರಘುಮೂರ್ತಿಗೆ ಟಿಕೆಟ್ ತಪ್ಪಿಸಲು ಕೆಲವರು ನಡೆಸಿದ ಪಿತೂರಿ ಕೂಡಾ ಯಶಸ್ವಿಯಾಗಲಿಲ್ಲ. ಕೆಪಿಸಿಸಿ ಪಕ್ಷದಿಂದ ಸ್ಪರ್ಧಿಸುವವರ ಕುರಿತು ತರಿಸಿದ ಪ್ರತಿ ಮಾಹಿತಿ, ಸಮೀಕ್ಷೆಯಲ್ಲಿ ರಘುಮೂರ್ತಿ ಮುಂಚೂಣಿಯಲ್ಲಿರುವುದು ನಾಯಕರ ಗಮನಕ್ಕೆ ಬಂದಿತ್ತು. ಹಾಗಾಗಿ ರಘುಮೂರ್ತಿಗೆ ಟಿಕೆಟ್‌ಗೆ ತಪ್ಪಿಸುವ ಯಾವ ಅಡ್ಡಿಗಳೂ ಕೆಲಸ ಮಾಡಲಿಲ್ಲ.

ಕ್ಷೇತ್ರದ ಮತದಾರರ ವಿಷಯದಲ್ಲೂ ಇದು ವರ್ಕ್‌ಔಟ್ ಆಗುತ್ತಿದೆ. ಎಲ್ಲರೂ ಸಂತೆ ಸೇರಿದಾಗ ವ್ಯಾಪಾರಕ್ಕೆ ಬರುವಂಥವರೇ ಆಗಿರುವುದರಿಂದ ತಮ್ಮ ಜತೆ ನಿರಂತರ ಸಂಪರ್ಕದಲ್ಲಿದ್ದು ತಮ್ಮ ಅಳಲನ್ನು ಕೇಳಬಲ್ಲ ರಘುಮೂರ್ತಿ ಅಚ್ಚುಮೆಚ್ಚಿನ ವ್ಯಕ್ತಿಯಾಗಿದ್ದಾರೆ. ಹೊಸ ತಲೆಮಾರಿನ ಯುವಕರಾದಿಯಾಗಿ ಹಳೇ ತಲೆಮಾರಿನ ಹಿರಿಯರೂ ರಘುಮೂರ್ತಿ ಬೆನ್ನಿಗೆ ನಿಂತಿದ್ದಾರೆ.

ಇದೆಲ್ಲದರ ನಡುವೆ ರಘುಮೂರ್ತಿ ಆಯ್ಕೆಗೆ ಒಲವು ಹೆಚ್ಚುತ್ತಿರುವುದಕ್ಕೆ ಇನ್ನು ಕೆಲ ಕಾರಣಗಳಿವೆ. ಮೊದಲನೆಯದು ಕೆಜೆಪಿಯಿಂದ ಸ್ಪರ್ಧಿಸಿರುವ ಕುಮಾರಸ್ವಾಮಿ ಇನ್ನೂ ಯುವಕ. ಜೊತೆಗೆ ಆತನಿಗೆ ರಾಜಕೀಯದ ಅನುಭವ ಕಡಿಮೆ. ಈ ಹಿಂದೆ ಅವರ ತಂದೆ ತಿಪ್ಪೇಸ್ವಾಮಿ ಮೂರು ಬಾರಿ ಶಾಸಕರಾಗಿ, ಒಮ್ಮೆ ಸಚಿವರಾಗಿ ಅಧಿಕಾರ ಅನುಭವಿಸಿದ್ದಾರೆ. ಹಾಗಾಗಿ ಬೇರೆಯವರಿಗೂ ಅವಕಾಶ ಸಿಗಲಿ ಎನ್ನುವ ಗ್ರಹಿಕೆ ಜನರಲ್ಲಿದೆ.

ಇನ್ನು ಜೆಡಿಎಸ್‌ನ ಪಿ.ತಿಪ್ಪೇಸ್ವಾಮಿ ಒಂದು ಬಾರಿ ಸೋತಿದ್ದಾನೆಂಬ ಅನುಕಂಪವಿದ್ದರೂ ಅದು ಗೆಲುವಿನ ಹತ್ತಿರ ಕೊಂಡೊಯ್ಯುವಷ್ಟು ಪ್ರಮಾಣದಲ್ಲಿಲ್ಲ. ಮೇಲಾಗಿ ಜೆಡಿಎಸ್‌ನ ಸಾಂಪ್ರದಾಯಿಕ ಮತ ಹೊರತುಪಡಿಸಿ ಬೇರೆ ವರ್ಗದ ಮತ ಸೆಳೆಯಲು ಯಾವುದೇ ಸಿದ್ಧತೆ ಮಾಡಿಕೊಂಡಿಲ್ಲ. ಚಳ್ಳಕೆರೆಯಲ್ಲಿ ನಡೆಯುವ ಇಸ್ಪೀಟ್ ದಂಧೆಯ ವ್ಯಕ್ತಿಗಳ ಜೊತೆ ಈತನ ಹೆಸರೂ ತಳುಕು ಹಾಕಿಕೊಂಡಿರುವುದು ನೆಗೆಟಿವ್ ಅಂಶವಾಗಲಿದೆ.

ಪಕ್ಕದ ಸಿರಾ ಜಿಲ್ಲೆಯಿಂದ ಬಂದಿರುವ ಎಲ್.ನಾಗರಾಜ್ ಒಂದಿಷ್ಟು ಹಣ ಹಾಗೂ ಶ್ರೀರಾಮುಲು ಇಮೇಜ್ ನಂಬಿಕೊಂಡು ಕಣಕ್ಕಿಳಿದಿದ್ದಾನೆ. ಅಲ್ಲಲ್ಲಿ ಎಂತೆಂತದೋ ಕಾರ್ಯಕ್ರಮ ಮಾಡಿ ಹಾರಾತುರಾಯಿ ಹಾಕಿ ಮತ ಸೆಳೆಯುವ ಸರ್ಕಸ್ ಮಾಡಿದ್ದರೂ ಇದು ಫಲ ನೀಡುವ ಸಾಧ್ಯತೆ ತೀರಾ ಕಡಿಮೆ. ಮೇಲಾಗಿ ಸ್ಥಳೀಯರನ್ನೆಲ್ಲಾ ಬದಿಗಿಟ್ಟು ಈತನನ್ನು ಆಯ್ಕೆ ಮಾಡಿಕೊಳ್ಳಬೇಕಾದ ರಾಜಕೀಯ ನಾಯಕತ್ವದ ಕೊರತೆ ಚಳ್ಳಕೆರೆಯಲ್ಲಿಲ್ಲ.

ಹೀಗೆ ಚಳ್ಳಕೆರೆ ಕಣದಲ್ಲಿರುವ ಬಹುತೇಕ ಅಭ್ಯರ್ಥಿಗಳು ಈ ಬಾರಿ ಏಕೆ ಬೇಡ ಎಂದು ಹೇಳಲು ಹಲವು ಕಾರಣ ಸಿಗುತ್ತವೆ. ಆದರೆ ರಘುಮೂರ್ತಿ ವಿಷಯದಲ್ಲಿ ಇಂತಹ ಯಾವುದೇ ಕಾರಣ, ಆಕ್ಷೇಪ ಸಾರ್ವಜನಿಕವಾಗಿ ದಾಖಲಾಗುತ್ತಿಲ್ಲ. ಇದು ರಘುಮೂರ್ತಿಯನ್ನು ಪಕ್ಷಾತೀತವಾಗಿ ಬೆಂಬಲಿಸಲು ಪ್ರಮುಖ ಕಾರಣವಾಗಿದೆ.


ಕೌಟುಂಬಿಕ ಹಿನ್ನಲೆ ಕೂಡಾ ಮೂರ್‍ನಾಲ್ಕು ದಶಕಗಳ ಸುದೀರ್ಘ ಕಾಲ ಪಕ್ಷ ಹಾಗೂ ರಾಜಕೀಯ ಒಡನಾಟವುಳ್ಳದ್ದಾದರೂ ಯಾವುದೇ ಆಕ್ಷೇಪಗಳಿಗೆ ಗುರಿಯಾಗಿಲ್ಲ. ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳದ, ಸಂಘರ್ಷಕ್ಕೆ ಅವಕಾಶ ನೀಡದ, ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ರಘುಮೂರ್ತಿ ಗುಣ ಸಹ ಎಲ್ಲರನ್ನೂ ಆಕರ್ಷಿಸಿದೆ.

ಬಹಳ ಮುಖ್ಯವಾಗಿ ರೈತಾಪಿ ಹಿನ್ನೆಲೆಯ ರಘುಮೂರ್ತಿಗೆ ತಾಲೂಕಿನ ರೈತರ ಬವಣೆಗಳ ಅರಿವು ಇದೆ. ಇಲ್ಲಿನ ಜನರ ಬದುಕಿನಲ್ಲಿ ಆರ್ಥಿಕ ಚೈತನ್ಯ ತರಲು ಪೂರಕವಾದ ನೀರಾವರಿ, ಕೃಷಿ ಅಭಿವೃದ್ಧಿ, ಉದ್ಯೋಗಾವಕಾಶ ಹೀಗೆ ಪ್ರತಿಯೊಂದರ ಕುರಿತು ಯೋಚಿಸಬಲ್ಲ ಒಳನೋಟಗಳು ಇವೆ.

ಚಳ್ಳಕೆರೆ ಕ್ಷೇತ್ರದ ಮತದಾರರು ಬಹಳ ದಿನಗಳ ನಂತರ ನಿಜವಾದ ಅರ್ಥದಲ್ಲಿ ರಾಜಕೀಯಕ್ಕೆ ಘನತೆ, ಗೌರವ ತರುವ ರಘುಮೂರ್ತಿ ಬಗ್ಗೆ ಒಲವು ತೋರಿಸುವುದರ ಮೂಲಕ ಜನಪರವಾಗಿ ಕೆಲಸ ಮಾಡುವ ಉತ್ಸಾಹಿಗಳಿಗೆ ಇನ್ನೂ ಬಾಗಿಲುಗಳು ತೆರೆದಿವೆ ಎನ್ನುವ ಸಂದೇಶ ನೀಡಲಿದ್ದಾರೆ. ಹಾಗಾಗಿ ರಘುಮೂರ್ತಿಯದು ವಿಧಾನಸೌಧದೆಡೆಗೆ ನಿರಾತಂಕದ ಹಾದಿ.

<<< ಕರಾವಳಿ....

ಯಲ್ಲಾಪುರ



ಹಾಲಿ ಶಾಸಕ-ಬಿಜೆಪಿ ಅಭ್ಯರ್ಥಿ ವಿ.ಎಸ್. ಪಾಟೀಲ್ ಮತ್ತೆ ಗೆದ್ದರೆ ಕ್ಷೇತ್ರಕ್ಕೆ ದೊಡ್ಡ ಹಾನಿಯೇ ಸರಿ. ಜೆಡಿಎಸ್‌ನ ಅನಿಲ್‌ಕುಮಾರ್ ಎಂಬ ಬೆಂಗಳೂರು ಬೇಸ್ಡ್ ಬಿಸಿನೆಸ್‌ಮನ್ ಶಾಸಕನಾದರೆ ಕ್ಷೇತ್ರ ಅನಾಥವಾದಂತೆಯೇ. ಇರುವವರಲ್ಲಿ ಕಾಂಗ್ರೆಸ್‌ನ ಶಿವರಾಮ ಹೆಬ್ಬಾರ್ ವಾಸಿ.

ಶಿರಸಿ



...ಲೀಬಾರದ ಕ್ಯಾಂಡಿಡೇಟೆಂದರೆ ಬಿಜೆಪಿಯ ...ರ ಹೆಗಡೆ ಕಾಗೇರಿ ಎಂಬ ನಾಜೂಕಯ್ಯ ...ತ್ಯ ಹೇಳುತ್ತಲೇ ಉಬ್ಬಿನಲ್ಲಿ ಗಾಳ ಹಾಕುವ ... ಕಳೆದ ಐದು ವರ್ಷದಲ್ಲಿ ಕಾಗೇರಿಯ ...ಮುಖ ದರ್ಶನವಾಗಿದೆ. ಈತ ಸಾಧನೆಗಿಂತ ...ಸಾನೇ ಹೆಚ್ಚು ಮಾಡಿದ್ದಾನೆ. ಕಾಂಗ್ರೆಸ್‌ನ ... ದೀಪಕ್ ಹೊನ್ನಾವರ [illegible] ಶೀಟರ್. ಶಾಸಕನಾಗುವುದಿರಲಿ, ಗ್ರಾಮ ...ಕೆಗೂ ಅನರ್ಹ.


...ಎಸ್‌ನ ಶಶಿಭೂಷಣ ಹೆಗಡೆ ಎಲ್ಲ ಯೋಗ್ಯತೆ ಇರುವಾತ. ಶಿಕ್ಷಣ, ... ಜವಹರ [illegible] -ದೂರದರ್ಶಿತ್ವ ಶಶಿಯ ಪ್ಲಸ್. ಈತ ಗೆದ್ದರೆ ... ದಾರಿ ತಪ್ಪಿದ ಸಂಭಾವಿತ ತರುಣ. ಕಂಗಾಲಾಗಿರುವ ಶಿರಸಿ ಸಿದ್ದಾಪುರಕ್ಕೆ ... [illegible] ತರಬಲ್ಲ ಶಿರಸಿಯನ್ನು ಕಾಗೇರಿಯ ಕಳ್ಳಗ್ಯಾಂಗ್‌ನಿಂದ ...ಗಲು ಶಶಿಯೇ ಯೋಗ್ಯ ಆಯ್ಕೆ!!

- ನಹುಷ


ಮಂಡ್ಯ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಬಾರಿ ಜೆಡಿಎಸ್ ಪ್ರಾಬಲ್ಯ ಸಾಧಿಸಿತ್ತು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರಾಬಲ್ಯ ಸಾಧಿಸುವ ನಿರೀಕ್ಷೆಯಿದೆ. ಟಿಕೆಟ್ ವಂಚಿತರು ಗೆಲ್ಲುವ ಸಾಧ್ಯತೆ ಇರುವುದೇ ಈ ಬಾರಿಯ ವಿಶೇಷ.

ಮಂಡ್ಯ: ಅಂಬಿಯೇ 'ರೆಬಲ್' ಸ್ಟಾರ್

ಮಾಜಿ ಸಿಎಂ ಎಸ್.ಎಂ.ಕೃಷ್ಣ ಆತ್ಮಾನಂದ ಸೇರಿದಂತೆ ಕಾಂಗ್ರೆಸ್‌ನ ಹಲವರು ಮುನಿಸಿಕೊಂಡರೂ ಮಂಡ್ಯ ಕ್ಷೇತ್ರದಲ್ಲಿ ಅಂಬಿಯೇ 'ರೆಬಲ್' ಸ್ಟಾರ್ ಆಗಿ ದಿನೆದಿನೇ ಮುಂಚೂಣಿಗೆ ಬರುತ್ತಿದ್ದಾರೆ. ಕಳೆದ ಎರಡು ಚುನಾವಣೆ ಗಳಲ್ಲಿ ಸತತವಾಗಿ ಸೋಲುಂಡಿರುವ ಅಂಬರೀಶ್ ಈ ಬಾರಿ ಮಾಡು ಇಲ್ಲವೇ ಮಡಿ ಹೋರಾಟಕ್ಕೆ ಸಿದ್ಧರಾಗಿದ್ದಾರೆ. ಅಂಬರೀಶ್ ಪತ್ನಿ ಸುಮಲತಾ ಮಂಡ್ಯದಲ್ಲಿ ಮನೆಮಾಡಿಕೊಂಡು ಕಾಲಿಗೆ ಚಕ್ರ ಕಟ್ಟಿ ಕೊಂಡವರಂತೆ ಕ್ಷೇತ್ರವನ್ನು ಸುತ್ತುತ್ತಿದ್ದಾರೆ. ಅಂಬಿಗಿಂತಲೂ ಪತ್ನಿ ಸುಮಲತಾ ಮಹಿಳಾ ಮತದಾರರನ್ನು ಸೆಳೆಯುತ್ತಿರು ವುದು ಅಂಬಿಗೆ ಸಾಕಷ್ಟು ಸಹಕಾರಿ ಯಾಗಿದೆ. ಸ್ಯಾಂಡಲ್‌ವುಡ್ ಸ್ಟಾರ್‌ಗಳಾದ ದರ್ಶನ್, ದುನಿಯಾ ವಿಜಿ, ಯಶ್, ಪ್ರೇಮ್ ಮೊದಲಾದರು ಅಂಬಿ ಪರ ಪ್ರಚಾರ ಮಾಡುತ್ತಿದ್ದು, ಕ್ಷೇತ್ರದಲ್ಲಿ ಅಂಬಿ ಹವಾ ಜೋರಾಗಿದೆ.



ಅಂಬರೀಶ್




ಅನ್ನದಾನಿ

ಸದ್ಯ ಅಂಬಿ ಹೆಸರು ಮುಂಚೂಣಿ ಯಲ್ಲಿದ್ದರೂ, ಎರಡು ಬಾರಿ ಶಾಸಕರಾಗಿರುವ ಜೆಡಿಎಸ್ ಅಭ್ಯರ್ಥಿ ಎಂ.ಶ್ರೀನಿವಾಸ್ ಅಂಬಿಗೆ ಸಖತ್ ಫೈಟ್ ನೀಡುತ್ತಿದ್ದಾರೆ. ಟಿಕೆಟ್ ಸಿಗದೆ ಜೆಡಿಎಸ್‌ನ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಚಿವ ಎಸ್.ಡಿ.ಜಯರಾಂ ಅವರ ಪುತ್ರ ಅಶೋಕ್ ಜಯರಾಂ ಹೆಚ್.ಡಿ.ದೇವೇಗೌಡರ ಮಾತು ಕೇಳಿ ಕಣದಿಂದ ನಿವೃತ್ತಿ ಘೋಷಿಸಿ ಶ್ರೀನಿವಾಸ್ ಪರ ಪ್ರಚಾರಕ್ಕೆ ಬಂದಿರುವುದು ಉತ್ತಮ ಬೆಳವಣಿಗೆಯಾಗಿದೆ. ಅಶೋಕ್ ಜಯರಾಂ ಕಣದಿಂದ ಹಿಂದಕ್ಕೆ ಸರಿದಿರುವುದರಿಂದ ಒಂದೆಡೆ ಜೆಡಿಎಸ್‌ಗೆ ಲಾಭವಾದರೂ, ಮತ್ತೊಂದೆಡೆ ಅಶೋಕ್ ತಮ್ಮ ಅಭಿಮಾನಿಗಳನ್ನು ನಡುನೀರಲ್ಲಿ ಕೈಬಿಟ್ಟರೆಂದು ಆಕ್ರೋಶ ವ್ಯಕ್ತಪಡಿಸಿ ಅವರೆಲ್ಲ ಈಗ ಅಂಬರೀಶ್‌ಗೆ ಜೈ ಎಂದಿರುವುದು ಸ್ವಲ್ಪಮಟ್ಟಿಗೆ ಜಾ.ದಳಕ್ಕೆ ಡ್ಯಾಮೇಜ್ ಮಾಡಲಿದೆ.




ಕಲ್ಪನಾ ಸಿದ್ದರಾಜು



ಚಲುವರಾಯಸ್ವಾಮಿ

ಶ್ರೀನಿವಾಸ್ ಸೋಲಿಸಲೇಬೇಕೆಂದು ಅವರ ವಿರೋಧಿಗಳು ಅಂಬಿಯೊಂದಿಗೆ ಕೈಜೋಡಿಸಿರು ವುದು ಅವರಿಗೆ ಪ್ಲಸ್‌ಪಾಯಿಂಟ್. ಅಂಬರೀಶ್ ಕೈಗೆ ಸಿಗಲ್ಲ ಎಂಬ ಕೂಗು ಮೊದಮೊದಲು ಕ್ಷೇತ್ರದಲ್ಲಿ ಕೇಳಿಬಂದರೂ ಈಗ ಅದು ಗಣನೀಯವಾಗಿ ಕಡಿಮೆಯಾಗಿದೆ. ಜಾ.ದಳದ ಹಲವು ಮುಖಂಡರು ಶ್ರೀನಿವಾಸ್‌ರಿಂದ ದೂರವಾಗಿ ಕಾಂಗ್ರೆಸ್‌ನತ್ತ ಸರಿದಿದ್ದಾರೆ. ದಿನೇ ದಿನೇ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಅಂಬಿ ಪರ ಒಲವು ಜಾಸ್ತಿಯಾಗುತ್ತಿದೆ. ಜಿಲ್ಲೆಯ ಟಿಕೆಟ್ ಹಂಚಿಕೆಯಲ್ಲಿ ಅಂಬಿ ಮೂಗು ತೂರಿಸಿ ತನ್ನ ಬೆಂಬಲಿಗ ರವೀಂದ್ರನಿಗೆ ಎರಡನೆ ಬಾರಿಗೆ ಟಿಕೆಟ್ ತಪ್ಪಿಸಿದ್ದರಿಂದ ಸಿಟ್ಟಾಗಿರುವ ಎಸ್.ಎಂ.ಕೃಷ್ಣ ಅಂಬಿ ವಿರುದ್ಧ ಬಂಡೆದ್ದಿದ್ದರೂ, ಆತ್ಮಾನಂದರ ಬೆಂಬಲಿಗರು ಕೈಕೊಟ್ಟಿದ್ದರೂ ಅಂಬಿ ಹಾಗೂ ಪತ್ನಿ ಸುಮಲತಾ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸುತ್ತಿದ್ದಾರೆ.



ಕೆ.ಬಿ.ಚಂದ್ರಶೇಖರ್

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಎರೆಡೆರಡು ಬಾರಿ ಕ್ಷೇತ್ರಕ್ಕೆ ಬಂದು ಪ್ರಚಾರ ಮಾಡಿದ್ದಾರೆ. ಜೆಡಿಎಸ್‌ನೊಂದಿಗೆ ಗುರುತಿಸಿ ಕೊಂಡಿರುವ ಒಕ್ಕಲಿಗ ಜನಾಂಗದ ಬಹಳಷ್ಟು ಮತಗಳು ಜೆಡಿಎಸ್‌ನತ್ತ ವಾಲಿದರೂ ಮುಸ್ಲಿಂ-ದಲಿತ ಮತಗಳು ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಸರಿಸಮವಾಗಿ ಹಂಚಿಕೆಯಾಗಿಲಿದೆ. ಕುರುಬ, ನಾಯಕ, ಬೆಸ್ತ ಜೈನರು, ತಮಿಳರು ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ಹಾಗಾಗಿ ಇಲ್ಲಿ ಸಮಬಲದ ಪೈಪೋಟಿ ನಡೆಯುತ್ತಿದ್ದು, ಅಚ್ಚರಿಯ ಫಲಿತಾಂಶ ಹೊರಬೀಳಲಿದೆ. ಕೆಜೆಪಿ, ಬಿಜೆಪಿ ಸೇರಿದಂತೆ ಇತರೆ ಪಕ್ಷಗಳಿಗೆ ಇಲ್ಲಿ ನೆಲೆಯಿಲ್ಲ.

ಮಳವಳ್ಳಿ: ನರೇಂದ್ರಸ್ವಾಮಿ ಮುನ್ನಡೆ

ಮೀಸಲು ಕ್ಷೇತ್ರವಾಗಿರುವ ಮಳವಳ್ಳಿಯಲ್ಲಿ ಹಾಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮುನ್ನಡೆಯಲ್ಲಿದ್ದಾರೆ. ಕ್ಷೇತ್ರದ ಪ್ರಗತಿ ಮತ್ತು ಸಿದ್ದರಾಮಯ್ಯನವರ ಬೆಂಬಲ ನರೇಂದ್ರಸ್ವಾಮಿ ವಿಧಾನಸಭೆ ಪ್ರವೇಶಕ್ಕೆ ಸಹಕಾರಿಯಾಗಿವೆ.

2004ರಲ್ಲಿ ಶಾಸಕರಾಗಿದ್ದ ಜಾ.ದಳದ ಕೆ.ಅನ್ನದಾನಿಗೆ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಗಳ ಆಕ್ರೋಶ ಶಾಪವಾಗಿದೆ. ಜಾತಿನಿಂದನೆ ಕೇಸಿನಲ್ಲಿ ಕ್ಷೇತ್ರದ ಸಾವಿರಾರು ಜನರನ್ನು ಹಿಂಸಿಸಿದ ಕಾರಣಕ್ಕಾಗಿ, ಜೊತೆಯಲ್ಲಿ ತನ್ನ ಗೆಲುವಿಗೆ ಶ್ರಮಿಸಿದ ಮುಖಂಡರನ್ನು ಬದಿಗೆ ಸರಿಸಿದ್ದ ಪರಿಣಾಮವಾಗಿ ಬಲಿಷ್ಠಕೋಮಿನ ಹಲವು ಮುಖಂಡರು ಕಾಂಗ್ರೆಸ್ ಮತ್ತು ಕೆಜೆಪಿಗೆ ಸೇರ್ಪಡೆ ಯಾಗಿದ್ದಾರೆ. ಅನ್ನದಾನಿಯ ಸ್ವಗ್ರಾಮ ಹೊಸ್ಕೂರಿನ ರಮೇಶ್, ಹಲಗೂರಿನ ರವೀಗೌಡ ಈ ಪೈಕಿ ಪ್ರಮುಖರು. ಆದರೂ ದೇವೇಗೌಡರ ನಾಮಬಲವೇ ಅನ್ನದಾನಿಗೆ ಶ್ರೀರಕ್ಷೆಯಾಗಿದ್ದು, ಅದನ್ನೇ ಆಸರೆ ಮಾಡಿಕೊಂಡಿದ್ದಾರೆ.

ಯಡ್ಡಿಯ ಕೆಜೆಪಿಯಿಂದ ಸ್ಪರ್ಧಿಸಿರುವ ಮುನಿರಾಜು ರಿಯಲ್ ಎಸ್ಟೇಟ್ ಕುಳ. ಕೆಂಗೇರಿ ಪುರಸಭೆ ಅಧ್ಯಕ್ಷರಾಗಿದ್ದ ಕಾಲದಲ್ಲಿ ಸಂಪಾದಿಸಿರುವ ಹಡಬಿಟ್ಟಿ ಹಣವನ್ನು ಕ್ಷೇತ್ರದಲ್ಲಿ ಸುರಿದು ಮತ ಕಬಳಿಕೆಗೆ ಮುಂದಾಗಿದ್ದಾರೆ. 20 ಸಾವಿರದಷ್ಟಿರುವ ವೀರಶೈವ ಜನಾಂಗದ ಮತಗಳು ಹಾಗೂ ಇನ್ನಿತರ ಮತಗಳು ಬಿದ್ದರೆ ತಾನು ಎಂಎಲ್‌ಎ ಆಗಬಹುದೆಂಬ ಹುಚ್ಚಿಗೆ ಬಿದ್ದಿರುವ ಮುನಿರಾಜು ತಮ್ಮ ಹಣದ ಥೈಲಿ ಖರ್ಚು ಮಾಡುತ್ತಿದ್ದಾರೆ.


ನಾಲ್ಕು ಬಾರಿ ಈ ಕ್ಷೇತ್ರದಿಂದ ಆಯ್ಕೆಯಾಗಿ ಹಲವು ಸಚಿವ ಖಾತೆ ನಿಭಾಯಿಸಿರುವ ಸಂಯುಕ್ತ ಜನತಾದಳದ ಬಿ.ಸೋಮಶೇಖರ್ ಮತ್ತು ಶ್ರೀರಾಮುಲುವಿನ ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಡಾ.ಮೂರ್ತಿಯ ಸ್ಪರ್ಧೆ ಆಟಕ್ಕುಂಟು-ಲೆಕ್ಕಕಿಲ್ಲದಂತಾಗಿದೆ.

2008ರಲ್ಲಿ ಕಾಂಗ್ರೆಸ್ ಬಿ.ಫಾರಂ ವಂಚಿತರಾಗಿ ಪಕ್ಷೇತರರಾಗಿ ಚುನಾಯಿತರಾಗಿ ಸಚಿವರಾಗಿದ್ದ ಹಾಲಿ ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿಗೆ ಕ್ಷೇತ್ರದಲ್ಲಿ ಸಾಧಿಸಿರುವ ಅಭಿವೃದ್ಧಿ ಕಾರ್ಯಗಳು ಶ್ರೀರಕ್ಷೆಯಾಗಲಿವೆ. ತಾಲ್ಲೂಕಿನ ಶೇ.80ರಷ್ಟು ರಸ್ತೆಗಳು ಡಾಂಬರು ಕಂಡಿರುವುದು, ಬಿ.ಜಿ.ಪುರ, ಕಿರುಗಾವಲು, ಹಲಗೂರು, ನೆಟ್‌ಕಲ್ ಸೇರಿದಂತೆ ನೂರಾರು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು, ಸ್ತ್ರೀಶಕ್ತಿ ಭವನ, ಅಂಬೇಡ್ಕರ್ ಭವನ, ಮಿನಿವಿಧಾನಸೌಧ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳ ಜೊತೆಗೆ ಕಾಂಗ್ರೆಸ್ ಪಾರಂಪರಿಕ ಮತಬ್ಯಾಂಕ್‌ಗಳಾದ ದಲಿತ, ಮುಸ್ಲಿಂ ಹಾಗೂ ಹಿಂದುಳಿದ ಮತಗಳು ಸೇರಿದಂತೆ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಲಾಗಿರುವ ಸಿದ್ದರಾಮಯ್ಯ ಕುಲಬಾಂಧವರ 30 ಸಾವಿರಕ್ಕೂ ಅಧಿಕ ಮತಗಳು ಕಾಂಗ್ರೆಸ್ ಕೈಹಿಡಿಯುವ ಸಾಧ್ಯತೆಗಳಿದ್ದು ನರೇಂದ್ರಸ್ವಾಮಿ ಗೆಲುವಿಗೆ ಸಹಕಾರಿಯಾಗಲಿದೆ.

ದೇವೇಗೌಡರ ಮಾಂತ್ರಿಕ ಶಕ್ತಿ ಒಕ್ಕಲಿಗರ ಮತಗಳನ್ನು ಸೆಳೆಯಲಿದೆ ಎಂದುಕೊಂಡಿರುವ ಅನ್ನದಾನಿ ಹಾಗೂ ನರೇಂದ್ರಸ್ವಾಮಿ ನಡುವೆ ನೇರ ಪೈಪೋಟಿಯಿದ್ದು, ಇಲ್ಲಿ ನರೇಂದ್ರಸ್ವಾಮಿ ಮುನ್ನಡೆಯಲ್ಲಿದ್ದಾರೆ.

ಮೇಲುಕೋಟೆ: ಗೆಲ್ಲಲು ಸಿಎಸ್ಪಿ-ಕೆಎಸ್ಪಿ ಹರಸಾಹಸ

ಮೇಲುಕೋಟೆ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕನಾಗಿ ಮೂರನೇ ಬಾರಿ ಸ್ಪರ್ಧೆ ನೀಡಿರುವ ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಹಾಗೂ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ರೈತನಾಯಕ ಕೆ.ಎಸ್.ಪುಟ್ಟಣ್ಣಯ್ಯ ನಡುವೆಯೇ ನೇರ ಕಾಳಗ. ತತ್ವ-ಸಿದ್ಧಾಂತಗಳನ್ನು ಬದಿಗೆ ಸರಿಸಿ ಪುಟ್ಟರಾಜು ಪಟ್ಟಿಗೆ ಪ್ರತಿಪಟ್ಟು ಹಾಕುತ್ತಿರುವ ಪುಟ್ಟಣ್ಣಯ್ಯನವರ ಸ್ಪರ್ಧೆಯಿಂದ ಈ ಕ್ಷೇತ್ರದ ಫಲಿತಾಂಶದತ್ತ ಇಡೀ ರಾಜ್ಯವೇ ತಿರುಗಿನೋಡುವಂತೆ ಮಾಡಿದೆ.



ಎಂ.ಶ್ರೀನಿವಾಸ್




ನರೇಂದ್ರ ಸ್ವಾಮಿ

ಈಗಾಗಲೇ ಹಲವು ಚುನಾವಣೆಗಳಲ್ಲಿ ಸೋತಿರುವ ಪುಟ್ಟಣ್ಣಯ್ಯ ಈ ಬಾರಿ ಶತಾಯಗತಾಯ ಗೆಲ್ಲಲೇಬೇಕೆಂದು ನಿರ್ಧರಿಸಿಬಿಟ್ಟಿದ್ದಾರೆ. ಕಳೆದ ಬಾರಿ ಸೋತ ನಂತರದ ದಿನಗಳಿಂದ ಇಂದಿನವರೆಗೂ ಚುನಾವಣೆಗೆ ತಯಾರಿ ಮಾಡಿಕೊಂಡಿದ್ದ ಪುಟ್ಟಣ್ಣಯ್ಯ ಅದಕ್ಕಾಗಿ ಎಲ್ಲಾ ರೀತಿಯ ರಾಜಿಗಳನ್ನು ಮಾಡಿಕೊಂಡಿದ್ದಾರೆ. ಜಿಲ್ಲೆಯ ಮಟ್ಟಿಗೆ ಬಲಿಷ್ಠ ಜೆಡಿಎಸ್ ನಾಯಕ, ಚಾಣಾಕ್ಷ, ಡೈನಾಮಿಕ್ ಎಂದು ಹೆಸರು ಪಡೆದಿರುವ ಪುಟ್ಟರಾಜು ಎದುರು ಈ ಬಾರಿ ಪುಟ್ಟಣ್ಣಯ್ಯ ಕೂಡ ಡೈನಾಮಿಕ್ ಆಗಿಯೇ ಮುನ್ನುಗ್ಗಿದ್ದಾರೆ. ಮೇಲುಕೋಟೆ ಕ್ಷೇತ್ರಕ್ಕೆ ಸೇರಿರುವ ದುದ್ದ ಹೋಬಳಿಯಲ್ಲಿ - ಮತಬಾಚಿದವರು ಗೆಲ್ಲುವ ಸಾಧ್ಯತೆ ಇರುವುದರಿಂದ ಅತ್ತಲೇ ಇಬ್ಬರೂ ಸಾಕಷ್ಟು ಗಮನ ಹರಿಸಿದ್ದಾರೆ. ದುದ್ದ ಹೋಬಳಿಯಲ್ಲಿ ರೈತಸಂಘದ ಅಬ್ಬರದ ಮುಂದೆ ಜೆಡಿಎಸ್ ಅಬ್ಬರ ಕುಗ್ಗುವಂತೆ ಮಾಡಿರುವ ಪುಟ್ಟಣ್ಣಯ್ಯ ಪುಟ್ಟರಾಜುಗೆ ನಡುಕ ಮೂಡಿಸಿದ್ದರು. ದುದ್ದ ಹೋಬಳಿಯಲ್ಲಿ ಮಾಜಿ ಶಾಸಕ ಹೆಚ್.ಬಿ.ರಾಮು, ಜಿ.ಬಿ.ಶಿವಕುಮಾರ್, ಜಿ.ಪಂ.ಸದಸ್ಯ ಜನಪ್ರಿಯ ವೈದ್ಯ ಡಾ.ಶಂಕರೇಗೌಡ ಮೊದಲಾದವರ ಪ್ರಯತ್ನದಿಂದ ಜೆಡಿಎಸ್‌ನ ಪುಟ್ಟರಾಜು ಈ ಭಾಗದಲ್ಲಿ ಮುಂಚೂಣಿಯಲ್ಲಿದ್ದಾರೆ.



ಡಿ.ಸಿ.ತಮ್ಮಣ್ಣ



ಸುರೇಶ್‌ಗೌಡ

ಜಾತಿವಾರು ರಾಜಕಾರಣ, ಭ್ರಷ್ಟಾಚಾರದ ಬಗ್ಗೆ ಲೋಕಾಯುಕ್ತ ಸಂತೋಷ್ ಹೆಗ್ಡೆ ಎ.ಕೆ.ಸುಬ್ಬಯ್ಯನಂತಹವರನ್ನು ಕರೆತಂದು ಭಾಷಣ ಮಾಡಿಸಿದ್ದ ಪುಟ್ಟಣ್ಣಯ್ಯ ಕೇವಲ ಚುನಾವಣೆ ಗೆಲ್ಲಲು ಹೋರಾಟದ ರೈತಸಂಘಟನೆಯನ್ನು ಕೆಳಮಟ್ಟಕ್ಕೆ ಇಳಿಸಿದ್ದಾರೆ. ಲಿಂಗಾಯತರ ಓಟು ತಡೆಯಲು ಭ್ರಷ್ಟಾಚಾರದ ಕಾರಣಕ್ಕೆ ಜೈಲುಪಾಲಾದ ಯಡಿಯೂರಪ್ಪನವರನ್ನು ಸನ್ಮಾನಿಸಿ ಹಾಡಿಹೊಗಳಿದ್ದಾರೆ. ನಾಗರಾಜಪ್ಪನನ್ನು ಮುಂದಿಟ್ಟುಕೊಂಡು ಕೆಜೆಪಿ ಪಕ್ಷದ ಶಾಲನ್ನು ಹೊದ್ದುಕೊಂಡು ಪ್ರಚಾರವನ್ನೂ ನಡೆಸಿದ್ದಾರೆ. ಪುಟ್ಟಣ್ಣಯ್ಯನವರ ಎದುರಾಳಿ ಪುಟ್ಟರಾಜು ರಾಜಕೀಯ ಪಕ್ಷವೊಂದರ ನೇತಾರ, ರಾಜಕೀಯ ಸಮರದಲ್ಲಿ ನಿಷ್ಣಾತ. ಪುಟ್ಟಣ್ಣಯ್ಯನವರ ಸ್ವಗ್ರಾಮ ಕ್ಯಾತನಹಳ್ಳಿಯಲ್ಲೇ ಪ್ರತಿ ಚುನಾವಣೆಯಲ್ಲಿ ಮತಗಳನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿರುವ ಚತುರ. ಕ್ಷೇತ್ರದಲ್ಲಿ ರಸ್ತೆ, ನೀರಾವರಿ ಯೋಜನೆಗಳು, ಸಹ ವಿದ್ಯುತ್ ಘಟಕ, ಶಾಲೆ-ಕಾಲೇಜು, ಅಗ್ನಿಶಾಮಕ ಠಾ[illegible] ಆರೋಗ್ಯ ಕೇಂದ್ರ, ಮಿನಿ ವಿಧಾನಸೌಧ ಎಂದೆಲ್ಲಾ ನೂರಾರು ಅಭಿವೃದ್ಧಿ ಕಾಮಗಾರಿ ನಡೆಸಿರುವ ಪುಟ್ಟರಾಜು ಕೂಡ ಜನರ ಮನಸ್ಸಿನಲ್ಲಿದ್ದಾರೆ. ಮೇಲುಕೋಟೆ ಎಂಎಲ್‌ಎ ಆಗುವ ಏಕೈಕ ಉದ್ದೇಶದಿಂದ ರೈತ ಸಂಘಟನೆಯನ್ನು ಕೆಳಮಟ್ಟಕ್ಕೆ ಇಳಿಸಿರುವ ಪುಟ್ಟಣ್ಣಯ್ಯ ಪರವಾಗಿಯೂ ಕ್ಷೇತ್ರದಲ್ಲಿ ಒಳ್ಳೆಯ ಮಾತು ಕೇಳಿಬರುತ್ತಿದೆ.

ಕ್ಷೇತ್ರದಲ್ಲಿ 1.95 ಲಕ್ಷ ಮತದಾರರಿದ್ದು 80 ಸಾವಿರದಷ್ಟು ಒಕ್ಕಲಿಗ ಮತಗಳಿವೆ. ಯಡ್ಡಿಯ ಕೆಜೆ[illegible] ಪಕ್ಷ ಪುಟ್ಟಣ್ಣಯ್ಯನವರಿಗಾಗಿಯೇ ಇಲ್ಲಿ ಅಭ್ಯರ್ಥಿ ಹಾಕಿಲ್ಲ. 20 ಸಾವಿರದಷ್ಟಿರು[illegible] ಲಿಂಗಾಯತ ಸಮೂಹದ ಮತಗಳು ಪುಟ್ಟಣ್ಣಯ್ಯನವರಿಗೆ ಹಾಕಬೇಕೆಂದು ಯಡ್ಡಿ ಫರ್ಮಾನು ಹೊರಡಿಸಿದ್ದರೂ, ಪುಟ್ಟರಾಜು ಲಿಂಗಾಯತ ಗ್ರಾಮಗಳಿ[illegible] ಮಾಡಿಕೊಟ್ಟಿರುವ ಅಭಿವೃದ್ಧಿ ಕಾರ್ಯಗಳ ಹಿನ್ನೆಲೆಯಲ್ಲಿ ಅವರಿಗೂ ಲಿಂಗಾಯತವರ್ಗ ಸಮ ಪ್ರಮಾಣದ[illegible] ಮತ ನೀಡಲಿದೆ.


ಕ್ಷೇತ್ರದಲ್ಲಿ ಬೆಸ್ತ ಗಾಣಿಗ, ಹಿಂದು[illegible] ಮತಗಳು 50 ಸಾವಿರಕ್ಕೂ ಹೆಚ್ಚಿದೆ.

ಕುರುಬರ 12 ಸಾವಿರಕ್ಕೂ ಹೆ[illegible] ಮತಗಳು ಸಿದ್ದರಾಮಯ್ಯನವರ ಕಾರ[illegible] ಕಾಂಗ್ರೆಸ್‌ಗೆ ಹೋಗುವ ವಾತಾವರಣ [illegible] ಕ್ಷೇತ್ರದಲ್ಲಿಲ್ಲ. ಅಂಬಿ ಶಿಷ್ಯ ಎಲ್.ಡಿ.[illegible] ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು ಮೂ[illegible] ಸ್ಥಾನಕ್ಕೆ ಬಿಜೆಪಿಯ ರವೀಂದ್ರರೊಂ[illegible] ಹೋರಾಡುತ್ತಿದ್ದಾರೆ. ಇಲ್ಲಿ ಪುಟ್ಟರಾ[illegible] ಪುಟ್ಟಣ್ಣಯ್ಯ ನಡುವೆಯೇ ಫೈ[illegible] ನಡೆಯುತ್ತಿದ್ದು, ಪುಟ್ಟರಾಜುಗೆ ಗೆಲ[illegible] ಚಾನ್ಸ್ ಜಾಸ್ತಿಯಿದೆ.

ಮದ್ದೂರು: ಕಲ್ಪನಾ-ತಮ್ಮ[illegible] ನೇರ ಹಣಾಹಣಿ

ಮದ್ದೂರು ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಮಾಜಿ ಶಾಸಕ ಡಿ.ಸಿ.ತಮ್ಮಣ್ಣನ ಹಣದ ಹೊಳೆಯ ಮುಂದೆ ಪಕ್ಷೇತರ ಅಭ್ಯರ್ಥಿ ಕಲ್ಪನಾ ಸಿದ್ದರಾಜು ಸ್ವಾಭಿಮಾನದ ಹೋರಾ[illegible] ಮೂಲಕ ತಿರುಗೇಟು ನೀಡುತ್ತಿದ್ದಾರೆ. ಕಲ್ಪನಾ ಸಿದ್ದರಾಜು ಕೊಡುತ್ತಿರುವ ಫೈಟ್‌ಗೆ ಕಂಗಾಲಾಗಿರುವ ತಮ್ಮಣ್ಣನ ಕುಟುಂಬವೇ ಬೀದಿಗಿಳಿದು ಕ್ಷೇತ್ರದಾದ್ಯಂತ ಗಲ್ಲಿಗಲ್ಲಿಗಳನ್ನು ಸುತ್ತುತ್ತಿದೆ. ತಮ್ಮಣ್ಣನ ಹೆಂಡತಿ, ಪುತ್ರಿ, ಅಳಿಯ ಡಾ.ಹೆಚ್.ಡಿ.ರಮೇಶ್ (ಹೆಚ್.ಡಿ.ದೇವೇಗೌಡರ ಮ[illegible] ಕ್ಷೇತ್ರ ಪ್ರದಕ್ಷಿಣೆ ಹಾಕುತ್ತಿದ್ದಾರೆ. ಅಷ್ಟರಮಟ್ಟಿಗೆ ಕಲ್ಪ[illegible] ಸಿದ್ದರಾಜು ತಮ್ಮಣ್ಣನ ಮುಖದಲ್ಲಿ ಬೆವರಿಳಿಸುತ್ತಿದ[illegible] ಇವರಿಬ್ಬರ ಮಧ್ಯೆ ಹೇಗಾದರೂ ಗೆಲುವಿನತ್ತ ನುಸುಳಬೇಕೆಂಬ ಹವಣಿಕೆಯಲ್ಲಿ ಅವಕಾಶವಾದಿ ರಾಜಕಾರಣಿ ಮಧುಮಾದೇಗೌಡ ಪ್ರಯತ್ನಿಸುತ್ತಿದ್ದಾರೆ.

ಕೆಐಎಡಿಬಿ ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಲ[illegible] ಹೊಡೆದ ದುಡ್ಡಿನ ರಕ್ಷಣೆಗಾಗಿ ಕಾಂಗ್ರೆಸ್-ಬಿಜೆಪಿಗಳನ[illegible] ಸುತ್ತಿಬಂದಿರುವ ತಮ್ಮಣ್ಣ ಈಗ ತ[illegible] ಬೀಗರಾದ ದೇವೇಗೌಡರೊಂದಿಗೆ ಡೀಲು ಕುದುರಿಸಿಕೊಂದು ಜೆಡಿಎ[illegible] ಸೇರಿದರಲ್ಲದೆ ಕಲ್ಪನಾ ಸಿದ್ದರಾಜುಗೆ ಟಿಕೆಟ್ ತಪ್ಪಿಸಿದ್ದಾರೆ. ದುಡ್ಡಿನ ಬಲದಿಂದ ಮಹಿಳೆಯೊಬ್ಬಳಿಗೆ ಅನ್ಯಾಯ ಮಾಡಿದ್ದರ ವಿರುದ್ಧ ಜನ[illegible] ಸಿಟ್ಟಾಗಿದ್ದಾರೆ. ಅದರಲ್ಲೂ ಮಹಿಳಾ ಮತದಾರರು ಆಕ್ರೋಶದಿಂದ ಕುದಿಯುತ್ತಿರುವುದು ಕಲ್ಪನಾ ಪರ ಅನುಕಂಪದ ಅಲೆ ಎಬ್ಬಿಸಿದೆ. ಇದ[illegible]





ಕೆ.ಎಸ್.ಪುಟ್ಟಣ್ಣಯ್ಯ

>>>1


ಶಿವಮೊಗ್ಗ ಜಿಲ್ಲೆ


ದುಷ್ಟ ಯಡ್ಡಿ ವಿರುದ್ಧ ಅಸಹಾಯಕ ಈಶ್ವರಿ





ವಮೊಗ್ಗ ಜಿಲ್ಲೆಯಲ್ಲಿ ಈ ಬಾರಿಯ ಚುನಾವಣೆ ಚುನಾವಣೆಗಳಿಗಿಂತಲೂ ವಿಶೇಷವಾಗಿದೆ. ದನೆ ಇಲ್ಲಿ ಒಂದಿಲ್ಲೊಂದು ಕಾರಣಕ್ಕೆ ವೈರುಧ್ಯಗಳ ಹಾಗೂ ವೈರುಧ್ಯಗಳ ಸಮೀಕರಣ ನಡೆಯುತ್ತಿದೆ.





ಶಾಂತವೀರಪ್ಪ ಬಡಿಗಾರ್


ಕಾಲದಲ್ಲಿ ಸಮಾಜವಾದದ ತೊಟ್ಟಿಲಾಗಿದ್ದ ಈ ದಲ್ಲಿ ಈಗ ಕೋಮುವಾದಿಗಳದ್ದೇ ಪಾರುಪತ್ಯ ರೇ ಒಂದು ದುರಂತ.

ಭ್ರಷ್ಟಾಚಾರ-ಭಾನಗಡಿಗಳನ್ನು ಎಗ್ಗಿಲ್ಲದೆ ಮಾಡಿ, ಜೈಲು ಬಿಜೆಪಿಯಿಂದ ಕಿಕ್‌ಔಟ್ ಆಗಿ, ಕೆಜೆಪಿ ಎಂಬ ಡೆಡನ್ನು ಪಟಾಯಿಸಿ, ಅದನ್ನೇ ಒಂದು ರಾಜಕೀಯ ಗ್ಗಿ ಬೆಳಸಿ, ತನ್ನ ಖದರನ್ನು ತೋರಿಸಬೇಕೆಂಬ ಹಸದಲ್ಲಿರುವ ಮಾಜಿ ಮುಖ್ಯ ಮಂತ್ರಿ ಯಡಿಯೂರಪ್ಪ ನವರಿಗೆ ಇದೇ ಭೂಮಿ. ತಾನು ಶಿಕಾರಿಪುರ ದಲ್ಲಿ ಜೊತೆಗೆ ಇನ್ನೂ ನಾಲ್ಕು ಲ್ಲಾದರೂ ಕೆಜೆಪಿ ಅಭ್ಯರ್ಥಿ ಗೆಲ್ಲಿಸಲೇಬೇಕೆಂಬ ತವಕ ಮತ್ತು ರ್ಮ ಸ್ಥಿತಿ ಅವರದ್ದು. ಅಷ್ಟೇ ತಮ್ಮ ಜನ್ಮಜನ್ಮದ ಶತ್ರು ಎಂದು ರುವ ಬಿಜೆಪಿಯ ಮಾಜಿ ಕ್ಷ ಕೆ.ಎಸ್. ಈಶ್ವರಪ್ಪನನ್ನು ಬೇಕೆಂಬ ಹಠ ಬೇರೆ.

ಶಿಕಾರಿಪುರ

ಪದ ಬುಡದಲ್ಲೇ ಕತ್ತಲೆಂಬಂತೆ ಯಡ್ಡಿ ರದಲ್ಲಿ ಗೆಲುವು ಸಾಧಿಸುವುದೇ ಕಷ್ಟಸಾಧ್ಯ ಎಂಬ ಮ ಹಲವರದ್ದು. ಇಲ್ಲಿ ಶಾಂತವೀರಪ್ಪ ಗೌಡ ಹುರಿಯಾಳು. ಈ ಹಿಂದೆ ಬಿಜೆಪಿಯಿಂದ ಸ್ಥಳೀಯ ತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಆರು ಅವಧಿ ಪೂರೈಸಿದವರು. ಎರಡನೇ ಅವಧಿಗೆ ಊರಪ್ಪ ಟಿಕೆಟ್ ತಪ್ಪಿಸಿದರೆಂಬ ಕಾರಣಕ್ಕೆ ಬಿಜೆಪಿ ಕಾಂಗ್ರೆಸ್ ಸೇರಿದವರು. ಇವರು ಲಿಂಗಾಯತ ಸಾದು ಲಿಂಗಾಯತರು. ಈ ಕ್ಷೇತ್ರದಲ್ಲಿ 35 ಸಾದು ಲಿಂಗಾಯತ ಮತದಾರರಿದ್ದಾರೆ. ಆದರೆ ಊರಪ್ಪನ ಬಣಜಿಗ ಲಿಂಗಾಯತ ಮತದಾರರ





ಕಾಗೋಡು ತಿಮ್ಮಪ್ಪ ಬೇಳೂರು ಗೋಪಾಲಕೃಷ್ಣ

ಕೇವಲ 5 ಸಾವಿರ. ಇದಲ್ಲದೆ 30-35 ಸಾವಿರ ರು, 20 ಸಾವಿರ ಕುರುಬ, 30 ಸಾವಿರ ಗಳು ಮತ್ತು 10 ಸಾವಿರ ಈಡಿಗ ರಿದ್ದಾರೆ.

ಲಿಂಗಾಯತರ ಜೊತೆಗೆ ಅಲ್ಪಸಂಖ್ಯಾತರು, ಈಡಿಗರು ಮತ್ತು ಕುರುಬರು ಕಾಂಗ್ರೆಸ್ ಕಡೆಗೆ ವಾಲಿದರೆ ಯಡಿಯೂರಪ್ಪನಿಗೆ ಸೋಲು ಕಟ್ಟಿಟ್ಟಿ.

ಹಿಂದೆ 1999ರಲ್ಲಿ ಯಡ್ಡಿಯನ್ನು ಇಲ್ಲಿ ಮಹಾಲಿಂಗಪ್ಪ ಎಂಬ ಸಾದು ಲಿಂಗಾಯತ.


ಮೊನ್ನೆ ರಾತ್ರಿ ಎದ್ದ ಮಹಾಲಿಂಗಪ್ಪ ಇದ್ದಕ್ಕಿದ್ದಂತೆ ಯಡ್ಡಿಯ ಕೆಜೆಪಿ ಸೇರಿದ. ಈ ಕಾರಣಕ್ಕೆ ಕಾಂಗ್ರೆಸ್ ಈ ಬಾರಿ ತನ್ನ ಟಿಕೆಟ್ ಅನ್ನು ನಿರಾಕರಿಸಿತು. ಈತ ಕಾಂಗ್ರೆಸ್ ತೊರೆದು ಕೆಜೆಪಿ ಸೇರಿರುವುದರಿಂದ ಯಡ್ಡಿ ತನಗೆ ಸಾದು ಲಿಂಗಾಯತರ ಬೆಂಬಲ ಸಿಗುತ್ತದೆ ಎಂದು ಭಾವಿಸಿದ್ದರೆ ಅದಕ್ಕಿಂತ ಹಾಸ್ಯಾಸ್ಪದದ ಸಂಗತಿ ಇನ್ನೊಂದಿರಲಿಕ್ಕಿಲ್ಲ. ಯಾಕೆಂದರೆ ಶಾಂತವೀರಪ್ಪ ಗೌಡ ತರಹದ ಸಾದು ಲಿಂಗಾಯತರು ಚುನಾವಣಾ ಕಣದಲ್ಲಿರುವಾಗ ಆ ಸಮುದಾಯದವರು ಮತ್ತೊರ್ವ ಲಿಂಗಾಯತನನ್ನು ಬೆಂಬಲಿಸುವ ಜಾಯಮಾನದವರಲ್ಲ. ಅಷ್ಟೇ ಅಲ್ಲ ಈಗ ಯಡ್ಡಿ ಪಾಳೆಯ ಸೇರಿರುವ ಮಹಾಲಿಂಗಪ್ಪ ಜನಸಂಪರ್ಕ ಕಡಿದುಕೊಂಡು 12 ವರ್ಷಗಳಾಗಿವೆ.


ಈ ಪಕ್ಷಾಂತರಕ್ಕೆ ಪ್ರತಿಯಾಗಿ ಶಾಂತವೀರಪ್ಪ ಗೌಡರು ಬಿಎಸ್‌ಆರ್ ಕಾಂಗ್ರೆಸ್ ಅಭ್ಯರ್ಥಿ ಮತ್ತು ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ಫಕೀರಪ್ಪನನ್ನು ಬುಟ್ಟಿಗೆ ಹಾಕಿಕೊಂಡು ಚುನಾವಣಾ ಯುದ್ಧದಿಂದ ಅವರನ್ನು ರಿಟೈರ್ ಮಾಡಿಸಿದ್ದಾರೆ. ಕನಿಷ್ಠ 20 ಸಾವಿರ ಮತದಾರರಿರುವ ವಡ್ಡರ ಸಮುದಾಯಕ್ಕೆ ಸೇರಿದ ಫಕೀರಪ್ಪ ತನ್ನ ಸಮುದಾಯದ ಮತಗಳು ಕಾಂಗ್ರೆಸ್ ಪಾಲಾಗಿಸಲು ಸಮರ್ಥರಾಗಿದ್ದಾರೆ. ಆದೂ ಯಡ್ಡಿಯ ಪಾಲಿಗೆ ಆನಾಹುತವೇ.


ಉಳಿದಂತೆ ಕಣದಲ್ಲಿರುವ ಜೆಡಿಎಸ್ ಅಭ್ಯರ್ಥಿ ರಿಟೈರ್ಡ್ ಐಎಎಸ್ ಅಧಿಕಾರಿ ಬಡಿಗಾರ್ ಅವರಿಗೆ ಇಲ್ಲಿ ಜಾತಿ ಸಂಘಟನೆಯ ಬಲವಿಲ್ಲ. ಇಲ್ಲಿ ಬಿಜೆಪಿ ಅಭ್ಯರ್ಥಿ ಲೆಕ್ಕಕ್ಕಿಲ್ಲ.

ಶಿವಮೊಗ್ಗ ನಗರ

ಇತ್ತ ಕಾಂಗ್ರೆಸ್, ಅತ್ತ ಕೆಜೆಪಿ ವಿರೋಧದ ನಡುವೆ ಸಿಲುಕಿಕೊಂಡಿರುವ ಬಿಜೆಪಿಯ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪನ ಸ್ಥಿತಿಯಂತೂ ಚಿಂತಾಜನಕ ವಾಗಿದೆ.









ಇಬ್ರಾಹಿಂ ಅಪ್ಪಾಜಿ ಗೌಡ ಸಂಗಮೇಶ್

ಜೆಡಿಎಸ್ ಅಭ್ಯರ್ಥಿ ಶ್ರೀಕಾಂತ್ ಕುರುಬ ಮತ್ತು ಮುಸ್ಲಿಂ ಓಟುಗಳನ್ನು ಚೇಸ್ ಮಾಡುತ್ತಿದ್ದಾರೆ.

ಈ ಬಾರಿ ಈಶ್ವರಪ್ಪನಿಗೆ ಯಾವುದೇ ನಿರ್ದಿಷ್ಟ ಓಟ್ ಬ್ಯಾಂಕ್ ಇಲ್ಲ. ಆದ್ದರಿಂದ ಅವರು ಇತ್ತ ಕಂಡಕಂಡವರ ಕಾಲು ಹಿಡಿಯುತ್ತ ಅತ್ತ ಚುನಾವಣೆ ಕಣಕ್ಕೆ ಆರು ಜನ ಮುಸಲ್ಮಾನರು ಇಳಿಯುವಂತಹ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ಈ ಮುಸಲ್ಮಾನರ ನಡುವೆ ಆ ಸಮುದಾಯದ ಮತಗಳು ಹಂಚಿಹೋದರೆ ತಾನು ತೂರಿ ಬರಬಹುದೆಂಬ ಲೆಕ್ಕಾಚಾರ ಈಶ್ವರಪನದ್ದು.

ಈ ಕ್ಷೇತ್ರದಲ್ಲಿರುವ 30 ಸಾವಿರಕ್ಕೂ ಅಧಿಕ ಬ್ರಾಹ್ಮಣರು, 40 ಸಾವಿರ ಮುಸ್ಲಿಮರು, 10 ಸಾವಿರ







ಪ್ರಸನ್ನಕುಮಾರ್ ರುದ್ರೇಗೌಡ


ಕ್ರಿಶ್ಚಿಯನ್ ಮತಗಳು ಮತ್ತು ಅಲ್ಪಸ್ವಲ್ಪ ಇರುವ ಇತರೆ ಸಮುದಾಯಗಳಲ್ಲಿ ಹೆಚ್ಚಿನವರು ಈಶ್ವರಪ್ಪನಿಗೆ ಕೈಕೊಟ್ಟರೆ ಆತ ಗ್ಯಾರಂಟಿ ಮಟಾಶ್ ಆಗಲಿದ್ದಾರೆ.

ಭದ್ರಾವತಿ

ಅಧಿಕಾರವಿದ್ದಾಗ ಯಡಿಯೂರಪ್ಪನ ಜೊತೆ ಸರಸವಾಡಿ, ಕೊನೆಗೆ ಅದೇ ಯಡ್ಡಿ ಕೈಲಿ ಒದೆ ತಿಂದು, ಕ್ರಿಮಿನಲ್ ಕೇಸ್ ದಾಖಲಿಸಿಕೊಂಡು ಈಗ ಕಾಂಗ್ರೆಸ್ ಟಿಕೆಟ್‌ನಿಂದ ವಂಚಿತನಾಗಿ, ಕೆಜೆಪಿ ಬೆಂಬಲದಿಂದ ಪಕ್ಷೇತರನಾಗಿ ಕಣಕ್ಕಿಳಿದು ಇಂಗುತಿಂದ ಮಂಗನಂತಾಡುತ್ತಿರುವ ಹಾಲಿ ಶಾಸಕ ಬಿ.ಕೆ.ಸಂಗಮೇಶ್ ತನ್ನ ಎದುರಾಳಿ ಜೆಡಿಎಸ್‌ನ ಅಪ್ಪಾಜಿ ಗೌಡನ ಹಾದಿ ಸುಲಭ ಮಾಡಿಕೊಟ್ಟಿದ್ದಾರೆ. ಕೇವಲ ಮುಸ್ಲಿಂ ಮತಗಳನ್ನು ನಂಬಿ ಈ ಕ್ಷೇತ್ರಕ್ಕೆ ಬಂದುನಿಂತಿರುವ ಕಾಂಗ್ರೆಸ್‌ನ ಸಿ.ಎಂ.ಇಬ್ರಾಹಿಂ ಕಥೆ ಕುತೂಹಲಕ್ಕೆಡೆ ಮಾಡಿದೆ.







ಕುಮಾರ್ ಬಂಗಾರಪ್ಪ ಮಧು ಬಂಗಾರಪ್ಪ ಹಾಲಪ್ಪ

ಸ್ವಲ್ಪ ಆಯ ತಪ್ಪಿದರೂ ಅವರಿಗೆ ಮೂರನೆ ಸ್ಥಾನ ಸಿಗಬಹುದು.


ಕಾಂಗ್ರೆಸ್ಸಿನ ಅಭ್ಯರ್ಥಿ ಕೆ.ಬಿ.ಪ್ರಸನ್ನಕುಮಾರ್ ಜನ ಪ್ರಿಯತೆಗಳಿಸಿರುವ ಬ್ರಾಹ್ಮಣ. ಸದಾ ಬ್ರಾಹ್ಮಣರ ಓಟಿನಿಂದಲೇ ಗೆಲುವು ಸಾಧಿಸುತ್ತಿದ್ದ ಈಶ್ವರಪ್ಪನಿಗೆ ಈ ಬಾರಿ ಕಾಂಗ್ರೆಸ್ ಬ್ರಾಹ್ಮಣ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದು ಸಹಜವಾಗಿಯೇ ನಡುಕ ಹುಟ್ಟಿಸಿದೆ. ಇದರಿಂದ ಬುದ್ಧಿ ಸ್ಥಿಮಿತ ಕಳೆದುಕೊಂಡಂತಾಡುತ್ತಿರುವ ಈಶ್ವರಪ್ಪ ಇತ್ತೀಚೆಗೆ ಬ್ರಾಹ್ಮಣರ ಸಭೆಯೊಂದರಲ್ಲಿ 'ಲವ್ ಜಿಹಾದ್' ಎಂಬ ಕಪೋಲಕಲ್ಪಿತ 'ಯೋಜನೆ' ಬಗ್ಗೆ ಬಾಯಿಗೆಬಂದಂತೆ ಮಾತನಾಡಿದ್ದಾರೆ. ಮುಸಲ್ಮಾನ ಯುವಕರು ಬ್ರಾಹ್ಮಣ ಹುಡುಗಿಯರನ್ನು ಲಪಟಾಯಿಸುತ್ತಿದ್ದಾರೆ ಎಂದು ಹೇಳುವ ಮೂಲಕ ಈಶ್ವರಪ್ಪ ಬ್ರಾಹ್ಮಣರ ಬೆಂಬಲವನ್ನು ಗಳಿಸಲು ಯತ್ನಿಸಿದರು. ಆದರೆ ಹರಕುಬಾಯಿಯ ಈಶ್ವರಪ್ಪ ಬ್ರಾಹ್ಮಣ ಯುವತಿಯರ ಬಗ್ಗೆ ಹೀಗೆ ಹಗುರವಾಗಿ ಮಾತನಾಡಿದ್ದರಿಂದ ಬ್ರಾಹ್ಮಣ ಸಮುದಾಯದ ಬೆಂಬಲದ ಬದಲಾಗಿ ಅವರ ವಿರೋಧವನ್ನು ಗಳಿಸಿದ್ದಾರೆ. ಜೊತೆಗೆ ಚುನಾವಣಾ ಆಯೋಗದಿಂದ ಛೀಮಾರಿಯನ್ನೂ ಹಾಕಿಸಿಕೊಂಡಿದ್ದಾರೆ.

ಇನ್ನು ಈಶ್ವರಪ್ಪನನ್ನು ಸೋಲಿಸುವುದೇ ತನ್ನ ಗುರಿ ಮಾಡಿಕೊಂಡಿರುವ ಯಡಿಯೂರಪ್ಪನ ಕೆಜೆಪಿ ಇತ್ತೀಚೆಗೆ ನಡೆದ ನಗರ ಸಂಸ್ಥೆಗಳ ಚುನಾವಣೆಯಲ್ಲಿ ಏಳು ಸ್ಥಾನಗಳನ್ನು ಕಿತ್ತು ಬಿಜೆಪಿಯ 19 ಸದಸ್ಯರ ಬಲವನ್ನು ಏಕದಂ ಎಂಟಕ್ಕೆ ಇಳಿಸಿದ್ದೂ ಈಶ್ವರಪ್ಪನಲ್ಲಿ ನಡುಕ ಹುಟ್ಟಿಸಿದೆ. ಈಗ ಯಡಿಯೂರಪ್ಪ ಕೆಜೆಪಿಯ ಪತಿಯಿಂದ ರುದ್ರೇಗೌಡರು ಚುನಾವಣಾ ಕಣಕ್ಕೆ ಧುಮುಕಿದ್ದಾರೆ. ಇವರು ರಾಜಕೀಯಕ್ಕೆ ಹೊಸಬರು, ಆದರೆ ಸಂಭಾವಿತ. ಇವರು ಕೇವಲ ಯಡಿಯೂರಪ್ಪನ ಬಲವನ್ನು ಅವಲಂಬಿಸಿದ್ದಾರೆ.

ಶಿವಮೊಗ್ಗ ಗ್ರಾಮಾಂತರ

ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿಯ ಅಭ್ಯರ್ಥಿಯಾಗಿರುವ ಕುಮಾರಸ್ವಾಮಿಗೆ ಇಲ್ಲಿ ಯಾವುದೇ ನಿರ್ದಿಷ್ಟ ಓಟ್‌ಬ್ಯಾಂಕ್ ಇಲ್ಲ. ಜೊತೆಗೆ ಆರೆಸ್ಸೆಸ್ ಸಂಘಟನೆಗೆ ಬಲವೂ ಇಲ್ಲ. ಈ ಕಾರಣಕ್ಕಾಗಿ ಅವರು ಚುನಾವಣೆ ಮುನ್ನವೇ ಸೋಲು ಒಪ್ಪಿಕೊಂಡಂತಾಗಿದೆ. ಲಿಂಗಾಯತರು, ಲಂಬಾಣಿಗಳು ಮತ್ತು ವಡ್ಡರ ಜನಸಂಖ್ಯೆ ಹೆಚ್ಚಾಗಿರುವ ಮೀಸಲು ಕ್ಷೇತ್ರವಿದು. ಇಲ್ಲಿ ಫೈಟ್ ಏನಿದ್ದರೂ ಕೆಜೆಪಿಯ ಜಿ.ಬಸವಣ್ಣಪ್ಪ ಮತ್ತು ಜೆಡಿಎಸ್‌ನ ಶಾರದಾ ಪೂರ್ಯಾನಾಯ್ಕರ ನಡುವೆ ಮಾತ್ರ. ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿ ಶಾರದಾ ಮಾಡಿರುವ ಕೆಲಸಗಳು ಇವರಿಗೆ ಸಹಾಯಕವಾಗುವ ಸಾಧ್ಯತೆ ಇದೆ.





ಕಿಮ್ಮನೆ ರತ್ನಾಕರ್ ಆರಗ ಜ್ಞಾನೇಂದ್ರ

ಇತ್ತೀಚೆಗೆ ಶಿವಮೊಗ್ಗ-ಶಿವಮೊಗ್ಗ ಗ್ರಾಮಾಂತರ-ಶಿಕಾರಿಪುರಕ್ಕಾಗಿ ತಂದಿರಿಸಿದ ಭಾರೀ ಸಂಖ್ಯೆಯ ಸೀರೆಗಳು ನಗರದ ಹೊರವಲಯದಲ್ಲಿರುವ ವಿಜಯ ಸಂಕೇಶ್ವರ್ ಒಡೆತನದ ವಿಆರ್‌ಎಲ್ ಗೋಡೌನ್‌ನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದು ಎಫ್‌ಐಆರ್ ಮಾಡಲಾಗಿದೆ. ಇದು ಕೆಜೆಪಿಗೆ ಹೊಡೆತವಲ್ಲವೆ? ಎನ್ನುತ್ತಾರೆ ಜನ.

ಸೊರಬ

ದಿವಂಗತ ಬಂಗಾರಪ್ಪನವರ ಕರ್ಮಭೂಮಿ ಸೊರಬ ಕ್ಷೇತ್ರ. ಇಲ್ಲಿ ತಮ್ಮ ಜೀವಿತಕಾಲದಲ್ಲಿ ತಮ್ಮ ಇಬ್ಬರು ಪುತ್ರರನ್ನು ರಾಜಕೀಯ ಕಿತ್ತಾಟಕ್ಕಿಳಿಸಿದ ಕೀರ್ತಿ ಬಂಗಾರಪ್ಪನವರದ್ದು. ಕಳಂಕಿತ ಹರತಾಳ ಹಾಲಪ್ಪ ಯಡ್ಡಿ ಪಾರ್ಟಿ ಕ್ಯಾಂಡಿಡೇಟ್. ಕಾಂಗ್ರೆಸ್‌ನಿಂದ ಬಂ ಅವರ ಹಿರಿಯ ಮಗ ಕುಮಾರ ಬಂಗಾರಪ್ಪ ಸ್ಪರ್ಧಿಸಿದ್ದರೆ, ಕಿರಿಯ ಮಗ ಮಧು ಬಂಗಾರಪ್ಪ ಜೆಡಿಎಸ್ ಅಭ್ಯರ್ಥಿ.

ಈ ಮೂವರೂ ಈಡಿಗರು. ಈಡಿಗರು, ಲಿಂಗಾಯತರು, ಎಸ್‌ಸಿ, ಎಸ್‌ಟಿಗಳು ಪ್ರಬಲರಾಗಿರುವ ಕ್ಷೇತ್ರವಿದು. ಯಡ್ಡಿ ಲಿಂಗಾಯತರನ್ನು ಸೆಳೆಯಲು ದಂಡಾಮತಿ ಯೋಜನೆ ಅನುಷ್ಠಾನಕ್ಕೆ ಮುಂದಾಗಿ ಆ ನಿಟ್ಟಿನಲ್ಲಿ ಸಫಲರಾಗಿದ್ದಾರೆ. ಇನ್ನು ಈಡಿಗರ ಓಟುಗಳು ಬಂ ಸಹೋದರರು ಮತ್ತು ಹಾಲಪ್ಪನ ನಡುವೆ ಹಂಚಿಹೋಗುತ್ತವೆ. ಆದ್ದರಿಂದ ಯಾರು ಗೆಲ್ಲಬಹುದು ಎಂದು ಹೇಳಲಿಕ್ಕಾಗದ ಕ್ಷೇತ್ರವಿದು.

ಸಾಗರ

ಸಾಗರದಲ್ಲಿ ಕಾಂಗ್ರೆಸ್ ಮುತ್ಸದ್ದಿ 82 ರ ಹರೆಯದ ಕಾಗೋಡು ತಿಮ್ಮಪ್ಪ ಸತತ ಎರಡು ಬಾರಿ ಸೋಲುಂಡು ಈಗ ಮತ್ತೆ ಕಣಕ್ಕಿಳಿದಿದ್ದಾರೆ. ಕಾಗೋಡು ಅವರ ಅಳಿಯ ಪಕ್ಷಾಂತರಿ ಬೇಳೂರು ಗೋಪಾಲಕೃಷ್ಣ ಎಂಬ ಅಡ್ನಾಡಿ ಇಲ್ಲಿ ಜೆಡಿಎಸ್ ಅಭ್ಯರ್ಥಿ. ಇವರಿಬ್ಬರೂ ಈಡಿಗರು. ಶರಾವತಿ ರಾವ್ ಬಿಜೆಪಿ ಅಭ್ಯರ್ಥಿ. ಜಿಲ್ಲಾ ಪಂಚಾಯತಿಯ ಹಿರಿಯ ಸದಸ್ಯ ಬಿ.ಆರ್.ಜಯಂತ್ ಕೆಜೆಪಿ ಅಭ್ಯರ್ಥಿ. ಇವರಿಬ್ಬರು ಬ್ರಾಹ್ಮಣರು. ಜಯಂತ್ ಉತ್ತಮ ರಾಜಕಾರಣಿ ಎಂಬ ಹೆಸರಿದೆ. ಆದರೂ ತತ್ವ-ಸಿದ್ಧಾಂತ ಮುಖ್ಯ ಕೋಮುವಾದಿಗಳ ವಿರೋಧಿ ತಾನು ಎನ್ನುತ್ತಲೇ ಜೆಡಿಯು, ಜೆಡಿಎಸ್, ಕೆಸಿಪಿ, ಕಾಂಗ್ರೆಸ್, ಈಗ ಕೆಜೆಪಿಗೆ ಪ್ರವೇಶ ಪಡೆದಿರುವ ಜಯಂತ್ ಬಗ್ಗೆ ಜನರಲ್ಲಿ ಒಂದು ರೀತಿಯ ಬೇಸರ ಇದೆ.

ಬೇಳೂರು ಗೋಪಾಲಕೃಷ್ಣನ ಆರ್ಭಟಕ್ಕೆ ಸದ್ಯ ಇತರೆ ಅಭ್ಯರ್ಥಿಗಳು ದಂಗು ಬಡಿದಿದ್ದಾರೆ. ಸಾಂಪ್ರದಾಯಕವಾಗಿ ಕಾಂಗ್ರೆಸ್ ಕ್ಷೇತ್ರವಾಗಿದ್ದ ಸಾಗರದಲ್ಲಿ ಬ್ರಾಹ್ಮಣರು-ಈಡಿಗರು ಸಮಸಂಖ್ಯೆಯಲ್ಲಿದ್ದಾರೆ. ಜೊತೆಗೆ 10-15 ಸಾವಿರ ಲಿಂಗಾಯತ ಮತದಾರರಿದ್ದಾರೆ.

ಎರಡು ಬಾರಿ ಸೋಲು ಕಂಡಿರುವ ಕಾಗೋಡು ಬಗ್ಗೆ ಮತದಾರರಲ್ಲಿ ಅನುಕಂಪವಿದೆ. ಹಾಗೆಯೇ ಬೇಳೂರು ಗೋಪಾಲಕೃಷ್ಣನ ಅಟ್ಟಹಾಸದ ಬಗ್ಗೆ ಜಿಗುಪ್ಸೆ ಇದೆ. ಕಣದಲ್ಲಿರುವ ಎಲ್ಲರಿಗಿಂತ ಕಾಗೋಡು ಉತ್ತಮ ಅಭ್ಯರ್ಥಿ.

ತೀರ್ಥಹಳ್ಳಿ

ತೀರ್ಥಹಳ್ಳಿಯಲ್ಲಿ ಹಾಲಿ ಶಾಸಕ ಕಾಂಗ್ರೆಸ್‌ನ ಕಿಮ್ಮನೆ ರತ್ನಾಕರ್ ಬಿಜೆಪಿಯ ಆರಗ ಜ್ಞಾನೇಂದ್ರನನ್ನು ಗಟ್ಟಿಯಾಗಿಯೇ ಎದುರಿಸುತ್ತಿದ್ದಾರೆ. ಇಲ್ಲಿ ಜೆಡಿಎಸ್‌ನಿಂದ ಮದನ್ ಮತ್ತು ಕೆಜೆಪಿಯಿಂದ ಮಂಜುನಾಥ ಗೌಡರು ಸ್ಪರ್ಧಿಸುತ್ತಿದ್ದಾರೆ. ಇಲ್ಲಿ ಒಕ್ಕಲಿಗ ಮತದಾರರೇ ಬಹುಸಂಖ್ಯೆಯಲ್ಲಿದ್ದಾರೆ. ಕಣದಲ್ಲಿರುವ ನಾಲ್ವರು ಅಭ್ಯರ್ಥಿಗಳೂ ಒಕ್ಕಲಿಗ ಸಮುದಾಯದವರೇ.

ಸ್ವಚ್ಛ ಕೈ, ಬಾಯಿ, ಜನಪರ ಕಾಳಜಿ, ಉತ್ತಮ ವಾಗ್ಮಿಯೂ ಆದ ಕಿಮ್ಮನೆ ರತ್ನಾಕರ್ ಅವರು ಗೆದ್ದರೆ ತೀರ್ಥಹಳ್ಳಿಗೆ ಒಂದು ಕೀರ್ತಿ. ಇಲ್ಲಿ ತೀವ್ರ ಪೈಪೋಟಿ ಇದ್ದು ಗೆಲುವು ಫೋಟೋ ಫಿನಿಶ್ ಆದರೆ ಅಚ್ಚರಿ ಇಲ್ಲ. ○

ಮೈಸೂರು: ಗಿಲೀಟು, ಗಿಮ್ಮಿಕ್ಕು, ಹಣದ ಹೊಳೆ

ಮೈಸೂರು ಜಿಲ್ಲೆಯಲ್ಲಿ ದಿನೇದಿನೇ ಚುನಾವಣೆಯ ಕಾವು ಏರುತ್ತಿದೆ. ರಾಜಕಾರಣಿಗಳಿಗೆ ಮತದಾರರ ಮನೆಬಾಗಿಲುಗಳು ನೆನಪಾಗಿವೆ; ಜನರನ್ನು ಯಾಮಾರಿಸಲು ಹಳೆಯ ವಿಧಾನಗಳು ಉಪಯೋಗಕ್ಕೆ ಬಾರದಿದ್ದಾಗ ಹೊಸಹೊಸ 'ಸೃಜನಶೀಲ' ವಿಧಾನಗಳ ಮೊರೆ ಹೋಗುತ್ತಿದ್ದಾರೆ.

ಕೃಷ್ಣರಾಜ

ಗಿಲೀಟು, ಗಿಮ್ಮಿಕ್ಕುಗಳಲ್ಲಿ ಬಿಜೆಪಿ ಸಚಿವ ರಾಮದಾಸ ವಿಶೇಷ ಪರಿಣತಿಯನ್ನೇ ಪಡೆದಿದ್ದಾನೆ. ಜನರನ್ನು ಯಾಮಾರಿಸುವ ಕಲೆಗೆ ಒಂದು ವೇಳೆ ಯಾರಾದರೂ ಸ್ಪರ್ಧೆ ಏರ್ಪಡಿಸಿದರೆ ಅದರಲ್ಲಿ ಮೈಸೂರು ಸಚಿವ ರಾಮದಾಸ್ ಪ್ರಥಮ, ದ್ವಿತೀಯ ಹಾಗೂ ತೃತೀಯ ಮೂರೂ ಪದಕಗಳನ್ನು ಗೆಲ್ಲುವುದು ಗ್ಯಾರಂಟಿ. ಯಾಕೆಂದರೆ ಆತನ ಗಿಮಿಕ್‌ನ ಲೆವೆಲ್ಲೇ ಅಂಥಾದ್ದು. ಉಳಿದವರಾರೂ ಈ ಸ್ಪರ್ಧೆಯಲ್ಲಿ ರಾಮದಾಸನ ಪ್ರತಿಭೆಗೆ ಹೋಲಿಕೆಯೇ ಅಲ್ಲ.

ಈ ಮಂತ್ರಿ ಕಳೆದ ಐದು ವರ್ಷಗಳಲ್ಲಿ ಬಹಳ ಬ್ಯುಸಿಯಾಗಿದ್ದರು. ಎಷ್ಟು ಬ್ಯುಸಿಯೆಂದರೆ ಸರ್ಕಾರದಿಂದ ಅನಾಯಾಸವಾಗಿ ಬರುವ ಎಂಎಲ್‌ಎ ಫಂಡನ್ನು ಕೂಡ ಸಮರ್ಪಕವಾಗಿ ಬಳಸಿಕೊಳ್ಳಲಾಗದಷ್ಟು ಬ್ಯುಸಿ. ರಿಯಲ್ ಎಸ್ಟೇಟು, ಸರ್ಕಾರಿ ಭೂಮಿ ಡೀಲು, ಟ್ರಾನ್ಸ್‌ಫರ್ ದಂಧೆ, ನೇಮಕಾತಿ ಡೀಲು ಇತ್ಯಾದಿಗಳಲ್ಲೇ ಅವರು ಬ್ಯುಸಿ ಆಗಿದ್ದರು. ಇಷ್ಟೆಲ್ಲಾ ಡೀಲುಗಳಿರುವಾಗ ಮತದಾರರ ಋಣ ತೀರಿಸಲು ಪಾಪ ಅವರಿಗೆ ಪುರುಸೊತ್ತಾದರೂ ಎಲ್ಲಿತ್ತು ಹೇಳಿ? ಆದರೆ ಚುನಾವಣೆಯೆಂಬ ಅನಿವಾರ್ಯ ಕರ್ಮ ಇರೋದರಿಂದ, ಚುನಾವಣೆಗಾಗಿ ರಾಮದಾಸ ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡಿದ್ದರು (ಪುಟ ಮೂರರಲ್ಲಿ ಇರುವ ವರದಿ ನೋಡಿ).

ಈ ಬಾರಿ ಸೋಲುವುದು ರಾಮದಾಸ್ ಎಂಬುದನ್ನು ಅನುಮಾನಕ್ಕೆಡೆ ಇಲ್ಲದಂತೆ ಹೇಳಬಹುದಾದರೂ ಗೆಲ್ಲುವ ಅಭ್ಯರ್ಥಿ ಯಾರೆಂಬುದನ್ನು ಅಷ್ಟೇ ಖಚಿತವಾಗಿ ಹೇಳಲಾಗದ ಸ್ಥಿತಿ ಇಲ್ಲಿದೆ. ರಾಜ್ಯಾದ್ಯಂತ ಇರುವಂತೆ ಕಾಂಗ್ರೆಸ್‌ಗೆ ಅನುಕೂಲಕರ ಅಲೆ ಇಲ್ಲೂ ಇದೆ. ಕಾಂಗ್ರೆಸ್‌ನ ಅಭ್ಯರ್ಥಿ ಸೋಮಶೇಖರ್ ಈ ಹಿಂದೆ ಒಮ್ಮೆ ಶಾಸಕರಾಗಿದ್ದವರು. ಸಜ್ಜನ, ಪ್ರಾಮಾಣಿಕ ಎಂದು ಹೆಸರು ಮಾಡಿದ್ದಾರೆ. ಜೊತೆಗೆ ಕ್ಷೇತ್ರದಲ್ಲಿ ಎರಡನೇ ಅತಿ ದೊಡ್ಡ ಜಾತಿಯಾದ ಕುರುಬ ಜಾತಿಗೆ ಸೇರಿದವರು. ಹೀಗಾಗಿ ಇವರು ಗೆಲ್ಲಬಹುದಾದ ಅಭ್ಯರ್ಥಿಯೆನಿಸಿಕೊಂಡಿದ್ದಾರೆ. ಆದರೆ ಕೆಜೆಪಿಯಿಂದ ಸ್ಪರ್ಧಿಸಿರುವ ರಾಜೀವ್ ಕ್ಷೇತ್ರದಾದ್ಯಂತ ಭಾರೀ ಸಂಚಲನ ಮೂಡಿಸಿದ್ದಾರೆ. ಬ್ರಾಹ್ಮಣ ಜನಾಂಗದ ಈ ವ್ಯಕ್ತಿ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದರೂ ರಾಮದಾಸ್‌ನಂತೆ ಹೆಸರು ಕೆಡಿಸಿಕೊಂಡಿಲ್ಲ, ಸುಳ್ಳು ಪೊಳ್ಳು ಆಶ್ವಾಸನೆಗಳನ್ನು ನೀಡಿ ಯಾಮಾರಿಸಿದ ಇತಿಹಾಸವಿಲ್ಲ. ಹೀಗಾಗಿ ರಾಜೀವ್ ಹಾಗೂ ಸೋಮಶೇಖರ್ ನಡುವೆ ತೀವ್ರ ಪೈಪೋಟಿ ನಡೆಯುತ್ತಿದೆ. ಜೆಡಿಎಸ್‌ನಿಂದ ಎಚ್.ವಾಸು ಎಂಬ ಅಭ್ಯರ್ಥಿ ಇದ್ದರೂ ಅವರು ಗೆಲ್ಲುವ ಅಭ್ಯರ್ಥಿಯೆನಿಸಿಕೊಂಡಿಲ್ಲ.

ರಾಮದಾಸ ಹಣದ ಹೊಳೆಯನ್ನೇ ಹರಿಸುತ್ತಿದ್ದರೂ ಮೂರನೇ ಅಥವಾ ನಾಲ್ಕನೇ ಸ್ಥಾನಕ್ಕೆ ಇಳಿಯುವುದು ಗ್ಯಾರಂಟಿ ಎಂಬುದು ಕ್ಷೇತ್ರದೆಲ್ಲೆಡೆ ಕೇಳಿಬರುತ್ತಿರುವ ಮಾತು.

ವರುಣ

ರಾಮದಾಸ್ ತಾನು ಗೆಲ್ಲಲೇಬೇಕೆಂದು ಕೃಷ್ಣರಾಜ ಕ್ಷೇತ್ರದಲ್ಲಿ ಹಣದ ಹೊಳೆಯನ್ನೇ ಹರಿಸುತ್ತಿದ್ದರೆ ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯನವರನ್ನು ಸೋಲಿಸಲೇಬೇಕೆಂಬ ಹಠದಲ್ಲಿ ಕೆಜೆಪಿ ಅಭ್ಯರ್ಥಿ ಕಾಪು ಸಿದ್ದಲಿಂಗಸ್ವಾಮಿ ಹಣವನ್ನು ನೀರಿನಂತೆ ಚೆಲ್ಲುತ್ತಿದ್ದಾನೆ.

ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ಜಾತಿಗಳು ಹಾಗು ಎಲ್ಲ ಪ್ರಗತಿಪರ ಶಕ್ತಿಗಳೂ ಮುಖ್ಯಮಂತ್ರಿ ಅಭ್ಯರ್ಥಿಯೆಂದೇ ಬಿಂಬಿತವಾಗಿರುವ ಸಿದ್ದರಾಮಯ್ಯನವರಲ್ಲಿ ಭವಿಷ್ಯದ ನಾಯಕನನ್ನು ಕಂಡುಕೊಂಡಿದ್ದಾರೆ ಎಂದರೆ ತಪ್ಪಾಗಲಾರದು. ಅದರಲ್ಲೂ ಹಳೆ ಮೈಸೂರು ಪ್ರಾಂತ್ಯದಲ್ಲಿ ಸಿದ್ದರಾಮಯ್ಯ ಅಹಿಂದ ವರ್ಗಗಳ ಅನಭಿಷಕ್ತ ನಾಯಕ. ಯಾಕೆಂದರೆ ಚಿಲ್ಲರೆ ಜಾತಿ ರಾಜಕಾರಣಕ್ಕೆ ಸಿದ್ದರಾಮಯ್ಯ ಇಳಿದ ಉದಾಹರಣೆಗಳಿಲ್ಲ, ಆದರೆ ಯಡ್ಡಿ ಶಿಷ್ಯ ಮತ್ತು ಕೆಜೆಪಿ ಅಭ್ಯರ್ಥಿ ಸಿದ್ದಲಿಂಗಸ್ವಾಮಿ ಹಾಗೂ ಯಡ್ಡಿಯ ಪಟಾಲಂ ಸಿದ್ದರಾಮಯ್ಯನ ವಿರುದ್ಧ ಹೀನಾತಿಹೀನ ಪ್ರಚಾರಕ್ಕೆ ಇಳಿದಿದ್ದಾರೆ. ಸಿದ್ದರಾಮಯ್ಯ ಜಾತಿವಾದಿ, ಕೇವಲ ಕುರುಬರ ಹುಂಡಿಗಳನ್ನಷ್ಟೇ ಅಭಿವೃದ್ಧಿ ಮಾಡಿದ್ದಾನೆ ಇತ್ಯಾದಿ ವಾದಗಳನ್ನು ತೇಲಿಬಿಟ್ಟಿದ್ದಾರೆ. ಎಲ್ಲಕ್ಕಿಂತ ಅಪಾಯಕಾರಿ ಅಪಪ್ರಚಾರವೇನೆಂದರೆ ಪರಮೇಶ್ವರ್ ಅಥವಾ ಖರ್ಗೆ ಮುಖ್ಯಮಂತ್ರಿಯಾಗಲು ಸಿದ್ದು ಅಡ್ಡಗಾಲಾಗಿದ್ದಾರೆ, ಆದ್ದರಿಂದ ಸಿದ್ದರಾಮಯ್ಯನನ್ನು ಸೋಲಿಸಿದರೆ ದಲಿತ ಅಭ್ಯರ್ಥಿಯೊಬ್ಬ ಮುಖ್ಯಮಂತ್ರಿಯಾಗುತ್ತಾನೆ ಎಂಬುದೇ ಅವರು ಹಬ್ಬಿಸುತ್ತಿರುವ ಅಪಪ್ರಚಾರ.

ಇನ್ನು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಚೆಲುವರಾಜು ಎಂಬ ಅಭ್ಯರ್ಥಿ ಕೂಡ ಸಿದ್ದರಾಮಯ್ಯನನ್ನು ಸೋಲಿಸುವುದೇ ಟಾರ್ಗೆಟ್ ಮಾಡಿಕೊಂಡಿದ್ದಾರೆ.

ಸಿದ್ದರಾಮಯ್ಯ ರಾಜ್ಯದಾದ್ಯಂತ ಪ್ರಚಾರದಲ್ಲಿರುವುದರಿಂದ ತನ್ನ ಸ್ವಕ್ಷೇತ್ರದತ್ತ ಇನ್ನೂ ಗಮನಹರಿಸಿಲ್ಲ, ಆದರೆ ಸಿದ್ದರಾಮಯ್ಯನ ಪರವಾಗಿ ಕೆಲಸ ಮಾಡುವ ನಾಯಕರ ಹಾಗೂ ಕಾರ್ಯಕರ್ತರ ದಂಡೇ ಇಲ್ಲಿದೆ. ಪ್ರಚಾರದ ಮುಂಚೂಣಿಯಲ್ಲಿ ಸಿದ್ದು ಪುತ್ರ ರಾಕೇಶ್ ಇದ್ದಾರೆ. ಕಳೆದ ಬಾರಿ ಸಿದ್ದು ವಿರುದ್ಧ ಸ್ಪರ್ಧಿಸಿ ಭಾರೀ ಪೈಪೋಟಿ ಒಡ್ಡಿದ್ದ ಲಿಂಗಾಯತ ಜಾತಿಯ ನಿವೃತ್ತ ಪೊಲೀಸ್ ಅಧಿಕಾರಿ ರೇವಣ್ಣಸಿದ್ದಯ್ಯ ಈಗ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಅಷ್ಟು ಮಾತ್ರವಲ್ಲ, ಇವರ ಜೊತೆಗೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಸವೇಗೌಡ ಕೂಡ ಸಿದ್ದು ಪರವಾಗಿ ಬಿರುಸಿನ ಪ್ರಚಾರದಲ್ಲಿದ್ದಾರೆ. ತಮ್ಮ ಜಾತಿಯ ಒಳಗಡೆ ಇವರಿಗೆ ತಮ್ಮದೇ ಆದ ಬೆಂಬಲಿಗರಿದ್ದು ಈ ಅಂಶ ಸಿದ್ದು ಬೆಂಬಲಕ್ಕೆ ಬರಲಿದೆ.

ಸಿದ್ದು ವಿರೋಧಿಗಳಿಗೆ ಅಕ್ರಮ ಹಣ ಹಾಗೂ ಜಾತಿವಾದಗಳೇ ಆಧಾರವಾಗಿದ್ದರೆ, ಸಿದ್ದುಗೆ ಅಹಿಂದ ಮತ್ತು ಜಾತ್ಯಾತೀತ ಮತಗಳೇ ಆಧಾರ. ಕಾಂಗ್ರೆಸ್‌ನವರ ದೊಡ್ಡ ಜಾಢ್ಯವಾದ ಸೋಮಾರಿತನಕ್ಕೆ ಕಟ್ಟುಬೀಳದೆ ಸಿದ್ದು ಮತ್ತು ಬೆಂಬಲಿಗರು ಸಾಕಷ್ಟು ಬೆವರು ಹರಿಸಿದರೆ ಗೆಲುವು ನಿಶ್ಚಿತ.

ಹೆಗ್ಗಡದೇವನಕೋಟೆ

ಇದು ಪರಿಶಿಷ್ಟ ಪಂಗಡ (ಎಸ್.ಟಿ) ಮೀಸಲು ಕ್ಷೇತ್ರ. ಜಾತಿ ಶ್ರೇಣೀಕೃತವಾಗಿರುವ ನಮ್ಮ ಸಮಾಜದಲ್ಲಿ ಅದೆಂಥದೇ ಮೀಸಲಾತಿ ಬಂದರೂ ಕೂಡ ಅದು ಮತ್ತೆ ಆ ವರ್ಗದ ಕೆನೆಪದರಕ್ಕೆ ಸೀಮಿತವಾಗುತ್ತಿರುವುದು ಒಂದು ದೊಡ್ಡ ದುರಂತ. ಈ ಮೀಸಲು ಕ್ಷೇತ್ರಗಳ ಹಣೆಬರಹವೂ ಇಷ್ಟೆ. ಎಸ್‌ಟಿ ಕೆಟಗರಿಗಳಲ್ಲೇ ಒಂದಷ್ಟು ಶಕ್ತಿ ಸಾಮರ್ಥ್ಯಗಳಿಸಿರುವ ಜಾತಿಗಳೇ ಇಲ್ಲಿ ಮುಂಚೂಣಿಯಲ್ಲಿವೆ. ಆದರೆ ಬಿಎಸ್‌ಪಿ ಯಿಂದ ಸ್ಪರ್ಧಿಸಿರುವ ಜೆ.ಕೆ.ಗೋಪಾಲ ಜೇನುಕುರುಬ ಜಾತಿಗೆ ಸೇರಿದವರು. ಪರಿಶಿಷ್ಟ ಜಾತಿಗಳ ಕೆಟಗರಿಯಲ್ಲೇ ಅತ್ಯಂತ ಹಿಂದುಳಿದ ಜಾತಿಯಿದು. ಈ ಕ್ಷೇತ್ರದಲ್ಲಿ ಜೇನು ಕುರುಬರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಬಿಎಸ್‌ಪಿ ಗೋಪಾಲರನ್ನು ಕಣಕ್ಕಿಳಿಸಿದೆ.

ಮಾಮೂಲಿಯಂತೆ ಬಿಎಸ್‌ಪಿ ಸಿದ್ಧಾಂತ 'ಗೆಲ್ಲಲಾಗದಿದ್ದರೂ ಸೋಲಿಸುತ್ತೇವೆ' ಎಂಬುದೇ ಆದ್ದರಿಂದ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಓಟಕ್ಕೆ ಅಡ್ಡಗಾಲು ಹಾಕುವ ಸಾಧ್ಯತೆಯಿದೆ. ಕಾಂಗ್ರೆಸ್‌ನಿಂದ ಹಾಲಿ ಎಂಎಲ್‌ಎ ಚಿಕ್ಕಣ್ಣ ನಿಂತಿದ್ದಾರೆ. ಚಿಕ್ಕಣ್ಣ ಇರುವುದರಲ್ಲಿ ಸಭ್ಯ ಅಭ್ಯರ್ಥಿಯೆನಿಸಿಕೊಂಡಿದ್ದಾರೆ. ಸಾಲದ್ದಕ್ಕೆ ಸಿದ್ದು ಶಿಷ್ಯ.

ಇನ್ನು ಜೆಡಿಎಸ್‌ನಿಂದ ಚಿಕ್ಕಮಾಧು ಸ್ಪರ್ಧಿಸಿದ್ದಾರೆ. ಇವರು ಕ್ಷೇತ್ರಕ್ಕೆ ಹೊಸಬರು. ಮೂಲತಃ ಹುಣಸೂರು ಕ್ಷೇತ್ರದಲ್ಲಿ ಈತ ಜೆಡಿಎಸ್‌ನ ಪ್ರಭಾವಿ ನಾಯಕರಾಗಿದ್ದವರು. ಅಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದವರು. ಆದರೆ ದೇವೇಗೌಡರ ರಾಜಕೀಯ ಒಳತಂತ್ರಗಳ ಬಲಿಪಶುವಾಗಿ ಈತ ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಅಲ್ಲಿಂದ ವಲಸೆ ಬಂದು ಎಚ್.ಡಿ.ಕೋಟೆಯಲ್ಲಿ ಸ್ಪರ್ಧಿಸಬೇಕಾಯ್ತು, ಹೀಗಾಗಿ ಇಲ್ಲಿ ನೆಲೆ ಕಂಡುಕೊಳ್ಳುವುದು ಸುಲಭದ ಮಾತಲ್ಲ.



ರಾಮದಾಸ್ | ಸೋಮಶೇಖರ್ | ಸಿದ್ಧಲಿಂಗಸ್ವಾಮಿ | ಸಿದ್ರಾಮಯ್ಯ | ಚಿಕ್ಕಮಾದು | ಶ್ರೀನಿವಾಸ್‌ಪ್ರಸಾದ್

ಜಿ.ಟಿ.ದೇವೇಗೌಡ | ಶಂಕರಲಿಂಗೇಗೌಡ | ನಾಗೇಂದ್ರ | ವಾಸು | ತನ್ವೀರ್ ಸೇಠ್ | ಸಂದೇಶ್‌ಸ್ವಾಮಿ

ಬಿಜೆಪಿ ಸಿದ್ದರಾಜು ಎಂಬ ಜಿಲ್ಲಾಧ್ಯಕ್ಷನನ್ನು ಕಣಕ್ಕಿಳಿಸಿದೆ. ಇನ್ನುಳಿದಂತೆ ಕೆಜೆಪಿ, ಬಿಎಸ್‌ಆರ್ ಇತ್ಯಾದಿ ಕ್ಯಾಂಡಿಡೇಟ್‌ಗಳು ಇದ್ದಾರಾದರೂ ಅವರೆಲ್ಲ ಆಟಕ್ಕೆ ಮಾತ್ರ.

ಇಲ್ಲಿ ಸ್ಪರ್ಧೆ ಏನಿದ್ದರೂ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ಗಳ ಮಧ್ಯೆ ಇದೆಯಾದರೂ ಸದ್ಯದ ಸ್ಥಿತಿಯಲ್ಲಿ ಕಾಂಗ್ರೆಸ್ ಒಂದು ಹೆಜ್ಜೆ ಮುಂದಿದೆ ಎಂದೇ ಹೇಳಬಹುದು.

ನಂಜನಗೂಡು

ಇದು ಪರಿಶಿಷ್ಟ ಜಾತಿ (ಎಸ್.ಸಿ) ಮೀಸಲು ಕ್ಷೇತ್ರ. ಹಿರಿಯ ರಾಜಕಾರಣಿ ವಿ.ಶ್ರೀನಿವಾಸಪ್ರಸಾದ್ ಹಾಲಿ ಶಾಸಕರು. ಅವರು ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಮತ್ತೆ ಸ್ಪರ್ಧಿಸಿದ್ದಾರೆ. ಕಳೆದ ಬಾರಿ ಇವರಿಗೆ ತೀವ್ರ ಪೈಪೋಟಿ ನೀಡಿದ್ದ ಬಿಜೆಪಿ ಅಭ್ಯರ್ಥಿ ಮಹದೇವಯ್ಯ ಈ ಬಾರಿ ಕೆಜೆಪಿ ಅಭ್ಯರ್ಥಿಯಾಗಿದ್ದಾರೆ. ಬೆಂಕಿ ಮಹದೇವ್ ಹಿನ್ನೆಲೆಯಲ್ಲಿದ್ದುಕೊಂಡು ಜೆಡಿಎಸ್‌ನಿಂದ ಕಳಲೆ ಕೇಶವಮೂರ್ತಿ ಎಂಬುವವರನ್ನು ಕಣಕ್ಕಿಳಿಸಿದ್ದಾರೆ. ಬಿಜೆಪಿಗೆ ಅಭ್ಯರ್ಥಿಯ ಕೊರತೆ ಉಂಟಾಗಿ ಕೊನೆಗೆ ಡಾ.ಶಿವರಾಂರನ್ನು ಅಭ್ಯರ್ಥಿಯಾಗಿ ಇಳಿಸಿದೆ.

ಕೆಜೆಪಿ-ಬಿಜೆಪಿ ಕಚ್ಚಾಟದಲ್ಲಿ ಕಾಂಗ್ರೆಸ್‌ಗೆ ಲಾಭವಾಗಲಿದೆ ಎಂಬುದೇನೋ ನಿಜ. ಆದರೆ ಜೆಡಿಎಸ್ ಈ ಬಾರಿ ಸಾಕಷ್ಟು ಸುಧಾರಿಸಿಕೊಂಡಿದೆ. ಈ ಅವಧಿಯಲ್ಲಿ ಶ್ರೀನಿವಾಸ್‌ಪ್ರಸಾದ್ ತೀವ್ರ ಅನಾರೋಗ್ಯಕ್ಕೆ ಗುರಿಯಾಗಿ ರಾಜಕಾರಣದಲ್ಲಿ ಮೊದಲಿನಂತೆ ಸಕ್ರಿಯವಾಗಿ ತೊಡಗಿಸಿ ಕೊಳ್ಳಲು ಅಡ್ಡಿಯಾಗಿದ್ದರ ಲಾಭವನ್ನು ಪಡೆದುಕೊಳ್ಳಲು ಜೆಡಿಎಸ್ ಪ್ರಯತ್ನಿಸುತ್ತಿದೆ.

ಸಜ್ಜನ ರಾಜಕಾರಣಿ ಎನಿಸಿಕೊಂಡಿರುವ ಶ್ರೀನಿವಾಸ್ ಪ್ರಸಾದ್ ಎಲ್ಲಾ ವರ್ಗಗಳ ಮನ್ನಣೆ ಗಳಿಸಿರುವ ವ್ಯಕ್ತಿ, ಕಳ್ಳಕಾಕರನ್ನು ಗೆಲ್ಲಿಸುವ ಬದಲು ಸಜ್ಜನರನ್ನು ಗೆಲ್ಲಿಸುವುದೇ ಸರ್ವವಿಧದಲ್ಲೂ ಸೂಕ್ತ ಎಂಬುದು ಮತದಾರರಿಗೆ ಗೊತ್ತಿರುವ ವಿಷಯ.

ಚಾಮುಂಡೇಶ್ವರಿ

ಇದು ಮೈಸೂರಿನ ಮತ್ತೊಂದು ಪ್ರತಿಷ್ಠಿತ ಕ್ಷೇತ್ರ. ಮೈಸೂರು ನಗರದ ಅರ್ಧ ಭಾಗವನ್ನು ಮತ್ತು ಸುತ್ತಮುತ್ತಲ ಹಳ್ಳಿಗಳನ್ನು ಒಳಗೊಂಡಿರುವ ಕ್ಷೇತ್ರ. ಈ ಹಿಂದೆ ಉಪಚುನಾವಣೆಯಲ್ಲಿ ಸಿದ್ದರಾಮಯ್ಯನನ್ನು ಸೋಲಿಸಲು ಎಲ್ಲಾ ಪಕ್ಷಗಳೂ ಒಂದಾಗಿ ಕುರುಕ್ಷೇತ್ರವನ್ನೇ ನಡೆಸಿ ಕೊನೆಗೆ ಮುಖಭಂಗ ಎದುರಿಸಿದ್ದು ಇದೇ ಕ್ಷೇತ್ರದಲ್ಲೇ. ಇಂಥಾ ಕ್ಷೇತ್ರದಲ್ಲಿ ಹಾಲಿ ಶಾಸಕರಾಗಿ ಕಾಂಗ್ರೆಸ್‌ನ ಸತ್ಯನಾರಾಯಣ ಇದ್ದಾರೆ. ಈ ವ್ಯಕ್ತಿ ನಿರುಪದ್ರವಿ, ಯಾರಿಗೂ ತೊಂದರೆ ಕೊಟ್ಟವರಲ್ಲ ಎಂಬುದನ್ನು ಅವರ ವಿರೋಧಿ ಪಕ್ಷದವರೂ ಒಪ್ಪುತ್ತಾರೆ. ಆದರೆ ಈ ಐದು ವರ್ಷ ಇವರ ಸಾಧನೆ ಏನು ಎಂದು ಪ್ರಶ್ನಿಸಿದರೆ ಕಾಂಗ್ರೆಸ್‌ನ ಅನುಯಾಯಿಗಳಿಗೂ ಹೇಳಲು ಹೆಚ್ಚೇನಿಲ್ಲ.

ಇಂಥಾ ಕ್ಷೇತ್ರಕ್ಕೆ ಅವಕಾಶವಾದಿ ಹಾಗೂ ಭ್ರಷ್ಟ ಎಂದೇ ಕುಖ್ಯಾತನಾಗಿರುವ ಜಿ.ಟಿ.ದೇವೇಗೌಡರ ಆಗಮನವಾಗಿದೆ. ಯಾವ ಪಕ್ಷದಿಂದ ಎಂದು ಯಾರಿಗಾದರೂ ಗೊಂದಲವಾಗಬಹುದು; ಈ ಬಾರಿ ಅವರು ಕಾಂಗ್ರೆಸ್‌ನ ಅಲೆಹಿಡಿದು ಅತ್ತ ಕಡೆ ವಾಲಿದ್ದರೂ, ಅಲ್ಲಿ ಅಪಶಕುನಗಳು ಎದುರಾಗಿ ಜೆಡಿಎಸ್ ಪಕ್ಷಕ್ಕೆ ಜಿಗಿದು, ಅಲ್ಲಿ ಅಭ್ಯರ್ಥಿಯಾಗಿಬಿಟ್ಟಿದ್ದಾನೆ.

ಕಳೆದ ಬಾರಿ ಆಪರೇಷನ್ ಕಮಲಕ್ಕೆ ಒಳಗಾಗಿ ಹುಣಸೂರಿನಿಂದ ಸೋತ ಈ ಮನುಷ್ಯನಿಗೆ ಬಿಜೆಪಿಯವರು ಗೃಹ ಮಂಡಳಿ ಚೇರ್ಮನ್ ಪದವಿ ದಯಪಾಲಿಸಿದ್ದರು. ಅದು ಜಿ.ಟಿ.ದೇವೇಗೌಡನ ಘನತೆಗಾಗಿ ಕೊಟ್ಟ[...] ಆಗಿರಲಿಲ್ಲ, ಬದಲಿಗೆ ಮೈಸೂರು ಪ್ರಾಂತ್ಯದ ಒಕ್ಕಲಿಗ ಸಮುದಾ[...] ತನ್ನತ್ತ ಸೆಳೆಯುವ ತಂತ್ರದ ಭಾಗವಾಗಿತ್ತು, ಆದರೆ ಈ ಜಿ.ಟಿ ಚೆಡ್ಡಿಗ[...] ಚತುರ. ಅಧಿಕಾರ ಇದ್ದಷ್ಟೂ ಕಾಲ ತಿಂದುಂಡು ಕೊಬ್ಬಿ ನಾನಾ ಹಗ[...] ರಾಡಿ ಸೃಷ್ಟಿಸಿ, ಕೇಸುಗಳನ್ನೂ ಹಾಗೂ ಕಳ್ಳಗಂಟನ್ನೂ ಹೆಗಲ ಮೇಲೆ [...] ತಾನೇ ಜರಿದಿದ್ದ ಪಕ್ಷಕ್ಕೆ ಸೇರ್ಪಡೆಯಾಗಿದ್ದಾನೆ.

ಇನ್ನು ಬಿಜೆಪಿಯಿಂದ ಎ.ಹೇಮಂತಕುಮಾರ್ ಗೌಡ ಎಂಬು[...] ಕಣಕ್ಕಿಳಿದಿದ್ದರೆ, ಕೆಜೆಪಿಯಿಂದ ಎಂ.ಅಪ್ಪಣ್ಣ ಎಂಬ ಉಪ್ಪಾರ ಸಮುದ[...] ಅಭ್ಯರ್ಥಿ ನಿಂತಿದ್ದಾರೆ. ಆದರೆ ಇಲ್ಲಿ ಸ್ಪರ್ಧೆ ಇರುವುದು ಜೆಡಿಎಸ್ [...] ಕಾಂಗ್ರೆಸ್ ನಡುವೆ ಮಾತ್ರ. ಜಿಟಿ ಇಲ್ಲಿ ಬಹಳ ಗದ್ದಲ ಎಬ್ಬಿಸು[...] ಗೆಲ್ಲುವ ಅವಕಾಶ ತೀರಾ ಕಡಿಮೆ. ಯಾಕೆಂದರೆ ಈ ವ್ಯಕ್ತಿಯ [...] ಅವತಾರಗಳನ್ನು ಈಸ್ಟ್‌ಮನ್ ಕಲರ್‌ನಲ್ಲಿ ನೋಡಿರುವ ಜನತೆ ಅಷ್ಟು ಸುಲ[...] ಈತನ ಆಮಿಷಕ್ಕೆ ಬಲಿಯಾಗಲಾರರು. ಅದಕ್ಕಿಂತ ಮುಖ್ಯವಾಗಿ ಈ [...] ಜೊತೆ ಸಿದ್ದರಾಮಯ್ಯನವರಿಗೆ ಅವಿನಾಭಾವ ಸಂಬಂಧವಿದ್ದು ಕ್ಷೇತ್ರದ[...] ಸಿದ್ದು ಸಿಎಂ ಆಗಲಿ ಎಂದು ಮತ್ತೆ ಸತ್ಯನಾರಾಯಣರನ್ನು ಗೆಲ್ಲಿಸುವ ಸಾಧ್ಯ[...] ಹೆಚ್ಚು.

ಚಾಮರಾಜ

ಕಳೆದ ಅವಧಿಯಲ್ಲಿ ಬಿಜೆಪಿ ಶಾಸಕ ಶಂಕರಲಿಂಗೇಗೌಡ ಈ ಕ್ಷೇ[...] ಪ್ರತಿನಿಧಿಸಿದ್ದರು. ಅವರು ಸತತ ನಾಲ್ಕು ಬಾರಿ ಗೆದ್ದಿದ್ದರೂ [...] ಸಚಿವ ಪದವಿಯಿಂದ ವಂಚಿಸಿದ ಬಿಜೆಪಿಯವರು ವಲಸೆ ರಾಜ[...] ಬ್ರಾಹ್ಮಣ ಜಾತಿಯ ರಾಮದಾಸ್‌ನನ್ನು ಮಂತ್ರಿ ಮಾಡಿದ್ದರ[...] ಶಂಕರಲಿಂಗೇಗೌಡ ಬಂಡಾಯ ಹೂಡಿದರು. ಕಳೆದ ಮೂರು ವ[...] ಕಾಲ ನಡೆದ ಅವರ ಬಂಡಾಯ ಈಗ ಜೆಡಿಎಸ್ ಸೇರ್ಪಡೆಯ[...] ಪರ್ಯಾವಸಾನ ಕಂಡಿದೆ.

ಈ ಬಾರಿ ಶಂಕರಲಿಂಗೇಗೌಡ ಜೆಡಿಎಸ್ ಅಭ್ಯರ್ಥಿ[...] ಇದೇ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದಾರೆ. ಗೌಡರು ಇತರೆ ರಾಜಕಾರಣ[...] ತೋರಿಕೆಯ ಕೆಲಸ ಮಾಡುವವರಲ್ಲ; ಜನರ ಪ್ರತಿನಿತ್ಯದ ಸಮ[...] ಸ್ಪಂದಿಸುತ್ತಾ ಬಿಡುವಿಲ್ಲದ ಚಟುವಟಿಕೆಯಲ್ಲಿರುವುದು ಅವರ [...]

ಇವರ ವಿರುದ್ಧ ಬಿಜೆಪಿಯಿಂದ ಬಿ. ನಾಗೇಂದ್ರ ಕಣಕ್ಕೆ ಇಳಿ[...] ಆದರೆ ಶಂಕರಲಿಂಗೇಗೌಡರ ನಿರ್ಗಮನದಿಂದ ಬಿಜೆಪಿ ಈ ಕ್ಷೇ[...] ನಿರ್ಗಮಿಸಿದೆ ಎಂದು ಹೇಳಬಹುದು. ಇತ್ತೀಚಿನ ನ[...] ಚುನಾವಣೆಯ ಫಲಿತಾಂಶವೇ ಇದಕ್ಕೆ ಸರಿಯಾದ ಸಾಕ್ಷಿ. ಚಾ[...] ಕ್ಷೇತ್ರದ ವ್ಯಾಪ್ತಿಯ 22 ವಾರ್ಡುಗಳಲ್ಲಿ ಜೆಡಿಎಸ್ 3[...] ಮತಗಳನ್ನು ಗಳಿಸಿ 11 ಸೀಟು ಗೆದ್ದಿದ್ದರೆ, ಬಿಜೆಪಿ 16,995 ಮತ[...] ಒಂದೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಇನ್ನು ಕಾಂಗ್ರೆಸ್‌ನಿಂದ ವಾಸು ಎಂಬ ಮೊಯಿಲಿ ಶಿಷ್ಯೋತ್ತಮ ಕಣ[...] ಕಾಂಗ್ರೆಸ್‌ನ ಅಲೆಯಲ್ಲಿ ಗೆದ್ದು ಬಿಡಬಹುದೆಂಬ ಲೆಕ್ಕಾಚಾರದಲ್ಲಿದ್ದಾರೆ[...] ಬಿಟ್ಟರೆ ಈ ಅಭ್ಯರ್ಥಿಗೂ ಸಹ ಶಂಕರಲಿಂಗೇಗೌಡರಂತೆ ಜನಪ್ರಿಯತೆ [...] ಜನಸಂಪರ್ಕವಾಗಲೀ ಇಲ್ಲ, ಆದರೆ ಕಾಂಗ್ರೆಸ್ ಅಲೆ ಈ ಬಾರಿ ಹೇಗಿದೆ[...] ನಗರ ಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಸಮಬಲದಲ್ಲಿ ಓಟು [...] ಒಟ್ಟು 8 ಸೀಟುಗಳನ್ನು ಗೆದ್ದಿರುವ ಕಾಂಗ್ರೆಸ್ ಈ ಕ್ಷೇತ್ರದ ವಾ[...] 38,299 ಓಟುಗಳನ್ನು ಗಳಿಸಿದೆ. ಅಂದರೆ ಜೆಡಿಎಸ್ ಮತ್ತು [...] ನಡುವೆ ನೆಕ್ ಟು ನೆಕ್ ಪೈಪೋಟಿ ಇರುವುದು ಸ್ಪಷ್ಟ. ಆದರೆ ವ್ಯಕ್ತಿ[...] ಶಂಕರಲಿಂಗೇಗೌಡರ ಜನಪ್ರಿಯತೆ ಹಾಗೂ ಜನರ ನಡುವಿನ ಒಡನಾಟಗ[...] ಗೆಲ್ಲುವ ಕುದುರೆ ಎನಿಸಿಕೊಂಡಿದ್ದಾರೆ.

ನರಸಿಂಹರಾಜ

ಕಾಂಗ್ರೆಸ್‌ನ ಶಾಸಕ ತನ್ವೀರ್ ಸೇಠ್ ಸದ್ಯ ಈ ಕ್ಷೇತ್ರವನ್ನು ಪ್ರತಿನಿಧಿಸ[...] ಆದರೆ ಮುಸ್ಲಿಂ ಬಾಹುಳ್ಯವಿರುವ ಈ ಕ್ಷೇತ್ರದಲ್ಲಿ ಇವರು ಕೇವಲ [...] ಪ್ರೆಸ್ಟೀಜ್‌ಗಾಗಿ ರಾಜಕೀಯದಲ್ಲಿದ್ದಾರೆಯೇ ಹೊರತು, ಇಲ್ಲಿನ ಬಡ ವ[...] ಹಾಗೂ ದಲಿತರ ಪರವಾದ ಕಾಳಜಿಯಿಂದಲ್ಲ ಎಂಬುದು ಎದ್ದು [...] ಅಂಶ. ಕುಡಿಯುವ ನೀರು, ರಸ್ತೆ, ಒಳಚರಂಡಿ ವ್ಯವಸ್ಥೆ ವ[...] ಮೂಲಸೌಕರ್ಯ ಗಳನ್ನು ಒದಗಿಸಬೇಕಾದ ಯಾವ ಜವಾಬ್ದಾ[...] ಈತ ಪೂರೈಸಿಲ್ಲ ಎಂದು ಕ್ಷೇತ್ರದ ಬಡ ಮುಸ್ಲಿಂ ಮತದಾರರೇ [...] ತೋಡಿಕೊಳ್ಳುತ್ತಿದ್ದಾರೆ.

ಐದು ವರ್ಷಕ್ಕೊಮ್ಮೆ ಮುಖ ತೋರಿಸುವ ರಾಜಕಾರಣಿಗಳ [...] ಸೇರಿರುವ ತನ್ವೀರ್ ಈ ಬಾರಿ ಗೆದ್ದರೆ ಅದೊಂದು ಪವಾಡವೇ ಸರಿ[...] ವಿರುದ್ಧ ಕಣದಲ್ಲಿರುವ ಬಿಜೆಪಿಯ ಬಿ.ಪಿ.ಮಂಜುನಾಥ್ ಲೆಕ್ಕಕ್ಕಿಲ[...] ಜೆಡಿಎಸ್ ಅಭ್ಯರ್ಥಿ ಎಸ್.ಸತೀಶ್ ಅಲಿಯಾಸ್ ಸಂದೇಶ್ ಸ್ವಾ[...] ಕಡೆಗಣಿಸುವಂತಿಲ್ಲ, ಈ ಅಭ್ಯರ್ಥಿ. ಸಂದೇಶ್ ನಾಗರಾಜ್ ಅವ[...] ತಮ್ಮ; ರಾಜಕೀಯದ ಒಳಹೊಟ್ಟುಗಳನ್ನು ಬಲ್ಲವರು, ಮೇಲಾಗಿ [...] ಚೆಲ್ಲಬಲ್ಲ ಸಾಮರ್ಥ್ಯ ಇರುವವರು.

ಸಂದೇಶ್ ಸ್ವಾಮಿಗೆ ಅನುಕೂಲಕರವಾಗಬಹುದಾದ ಮ[...] ಅಂಶವೇನೆಂದರೆ ತನ್ವೀರ್ ವಿರುದ್ಧ ಸುಮಾರು ಅರ್ಧ ಡಜನ್ [...] ಅಭ್ಯರ್ಥಿಗಳು ಕಣದಲ್ಲಿರುವುದು. ಅವರಲ್ಲಿ ಎಸ್‌ಡಿಪಿಐ ಪಕ್ಷದಿಂದ ಸ್ಪ[...] ಅಬ್ದುಲ್ ಮಜೀದ್ ಹಾಗೂ ಕೆಜೆಪಿಯ ಫರೀದ್ ಎನ್.ಕೆ ಪ್ರ[...] ಇವರು ಕನಿಷ್ಠ ತಲಾ 5-6 ಸಾವಿರ ಮತ ಕೀಳುವ ಸಾಮರ್ಥ್ಯ ಹೊ[...] ಇದರ ಜೊತೆ ಬಿಎಸ್‌ಆರ್ ಪಕ್ಷದಿಂದ ಇಕ್ರಂ ಸಿದ್ದಿಕಿ, ವೆಲ್ಫೇರ್ ಪಾಟಿ[...] ಮಹಮದ್ ತಾಹರ್ ಅಲಿ ಎಂಬುವವರಲ್ಲದೆ ಇನ್ನೂ ಮೂವರು [...] ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಹೀಗಾಗಿ ಮುಸ್ಲಿಂ ಓಟ್ [...] ಛಿದ್ರಗೊಂಡಲ್ಲಿ ತನ್ವೀರ್ ಕನಸು ಛಿದ್ರಗೊಂಡು ಸಂದೇಶ್ [...] ಅನುಕೂಲಕರವಾಗಿ ಪರಿಣಮಿಸ ಬಹುದು.

ಜಿಲ್ಲೆಯಾದ್ಯಂತ ಕಾಂಗ್ರೆಸ್ ಮುಂಚೂಣಿಯಲ್ಲಿದೆ, ಬಿಜೆಪಿ ಹೀನಾ[...] ರೇವಣಿ ಕಳೆದುಕೊಳ್ಳಲಿದೆ ಎಂದರೆ ತಪ್ಪಿಲ್ಲ, ಇನ್ನು ಜೆಡಿಎಸ್ ಅ[...] ನೆಲೆ ಗಟ್ಟಿಗೊಳಿಸಿಕೊಂಡಿದ್ದು ಈ ಬಾರಿ ಕೆಲವು ಕ್ಷೇತ್ರಗಳನ್ನು [...] ತೆಗೆದುಕೊಳ್ಳಲಿದೆ.

• ದೊಡ್ಡಿಪಾಳ್ಯ ನರಸಿಂಹಮ[...]

ಹಾಸನ ಜಿಲ್ಲೆ: ರೇವಣ್ಣನ ದರ್ಬಾರಿಗೆ ಅಂಕುಶ!

ಹಾಸನ ಜಿಲ್ಲೆಯಲ್ಲಿ ಎದ್ದಿರುವ ರೇವಣ್ಣ ವಿರೋಧಿ ಅಲೆ ಜೆಡಿಎಸ್ ದರ್ಬಾರಿಗೆ ಅಂಕುಶ ಹಾಕಲಿದೆಯೇ?

ಇಂತಹದ್ದೊಂದು ಲೆಕ್ಕಾಚಾರ ಜಿಲ್ಲೆಯಾದ್ಯಂತ ಕಂಡುಬರುತ್ತಿದೆ. ರಾಜ್ಯದಲ್ಲಿ ಬಿಜೆಪಿ ವಿರೋಧಿ ಅಲೆ ಇರುವಂತೆಯೇ ಹಾಸನದಲ್ಲಿ ಜೆಡಿಎಸ್ (ರೇವಣ್ಣ) ವಿರೋಧಿ ಅಲೆಯೊಂದು ಸಣ್ಣಗೆ ಸದ್ದು ಮಾಡುತ್ತಿದೆ. ಸಂಪೂರ್ಣ ಚಿತ್ರಣವನ್ನೆ ತಲೆಕೆಳಗು ಮಾಡದಿದ್ದರೂ ಜೆಡಿಎಸ್ ಭದ್ರಕೋಟೆಯಲ್ಲಿ ಬಿರುಕು ಮೂಡುವಂತೆ ಮಾಡಬಲ್ಲ ಈ ವಿರೋಧಿ ಅಲೆಗೆ ಖುದ್ದು ದೇವೇಗೌಡರೇ ಕನಲಿ ಹೋಗಿರುವುದಂತು ಸತ್ಯ. ಇಷ್ಟಕ್ಕೆಲ್ಲ ರೇವಣ್ಣನ ಸರ್ವಾಧಿಕಾರಿ ಧೋರಣೆಯೇ ಕಾರಣ ಎನ್ನುವುದನ್ನು ಮತ್ತೊಮ್ಮೆ ಹೇಳಬೇಕಿಲ್ಲ.

ವಿಧಾನಸೌಧದಲ್ಲಿ ಯಾವುದೇ ಸರ್ಕಾರವಿದ್ದರೂ ಹಾಸನದ ಮಟ್ಟಿಗೆ ರೇವಣ್ಣನೇ ಮುಖ್ಯಮಂತ್ರಿ, ಆತನ ಹಿಂಬಾಲಕರೇ ಮಂತ್ರಿಗಳು! ರೇವಣ್ಣ ಹೇಳಿದ್ದೇ ಸುಗ್ರೀವಾಜ್ಞೆ! ಒಂದು ಹಂತದವರೆಗೆ ಇದು ಗೌಡರ ಫ್ಯಾಮಿಲಿಯ ಪೊಲಿಟಿಕಲ್ ಹೋಲ್ಡ್‌ನಂತೆ ಕಂಡುಬಂದಿತ್ತಾದರು ಪಕ್ಷದ ನಿಷ್ಠಾವಂತರನ್ನೆ ರೇವಣ್ಣ ಮೂಲೆಗುಂಪು ಮಾಡಲು ಶುರು ಮಾಡಿದಾಗಿನಿಂದ ಖುದ್ದು ಜೆಡಿಎಸ್ ಕಾರ್ಯಕರ್ತರೇ ಬೇಸತ್ತು ಹೋಗಿದ್ದರು. ಟಿಕೆಟ್ ಹಂಚಿಕೆಯ ವಿಚಾರದಲ್ಲಿ ಈ ಭಿನ್ನಮತ ಹಲವಾರು ಕಡೆ ಸ್ಫೋಟಿಸಿ, ಅಪಾಯದ ಅಂಚನ್ನೂ ತಲುಪಿದೆ. ಇದು ಬೇರೆ ಪಕ್ಷಗಳಿಗೆ ಅನುಕೂಲಕರ ವಾತಾವರಣ ಸೃಷ್ಟಿಸುತ್ತದೆನ್ನುವ ಸುಳಿವು ಸಿಗುತ್ತಿದ್ದಂತೆಯೇ ಭದ್ರ ಕೋಟೆಯಲ್ಲಿ ನೆಲೆಯನ್ನು ಕಾಯ್ದುಕೊಳ್ಳಲು ಜೆಡಿಎಸ್ ಇನ್ನಿಲ್ಲದಂತೆ ಕಸರತ್ತಿಗೆ ಶುರುವಾಗಿದೆ.

ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಹುತೇಕ ಸ್ಥಳೀಯ ಆಡಳಿತಗಳು ಜೆಡಿಎಸ್ ತೆಕ್ಕೆಯಲ್ಲಿಯೇ ಉಳಿದವು ಎಂಬುದನ್ನು ಹೊರತುಪಡಿಸಿದರೆ ಕಳೆದ ಚುನಾವಣಾ ಸಂದರ್ಭಗಳಲ್ಲಿ ಜೆಡಿಎಸ್‌ಗೆ ಇದ್ದ ಹಿಡಿತ ಶೇ.50ರಷ್ಟು ಕುಗ್ಗಿರುವುದು ಕಂಡುಬಂದಿದೆ. ಇದು ಸಹಜವಾಗಿಯೇ ಜೆಡಿಎಸ್ ವಿರೋಧಿ ಅಲೆಗೆ ಪುಷ್ಠಿ ನೀಡುತ್ತದೆ. ಈ ವಿರೋಧಿ ಅಲೆಯನ್ನು ಮತಗಳನ್ನಾಗಿ ಪರಿವರ್ತಿಸಲು ಇತರೆ ಪಕ್ಷಗಳು ಗೇಮ್ ಪ್ಲಾನ್ ರೂಪಿಸುತ್ತಿವೆ. ಜೆಡಿಎಸ್‌ನೊಳಗಿನ ಬಂಡಾಯ, ರೇವಣ್ಣ ವಿರೋಧಿ ಅಲೆ, ಕೆಜೆಪಿಯ ಅಸ್ತಿತ್ವ, ಕಾಂಗ್ರೆಸ್‌ನ ಪೈಪೋಟಿಗಳೆಲ್ಲ ರೇವಣ್ಣನ ದರ್ಬಾರ್‌ಗೆ ಸೆಡ್ಡು ಹೊಡೆಯಲು ಸಜ್ಜಾಗಿವೆ.

ಹೊಳೆನರಸೀಪುರ: ರೇವಣ್ಣನಿಗೆ ಸ್ವಲ್ಪ ಖಾರ!

ಇಲ್ಲಿಗೆ ರೇವಣ್ಣನೇ ದಂಡನಾಯಕ! ಕಳೆದ ಸಲದ ಕ್ಷೇತ್ರ ಮರುವಿಂಗಡಣೆಯಲ್ಲಿ ತಮಗೆ ಮುಳುವಾಗಬಹುದಿದ್ದ ಕುರುಬ ಜನಾಂಗವೇ ಪ್ರಮುಖವಾಗಿದ್ದ ಹೋಬಳಿಯನ್ನು ಅರಕಲಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರಿಸುವ ಮೂಲಕ ರೇವಣ್ಣ ತನ್ನ ಗೆಲುವನ್ನು ಖಾತ್ರಿ ಮಾಡಿಕೊಂಡಿದ್ದರು. ಈ ಬಾರಿಯೂ ರೇವಣ್ಣ ಸುಲಭಕ್ಕೆ ಸೋಲುವ ಸಾಧ್ಯತೆ ಇಲ್ಲವಾದರೂ ಗೆಲುವಿಗೆ ಬೆವರು ಹರಿಸಲೇಬೇಕಾದ ವಾತಾವರಣ ನಿರ್ಮಾಣವಾಗಿದೆ.

ಇಲ್ಲಿ ರೇವಣ್ಣನಿಗೆ ಕಾಂಗ್ರೆಸ್‌ನಿಂದ ಒನ್ಸ್ ಎಗೇನ್ ಅನುಪಮಾ ಮಹೇಶ್‌ರೆ ಎದುರಾಳಿ. ಆರಂಭದಿಂದಲೂ ದೇವೇಗೌಡರ ಕುಟುಂಬದೊಂದಿಗೆ ರಾಜಕೀಯ ಜಿದ್ದಾಜಿದ್ದಿಯನ್ನು ಕಾಯ್ದುಕೊಂಡೇ ಬಂದಿದ್ದ ಮಾಜಿ ಸಚಿವ ದಿವಂಗತ ಪುಟ್ಟಸ್ವಾಮಿಗೌಡರ ಸೊಸೆಯೇ ಈ ಅನುಪಮ ಮಹೇಶ್. ಕಳೆದ ಬಾರಿಯೂ ಕಾಂಗ್ರೆಸ್‌ನಿಂದ ಇವರೇ ಸ್ಪರ್ಧಿಸಿದ್ದರು. ಜಿಲ್ಲೆಯಾದ್ಯಂತ ಎದ್ದಿರುವ ರೇವಣ್ಣ ವಿರುದ್ಧದ ಅಸಮಾಧಾನದ ಹೊಗೆಯನ್ನು ಹೊಳೆನರಸೀಪುರ ಕ್ಷೇತ್ರದಲ್ಲೂ ಹರಡಿರುವ ಅನುಪಮಾ ಕೈ ಪರವಾದ ವಾತಾವರಣ ಸೃಷ್ಟಿಸಿದ್ದಾರೆ.

ರೇವಣ್ಣನಿಗೆ ಟಾಂಗ್ ನೀಡುವ ಮತ್ತೊಂದು ಅಂಶವೂ ಕ್ಷೇತ್ರದಲ್ಲಿದೆ. ಅದೇನೆಂದರೆ, ಕಳೆದ ಬಾರಿಯ ಕ್ಷೇತ್ರ ಮರುಹಂಚಿಕೆಯ ಸಮಯದಲ್ಲಿ ತನ್ನ ವೋಟ್ ಬ್ಯಾಂಕ್ ಗಟ್ಟಿ ಮಾಡಿಕೊಳ್ಳಲು ಹಾಸನ ತಾಲ್ಲೂಕಿನ ಮಧ್ಯ ಮತ್ತು ಶಾಂತಿಗ್ರಾಮ ಹೋಬಳಿಗಳನ್ನು ಹೊಳೆನರಸೀಪುರ ಮತಕ್ಷೇತ್ರಕ್ಕೆ ಸೇರಿಸಿಕೊಂಡಿದ್ದರು ರೇವಣ್ಣ. ಆದರೆ ಆ ಕ್ಷೇತ್ರಗಳ ಅಭಿವೃದ್ಧಿಯ ವಿಚಾರಕ್ಕೆ ಬಂದಾಗ ಅದು ಬಿ.ಶಿವರಾಂ ಪ್ರತಿನಿಧಿಸುತ್ತಿದ್ದ ಕ್ಷೇತ್ರ ಅಂತ ಮೌನವಾಗಿದ್ದರು. ಹಾಸನ ಮಧ್ಯ ಚಿಕ್ಕ ಹಾದಿಗಟ್ಟು 15 ವರ್ಷಗಳೇ ಕಳೆಯುತ್ತಿವೆ. ... ಅಭಿವೃದ್ಧಿಗಳು, ಶಾಸ್ವತ ಕೆಲಸಗಳು ... ಯೋಗಾನಂದಮುಖ್ಯವಾಗಿ ಹೋಗಿವೆ. ಲೋಕೋಪಯೋಗಿ ಸಚಿವರಾಗಿದ್ದಾಗಲೂ ದ್ವೇಷದ ರಾಜಕಾರಣದಿಂದಾಗಿ ರೇವಣ್ಣ ಈ ರಸ್ತೆಯನ್ನು ದುರಸ್ತಿ ಮಾಡಿಸಲಿಲ್ಲ, ಇದು ಈ ಭಾಗದ ಮತದಾರರಲ್ಲಿ ಅಸಹನೆ ಮೂಡುವಂತೆ ಮಾಡಿದೆ. ಕಳೆದ ಬಾರಿಯೇ ಅದು ಪ್ರತಿಫಲಿತವಾಗಬೇಕಿತ್ತಾದರು ರೇವಣ್ಣನ ವಿರುದ್ಧ ಇಂತಹ ಆಕ್ರೋಶ ಬಹಿರಂಗವಾಗಿ ಕಾಣಿಸಿಕೊಳ್ಳದ್ದರಿಂದ ಎಲ್ಲವೂ ತೂಗಿಸಿಕೊಂಡು ಹೋಗಿತ್ತು, ಆದರೆ ಈ ಬಾರಿ ರೇವಣ್ಣ ಪ್ರಶ್ನಾತೀತ ನಾಯಕನಾಗಿ ಉಳಿದಿಲ್ಲ, ಹಾಗಾಗಿ ಕೆಲವೊಂದಷ್ಟು ವೋಟುಗಳು ಈ ಕಾರಣಕ್ಕಾಗೆ ರೇವಣ್ಣನ ಕೈ ಬಿಡುವ ಸಾಧ್ಯತೆ ಇದೆ.

ಹೊಗಳುಭಟ್ಟರ ಪಟಾಲಂ ಸೃಷ್ಟಿಸಿಕೊಂಡಿರುವ ರೇವಣ್ಣ ಕ್ಷೇತ್ರದ ಸಾಮಾನ್ಯ ಕಾರ್ಯಕರ್ತರು ಮತ್ತು ಮತದಾರರಿಗೆ ಅಷ್ಟು ಆತ್ಮೀಯವಾಗಿ ದಕ್ಕುತ್ತಿಲ್ಲ, ಅಲ್ಲದೆ ರೇವಣ್ಣನ ನಾಲ್ಕು ಹಿಂಬಾಲಕರು ಇದ್ದಕ್ಕಿದ್ದಂತೆ ಐಶ್ವರ್ಯವಂತರಾದದ್ದೂ ಜನರಲ್ಲಿ ಅಸಹನೆ ಮೂಡಿಸಿದೆ. ಮತ್ತೊಂದೆಡೆ ಕಾಂಗ್ರೆಸ್ ನಾಯಕರೆಲ್ಲಾ ಒಟ್ಟಾಗಿ ಯುದ್ಧಕ್ಕಿಳಿದಿದ್ದಾರೆ. ಹಾಗಾಗಿ ಗೆಲುವು ದಕ್ಕಿಸಿಕೊಳ್ಳಲು ರೇವಣ್ಣ ಕೊಂಚ ರಿಸ್ಕ್ ತೆಗೆದುಕೊಳ್ಳಬೇಕಿದೆ.

ಈ ಚುನಾವಣೆ ರೇವಣ್ಣನ ನಿದ್ದೆಗೆಡಿಸಿರುವುದಕ್ಕೆ ಕೆಲವು ನಿದರ್ಶನಗಳೂ ಕಾಣಿಸುತ್ತವೆ. ರೇವಣ್ಣನ ಪರ ಅವರ ಪತ್ನಿ ಭವಾನಿ ಮತ್ತು ಮಕ್ಕಳಾದ ಪ್ರಜ್ವಲ್ ಹಾಗೂ ಸೂರಜ್ ಕೂಡ ಪ್ರಚಾರಕ್ಕಿಳಿದಿರುವುದು ಅವುಗಳಲ್ಲಿ ಒಂದು. ಇನ್ನು ಈ ಹಿಂದಿನ ಚುನಾವಣೆಯಲ್ಲಿ ತನ್ನ ಪ್ರತಿಸ್ಪರ್ಧಿಯಾಗಿದ್ದ ಅನುಪಮಾರ ವಿರುದ್ಧ ಅತಿಯಾಗಿ ತಲೆಕೆಡಿಸಿಕೊಳ್ಳದ ರೇವಣ್ಣ ಇದೀಗ ಕಾಂಗ್ರೆಸ್ ಅಭ್ಯರ್ಥಿಯನ್ನು ವೈಯಕ್ತಿಕವಾಗಿ ಟೀಕಿಸುವ ಹಂತ ತಲುಪಿದ್ದಾರೆ. ಇದಕ್ಕೆ ಪೂರಕವೆಂಬಂತೆ ಇತ್ತೀಚೆಗೆ ಅನುಪಮಾ ಮಹೇಶ್ ಚುನಾವಣಾ ಪ್ರಚಾರಕ್ಕೆಂದು ಹೋದಾಗ ಕೆಲವೆಡೆ ಜೆಡಿಎಸ್ ಕಾರ್ಯಕರ್ತರೆಂದು ಹೇಳಿಕೊಂಡ ಕೆಲವರು ಹಲ್ಲೆ ನಡೆಸಿರುವ ಕುರಿತೂ ವರದಿಯಾಗಿದೆ. ಒಟ್ಟಿನಲ್ಲಿ ಇವೆಲ್ಲ ರೇವಣ್ಣ ಕೊಂಚ 'ಡಿಸ್ಟರ್ಬ್' ಆಗಿರೋದನ್ನು ಖಾತ್ರಿಪಡಿಸುತ್ತವೆ.

ಹಾಸನ: ಬಂಡಾಯವೇ ಅಸ್ತ್ರ

ಜಿಲ್ಲಾ ಕೇಂದ್ರವಾಗಿರುವ ಹಾಸನದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದ್ದರೂ ಎರಡೂ ಪಕ್ಷಗಳಿಗೆ ಆಂತರಿಕ ಕಚ್ಚಾಟವೇ ತಲೆನೋವಾಗಿದೆ. ಜೆಡಿಎಸ್ ಅಭ್ಯರ್ಥಿಯಾಗಿ ಯಥಾವತ್ ಹೆಚ್.ಎಸ್.ಪ್ರಕಾಶ್ ಸ್ಪರ್ಧಿಸಿದ್ದರೆ, ಕಾಂಗ್ರೆಸ್‌ನ ಹುರಿಯಾಳಾಗಿ ಕಣಕ್ಕಿಳಿದಿರುವುದು ಹೆಚ್.ಕೆ.ಮಹೇಶ್. ಇಬ್ಬರಿಗೂ ಸ್ವಪಕ್ಷೀಯ ಬಂಡಾಯವನ್ನು ಗೆಲ್ಲುವುದೇ ದೊಡ್ಡ ಸಾಹಸವಾಗಿದೆ. ಇಬ್ಬರ ನಡುವೆ ಬಿಜೆಪಿಯಿಂದ ಸ್ಪರ್ಧಿಸಿರುವ ಎಂ.ಬಿ.ಗುರುಪ್ರಸಾದ್ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ ಎನ್ನುವಂತಾಗಿದ್ದಾರೆ. ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದೆ ಇದ್ದ ದಾಸ ಮುಳ್ಳ ಪ್ರಬೇಧ ಕಾಣೆಯಾಗಿದೆ.

ಹಾಲಿ ಶಾಸಕ ಹೆಚ್.ಎಸ್. ಪ್ರಕಾಶ್‌ಗೆ ಇದು ಐದನೇ ಚುನಾವಣೆ. ಈಗಾಗಲೆ ಒಂದು ಬಾರಿ ಪರಾಭವಗೊಂಡು ಮೂರು ಬಾರಿ ಆಯ್ಕೆಯಾಗಿರುವ ಹೆಚ್.ಎಸ್.ಪ್ರಕಾಶ್‌ಗೆ ಟಿಕೆಟ್ ನೀಡಬಾರದೆಂದು ದೊಡ್ಡ ಬಂಡಾಯವೇ ಎದ್ದಿತ್ತು. ಸತತ 15 ವರ್ಷಗಳಿಂದ ಶಾಸಕರಾಗಿರುವ ಪ್ರಕಾಶ್ ವಿರುದ್ಧ ಜೆಡಿಎಸ್‌ನ ಮುಖಂಡರಾದ ಹಾಲಿ ವಿಧಾನಪರಿಷತ್ ಸದಸ್ಯ ಪಟೇಲ್ ಶಿವರಾಂ, ಜಿ.ಪಂ. ಸದಸ್ಯ ಸ್ವಾಮಿಗೌಡ ಮುತ್ತಿತರು ಬಂಡಾಯ ಸಾರಿದ್ದರು. ಹಾಗಾಗಿ ಪ್ರಕಾಶ್‌ಗೆ ಸ್ವಪಕ್ಷದಿಂದಲೇ ಅಡ್ಡಿಯಾಗುವ ನಿರೀಕ್ಷೆ ಇದೆ.

ಈ ಮೊದಲು ಕಾಂಗ್ರೆಸ್‌ನಿಂದ ಎಸ್.ಎಂ.ಆನಂದ್ ಸ್ಪರ್ಧಿಸುತ್ತಾರೆನ್ನುವ ಪುಕಾರಿತ್ತು; ಆದರೆ ಆನಂದ್ ಜೆಡಿಎಸ್‌ನೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಪಕ್ಷದ ಸೋಲಿಗೆ ಕಾರಣವಾಗುತ್ತಿದ್ದಾರೆನ್ನುವ ಗಂಭೀರ ಆರೋಪದಡಿಯಲ್ಲಿ ಅವರಿಗೆ ಬಿ-ಫಾರ್ಮ್ ನೀಡಿಲ್ಲ, ಸಹಜವಾಗಿಯೇ ಟಿಕೆಟ್ ಕೈ ತಪ್ಪಿದ ಹತಾಶೆಯಲ್ಲಿರುವ ಆನಂದ್ ಕಾಂಗ್ರೆಸ್ ಅಭ್ಯರ್ಥಿ ಮಹೇಶ್‌ಗೆ ಆಂತರಿಕ ಅಡ್ಡಿಯಾಗಬಹುದೆನ್ನುವ ನಿರೀಕ್ಷೆ ಇದೆ. ಆದರೂ ಜೆಡಿಎಸ್ ಬಂಡಾಯಕ್ಕೆ ಹೋಲಿಸಿದಲ್ಲಿ ಕಾಂಗ್ರೆಸ್ ಒಳಗಿನ ಬಂಡಾಯ ಅಷ್ಟೇನೂ ಪವರ್‌ಫುಲ್ ಆಗಿಲ್ಲ, ಆದರೆ ಜೆಡಿಎಸ್ ವಿರೋಧಿ ಮತ್ತು ಬಂಡಾಯದ ಅಲೆಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುವಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗದಿರುವುದು ಜೆಡಿಎಸ್‌ಗೆ ಮತ್ತೊಮ್ಮೆ ಗೆಲ್ಲುವ ಅವಕಾಶ ತಂದು ಕೊಟ್ಟರೂ ಅಚ್ಚರಿಯಿಲ್ಲ. ಅದೇನೇ ಆದರೂ ಈ ಬಾರಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಬಿಗ್ ಫೈಟ್ ನಡೆಯಲಿದೆ.



ಎಚ್.ಡಿ.ರೇವಣ್ಣ




ಅನುಪಮಾ



ಎಚ್.ಎಸ್.ಪ್ರಕಾಶ್




ಬೆಳಗೋಡು ಉಮೇಶ್




ಎಚ್ಕೆ ಕುಮಾರಸ್ವಾಮಿ




ಡಿ.ಮಲ್ಲೇಶ್




ಶಿವಲಿಂಗೇಗೌಡ




ಶಿವರಾಂ




ರುದ್ರೇಶ್‌ಗೌಡ



ಎಚ್.ಎಂ.ವಿಶ್ವನಾಥ್



ಬಾಲಕೃಷ್ಣ



ಸಿ.ಎಸ್.ಪುಟ್ಟೇಗೌಡ

ಆಲೂರು ಸಕಲೇಶಪುರ: ಗೆಲ್ಲೋರು ಯಾರು?

ಆಲೂರು ಸಕಲೇಶಪುರ ಮೀಸಲು ವಿಧಾನಸಭಾ ಕ್ಷೇತ್ರದಲ್ಲೂ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಪೈಪೋಟಿ ಕಂಡುಬಂದಿದೆ. ಈ ಕ್ಷೇತ್ರದಲ್ಲಿ ಚುನಾವಣಾ ಪ್ರಾರಂಭದಲ್ಲಿ ಹುರುಪುಗೊಂಡು ಗೆಲುವಿನ ಸನ್ನಿಹಕ್ಕೆ ಭರವಸೆ ಮೂಡಿಸಿದ್ದ ಕೆ.ಜೆ.ಪಿ ಪಕ್ಷದ ಅಭ್ಯರ್ಥಿ ಬೆಳಗೋಡು ಉಮೇಶ್ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಡಲ್ ಆಗಿದ್ದಾರೆ. ಕಾಂಗ್ರೆಸ್ ನಿಧಾನಗತಿಯಲ್ಲಿ ಕ್ಷೇತ್ರದಲ್ಲಿ ಮತದಾರನ ಮನಗೆಲ್ಲುವತ್ತ ಮುನ್ನುಗ್ಗುತ್ತಿದೆ. ತನ್ನ ಅಭ್ಯರ್ಥಿ ಡಿ.ಮಲ್ಲೇಶ್ ವಿವಾದರಹಿತ ಅಭ್ಯರ್ಥಿಯಾಗಿರುವುದು ಕಾಂಗ್ರೆಸ್‌ಗೆ ಮತ್ತೊಂದು ಪ್ಲಸ್ ಪಾಯಿಂಟ್.

ಅಲ್ಲದೆ ಜೆಡಿಎಸ್‌ನ ಹಾಲಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ವಿರೋಧಿ ಗುಂಪು ಶತಾಯಗತಾಯ ಕುಮಾರಸ್ವಾಮಿಯನ್ನು ಮಣಿಸಲೇಬೇಕೆಂದು ಕಣಕ್ಕಿಳಿದಿರುವುದು ಮಲ್ಲೇಶ್ ಗೆಲುವಿಗೆ ಸಹಕಾರಿಯಾಗಬಲ್ಲದು. ಆಲೂರು, ಕಟ್ಟಾಯ ಭಾಗಗಳಲ್ಲಿ ಕಾಂಗ್ರೆಸ್ ಮುಂದಿದ್ದರೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಯಸಳೂರು ಭಾಗಗಳಲ್ಲಿ ಜೆಡಿಎಸ್ ಮುಂದಿದೆ. ಹಾಲಿ ಶಾಸಕ ಕುಮಾರಸ್ವಾಮಿ ಸ್ವತಃ ದಲಿತರಾಗಿದ್ದರೂ ಕ್ಷೇತ್ರದಲ್ಲಿ ದಲಿತ ವಿರೋಧಿ ಎಂಬ ಹಣೆಪಟ್ಟಿ ಕಟ್ಟಲಾಗಿದೆ. ಯಾವುದೇ ಅಭಿವೃದ್ಧಿ ಕೆಲಸ ಮಾಡದಿದ್ದರೂ 'ಯಾರಿಗೂ ತೊಂದರೆ ಕೊಡದ ಮನುಷ್ಯ' ಎನ್ನುವ ಇಮೇಜ್ ಕುಮಾರಸ್ವಾಮಿಯ ಸದ್ಯದ ಬಂಡವಾಳ.

ಅರಸೀಕೆರೆ: ಶಿವಲಿಂಗೇಗೌಡನ ಮೇಲೆ ಅಕ್ಕರೆ

ಅರಸೀಕೆರೆ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕ ಕೆ.ಎಂ.ಶಿವಲಿಂಗೇಗೌಡ ಈ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದು ಕಾಂಗ್ರೆಸ್‌ನಿಂದ ಮಾಜಿ ಸಚಿವ ಹಾಗೂ ಶಿವಲಿಂಗೇಗೌಡನ ಬದ್ಧ ವೈರಿ ಬಿ.ಶಿವರಾಂ ಕಣಕ್ಕಿಳಿದಿದ್ದಾರೆ. ಇನ್ನು ಕೆ.ಜೆ.ಪಿಯಿಂದ ಡಾ.ಲೋಕೇಶ್ ಸ್ಪರ್ಧೆಯಲ್ಲಿದ್ದಾರೆ. ಲಿಂಗಾಯತ ಸಮುದಾಯವೇ ಪ್ರಮುಖವಾಗಿರುವ ಕ್ಷೇತ್ರದಲ್ಲಿ ಶಿವಲಿಂಗೇಗೌಡನಿಗೆ ಲಿಂಗಾಯತ ವಿರೋಧಿ ಹಣೆ ಪಟ್ಟಿ ಕಟ್ಟಿದ್ದರೂ ಇದು ಈ ಬಾರಿ ವರ್ಕೌಟ್ ಆಗುವುದು ಕಷ್ಟ ಸಾಧ್ಯ, ಕಳೆದ ಅವಧಿಯಲ್ಲಿ ಶಿವಲಿಂಗೇಗೌಡ ಕ್ಷೇತ್ರದಲ್ಲಿ ನಡೆಸಿರುವ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಜಾತಿರಹಿತ ಕಾರ್ಯಕ್ರಮಗಳು ಶಿವಲಿಂಗೇಗೌಡನಿಗೆ ಪ್ಲಸ್ ಪಾಯಿಂಟ್ ಆಗುವ ಲಕ್ಷಣಗಳು ಗೋಚರಿಸುತ್ತಿವೆ. ಯಗಚಿಯಿಂದ ಫ್ಲೋರೈಡ್ ಸಮಸ್ಯೆ ಇರುವ ಹಳ್ಳಿಗಳಿಗೆ ನೀರು ಹರಿಸಿದ ಯೋಜನೆಯೂ ಅವರ ಕೈಹಿಡಿಯಬಹುದೆಂದೇ ಅಂದಾಜಿಸಲಾಗುತ್ತಿದೆ.

ಇತ್ತ ಶತಾಯಗತಾಯ ಶಿವಲಿಂಗೇಗೌಡನನ್ನು ಸೋಲಿಸಿಯೇ ತೀರಬೇಕೆಂದು ಕಣದಲ್ಲಿರುವ ಕಾಂಗ್ರೆಸ್‌ನ ಬಿ.ಶಿವರಾಂ ಶಿವಲಿಂಗೇಗೌಡರ ವಿರೋಧಿಗಳನ್ನು ಕಲೆ ಹಾಕುವ ಕಾರ್ಯದಲ್ಲಿ ಯಶಸ್ವಿಯಾಗಿದ್ದರೂ ಇದು ಚುನಾವಣೆ ಕಣದಲ್ಲಿ ಮತವಾಗಿ ಪರಿವರ್ತನೆಯಾಗುವುದರಲ್ಲಿ ಸಂದೇಹವಿದೆ. ಮತ್ತೊಂದೆಡೆ ಕೆ.ಜೆ.ಪಿಯ ಡಾ.ಲೋಕೇಶ್ ಕಣದಲ್ಲಿರುವುದರಿಂದ ಹಾಗೂ ಕ್ಷೇತ್ರದಲ್ಲಿ ಲಿಂಗಾಯತ ಮತದಾರರ ಸಂಖ್ಯೆ ಹೆಚ್ಚಾಗಿರುವುದರಿಂದ ಲೋಕೇಶ್ ಗೆಲುವಿನ ನಿರೀಕ್ಷೆಯಲ್ಲಿದ್ದರೂ ಲಿಂಗಾಯತರ ಒಳಪಂಗಡಗಳ ನಿರ್ಣಯದ ಮೇಲೆ ಅಭ್ಯರ್ಥಿಯ ಗೆಲುವಿನ ಭವಿಷ್ಯ ಅಡಗಿದೆ.

ಬೇಲೂರು: ಕಾಂಗ್ರೆಸ್‌ನ ರುದ್ರಾವತಾರ

ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ವೈ.ಎನ್.ರುದ್ರೇಶ್‌ಗೌಡ ತಮ್ಮ ಸರಳ ಸ್ವಭಾವದಿಂದಲೇ ಮತದಾರನ ಮನ ಗೆಲ್ಲುತ್ತಿದ್ದಾರೆ. ಜೆಡಿಎಸ್‌ನ ಆಂತರಿಕ ಕಲಹಗಳನ್ನು ಕಂಡು ಬೆಚ್ಚಿ ಬಿದ್ದ ಕ್ಷೇತ್ರದ ಮತದಾರರು ಕಾಂಗ್ರೆಸ್ ಕೈ ಹಿಡಿಯುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಜೆಡಿಎಸ್ ಅಭ್ಯರ್ಥಿಯನ್ನಾಗಿ ಜವರೇಗೌಡರನ್ನು ಘೋಷಿಸುತ್ತಾರೆಂಬ ನಿರೀಕ್ಷೆ ಇದ್ದರೂ ಕೊನೆ ಕ್ಷಣದಲ್ಲಿ ಜವರೇಗೌಡರನ್ನು ಕೈ ಬಿಟ್ಟು ಲಿಂಗಾಯತ ಸಮುದಾಯಕ್ಕೆ ಸೇರಿದ ಕೆ.ಎಸ್.ಲಿಂಗೇಶ್ ಅವರಿಗೆ ಟಿಕೆಟ್ ನೀಡಿದ್ದು ಜೆಡಿಎಸ್‌ಗೆ ಹೊಡೆತ ನೀಡುವ ಸಂಭವವಿದೆ.

ಅಲ್ಲದೆ ರೇವಣ್ಣನ ಪತ್ನಿ ಭವಾನಿಯವರನ್ನು ಇಲ್ಲಿಂದ ಕಣಕ್ಕಿಳಿಸುತ್ತಾರೆಂಬ ಗೊಂದಲ ಮತ್ತು ದೇವೇಗೌಡರ ಮೂರನೇ ತಲೆಮಾರು ಅಂದರೆ, ಹೆಚ್.ಡಿ. ರೇವಣ್ಣನ ಮಗ ಪ್ರಜ್ವಲ್ ನಡೆಸಿದ ನಾಟಕೀಯ ರಾಜಕೀಯ ಬೆಳವಣಿಗೆಗಳು ಕ್ಷೇತ್ರದ ಮತದಾರರಲ್ಲಿ ಜೆಡಿಎಸ್ ಬಗ್ಗೆ ಅಸಮಾಧಾನ ಮೂಡಿಸಿವೆ. ಇದು ಕಾಂಗ್ರೆಸ್‌ನ ರುದ್ರೇಶ್‌ಗೌಡರಿಗೆ ಪೂರಕ ವಾತಾವರಣ ಸೃಷ್ಟಿಸಿದೆ.

ಇನ್ನು ಕೆ.ಜೆ.ಪಿ ಪಕ್ಷದಿಂದ ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಕಣದಲ್ಲಿದ್ದರೂ ಅವರ ಬೆಂಬಲಕ್ಕೆ ಲಿಂಗಾಯತ ಸಮುದಾಯ ನಿಲ್ಲುವುದು ಅನುಮಾನವಿದೆ. ಲಿಂಗಾಯತರು ಮತ್ತು ದಲಿತ ಮತದಾರರ ಪ್ರಭಾವವಿರುವ ಕ್ಷೇತ್ರದಲ್ಲಿ ಜಾತಿ ಆಧಾರಿತ ಚುನಾವಣೆ ಎದುರಿಸಲು ಕೆಜೆಪಿ ಮುಂದಾಗಿದೆ.

ಜೆಡಿಎಸ್‌ನ ಭದ್ರಕೋಟೆಗಳಲ್ಲಿ ಒಂದಾಗಿದ್ದ ಬೇಲೂರಿನಲ್ಲಿ ಈ ಬಾರಿ ಕಾಂಗ್ರೆಸ್ ಮತ್ತು ಕೆಜೆಪಿ ನಡುವೆಯೇ ನೇರ ಹಣಾಹಣಿ ನಡೆಯುತ್ತಿರುವುದು ಗೌಡರ ಪಾಳಯಕ್ಕೆ ಮತ್ತೊಂದು ಆಘಾತ.

ಶ್ರವಣಬೆಳಗೊಳ: ಜೆಡಿಎಸ್ ಕಾಂಗ್ರೆಸ್ ಬಾಹುಬಲ

ಜೆಡಿಎಸ್‌ನಿಂದ ದೇವೇಗೌಡರ ಸಂಬಂಧಿ, ಹಾಸನ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷನಾಗಿರುವ ಸಿ.ಎನ್.ಬಾಲಕೃಷ್ಣ ಕಣಕ್ಕಿಳಿದಿದ್ದಾರೆ. ರೇವಣ್ಣನ ಉಪಟಳದ ಕಾರಣವಿಟ್ಟು ಪಕ್ಷದಿಂದ ಹೊರಬಂದ ಸಿ.ಎಸ್.ಪುಟ್ಟೇಗೌಡ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಜೆಡಿಎಸ್‌ಗೆ ಟಾಂಗ್ ನೀಡಲು ಸಜ್ಜಾಗಿದ್ದಾರೆ. ಕೇವಲ ಸೋಲು ಗೆಲುವು ಮಾತ್ರವಲ್ಲದೆ ವೈಯಕ್ತಿಕ ವರ್ಚಸ್ಸಿನ ಕಣದಂತಾಗಿರುವ ಇಲ್ಲಿ ಕಾಂಚಾಣ ಜಣಗುಡುತ್ತಿದೆ. ಮತದಾರನಲ್ಲಿ ಪುಟ್ಟೇಗೌಡರ ಒಳ್ಳೆತನ ಮತ್ತು ಬಾಲಕೃಷ್ಣ ಅವರ ಹುಂಬತನದ ಆಯ್ಕೆಯಲ್ಲಿ ಗೊಂದಲಗಳಿವೆ. ಬಾಲಕೃಷ್ಣ ಅವರೊಂದಿಗೆ ಪುಡಾರಿಗಳ ಪಡೆಯಿದ್ದು ಅವರು ಸದಾ ಅಂತಹವರನ್ನು ಬೆಂಬಲಿಸುತ್ತಾರೆ, ಅಂತಹವರು ಗೆದ್ದು ಬಂದರೆ ಮಚ್ಚು ಲಾಂಗ್ ಹಿಡಿಯುವವರು ಹೆಚ್ಚಾಗಲಿದ್ದಾರೆ, ಹಳ್ಳಿಗಳಲ್ಲಿ ಘರ್ಷಣೆ ನಡೆಯುತ್ತವೆ ಎಂಬಂತಹ ಸುದ್ದಿಗಳು ಕ್ಷೇತ್ರದಲ್ಲಿ ಹರಿದಾಡುತ್ತಿದೆ.

ಹೇಗಾದರೂ ಗೆಲುವು ಸಾಧಿಸಲೇಬೇಕೆಂದಿರುವ ಬಾಲಕೃಷ್ಣ ತಾವು ಅಧ್ಯಕ್ಷರಾಗಿರುವ ಡಿ.ಸಿ.ಸಿ. ಬ್ಯಾಂಕ್‌ನಿಂದ ಕ್ಷೇತ್ರದಲ್ಲಿರುವ ಮತದಾರರಿಗೆ ಸಾಲ ಕೊಡಿಸಿ ವೋಟ್ ಗಟ್ಟಿ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದರು. ಬಾಲಕೃಷ್ಣ ಮಾಡಿಕೊಂಡಿರುವ ಯಡವಟ್ಟುಗಳ ನಡುವೆ ನೈತಿಕ ರಾಜಕಾರಣದ ಹೆಸರಿನಲ್ಲಿ ಪುಟ್ಟೇಗೌಡರು ಫೈನ್ ಆಗುತ್ತಿದ್ದಾರೆ. ಹೆಚ್.ಸಿ.ಶ್ರೀಕಂಠಯ್ಯನವರ ನಂತರ ಕ್ಷೇತ್ರದಲ್ಲಿ ದುರ್ಬಲಗೊಂಡಿರುವ ಕಾಂಗ್ರೆಸ್‌ಗೆ ಮರುಜೀವ ನೀಡುವ ಚಿಂತನೆಯಲ್ಲಿರುವ ಕಾಂಗ್ರೆಸ್ ಕಾರ್ಯಕರ್ತರು ದಶಕೋತ್ಸಾಹದಲ್ಲಿ, ಅಖಾಡಕ್ಕಿಳಿದು ಪುಟ್ಟೇಗೌಡರ ಗೆಲುವಿಗೆ ಹಗಲು ರಾತ್ರಿ ಎನ್ನದೆ ಹೆಣಗಾಡುತ್ತಿದ್ದಾರೆ.

• ವರದಿಗಾರ

ಅತಂತ್ರದ ಅಂತ್ಯ?

ಕಾಂಗ್ರೆಸ್ - 110, ಜೆಡಿಎಸ್ - 35, ಬಿಜೆಪಿ - 40, ಕೆಜೆಪಿ - 25, ಬಿಎಸ್‌ಆರ್ - 6... ಅತಂತ್ರ ಸರ್ಕಾರಗಳ ದುರಾತಂತ್ರದಿಂದ ಕರ್ನಾಟಕಕ್ಕೆ ಮುಕ್ತಿ ಸಿಗುತ್ತಾ? ಬಿಜೆಪಿಯ ದುರಾಡಳಿತದಿಂದ ನಾಡಿಗಾದ ಹಾನಿಯನ್ನು ಭರಿಸಲು ಕಾಂಗ್ರೆಸ್ಸಿಗೆ ಬಹುಮತ ಸಾಧ್ಯವಾ? ಮತ್ತೆ ಬಿಜೆಪಿಯ ಭೂತ ಹಿಂಬಾಗಿಲಿನಿಂದ ಬರಬಹುದಾ?


ಕರ್ನಾಟಕದ ಯಾವುದೇ ಗ್ರಾಮ ಅಥವಾ ನಗರವನ್ನು ಸುತ್ತಿ ಬಂದರೂ ಕೇಳಿ ಬರುತ್ತಿರುವುದು ಇಂಥದ್ದೇ ಪ್ರಶ್ನೆಗಳು. ಜನಕ್ಕೆ ಅತಂತ್ರ ಸರ್ಕಾರದ ಅಂತಃಕಲಹ ರೇಜಿಗೆ ಹುಟ್ಟಿಸಿದೆ. ಮೊದಲು ಜೆಡಿಎಸ್-ಕಾಂಗ್ರೆಸ್ ಜಂಟಿ ಸರ್ಕಾರ, ಅದೂ ಬರಕತ್ತಾಗದೆ ಆ ನಂತರ ಬಂದ ಯಡ್ಡಿ-ಕುಮ್ಮಿ 20:20 ಪ್ರಭುತ್ವ. ಇದರಿಂದ ರೋಸತ್ತು ಬಿಜೆಪಿಗೆ ಬಹುಮತ ಕೊಟ್ಟರೆ ಅಲ್ಲೂ ಇದೇ ನಿರಂತರ; ಹೀಗಾಗಿ ಜನಕ್ಕೊಂದು ಸಂಪೂರ್ಣ ಬಹುಮತದ ಸರ್ಕಾರ ಬೇಕಾಗಿದೆ.

ಆದರೆ ಸದ್ಯದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿದೆ. ಏನೇ ಕಾಂಗ್ರೆಸ್ ಅಲೆ, ಬಿಜೆಪಿ ವಿರೋಧಿ ಅಲೆ ಎಂದೆಲ್ಲ ಲೆಕ್ಕ ಹಾಕಿದರೂ ಪೂರ್ಣ ಮೆಜಾರಿಟಿಯಿನ್ನೂ ಮರೀಚಿಕೆಯಾಗೇ ಉಳಿದಿದೆ. ಮೇಲು ನೋಟಕ್ಕೆ ಕಾಂಗ್ರೆಸ್ ಗಾಳಿಯೇನೋ ಬೀಸುತ್ತಿದೆ. ಆದರೆ ತನ್ನ ಕಾಲ ಮೇಲೆ ತಾನು ನಿಂತು ಸರ್ಕಾರ ರಚಿಸುವಷ್ಟು ಶಕ್ತಿ ಕಾಂಗ್ರೆಸ್ಸಿಗಿದೆಯೆ? ಹಾಗೊಮ್ಮೆ ಬಹುಮತ ಬಾರದೆ ಹೋದರೆ ಮತ್ತೆ ಅದೇ ಕಿಚಡಿ ಪರಿಸ್ಥಿತಿ ಉದ್ಭವಿಸಿದರೆ ಗತಿಯೇನು?

ಇಂಥ ಆತಂಕ, ತಳಮಳಗಳ ನಡುವೆಯೇ ಮತದಾರನ ಮುಂದೆ ಹೆಚ್ಚು ಸಮಯಾವಕಾಶವಿಲ್ಲ. ಚುನಾವಣೆಗಿನ್ನು ನಾಲ್ಕೇ ದಿನ ಬಾಕಿಯಿದೆ. ಒಂದೆಡೆ ಕುಮಾರಸ್ವಾಮಿ, ದೇವೇಗೌಡರ ಪ್ರಚಾರ, ಇನ್ನೊಂದೆಡೆ ಮೋದಿ, ಸುಷ್ಮಾ, ನಾಯ್ಡು ಅನಂತ್‌ಕುಮಾರ್ ಅಬ್ಬರ, ಇದೆಲ್ಲಕ್ಕೂ ಮಿಗಿಲಾಗಿ ಕಾಂಗ್ರೆಸ್ ಯುವರಾಜ ರಾಹುಲ್ ಗಾಂಧಿಯ ಯಾತ್ರೆಯ ಸಪ್ಪಳ ಜೋರಾಗೇ ಇದೆ. ಬಿಜೆಪಿಗೆ ಯಾರನ್ನೂ ಟೀಕಿಸುವ, ಯಾವ ಪುರುಷಾರ್ಥಕ್ಕೆ ಜನ ತನಗೆ ಮತ ನೀಡಬೇಕೆಂದು ಕೇಳುವ ಯಾವ ನೈತಿಕತೆಯೂ ಉಳಿದಂತಿಲ್ಲ. ಇನ್ನು ಜೆಡಿಎಸ್ ನಾಯಕ ಕುಮಾರಸ್ವಾಮಿಯ ಭಿನ್ನ-ವಿಭಿನ್ನ ಶೈಲಿಯ ಕೋರಿಕೆಗಳ ಧ್ವನಿಮುದ್ರಿಕೆ ಮೊಬೈಲಿನಿಂದ ಮೊಬೈಲಿಗೆ ಹರಿದಾಡುತ್ತಿವೆಯಾದರೂ ಜನಕ್ಕದು ಸಾಧ್ಯವೆಂಬ ಆತ್ಮವಿಶ್ವಾಸ ಮೂಡುತ್ತಿಲ್ಲ.

ಹಳೇ ಮೈಸೂರು ಪ್ರಾಂತ್ಯದಲ್ಲಿ ಜೆಡಿಎಸ್‌ಗಾಗಲಿ, ದೇವೇಗೌಡರಿಗಾಗಲಿ, ಜನಪ್ರಿಯತೆ ಕುಸಿದಿದೆಯೆಂದಲ್ಲ. ಆದರೆ ಪರಿಸ್ಥಿತಿ ಹಿಂದಿನಂತಿಲ್ಲ. ಹಾಸನದಲ್ಲಿ ಜೆಡಿಎಸ್‌ಗೆ ಮೊದಲಿನಷ್ಟು ವರ್ಚಸ್ಸಿಲ್ಲ, ಜನಕ್ಕೆ ಬದಲಾವಣೆ ಬೇಕು. ಭವಾನಿ ರೇವಣ್ಣರ ರಾಜಕೀಯ ಪ್ರವೇಶದ ಕುರಿತಂತೆ ಪಿತಾಮಹ ದೇವೇಗೌಡರ ನಿರಾಸಕ್ತಿಗೆ ಅನಿತಾ ಕುಮಾರಸ್ವಾಮಿ ಪರ ಒಲುಮೆಯೇ ಕಾರಣವೆಂದು ರೇವಣ್ಣ ಮುನಿಸಿಗೆ ಬಿದ್ದ ಸುದ್ದಿಯಿದೆ. ಹಾಗೆ ಕುಮಾರಸ್ವಾಮಿ ಮತ್ತು ರೇವಣ್ಣರ ಮಧ್ಯೆ ಮುನಿಸಾದ ಸಾಧ್ಯತೆಯೂ ದಟ್ಟಗೊಂಡಿದೆ. ದೇವೇಗೌಡರಲ್ಲಿ ಹಿಂದಿನ ಹುಮ್ಮಸ್ಸು




ಉಳಿದಿಲ್ಲ. ಇವರ ಹೊರತಾಗಿ ಜಮೀರ್, ಚಲುವರಾಯಸ್ವಾಮಿ ಥರದವರಿಗೆ ರಾಜ್ಯಮಟ್ಟದ ವರ್ಚಸ್ಸು-ವ್ಯಕ್ತಿತ್ವ ಎರಡೂ ಇಲ್ಲ.

ಕಳೆದ ಚುನಾವಣೆಯಲ್ಲಿದ್ದ ಜೆಡಿಎಸ್‌ನ ಪ್ರಾಬಲ್ಯ ಎತ್ತಿಂದೆತ್ತ ಲೆಕ್ಕ ಹಾಕಿದರೂ ಹೇಳಿಕೊಳ್ಳುವ ಮಟ್ಟಿಗೆ ವೃದ್ಧಿಸಿಲ್ಲ. ಇಡೀ ಮೈಸೂರು ಜಿಲ್ಲೆಯಲ್ಲಿ ಜಿ.ಟಿ. ದೇವೇಗೌಡರ ಹೊರತಾಗಿ ಬೇರೆ ತಲೆಯ ಕಾಣಿಸುತ್ತಿಲ್ಲ. ಮಂಡ್ಯದಲ್ಲಿ ಡಿ.ಸಿ. ತಮ್ಮಣ್ಣ ಮತ್ತು ಶ್ರೀನಿವಾಸ್ ಗೆದ್ದರೆ ಅದೇ ಹೆಚ್ಚು. ರಾಮನಗರದಲ್ಲಿ ಕುಮಾರಸ್ವಾಮಿ ಸಲೀಸಾಗಿ ಗೆಲ್ಲಬಹುದು. ಆದರೆ ಚನ್ನಪಟ್ಟಣ ಹಿಂದಿನಷ್ಟು ಸುಲಭವಲ್ಲ. ಮಾಗಡಿಯಲ್ಲಿ ಈ ಬಾರಿ ಬಾಲಕೃಷ್ಣರಿಗೂ ಗೆಲುವು ಸುಲಭವಲ್ಲ.

ಇನ್ನು ಬೆಂಗಳೂರಿಗೆ ಬಂದರೆ ಜೆಡಿಎಸ್ ಈ ಬಾರಿ ಕೊಂಚ ಸುಧಾರಿಸಿಕೊಳ್ಳಬಹುದು. ಹಿಂದೆ ಚಾಮರಾಜಪೇಟೆಯಿಂದ ಗೆದ್ದಿದ್ದ ಜಮೀರ್ ಜೊತೆ ಮಹಾಲಕ್ಷ್ಮೀಲೇಔಟ್‌ನ ಗೋಪಾಲಯ್ಯ ಮತ್ತು ಯಲಹಂಕದಲ್ಲಿ ಚಂದ್ರಪ್ಪ ಗೆಲ್ಲಬಹುದು. ಅಲ್ಲಿಗೆ ಒಂದಿದ್ದ ಜೆಡಿಎಸ್ ಮೂರಾಗಬಹುದು. ಇದಕ್ಕಿಂತ ಹೆಚ್ಚಿಗೆ ಕಾಣಿಸುತ್ತಿಲ್ಲ. ಅತ್ತ ಚಿಕ್ಕಬಳ್ಳಾಪುರ ಮತ್ತು ಕೋಲಾರ ಪ್ರಾಂತ್ಯದಲ್ಲೂ ಹೇಳಿಕೊಳ್ಳುವಂಥ 'ಫಸಲು' ಕಾಣಿಸುತ್ತಿಲ್ಲ. ಹೆಚ್ಚೆಂದರೆ ಎರಡು ಅಥವಾ ಮೂರು ಮಾತ್ರ.

ಹೈದ್ರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಸೇರಿದಂತೆ ಇಡೀ ಕರ್ನಾಟಕದಲ್ಲಿ ಜೆಡಿಎಸ್ ಸಾಧ್ಯಸಾಧ್ಯತೆಗಳನ್ನು ತಡಕಾಡಿದಾಗ ಜೆಡಿಎಸ್ ಈ ಬಾರಿ ಮೂವತ್ತೈದನ್ನು ಮುಟ್ಟುವುದೇ ಅತಿ ಕಷ್ಟ.

ಇದಕ್ಕಿಂತಲೂ ಹೀನಾಯ ಪರಿಸ್ಥಿತಿ ಬಿಜೆಪಿಯದ್ದು. ಸದ್ಯದ ಸಮೀಕ್ಷೆಗಳೆಲ್ಲದರ ಅಚ್ಚರಿಯ ಅಂಶವೊಂದಿದೆ. ಅದು ಬಿಜೆಪಿಗಿಂತಲೂ ಕೆಜೆಪಿಯೇ ಒಂದು ಕೈ ಮುಂದಿದೆ ಎಂಬ ಆಘಾತಕಾರಿ ಬೆಳವಣಿಗೆ. ಕರಾವಳಿಯಲ್ಲಿ ಈ ಬಾರಿ ಬಿಜೆಪಿ ಸಂಪೂರ್ಣವಾಗಿ ನೆಲಕಚ್ಚಲಿದೆ. ಕೆಜೆಪಿ ಕರಾವಳಿಯ ಎರಡು ಸ್ಥಾನಗಳನ್ನು ಬಿಜೆಪಿಯಿಂದ ಕಸಿದುಕೊಂಡರೂ ಅಚ್ಚರಿಯಿಲ್ಲ. ಶಿವಮೊಗ್ಗದ್ದೂ ಅದೇ ಪರಿಸ್ಥಿತಿ. ಬಿಜೆಪಿಯ ಹಾಲೀ ಅಧಿನಾಯಕ ಮತ್ತು ಉಪಮುಖ್ಯಮಂತ್ರಿ ಈಶ್ವರಪ್ಪ ಏನೇ ಸರ್ಕಸ್ ಮಾಡಿದರೂ ಈ ಬಾರಿ ಗೆಲ್ಲುವುದು ಕಷ್ಟ. ಸಾಗರ, ಸೊರಬ, ಹೊನ್ನಾಳಿ, ಶಿಕಾರಿಪುರ, ಭದ್ರಾವತಿ, ತೀರ್ಥಹಳ್ಳಿಯಂಥ ಊರುಗಳಲ್ಲಿ ಬಿಜೆಪಿ ಸಂಪೂರ್ಣವಾಗಿ ನೆಲಕಚ್ಚುವುದು ಶತಸ್ಸಿದ್ಧ. ಇತ್ತ ತುಮಕೂರಿಗೆ ಬಂದರೆ ಈ ಬಾರಿ ಬಿಜೆಪಿ ಒಂದು ಸೀಟು ಗೆಲ್ಲುವುದಕ್ಕೂ ಹೆಣಗಾಡಬೇಕು. ತುಮಕೂರು ನಗರದಲ್ಲಿ ಕೆಜೆಪಿಯ ಜ್ಯೋತಿಗಣೇಶ್ ಈಗಾಗಲೇ ಗೆದ್ದ ಗತ್ತಿನಲ್ಲಿದ್ದಾರೆ. ಬಿಜೆಪಿಯ ಸೊಗಡು ಶಿವಣ್ಣನಿಗಲ್ಲಿ ಭೂತ್ ಕಾಯುವುದಕ್ಕೂ ಕಾರ್ಯಕರ್ತರು ಗತಿಯಿಲ್ಲ. ತುಮಕೂರು ಗ್ರಾಮಾಂತರದಲ್ಲಿ ಬಿಜೆಪಿ ಲೆಕ್ಕಕ್ಕೇ ಇಲ್ಲ. ಜೆಡಿಎಸ್‌ನ ಗೌರಿಶಂಕರ್ ಮತ್ತು ಕೆಜೆಪಿಯ ನಿಂಗಪ್ಪರ ಮಧ್ಯೆ ಯಾರು ಗೆದ್ದರೂ ಅಚ್ಚರಿಯಿಲ್ಲ. ಚಿಕ್ಕನಾಯಕನಹಳ್ಳಿಯಲ್ಲೂ ಕೆಜೆಪಿಯ ಮಾಧುಸ್ವಾಮಿ ಮುಂದಿರುವುದು, ತಿಪಟೂರಿನಲ್ಲಿ ಕೆಜೆಪಿಯ ಲೋಕೇಶ್ವರ್, ತುರುವೇಕೆರೆಯಲ್ಲಿ ಮಸಾಲೆ ಜೈರಾಮ್; ಹೀಗೆ ತುಮಕೂರಿನ ಐದು ಪ್ರಮುಖ ಕ್ಷೇತ್ರಗಳಲ್ಲಿ ಬಿಜೆಪಿ ನಾಮಾವಶೇಷಗೊಂಡು ಅದನ್ನೇ ಕೆಜೆಪಿ ಆಕ್ರಮಿಸಿಕೊಂಡಿದೆ.

ಕುಣಿಗಲ್ ಮತ್ತು ಗುಬ್ಬಿಯಲ್ಲಷ್ಟೇ ಜೆಡಿಎಸ್ ಮುಂದಿರುವುದು ಮತ್ತು ಪಾವಗಡ, ಮಧುಗಿರಿ, ಕೊರಟಗೆರೆ, ಶಿರಾಗಳಲ್ಲಿ ಕಾಂಗ್ರೆಸ್ ಗೆಲುವಿನತ್ತ ಧಾವಿಸುತ್ತಿರುವುದು ಬಿಜೆಪಿ ಪಾಲಿನ ವಿನಾಶ ಮುನ್ಸೂಚನೆಯಷ್ಟೆ.

ಈ ಸಲದ ಅಚ್ಚರಿಯ ಅಂಶವೇ ಬಿಜೆಪಿಯ ಏಕಾಧಿಪತ್ಯವನ್ನು ಕೆಜೆಪಿ ನೆಲಸಮಗೊಳಿಸಿರುವುದು!

ನಿನ್ನೆ ಮೊನ್ನೆಯ ತನಕ ಬಿಜೆಪಿಯ ಭದ್ರ ನೆಲೆಯಂತಿದ್ದ ಗುಲ್ಬರ್ಗದಲ್ಲಿ ಕಾಂಗ್ರೆಸ್ಸಿಗೆ ನೇರಾನೇರ ಪೈಪೋಟಿ

ರಾಜಾಜಿನಗರದಲ್ಲಿ ಸುರೇಶ್‌ಕುಮಾರ್ ಫಜೀತಿ
ಮಿಸ್ಟರ್ ಕ್ಲೀನ್ ಪಟ್ಟ ಮತ್ತು ಕಟ್ಟಬೇಕಾದ ದಂಡ!

ಮಿಸ್ಟರ್ ಕ್ಲೀನ್ ಎಂಬ ಇಂಗ್ಲಿಷ್ ಪದಕ್ಕೆ ಕನ್ನಡದಲ್ಲಿ ಅರ್ಥ ಹುಡುಕುವುದಾದರೆ 'ನಿಷ್ಕಳಂಕ ವ್ಯಕ್ತಿ' ಎಂಬುದೇ ಸೂಕ್ತವೇನೊ. ಮತದಾರರೇ ಭ್ರಷ್ಟರಾಗಿರುವ ಈ ಕಾಲದಲ್ಲೂ ರಾಜಕಾರಣಿಯೊಬ್ಬ, ಅದರಲ್ಲೂ ಕಳಂಕಿತ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾದವನೊಬ್ಬ 'ಮಿಸ್ಟರ್ ಕ್ಲೀನ್' ಆಗೇ ಉಳಿಯುವುದು ಸಾಧ್ಯವೇ?

ಹಾಗೆ ನಿಷ್ಕಳಂಕವಾಗಿ ಉಳಿಯಲು ಆತ ಕಟ್ಟಬೇಕಾದ ದಂಡ ಎಂಥಾದ್ದು?

ಉತ್ತರಕ್ಕಾಗಿ ರಾಜಾಜಿನಗರಕ್ಕೊಮ್ಮೆ ಬಂದರೆ ಸಾಕು ಮಂತ್ರಿ ಸುರೇಶ್‌ಕುಮಾರ್ ತನ್ನ 'ಮಿಸ್ಟರ್ ಕ್ಲೀನ್' ವರ್ಚಸ್ಸಿಗಾಗಿ ಕಟ್ಟಬೇಕಾದ ದಂಡದ ಮೊತ್ತದ ಲೆಕ್ಕ ಸಿಕ್ಕಿಬಿಡುತ್ತದೆ!

ಭ್ರಷ್ಟ ಬಿಜೆಪಿ ಸರ್ಕಾರದ ಮಂತ್ರಿಗಳ ಪೈಕಿ ಸುರೇಶ್‌ಕುಮಾರ್‌ರನ್ನು ಪತ್ರಿಕೆಗಳು ಕರೆದದ್ದು 'ಮಿಸ್ಟರ್ ಕ್ಲೀನ್' ಎಂದೆ. ಅದರರ್ಥ ಸುರೇಶ್‌ಕುಮಾರ್ ನಿಷ್ಕಳಂಕರು. ಬೇರೆಲ್ಲ ಬಿಜೆಪಿ ಮಂತ್ರಿಗಳಂತೆ ಸೆಕ್ಸ್ ಹಗರಣದಲ್ಲಿ ಸಿಕ್ಕಿ ಬೀಳಲಿಲ್ಲ. ಕೋಟಿ ಕೋಟಿ ದೋಚಲು ಹೋಗಿ ಸಿಕ್ಕಿಬಿದ್ದ ನಿದರ್ಶನಗಳೂ ಇಲ್ಲ. ಹೀಗಾಗಿ ಸುರೇಶ್‌ಕುಮಾರ್ 'ಮಿಸ್ಟರ್ ಕ್ಲೀನ್' ಎಂಬ ಬಗ್ಗೆ ಅನೇಕರಿಗೆ ತಕರಾರಿಲ್ಲ. ಆದರೆ ಪವರ್ ಪಾಲಿಟಿಕ್ಸ್‌ಗೆ ಇಷ್ಟೇ ಸಾಕಾಗುವುದಿಲ್ಲ.

ಗೆಲ್ಲಿಸಿದ ಮತದಾರ ಒಂದಲ್ಲ ಒಂದು ನೆರವನ್ನು ಯಾಚಿಸುತ್ತಾನೆ. ಗೆಲ್ಲಿಸಲೆಂದು ಹೆಣಗಾಡುವ ಕಾರ್ಯಕರ್ತರು ಪಕ್ಷಕ್ಕೆ ಅಧಿಕಾರವಿಲ್ಲದಿದ್ದಾಗ ಸಾಚಾಗಳಂತಿರಬಹುದು. ಆದರೆ ಅಧಿಕಾರ ಸಿಕ್ಕ ಮೇಲೆ ಪಕ್ಷದ ಸಿದ್ಧಾಂತ, ಆರೆಸ್ಸೆಸ್ ಆದರ್ಶ (!) ಯಾವುದೂ ಮುಖ್ಯವಾಗುವುದಿಲ್ಲ. ಯಾರೋ ಖದೀಮ ಕಂಟ್ರಾಕ್ಟರ್‌ನ ಕಳ್ಳಬಿಲ್ಲು ಪಾಸ್ ಮಾಡಿಸುವಂತೆ ದುಂಬಾಲು ಬೀಳುತ್ತಾನೆ. ಇನ್ನಾರೋ ಭ್ರಷ್ಟ ಇಂಜಿನಿಯರ್‌ಗೆ ಆಯಕಟ್ಟಿನ ಜಾಗ ಕೋರಿ ಫೋನಾಯಿಸುವಂತೆ ಪೀಡಿಸುತ್ತಾನೆ. ಕೆಲಸ ಮಾಡಿಕೊಟ್ಟರೆ ಸರಿ. ಇಲ್ಲವಾದರೆ ಕಾರ್ಯಕರ್ತ ಮುನಿಸಿಗೆ ಬೀಳುತ್ತಾನೆ. ತಾನು ಸಾಚಾ, ಭ್ರಷ್ಟನಲ್ಲ, ನನ್ನದೇ ಆದರ್ಶವಿದೆ, ಇದೆಲ್ಲಾ ತಪ್ಪು, ಅನ್ಯಾಯ ಎಂದರೆ ಕೇಳುವವರ‍್ಯಾರು?

ಸುರೇಶ್‌ಕುಮಾರ್‌ಗೆ ಆಗಿದ್ದು ಇದೆ. ಮೊದಲ ಬಾರಿ ಶಾಸಕರಾಗಿದ್ದಾಗ ಸಮಸ್ಯೆಯಿರಲಿಲ್ಲ. ಎರಡನೇ ಸಾರಿಗೆ ಒಂದು ಸುತ್ತಿನ ಭಟ್ಟಂಗಿ ಪಡೆ ಮುನಿಸಿಕೊಂಡು ದೂರವಾಯಿತು. ಇದು ಮೂರನೇ ಬಾರಿಯ ಶಾಸಕತ್ವ. ಅದೂ ಬಿಜೆಪಿಗೆ ಬಹುಮತ ಬಂದು ಸುರೇಶ್‌ಕುಮಾರ್ ಪೌರಾಡಳಿತ ಮತ್ತು ಕಾನೂನು ಸಂಸದೀಯ ಸಚಿವರಾದ ಸಂದರ್ಭ. ಅಧಿಕಾರವಿದ್ದೂ ಭ್ರಷ್ಟನಾಗದೆ ಉಳಿಯುವುದೆಂದರೆ ಎಂಥ ಕಷ್ಟವೆಂಬುದು ಬಹುಶಃ ಸುರೇಶ್‌ಕುಮಾರ್‌ಗೆ


ಸುರೇಶ್‌ಕುಮಾರ್


ಮಂಜುಳಾ ನಾಯ್ಡು


ಶೋಭಾ ಕರಂದ್ಲಾಜೆ

ಅರಿವಾಗತೊಡಗಿದ್ದು ಈ ಸಲದ ಚುನಾವಣೆಯಲ್ಲೇ.

ರಾಜಾಜಿನಗರದ ಕ್ಷೇತ್ರ ಬಿಜೆಪಿ ಅಧ್ಯಕ್ಷ ಮಲ್ಲಿಕಾರ್ಜುನ್ ಮುನಿಸಿಕೊಂಡು ಕೆಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆಯ ಬೆನ್ನಿಗೆ ನಿಂತಿದ್ದಾನೆ. ಕೇವಲ ಕ್ಷೇತ್ರ ಬಿಜೆಪಿ ಅಧ್ಯಕ್ಷನಷ್ಟೇ ಅಲ್ಲ, ಇಡೀ ರಾಜಾಜಿನಗರದ ಬಿಜೆಪಿ ಪಕ್ಷದ ಅರ್ಧಕ್ಕರ್ಧ ಪದಾಧಿಕಾರಿಗಳು ಸುರೇಶ್‌ಕುಮಾರ್ ವಿರುದ್ಧ ತಿರುಗಿಬಿದ್ದು ಕೆಜೆಪಿ ಪರ ಪ್ರಚಾರಕ್ಕಿಳಿದಿದ್ದಾರೆ. ಕಳೆದ ಪಾಲಿಕೆ ಚುನಾವಣೆಯಲ್ಲಿ ದಯಾನಂದನಗರ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿದ್ದ ಲೋಕೇಶ್, ಗುಜರಾತಿಗಳು ಮತ್ತು ಮಾರ್ವಾಡಿಗಳ ಮೇಲೆ ಗಣನೀಯ ಹಿಡಿತ ಹೊಂದಿದ್ದ ನಗರ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಹರ್ಷದ್ ಷಾ, ರಾಮಮಂದಿರ ವಾರ್ಡಿನ ಬಿಜೆಪಿ ಕೌನ್ಸಿಲರ್ ಜಯರತ್ನಳ ತಮ್ಮ ಬಾಲಕೃಷ್ಣ, ನಗರ ಬಿಜೆಪಿ ಉಪಾಧ್ಯಕ್ಷ ತಮಿಳರ ಮಲರ್, ಶಿವನಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ನಾಗಣ್ಣ, ಕಳೆದ ಹತ್ತಾರು ವರ್ಷಗಳಿಂದ ಸುರೇಶ್‌ಕುಮಾರ್ ಪಕ್ಕಾ ಅನುಯಾಯಿಗಳಾಗಿದ್ದ ಬಸವೇಶ್ವರನಗರದ ಮರಿಸ್ವಾಮಿ ಮತ್ತು ರಘುನಾಥ್, ಹೀಗೆ ಕಳೆದೆಲ್ಲ ಚುನಾವಣೆಗಳಲ್ಲಿ ಸುರೇಶ್‌ಕುಮಾರ್‌ರನ್ನು ಬೆಂಬಲಿಸಿಕೊಂಡೇ ಬಂದಿದ್ದ ಬಿಜೆಪಿಯ ಪ್ರಮುಖ ಪದಾಧಿಕಾರಿಗಳೆಲ್ಲ ಈಗ ಕೆಜೆಪಿ ಅಭ್ಯರ್ಥಿ ಶೋಭಕ್ಕನ ಪರ ಪ್ರಚಾರಕ್ಕಿಳಿದಿದ್ದಾರೆ.

ಸುರೇಶ್‌ಕುಮಾರ್ ಇಂಥದೊಂದು ಅನಿರೀಕ್ಷಿತ ಬೆಳವಣಿಗೆಯನ್ನು ನಿರೀಕ್ಷಿಸಿರಲಿಕ್ಕಿಲ್ಲ ಅಥವಾ ಇದನ್ನೆಲ್ಲ ನಿರೀಕ್ಷಿಸಿಯೇ ಕೈ ಶುದ್ಧವಾಗಿಟ್ಟುಕೊಳ್ಳುವ ದೃಢ ನಿರ್ಧಾರಕ್ಕೆ ಬಂದಿರಲೂಬಹುದು. ಕೆಲ ದಿನಗಳ ಹಿಂದೆ ಕಾಮಾಕ್ಷಿಪಾಳ್ಯದ ಕೌನ್ಸಿಲರ್ ಬಿಜೆಪಿ ರಂಗಣ್ಣನ ಮನೆಯಲ್ಲಿ ಇನ್ನು ಮುಂದೆ, ನಾನು ಎಲೆಕ್ಷನ್ನಿಗೆ ನಿಲ್ಲೋದೆ ಬೇಡ ಎಂದು ನಿರ್ಧರಿಸಿದ್ದೇನೆ. ಏಕೆಂದರೆ ಓಟಿಗಾಗಿ ಮತದಾರರಿಗೂ ಲಂಚ ಕೊಡಬೇಕು ಮತ್ತು ಕಾರ್ಯಕರ್ತರಿಗೂ ಹಣ ಹಂಚಬೇಕು. ಕೊಳ್ಳೆ ಹೊಡೆದ ದುಡ್ಡಿದ್ದರೆ ಕೊಡಬಹುದು. ಆದರೆ ನನ್ನಿಂದ ಎಲ್ಲಿ ಕೊಳ್ಳೆ ಹೊಡೆಯಲು ಸಾಧ್ಯ?' ಎಂದರಂತೆ ಸುರೇಶ್‌ಕುಮಾರ್.

ಇದು ಆವತ್ತು ಸುರೇಶ್‌ಕುಮಾರ್‌ಗಿದ್ದ ಆತಂಕ. ಅದೇ ನಿಜವಾಗಿದೆ. ಹೀಗೆ ಸುರೇಶ್‌ಕುಮಾರ್ ವಿರುದ್ಧ ತಿರುಗಿ ಬಿದ್ದು ಕೆಜೆಪಿ ಅಭ್ಯರ್ಥಿ ಶೋಭಕ್ಕನ ಪರ ಪ್ರಚಾರಕ್ಕಿಳಿದ ಮಾಜಿ ಬಿಜೆಪಿ ಪದಾಧಿಕಾರಿಗಳೆಲ್ಲ ಮೂಲತಃ ಆರೆಸ್ಸೆಸ್ ಕಟ್ಟಾಳುಗಳು. ದೇಶಪ್ರೇಮ, ಪ್ರಾಮಾಣಿಕತೆಯ ಪಾಠ ಹೇಳುತ್ತಲೇ ಬಂದವರು. ಎಲ್ಲರ ಆರೋಪವೂ ಒಂದೇ- ಸುರೇಶ್‌ಕುಮಾರ್ ಗೆದ್ದು ಮಂತ್ರಿಯಾಗಿದ್ದೇ ಗೆಲ್ಲಿಸಿದ ಕಾರ್ಯಕರ್ತರನ್ನು ಮರೆತರು ಮತ್ತು ಯಾರೊಬ್ಬರಿಗೂ ಏನೊಂದು ಕೆಲಸವನ್ನೂ ಮಾಡಿಕೊಡಲಿಲ್ಲ!

ಸರಿ, ಏನು ಕೆಲಸ ಮಾಡಿಕೊಡಬೇಕಿತ್ತು? ಎಂದರೆ ಯಾರಲ್ಲೂ ಉತ್ತರವಿಲ್ಲ. ಇನ್ನೂ ಕೆಲವರು ಸುರೇಶ್‌ಕುಮಾರ್ ಕೈಗೆ ಸಿಗುತ್ತಲೇ ಇರಲಿಲ್ಲ ಎನ್ನುತ್ತಾರೆ. 'ಒಂದಲ್ಲ ಎರಡು ಖಾತೆ ಮಂತ್ರಿ ಅಲ್ವೇನ್ರೀ... ಎಲ್ಲಿ ಬಿಡುವಾಗಿರೋದಕ್ಕೆ ಸಾಧ್ಯ' ಎಂದರೆ 'ಮತ್ಯಾಕ್ರೀ ರಾಜಕೀಯಕ್ಕೆ ಬರಬೇಕು' ಎಂದು ಪ್ರಶ್ನೆ ಹಾಕುತ್ತಾರೆ. ಹಾಗಾದರೆ ರಾಜಕೀಯಕ್ಕೆ

ದುಡ್ಡಿನ ದರ್ಪದ ಶೋಭಕ್ಕ, ಇಷ್ಟೆಲ್ಲ ಗಳಿಸಿದ್ದು ಎಲ್ಲಿಂದ?

ಸದ್ಯ ರಾಜಾಜಿನಗರದಲ್ಲಿ ಶೋಭಕ್ಕನ ದುಡ್ಡಿನ ದೌಲತ್ತಿಗೆ ಮಾರು ಹೋಗದ ಪುಢಾರಿಗಳೇ ಇಲ್ಲ. ಬೋಗಸ್ ಬಿಲ್, ದಂಧೆ ಕಳಪೆ ಕಾಮಗಾರಿ ಲೂಟಿಗೆ ಕೈ ಜೋಡಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಬಿಜೆಪಿಯ ಬಹುತೇಕ ಕೌನ್ಸಿಲರ್‌ಗಳಿಗೆ ಸುರೇಶ್‌ಕುಮಾರ್ ವಿರುದ್ಧ ಸಿಟ್ಟಿತ್ತು. ಅದನ್ನೇ ಬಳಸಿಕೊಂಡ ಶೋಭಾ ನಾಲ್ವರು ಬಿಜೆಪಿ ಕೌನ್ಸಿಲರ್‌ಗಳಿಗೆ ತಲಾ 2 ಕೋಟಿಯಂತೆ ಕಾಸು ತಿನ್ನಿಸಿದ್ದಾರೆಂಬ ಮಾಹಿತಿಯಿದೆ. ಮೇಲುನೋಟಕ್ಕೆ ಇವರೆಲ್ಲ ಸುರೇಶ್‌ಕುಮಾರ್ ಪರವಾಗಿದ್ದಾರಾದರೂ ಆಳದಲ್ಲಿ ಶೋಭಾಯಮಾನರೇ!

ಇದಲ್ಲದೆ ಪ್ರಮುಖ ಬಿಜೆಪಿ ಕಾರ್ಯಕರ್ತರನ್ನು ಅವರವರ ಭಾವಕ್ಕೆ ತಕ್ಕಂತೆಯೇ ಶೋಭಾ ಖರೀದಿಸಿದ್ದಾರಂತೆ. ತಲಾ ಎರಡು ಲಕ್ಷದಿಂದ ಹಿಡಿದು ಐವತ್ತು ಲಕ್ಷದವರೆಗೂ ಬಟವಾಡೆಯಾಗಿದೆ. ಜೊತೆಗೆ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಿಗೂ ಶೋಭಾ ಗಾಳ ಹಾಕಿದ್ದಾರೆ. ಕಾಂಗ್ರೆಸ್ ಟಿಕೆಟ್ಟಿಗೆ ಹೆಣಗಾಡಿ ಬಂಡೆದ್ದ ಒಬ್ಬ ನಾಯಕರಿಗೆ ಐವತ್ತು ಲಕ್ಷ, ಜೆಡಿಎಸ್ ಪದಾಧಿಕಾರಿಯೊಬ್ಬನಿಗೆ 25 ಲಕ್ಷ ಇದು ಶೋಭಾ ಕರುಣಿಸಿದ ಸ್ಯಾಂಪಲ್ ಮೊತ್ತ.

ಗಲ್ಲಿ ಮಟ್ಟದ ಯಾರೇ ಪುಢಾರಿ ಬಂದರೂ ಆತನಿಗೆ 2 ಲಕ್ಷ ಗ್ಯಾರಂಟಿ. ಸಾಲದ್ದಕ್ಕೆ ಆತನ ಪ್ರತಿ ಬೆಂಬಲಿಗನಿಗೂ ದಿನನಿತ್ಯದ ಬಾಟಾ ಕಾಸೆಂದು ಸಾವಿರ ರೂಪಾಯಿ. ಇದಲ್ಲದೆ ಪ್ರತಿ ಮನೆಯ ಗುರುತಿನ ಚೀಟಿಯ ಜೆರಾಕ್ಸ್ ಪಡೆದು ತಲಾ ಓಟಿಗೆ ಸಾವಿರ ರೂಪಾಯಿಯಂತೆ ವ್ಯವಸ್ಥಿತವಾಗಿ ಹಂಚಲಾಗುತ್ತಿದೆ. ಟೀವಿಯ ಸೆಟ್‌ಟಾಪ್ ಬಾಕ್ಸ್, ಕಲರ್ ಟಿವಿ, ಫ್ರಿಡ್ಜ್ ಮೊಬೈಲ್ ಸೆಟ್ಟು ಕೊಡುಗೆಯೂ ರಾಜಾರೋಷವಾಗಿ ನಡೆಯುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಮಂಜುಳಾ ನಾಯ್ಡು ಸ್ಥಳೀಕಳಲ್ಲ, ಗೆಲ್ಲುವ ಕುದುರೆ ಅಲ್ಲ. ತಿಮ್ಮೇಗೌಡರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಒಕ್ಕಲಿಗರ‍್ಯಾರೂ ಈ ಬಾರಿ ಕಾಂಗ್ರೆಸ್ಸಿನತ್ತ ನೋಡುತ್ತಿಲ್ಲ. ಪದ್ಮಾವತಿಗೆ ಟಿಕೆಟ್ ಕೊಟ್ಟಿದ್ದರೂ ಗೆಲ್ಲುವ ಸಾಧ್ಯತೆಯಿತ್ತು. ಇನ್ನು ಜೆಡಿಎಸ್ ಅಭ್ಯರ್ಥಿ ಆನಂದ್ ಕೋಟ್ಯಾಧಿಪತಿಯೇ ಹೊರತು ಗೆಲ್ಲುವ ಕುದುರೆ ಅಲ್ಲ.

ಹೀಗಾಗಿ ರಾಜಾಜಿನಗರದ ಮತದಾರನ ಮುಂದೆ ಸದ್ಯಕ್ಕಿರುವುದು ಒಂದೇ ಪ್ರಶ್ನೆ. ಈ ಪಾಟಿ ರೊಕ್ಕ ಚೆಲ್ಲುತ್ತಿರುವ ಶೋಭಕ್ಕ ಅದನ್ನೆಲ್ಲ ಗಳಿಸಿದ್ದು ಎಲ್ಲಿಂದ? ಇಷ್ಟೆಲ್ಲಾ ದುಡ್ಡು ಹಂಚಿ ಗೆದ್ದಳೆಂದರೆ ನಾಳೆ ಅದನ್ನು ದುಡಿಯುವುದಾದರೂ ಎಲ್ಲಿಂದ? ಗೆಲ್ಲಬೇಕಾಗಿರುವುದು ಭ್ರಷ್ಟಾಚಾರದ ದುಡ್ಡೋ ಅಥವಾ ನೈತಿಕ ರಾಜಕಾರಣದ ಅನಿವಾರ್ಯತೆಯೋ?

...ರುವುದು ಬಿಜೆಪಿಯಲ್ಲ, ಬದಲಿಗೆ ಕೆಜೆಪಿ. ಪಕ್ಕದ ...ರ್, ರಾಯಚೂರು, ಕೊಪ್ಪಳಗಳಲ್ಲೂ ಇದೇ ದುರ್ಗತಿ ...ಗೊದಗಿದೆ. ಆಳಂದದಲ್ಲಿ ಈ ಬಾರಿ ಕೆಜೆಪಿಯ ... ಪಾಟೀಲ್ ಗೆದ್ದರೆ ಯಾರೂ ಅಚ್ಚರಿಪಡಬೇಕಿಲ್ಲ. ...ಪುರದಲ್ಲೂ ಕೆಜೆಪಿಯ ಎಂ.ವೈ. ಪಾಟೀಲರೇ ... ಅಭ್ಯರ್ಥಿ. ಇಲ್ಲಿ ಮಾಲೀಕಯ್ಯ ಗುತ್ತೇದಾರ್ ...ರ್ ಅಭ್ಯರ್ಥಿಯಾಗಿ ಜಿದ್ದಾಜಿದ್ದಿ ನಡೆಯುತ್ತಿದ್ದಾರಾದರೂ ...ಇಲ್ಲಿ ಬೇಳೆ ಬೇಯುವಲ್ಲದಂತಾಗಿದೆ. ಚಿಂಚೋಳಿಯಲ್ಲಿ ...ಯ ಸುನೀಲ್ ವಲ್ಯಾಪುರೆ, ಬೀದರ್ ಉತ್ತರದಲ್ಲಿ ...ದಪ್ಪನಾಗಮಾರಪಲ್ಲಿ, ಕನಕಗಿರಿಯಲ್ಲಿ ಬಸವರಾಜ್ ...ಸೂಗೂರು, ಬಿಜಾಪುರ ಜಿಲ್ಲೆಯ ನಾಗಠಾಣದಲ್ಲಿ ...ಕಟಕಧೋಂಡ, ಇಂಡಿಯಲ್ಲಿ ರವಿಕಾಂತ್ ಪಾಟೀಲ್, ...ಲ್‌ನಲ್ಲಿ ಉದಾಸಿ, ಹಿರೇಕೆರೂರಿನಲ್ಲಿ ಬಣಕಾರ್ ...ರಿಯಲ್ಲಿ ನೆಹರು ಓಲೇಕಾರ್, ಬ್ಯಾಡಗಿಯಲ್ಲಿ ...ಶ್ ಸಜ್ಜನ್, ಹೊನ್ನಾಳಿಯಲ್ಲಿ ರೇಣುಕಾಚಾರ್ಯ ...ಕೆರೆಯಲ್ಲಿ ಚಂದ್ರಣ್ಣ, ಚಿತ್ತಾಪುರದಲ್ಲಿ ಗುರುನಾಥ್ ...ಗುಲ್ಬರ್ಗಾ ದಕ್ಷಿಣದಲ್ಲಿ ಹಿರಿಯ ಕಾರ್ಮಿಕ ನಾಯಕ ...ಕಾಂತ ಗೆಲುವಿನತ್ತ ಮುನ್ನುಗ್ಗುತ್ತಿದ್ದಾರೆಂದರೆ ಇಲ್ಲೆಲ್ಲ ನೆಲಕಚ್ಚಿದೆಯೆಂದೇ ಅರ್ಥ.

...ದಿನಲ್ಲಿ ಕೂಡ ಕೆಜೆಪಿ ಅಭ್ಯರ್ಥಿ ವೈಜನಾಥ್ ...ಲ್ ಮುನ್ನಡೆಯಲ್ಲಿರುವುದು ಬಿಜೆಪಿಗೊದಗಿದ ...ತಿಯ ಸಂಕೇತ: ಬಸವಕಲ್ಯಾಣದಲ್ಲಿ ಮಲ್ಲಮ್ಮ ...ರ್, ಕಲಘಟಗಿಯಲ್ಲಿ ನಿಂಬಣ್ಣನವರ್, ದೇವರ ...ಗಿಯಲ್ಲಿ ರಾಜುಗೌಡ ಪಾಟೀಲ್‌ರಂಥ ಕೆಜೆಪಿ ...ರ್ಥಿಗಳೇ ಕಾಂಗ್ರೆಸ್‌ಗೆ ಸರಿಸಮವಾದ ...ಟಿಯೊಡ್ಡುತ್ತಿದ್ದಾರೆ. ಇಲ್ಲೆಲ್ಲ ಬಿಜೆಪಿಯನ್ನು ಕೆಜೆಪಿ ...ಹಾಕಿದೆ.

...ನ್ನು ಹಾಸನದಂಥ ಹಳೇ ಮೈಸೂರಿನ ಜಿಲ್ಲೆಗೆ ... ಬೇಲೂರು, ಸಕಲೇಶಪುರ ಮತ್ತು ಅರಸೀಕೆರೆಯಂಥ ... ಪ್ರಮುಖ ಕ್ಷೇತ್ರಗಳಲ್ಲಿ ಕೆಜೆಪಿಯೇ ಮುಂದಿದೆ. ...ರು, ಚನ್ನಗಿರಿ, ಕಡೂರು, ಹನೂರು ಥರದ ...ಳಲ್ಲೂ ಇದೇ ಪರಿಸ್ಥಿತಿಯಿದೆ. ಈ ಪೈಕಿ ಶೇಕಡ ...ಷ್ಟು ಕ್ಷೇತ್ರಗಳನ್ನು ಕೆಜೆಪಿ ಗೆದ್ದರೂ ಅದರ ಸಂಖ್ಯೆ ...ವತ್ತನ್ನು ಮೀರುತ್ತದೆ ಅಥವಾ ನಲವತ್ತನ್ನು ...ಸಲೂಬಹುದು!

...ದೆಲ್ಲ ಏನನ್ನು ಸೂಚಿಸುತ್ತದೆ?

ರಾಜ್ಯವ್ಯಾಪ್ತಿಯಾಗಿ ಕಾಂಗ್ರೆಸ್ಸಿಗೆ ಪೈಪೋಟಿ ಕೊಡುತ್ತಿರುವುದು ಬಿಜೆಪಿಯಲ್ಲ, ಕೆಜೆಪಿ!

ಹೈದರಾಬಾದ್ ಕರ್ನಾಟಕದಲ್ಲಿ ಬಿಜೆಪಿ ಸಂಪೂರ್ಣವಾಗಿ ನೆಲಕಚ್ಚಿದೆ ಮತ್ತು ಬಿಜೆಪಿಯ ಸ್ಥಾನವನ್ನು ಕೆಜೆಪಿ ಆಕ್ರಮಿಸಿಕೊಂಡಿದೆ. ಮುಂಬಯಿ ಕರ್ನಾಟಕದಲ್ಲೂ ಬಿಜೆಪಿಗೆ ಸರಿಸಮನಾಗಿ ಕೆಜೆಪಿ ಕಾಂಗ್ರೆಸ್ಸಿಗೆ ಸ್ಪರ್ಧೆಯೊಡ್ಡುತ್ತಿದೆ. ಕಾಂಗ್ರೆಸ್ ಒಂದೇ ರಾಜ್ಯವ್ಯಾಪ್ತಿಯನ್ನು ಹೊಂದಿರುವುದು ಮತ್ತು ಅದಕ್ಕಿರುವ ವ್ಯಾಪಕತೆ ಬೇರೆಲ್ಲ ಪಕ್ಷಗಳಿಗಿಲ್ಲದಿರುವುದು, ಸದ್ಯ ಕರ್ನಾಟಕದ ಮತದಾರನ ಮುಂದೆ ಹೊಸ ಸಾಧ್ಯತೆಯೊಂದನ್ನು ತೆರೆದಿಟ್ಟಿದೆ.

ಅದು ಅತಂತ್ರ ಸರ್ಕಾರಗಳಿಂದ ಕರ್ನಾಟಕವನ್ನು ವಿಮುಖಗೊಳಿಸಬೇಕೆಂದರೆ ಕಾಂಗ್ರೆಸ್ ಹೊರತಾಗಿ ಬೇರೆ ಆಯ್ಕೆಯೇ ಇಲ್ಲ.

ಹಳೇ ಮೈಸೂರು ಪ್ರಾಂತ್ಯದಲ್ಲಿ ಜೆಡಿಎಸ್ ವಿರುದ್ಧ ಕಾಂಗ್ರೆಸ್ ಪೈಪೋಟಿಗಿಳಿದರೆ ಕರಾವಳಿ ಭಾಗದಲ್ಲಿ ಅದು ಬಿಜೆಪಿಯನ್ನು ಎದುರಿಸುತ್ತಿದೆ. ಹಾಗೇ ಮಧ್ಯ ಕರ್ನಾಟಕದಲ್ಲಿ ಕೆಜೆಪಿ ಮತ್ತು ಜೆಡಿಎಸ್ ಕಾಂಗ್ರೆಸ್ಸಿಗೆ ಎದುರಾಳಿಗಳಾದರೆ ಉತ್ತರ ಕರ್ನಾಟಕದ ಬಹುತೇಕ ಕ್ಷೇತ್ರಗಳಲ್ಲಿ ಅದಕ್ಕೆ ಕೆಜೆಪಿಯೇ ಪ್ರತಿಸ್ಪರ್ಧಿ. ಇದರರ್ಥ ಬೇರೆ ಯಾವ ಪಕ್ಷಕ್ಕೂ ಕಾಂಗ್ರೆಸ್ಸಿಗಿರುವ ವಿಸ್ತಾರ ಮತ್ತು ಆಗಾಧತೆ ಸಾಧ್ಯವಾಗೇ ಇಲ್ಲ.

ಇದೆಲ್ಲ ಸಾಧ್ಯತೆಗಳ ಪ್ರಕಾರ ಈ ಬಾರಿ ಕನ್ನಡ ಜನತೆ ಕಾಂಗ್ರೆಸ್ಸಿಗೆ ಸಂಪೂರ್ಣ ಬಹುಮತ ನೀಡುವುದು ನಿಶ್ಚಿತ ಮತ್ತು ಅನಿವಾರ್ಯ ಕೂಡ. ಬಹುತೇಕ ಸಮೀಕ್ಷೆಗಳು ಇದನ್ನೇ ಒತ್ತಿ ಹೇಳುತ್ತಿವೆ. ಕಾಂಗ್ರೆಸ್ ಏನಿಲ್ಲವೆಂದರೂ 110 ರಿಂದ 120 ಕ್ಷೇತ್ರಗಳಲ್ಲಿ ಜಯ ಭೇರಿ ಬಾರಿಸುವುದು ಶತಸ್ಸಿದ್ಧ. ಬಿಜೆಪಿ 40 ಸ್ಥಾನಗಳಿಸುವುದು ಕೂಡ ಕಷ್ಟಕರವೆ. ಜೆಡಿಎಸ್ ಕೊಂಚ ಸುಧಾರಣೆ ಕಾಣಬಹುದಾದರೂ ಅದು 35ಕ್ಕಿಂತ ಮೇಲೇರುವುದು ಕಷ್ಟವೆ. ಆದರೆ ಅಚ್ಚರಿಯ ಮತ್ತು ಅನಿರೀಕ್ಷಿತ ಫಲಿತಾಂಶ ಅಂತಿದ್ದರೆ ಅದು ಕೆಜೆಪಿಯದ್ದು. ಕನಿಷ್ಠ 25ರಿಂದ 40 ಸ್ಥಾನಗಳನ್ನು ಕೆಜೆಪಿ ಹಿಡಿದರೂ ಅತಿಶಯವೇನಲ್ಲ!

ಕೆಜೆಪಿ ಬೆಳೆದಷ್ಟೂ ಬಿಜೆಪಿ ಸೊರಗುತ್ತದೆ. ಬಿಜೆಪಿ ನೆಲಕಚ್ಚಿದೆಡೆಯಲ್ಲ ಕೆಜೆಪಿ ಚಿಗುರೊಡೆಯುತ್ತದೆ. ಇನ್ನು ಬಿಎಸ್‌ಆರ್ ಕಾಂಗ್ರೆಸ್ ಐದು ಅಥವಾ ಆರಕ್ಕೇ ತೃಪ್ತಿ ಪಡಬೇಕು. ಹೊಸದೊಂದು ಧೂಮಕೇತುವಿನಂತೆ ಕರ್ನಾಟಕ ರಾಜಕಾರಣದಲ್ಲಿ ಉದ್ಭವಿಸಿದ ಕೆಜೆಪಿ ಮತ್ತು ಯಡಿಯೂರಪ್ಪ ಹೇಗೆ ಕಾಂಗ್ರೆಸ್ಸಿನ ಭಾಗ್ಯದ ಬಾಗಿಲನ್ನು ತೆರೆದಿದ್ದಾರೋ ಅದೇ ರೀತಿ ಬಿಜೆಪಿ ಶವಪೆಟ್ಟಿಗೆಗೆ ಮೊಳೆಯನ್ನೂ ಹೊಡೆಯುತ್ತಿದ್ದಾರೆ.

● ರಾ. ಸೋಮನಾಥ್

ಯಲಹಂಕ: ಅನುಕಂಪದ ಅಲೆಯೇರಿದ ಜೆಡಿಎಸ್ ಚಂದ್ರಪ್ಪ

ಕೊನೇ ಗಳಿಗೆಯಲ್ಲಿ ವಿಶ್ವನಾಥ್‌ರ ಹಣ, ಹೆಂಡ ಮತ್ತು ಗೂಂಡಾಪಡೆಗಳ ಕೈ ಮೇಲಾಗದಿದ್ದರೆ ಈ ಬಾರಿ ಯಲಹಂಕ ಕ್ಷೇತ್ರ ಜೆಡಿಎಸ್ ಅಭ್ಯರ್ಥಿ ಚಂದ್ರಪ್ಪನಿಗೆ ಒಲಿಯುವುದು ಶತಸ್ಸಿದ್ಧ. ಇದು ಯಲಹಂಕದ ಚುನಾವಣಾ ಹಣಾಹಣಿಯ ಸಂಕ್ಷಿಪ್ತ ರೂಪ.


ಚಂದ್ರಪ್ಪ

ಹಾಲಿ ಬಿಜೆಪಿ ಶಾಸಕ ವಿಶ್ವನಾಥ್ ವಿರುದ್ಧ ಭೂಕಬಳಿಕೆ, ಬೋಗಸ್ ಬಿಲ್ ಕರ್ಮಕಾಂಡ, ಗೂಂಡಾಗಿರಿ ಇತ್ಯಾದಿ ಏನೇ ಆರೋಪಗಳಿದ್ದರೂ ಅದನ್ನು ಸರಿದೂಗಿಸಬಲ್ಲ ದುಡ್ಡಿದೆ. ಇದೇ ವಿಶ್ವನಾಥ್ ದುರ್ಗತಿಯ ಮೂಲವೂ ಹೌದು. ಕಳೆದ ಚುನಾವಣೆಯಲ್ಲಿ ವಿಶ್ವನಾಥ್ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಬಿ. ಚಂದ್ರಪ್ಪ ಈಗ ಜೆಡಿಎಸ್ ಅಭ್ಯರ್ಥಿ. ಆವತ್ತು ಜೆಡಿಎಸ್ ಅಭ್ಯರ್ಥಿಯಾಗಿದ್ದ ಅಡಕಮಾರನಹಳ್ಳಿ ಕೃಷ್ಣಪ್ಪ ಈಗ ಚಂದ್ರಪ್ಪ ಪರ ಪ್ರಚಾರಕ್ಕಿಳಿದಿದ್ದಾರೆ. ಕಾಂಗ್ರೆಸ್ ಜಾತಿಯಲ್ಲಿ ಗೊಲ್ಲರಾದ ಗೋಪಾಲಕೃಷ್ಣರಿಗೆ ಬಿ. ಫಾರ್ಮ್ ನೀಡಿದೆ.

ವಿಶ್ವನಾಥ್ ಜಾತಿಯಲ್ಲಿ ತೆಲುಗು ರೆಡ್ಡಿ. ಜೆಡಿಎಸ್‌ನ ಚಂದ್ರಪ್ಪ ಜಾತಿಯಲ್ಲಿ ಒಕ್ಕಲಿಗರಾಗಿರುವುದೇ ಅವರ ಪ್ಲಸ್ ಪಾಯಿಂಟ್. ಸದ್ಯ ದಾಸನಪುರದ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಗೆದ್ದಿರುವ ಚಂದ್ರಪ್ಪನವರಿಗೆ ದಾಸನಪುರ ಹೋಬಳಿಯುದ್ದಕ್ಕೂ ವ್ಯಾಪಕ ಬೆಂಬಲವಿದೆ. ಕಳೆದ ಬಾರಿ ವಿಶ್ವನಾಥ್‌ಗೆ 60 ಸಾವಿರದಷ್ಟು ಮತಗಳು ಬಿದ್ದಿದ್ದರೆ ಕಾಂಗ್ರೆಸ್‌ನಿಂದ ನಿಂತಿದ್ದ ಚಂದ್ರಪ್ಪ 44 ಸಾವಿರಕ್ಕೂ ಅಧಿಕ ಪಡೆದಿದ್ದರು. ನಡುವಿನ ಅಂತರವಿದ್ದದ್ದು 16 ಸಾವಿರ. ಆದರೆ ಜೆಡಿಎಸ್ ಅಭ್ಯರ್ಥಿಯಾಗಿದ್ದ ಅಡಕಮಾರನಹಳ್ಳಿ ಕೃಷ್ಣಪ್ಪ ಪಡೆದದ್ದು 37 ಸಾವಿರದಷ್ಟು ಮತಗಳನ್ನು.

ಈಗ ಹಿಂದಿದ್ದ ಜೆಡಿಎಸ್ ಮತಗಳ ಪೈಕಿ ಕನಿಷ್ಠ 30 ಸಾವಿರದಷ್ಟು ಚಂದ್ರಪ್ಪಗೆ ಬಿದ್ದರೂ ಸಾಕು. ಹಿಂದೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಪಡೆದ 44 ಸಾವಿರ ಮತಗಳ ಪೈಕಿ ಕನಿಷ್ಠ 20 ಸಾವಿರದಷ್ಟು ಬಂದರೂ ಎಲ್ಲ ಸೇರಿ ಐವತ್ತು ಸಾವಿರದಷ್ಟು ಮತಗಳು ಮೂಲಗಂಟಾಗಿ ಸೇರುತ್ತದೆ. ದಾಸನಪುರ ಹೋಬಳಿಯೊಂದರಲ್ಲೇ ಒಂದು ಲಕ್ಷದ ಐದು ಸಾವಿರದಷ್ಟು ಒಕ್ಕಲಿಗ ಮತದಾರರಿದ್ದಾರೆ. ಈ ಪೈಕಿ ಶೇ. 80 ರಷ್ಟು ಮತದಾನ ನಡೆದರೂ ಅದರಲ್ಲಿ 45 ಸಾವಿರ ಮತಗಳು ಚಂದ್ರಪ್ಪಗೆ ಬೀಳುವುದು ಪಕ್ಕಾ. ಹೆಸರಘಟ್ಟ ಹೋಬಳಿಯಲ್ಲೂ ಒಕ್ಕಲಿಗರೇ ಜಾಸ್ತಿ. ಇನ್ನು ಯಲಹಂಕ ಹೋಬಳಿ ಮತ್ತು ಬಿಬಿಎಂಪಿ ವಾರ್ಡ್‌ಗಳ 1 ಲಕ್ಷದ 40 ಸಾವಿರದ ಮತಗಳನ್ನು ಮೂರೂ ಪಕ್ಷಗಳು ಹಂಚಿಕೊಂಡರೂ ಕನಿಷ್ಠ 25 ಸಾವಿರ ಮತಗಳಾದರೂ ಜೆಡಿಎಸ್ ಪಾಲಾಗಲೇಬೇಕು. ಕಾಂಗ್ರೆಸ್ ಅಭ್ಯರ್ಥಿ ಗೋಪಾಲಕೃಷ್ಣ ಒಕ್ಕಲಿಗರಲ್ಲವಾದ್ದರಿಂದ ದಲಿತರು, ಮುಸ್ಲಿಂ, ಹಿಂದುಳಿದವರ ಮತಗಳನ್ನೇ ಅವಲಂಬಿಸಬೇಕು. ಮಾಜಿ ಶಾಸಕ ಸೂರ್ಯನಾರಾಯಣಗೌಡರ ಮಗ ಗೋಪಿನಾಥ್‌ಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದರೆ ಲೆಕ್ಕ ಬೇರೆಯಾಗುತ್ತಿತ್ತು.


ವಿಶ್ವನಾಥ್

ಹೀಗಾಗಿ ಬಿಜೆಪಿಯ ವಿಶ್ವನಾಥ್ ಮತ್ತು ಜೆಡಿಎಸ್‌ನ ಚಂದ್ರಪ್ಪ ಮಧ್ಯೆಯೇ ಹಣಾಹಣಿ ಏರ್ಪಟ್ಟಿದೆ. ಹಿಂದಿನಂತೆ ಈಗ ಬಿಜೆಪಿ ಅಲೆಯಿಲ್ಲ, ಬಿಜೆಪಿ ವಿರೋಧಿ ಅಲೆ ಒಂದೆಡೆಯಾದರೆ ಮತ್ತೊಂದೆಡೆ ಕಳೆದ ಬಾರಿ ಸೋತಿದ್ದ ಚಂದ್ರಪ್ಪ ತಮ್ಮ ನಾಲ್ಕೆಕರೆ ಭೂಮಿಯನ್ನು ಮಾರಿದ ದುಡ್ಡಲ್ಲೇ ಸೋತಿದ್ದೆಂಬ ಅನುಕಂಪದ ಅಲೆಯೂ ಇದೆ. ಕೊನೇಗಳಿಗೆಯಲ್ಲಿ ವಿಶ್ವನಾಥ್ ಏನೇನು ತಂತ್ರ ಬಳಸುತ್ತಾರೋ ಏನೆಲ್ಲ ದುಡ್ಡು ಸುರಿಯುತ್ತಾರೋ ಗೊತ್ತಿಲ್ಲ. ಜನ ದುಡ್ಡೂ ಕಾಸಿಗೆ ಮಾರು ಹೋಗದಿದ್ದರೆ ಜೆಡಿಎಸ್ ಅಭ್ಯರ್ಥಿ ಚಂದ್ರಪ್ಪ ಗೆಲ್ಲುವುದಂತೂ ಗ್ಯಾರಂಟಿ. ○

...ದು ಟ್ರಾನ್ಸ್‌ಫರ್, ಕಾಂಟ್ರಾಕ್ಟ್, ಡೀಲು, ದುಡ್ಡು ...ದಕ್ಕಾ ಎಂದು ಕೇಳಿಬಿಟ್ಟರೆ ಅವರಲ್ಲಿ ಉತ್ತರವಿಲ್ಲ. ...ದು ಸುರೇಶ್‌ಕುಮಾರ್ 'ಯಾರಿಗೇನೂ ನೆರವಾಗಲಿಲ್ಲ' ... ಆರೋಪಿಸುವವರ ಮನಸ್ಥಿತಿ. ವಿಕಟವೆಂದರೆ ಇದೇ ... ಪ್ರತಿ ಚುನಾವಣೆಯಲ್ಲೂ 'ಸುರೇಶ್‌ಕುಮಾರ್ ...ಣಿಕ ವ್ಯಕ್ತಿ. ಯಾವುದೇ ಭ್ರಷ್ಟಾಚಾರದ ಕಳಂಕವಿಲ್ಲ. ... ಅವರ ಬಳಿ ಎಲೆಕ್ಷನ್ ಕರಪತ್ರಕ್ಕೂ ದುಡ್ಡಿಲ್ಲ. ... ಅಭ್ಯರ್ಥಿಗಳಂತೆ ರೌಡಿಗಳಿಗೆ, ಹಣ-ಹೆಂಡ ...ದಕ್ಕೆ ಕಾಸೇ ಇಲ್ಲ...' ಎಂದು ಪ್ರಚಾರ ಮಾಡಿದವರು. ...ದರರ್ಥ ಸುರೇಶ್‌ಕುಮಾರ್ 'ಮಿ. ಕ್ಲೀನ್' ಆಗಿಯೂ ...ಕು ಮತ್ತು ಬೆಂಬಲಿಗರಿಗೆ ಅನುಕೂಲವನ್ನೂ ...ಕೊಡಬೇಕು! ಒಬ್ಬ ಮನುಷ್ಯ ನಿಷ್ಕಳಂಕನಾಗೂ ಇದ್ದು ...ವರಿಗೆಲ್ಲ ಅನುಕೂಲವನ್ನೂ ಕಲ್ಪಿಸಲು ಹೇಗೆ ಸಾಧ್ಯ? ...ದು ತತ್ವ ಮತ್ತು ಆದರ್ಶಕ್ಕೂ ಸದ್ಯದ ಚುನಾವಣಾ ... ಇರುವ ವಿಪರ್ಯಾಸ ಮತ್ತು ಸಂಘರ್ಷ ಕೂಡ. ...ದಾರನಿಗಾಗಲಿ, ಕಾರ್ಯಕರ್ತನಿಗಾಗಲಿ ಇಂಥ ಸೂಕ್ಷ್ಮ ...ವೆನಿಸುವುದಿಲ್ಲ. ಆತನಿಗೆ ಪಕ್ಷ ಅಧಿಕಾರಕ್ಕೆ ಬಂತೆಂದರೆ ...ಗಬೇಕು. ಕೆಲಸ ಕಾನೂನು ಬದ್ಧ, ನ್ಯಾಯ ...ಗಿದ್ದರೆ ಸರಿ, ಇಲ್ಲದಿದ್ದರೆ?

...ವತ್ತು ಸುರೇಶ್‌ಕುಮಾರ್ ಪ್ರಾಮಾಣಿಕತೆ ಮತ್ತು ...ವಣಾ ರಾಜಕಾರಣದ ಸೂಕ್ಷ್ಮ ಪ್ರಶ್ನೆಯೊಂದರ ... ನಾಯಕನಂತೆ ಕಾಣಿಸುತ್ತಾರೆ. ಮಂತ್ರಿಯಾಗುವ ...ಯು ಕಟ್ಟಿಸಿದ್ದ ಮನೆಯಲ್ಲಿದ್ದದ್ದಾಗಲಿ, ಸ್ವಂತಕ್ಕೊಂದು ...ರಲಿಲ್ಲ ಎಂಬುದಾಗಲಿ ಮುಖ್ಯವಾಗುವುದಿಲ್ಲ. ...ವೇಶ ಪಡೆದರೆಂಬ ತಾಂತ್ರಿಕ ಲೋಪವೊಂದನ್ನೇ ...ದು ಮಾಡಿ ಬೊಬ್ಬೆ ಹಾಕಲಾಗುತ್ತದೆ. ...ಣಿಯೊಬ್ಬ ನಿಷ್ಕಳಂಕನಾಗೇ ಉಳಿಯಬೇಕೆಂದರೆ ...ಕಟ್ಟಬೇಕಾದ ದಂಡವೆ? ಪಕ್ಷದ ಶಿಸ್ತಿನ ಸಿಪಾಯಿಗಳ ... ಅಧಿಕಾರದ ಮುಂದೆ ಅರ್ಥ ಕಳೆದುಕೊಳ್ಳುತ್ತಾ? ...ಜೆಪಿ ಕೋಮುವಾದಿ ಪಕ್ಷ, ಧರ್ಮಾಂಧರ ಕೂಟ, ...ವಾಹಿಯ ಪ್ರತಿಪಾದಕ ಇತ್ಯಾದಿ ಆಪಾದನೆಗಳ ...ಯೂ 'ಮಿ. ಕ್ಲೀನ್' ಎಂಬ ಹೊಗಳಿಕೆಗೆ ಪಾತ್ರರಾಗಿದ್ದು ...ಕುಮಾರ್ ಮಾತ್ರ. ಕೆಸರಲ್ಲಿ ಕಮಲದ ಅರ್ಥ ...ಗಲಿ. ಆದರೆ ಸಾಮಾಜಿಕ ಬದುಕಿನಲ್ಲಿ, ಶಕ್ತ ...ರಣದಲ್ಲಿ 'ಮಿ. ಕ್ಲೀನ್' ಎಂಬ ಉದಾಹರಣೆಗಾದರೂ ...ತ್ತ ಬೇಡವೇ?

...ಜೆಪಿ ದುರಾಚಾರದ ವಿರುದ್ಧ ಅದರೊಳಗೇ ... ಉದಾಹರಣೆಯ ಸ್ಯಾಂಪಲ್ ಬಿಟ್ಟಿದ್ದಾದರೂ ...ವೇ? ಕೋಭಿಕಸ [illegible] ದುಡ್ಡು ಮತ್ತು ... ಅಲೆಯೊಡನೆ ಸುರೇಶ್‌ಕುಮಾರ್ ಸೋಲ...

... ಅದು ಸಾವ್ಯದ ಸೋಲು!

... [illegible] ಭ್ರಷ್ಟಕೂಟದ ಗೈರುಹಾಜರಿಯ [illegible] ... ಇಲ್ಲವೆ?

● [illegible]

ಬೊಮ್ಮನಹಳ್ಳಿ: ಸತೀಶ್‌ರೆಡ್ಡಿ ಅಟ್ಟಹಾಸದ ಅಂತ್ಯ?

ಬೊಮ್ಮನಹಳ್ಳಿಯ ಬಿಜೆಪಿ ಶಾಸಕ ಸತೀಶ್ ರೆಡ್ಡಿಯ ಹಣ ಹೆಂಡದ ಅಟ್ಟಹಾಸ ಕೊನೆಗೆ ಆತನಿಗೇ ಮುಳುವಾಗುವ ಸಾಧ್ಯತೆಯಿದೆ!


ಸತೀಶ್ ರೆಡ್ಡಿ

ಬಿಜೆಪಿ ಆಳ್ವಿಕೆಯಲ್ಲಿ ಸರ್ಕಾರಿ ಭೂಮಿ ದೋಚುವುದನ್ನೇ ಕಾಯಕ ಮಾಡಿಕೊಂಡ ಸತೀಶ್ ರೆಡ್ಡಿಯ ಗೂಂಡಾಗಿರಿ, ಭ್ರಷ್ಟಾಚಾರದ ಫಲವಾಗಿ ಬೊಮ್ಮನಹಳ್ಳಿಯ ಗಲ್ಲಿಗಲ್ಲಿಗಳಲ್ಲಿ ರಿಯಲ್ ಎಸ್ಟೇಟ್ ರೌಡಿ ಪಡೆಗಳು ಹುಟ್ಟಿಕೊಂಡವು. ಗ್ಯಾಂಗ್‌ವಾರ್‌ಗಳು ಭುಗಿಲೆದ್ದು ಅನಾಹುತಕಾರಿ ಕೊಲೆಗಳಾದವು. ಖತರ್‌ನಾಕ್ ಪಾತಕಿ ಕವಳನನ್ನು ಜೊತೆಹಾಕಿಕೊಂಡೇ ಬಹಿರಂಗವಾಗಿ ಪೋಜು ಕೊಡುತ್ತಿದ್ದ ಸತೀಶ್ ರೆಡ್ಡಿಗೆ ತಾನೊಬ್ಬ ಶಾಸಕ, ಮರ್ಯಾದಸ್ಥರ ಮಾನ ಕಾಯಬೇಕಾದ ಹೊಣೆಗಾರಿಕೆಯುಳ್ಳವ ಎಂಬುದು ಕೂಡ ನೆನಪಾಗಲಿಲ್ಲ.

ಇದೆಲ್ಲದರ ಪ್ರತಿಫಲವೇ ಸದ್ಯದ ಎಲೆಕ್ಷನ್ ಅನಾಚಾರ. ಇನ್ನು ಬಿಜೆಪಿ ಅಧಿಕಾರಕ್ಕೆ ಬರಲಾರದೆಂದು ಗ್ಯಾರಂಟಿಯಾಗೇ ಕೊನೆಗಳಿಗೆಯಲ್ಲಿ ಕಾಂಗ್ರೆಸ್ ಕದ ತಟ್ಟಿದ ಸತೀಶ್ ರೆಡ್ಡಿ ಒಂದು ಹಂತದಲ್ಲಿ ಕಾಂಗ್ರೆಸ್ ಟಿಕೆಟ್ಟಿಗಾಗಿ ಹತ್ತು ಕೋಟಿ ಸುರಿಯುವುದಕ್ಕೂ ಸಿದ್ಧವಾಗಿದ್ದ. ಹುಷಾರಾದ ಕಾಂಗ್ರೆಸ್ ಹೈಕಮಾಂಡ್ ಸತೀಶ್ ರೆಡ್ಡಿಯ ಜಾತಕ ನೋಡಿಯೇ 'ಒದ್ದಕ್ಹಾ ಒದ್ದು' ಎಂದು ಸಾಗಹಾಕಿತು. ಕೊನೆಗೆ ವಿಧಿಯಿಲ್ಲದೆ ಹಳೇಗಂಡನ ಪಾದವೇ ಗತಿಯೆಂದು ರೆಡ್ಡಿ ಬಿಜೆಪಿಯ ಬಾವುಟ ಹಿಡಿದಿದ್ದಾನೆ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಕುಪೇಂದ್ರ ರೆಡ್ಡಿ ವಿರುದ್ಧ 12 ಸಾವಿರದಷ್ಟು ಮತಗಳ ಅಂತರದಿಂದ ಗೆದ್ದ ಸತೀಶ್ ರೆಡ್ಡಿ ಬಿಜೆಪಿ ಆಳ್ವಿಕೆಯಲ್ಲಿ ಮಾಡಿದ ಲೂಟಿಯೇ ಒಂದು ಪುಸ್ತಕವಾಗುವಷ್ಟಿದೆ. ಬೇಕಾಬಿಟ್ಟಿ ಫ್ಲೈಓವರ್, ಮೋರಿ, ಡಾಂಬರ್ ಇತ್ಯಾದಿ ಕಾಮಗಾರಿಗಳ ಹೆಸರಲ್ಲಿ ಬೊಮ್ಮನಹಳ್ಳಿ ಕ್ಷೇತ್ರವೊಂದಕ್ಕೆ 1050 ಕೋಟಿ ರೂಪಾಯಿಗಳ ಅನುದಾನ ಮಂಜೂರಾಯಿತಾದರೂ ನಡೆದ ಕಾಮಗಾರಿ ಮಾತ್ರ ಪುಸ್ತಕದಲ್ಲಷ್ಟೇ. ಬೋಗಸ್ ಬಿಲ್ ತಗಾದಾದ ಬಗ್ಗೆ ತನಿಖೆಗಿಳಿದ ಬಿಎಂಟಿಎಫ್‌ಗೆ ಇವತ್ತಿಗೂ ಬೊಮ್ಮನಹಳ್ಳಿ ಕಾಮಗಾರಿಗಳ ಲೆಕ್ಕ ಸಿಗುತ್ತಿಲ್ಲ. ಸಾಲದ್ದಕ್ಕೆ ದಲಿತರ ಭೂಮಿ ದೋಚುವುದಕ್ಕೂ ಸತೀಶ್ ರೆಡ್ಡಿ ಕೈಯಿಟ್ಟ.


ಸಿಂಗಸಂದ್ರ, ಹೊಂಗಸಂದ್ರ ಮತ್ತು ಬೊಮ್ಮನಹಳ್ಳಿಗಳಲ್ಲಿದ್ದ ದಲಿತರ ಚೂರುಪಾರು ಆಸ್ತಿಯನ್ನೂ ಬಿಡದೆ ಕಬಳಿಸಲು ಸತೀಶ್ ರೆಡ್ಡಿ ಮುಂದಾದಾಗ ದಲಿತ ಪ್ಯಾಂಥರ್ಸ್ ನಾಯಕ ನಾಗರಾಜ್ ನೇತೃತ್ವದಲ್ಲಿ ದಲಿತರು ಶಾಸಕನ ವಿರುದ್ಧ ಬೀದಿಗಿಳಿದರು. ದಲಿತರ ಹೋರಾಟ ಬಗ್ಗುಬಡಿಯಲು ಪೊಲೀಸರ ಜೊತೆಗೆ ರೌಡಿಗಳನ್ನೂ ಜೊತೆ ಮಾಡಿ ಛೂಬಿಟ್ಟ.

ಆಟದ ಮೈದಾನ, ಪಾರ್ಕ್, ಸ್ಮಶಾನಕ್ಕೆಂದು ಮೀಸಲಿದ್ದ ಸರ್ಕಾರಿ ಭೂಮಿಯನ್ನೂ ಬಿಡದೆ ಗತಿ ಕಾಣಿಸಿದ. ಇವತ್ತು ಬೊಮ್ಮನಹಳ್ಳಿಯಲ್ಲಿ ಪಾರ್ಕು ಸ್ಮಶಾನಗಳಿಗೆ ಜಾಗ ಒತ್ತಟ್ಟಿಗಿರಲಿ ಜನ ತಮ್ಮ ಕಾರು, ಬೈಕ್‌ಗಳನ್ನು ಪಾರ್ಕಿಂಗ್ ಮಾಡುವುದಕ್ಕೂ ಜಾಗವಿಲ್ಲ. ಫುಟ್‌ಪಾತಿನಲ್ಲಿ ನಡೆದಾಡುವುದು ಕಷ್ಟಕರ.

ಇದು ಶಾಸಕ ಸತೀಶ್ ರೆಡ್ಡಿಯ 'ರಿಯಲ್ ಎಸ್ಟೇಟ್' ಎಮ್ಮೆಲ್ಲೇಗಿರಿಯ ದುಷ್ಪರಿಣಾಮವಷ್ಟೆ. ಇಂಥ ಪಾಪದ ದುಡ್ಡನ್ನು ಬಳಸಿ ಮತ್ತೊಮ್ಮೆ ಎಮ್ಮೆಲ್ಲೇಯಾಗಲೇಬೇಕಂತೆ. ಏಕೆಂದರೆ ಹೊಡೆದ ಬೋಗಸ್ ಬಿಲ್ ಮತ್ತು ದೋಚಿದ ಸರ್ಕಾರಿ ಭೂಮಿಯ ಬಗ್ಗೆ ತನಿಖೆಯಾದರೆ ಇವತ್ತಲ್ಲ ನಾಳೆ ಸತೀಶ್ ರೆಡ್ಡಿ ಜೈಲಿಗೆ ಪಾಲಾಗಲೇಬೇಕು. ಜೈಲು ಪಾಲಾಗದೆ ಬಚಾವಾಗುವುದಕ್ಕಾದರೂ ಎಮ್ಮೆಲ್ಲೇಗಿರಿ ಬೇಕಲ್ಲವೆ?


ಇವತ್ತು ಬೊಮ್ಮನಹಳ್ಳಿ ಕ್ಷೇತ್ರದುದ್ದಕ್ಕೂ ಸತೀಶ್ ರೆಡ್ಡಿಯ ಹಣ ಹೆಂಡ ಮತ್ತು ಗೂಂಡಾಪಡೆಗಳೇ ವಿಜೃಂಭಿಸುತ್ತಿವೆ. ಎಂಟಕ್ಕೆ ಎಂಟೂ ವಾರ್ಡ್‌ಗಳಲ್ಲಿ ಬಿಜೆಪಿ ಕೌನ್ಸಿಲರ್‌ಗಳೇ ಗೆದ್ದಿದ್ದಾರೆ. ಈ ರೀತಿ ಪಾಲಿಕೆಗೆ ಗೆದ್ದು ಬಂದ ಬಿಜೆಪಿ ಕೌನ್ಸಿಲರ್‌ಗಳು ಕೂಡ ಮರಿ ಸತೀಶ್ ರೆಡ್ಡಿಗಳೇ! ಹೀಗಾಗಿ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಾಗಭೂಷಣ ರೆಡ್ಡಿ ಬಿಟ್ಟರೆ ಜನಕ್ಕೆ ಬೇರೆ ದಾರಿಯಿಲ್ಲ. ನಾಗಭೂಷಣ ರೆಡ್ಡಿ ಹೇಳಿಕೇಳಿ ಕುಪೇಂದ್ರ ರೆಡ್ಡಿಯ ಬೆಂಬಲಿಗ. ಕಳೆದ ಸಾರಿ ಸೋತ ಕುಪೇಂದ್ರ ರೆಡ್ಡಿ ಸತೀಶ್ ರೆಡ್ಡಿಯ ದುಡ್ಡಿನ ದೌಲತ್ತು ನೋಡಿಯೇ ಥಂಡಾ ಹೊಡೆದು ತನಗೆ ಬರಬೇಕಿದ್ದ ಕಾಂಗ್ರೆಸ್ ಟಿಕೆಟ್ಟನ್ನು ನಾಗಭೂಷಣ ರೆಡ್ಡಿಗೆ ಬಿಟ್ಟುಕೊಟ್ಟರು. ಏಕೆಂದರೆ ನಾಗಭೂಷಣ ರೆಡ್ಡಿಗೆ ಬೊಮ್ಮನಹಳ್ಳಿಯಲ್ಲಿ ಸತೀಶ್ ರೆಡ್ಡಿಗಿಂತಲೂ ಒಳ್ಳೆಯ ಹೆಸರಿದೆ. ರಾಜಕಾರಣಕ್ಕೆ ಹೊಸಬ. ಹಿಂದೆ ಕೌನ್ಸಿಲರ್‌ಗಿರಿ ಅಥವಾ ಎಮ್ಮೆಲ್ಲೇಗಿರಿಯಲ್ಲಿ ಲೂಟಿ ಹೊಡೆದ ಹಿನ್ನೆಲೆಯಿಲ್ಲ.

ಜೆಡಿಎಸ್ ಹುಳಿಮಾವು ರಾಮಯ್ಯ ಎಂಬ ಮಾಜಿ ಕಾಂಗ್ರೆಸ್ ನಾಯಕನ ಮಗ ಶರತ್‌ಚಂದ್ರನಿಗೆ ಟಿಕೆಟ್ ನೀಡಿದೆ. ಇದು ಒಕ್ಕಲಿಗರ ಓಟು ಬಿಜೆಪಿಗೆ ಹೋಗದಂತೆ ತಡೆಯಬಹುದೇ ಹೊರತು ಕಾಂಗ್ರೆಸ್ಸಿಗೇನೂ ನಷ್ಟವಿಲ್ಲ. ಹಿಂದೆ ಕುಪೇಂದ್ರ ರೆಡ್ಡಿಗಿಲ್ಲದ ಅನುಕೂಲವೊಂದು ನಾಗಭೂಷಣ ರೆಡ್ಡಿಗಿದೆ. ಅದೆಂದರೆ, ಬೊಮ್ಮನಹಳ್ಳಿಯ ಸರಿಸುಮಾರು 40 ಸಾವಿರದಷ್ಟಿರುವ ರೆಡ್ಡಿಗಳ ಓಟ್‌ಬ್ಯಾಂಕ್ ಈ ಹಿಂದೆ ಸಾರಾಸಗಟಾಗಿ ಸತೀಶ್ ರೆಡ್ಡಿಯ ಪಾಲಾಗುತ್ತಿತ್ತು. ಆದರೆ ಈ ಬಾರಿ ಅರ್ಧಕ್ಕರ್ಧ ನಾಗಭೂಷಣ ರೆಡ್ಡಿಗೆ ಬೀಳುತ್ತದೆ. ಜೊತೆಗೆ ಸತೀಶ್ ರೆಡ್ಡಿಯ ಗೂಂಡಾಗಿರಿಯ ಕಳಂಕದಿಂದಾಗಿ ಮರ್ಯಾದಸ್ಥರ್ಯಾರೂ ಬಿಜೆಪಿಗೆ ಓಟು ಮಾಡುವುದಿಲ್ಲ. ಬಿಜೆಪಿಯ ದುರಾಡಳಿತ, ಭ್ರಷ್ಟಾಚಾರದ ವಿರುದ್ಧ ಜನ ಈಗಾಗಲೇ ರೋಸತ್ತಿದ್ದಾರೆ. ಇಂಥ ಅದೃಶ್ಯ ಮತಗಳೆಲ್ಲ ಸಾರಾಸಗಟಾಗಿ ಈ ಬಾರಿ ಕಾಂಗ್ರೆಸ್ ಪಾಲಾಗುತ್ತವೆ.


ನಾಗಭೂಷಣ ರೆಡ್ಡಿ

ಇದು ಗೊತ್ತಾಗಿಯೇ ಸತೀಶ್ ರೆಡ್ಡಿ ಕೋಟಿ ಕೋಟಿ ಸುರಿದಾದರೂ ಕಾಂಗ್ರೆಸ್ ಕಾರ್ಯಕರ್ತರ ಖರೀದಿಗೆ ಕೈಯಿಟ್ಟಿದ್ದಾನೆ. ಯಾರಾದರೂ ಬಿಜೆಪಿ ಪರ ಪ್ರಚಾರಕ್ಕಿಳಿಯದಿದ್ದರೆ ಅಂಥವರನ್ನು ಬೆದರಿಸಲು ರೌಡಿ ಪಡೆಗಳ ಗ್ಯಾಂಗ್ ಬೀದಿಗಿಳಿದಿವೆ. ಆರುವ ದೀಪ [illegible] ಸತೀಶ್ ರೆಡ್ಡಿಯ ಅಟ್ಟಹಾಸದ ಅಂತ್ಯವೂ ಸಮೀಪಿಸುತ್ತಿದೆ. ○

ಅದಿರು ಕಳ್ಳ ಸಾಗಾಣಿಕೆದಾರ ಸೈಲ್‌ನ ಶಾಸಕಗಿರಿ ಸರ್ಕಸ್



ಸತೀಶ್ ಸೈಲ್

ಬೇಲೇಕೇರಿ ಬಂದರಿನ ಮೂಲಕ ನಡೆದ ಸಾವಿರಾರು ಕೋಟಿ ರೂಪಾಯಿಗಳ ಅದಿರು ಕಳ್ಳ ಸಾಗಾಣಿಕೆ ದಂಧೆಯ ಕಿಂಗ್‌ಪಿನ್ ಸತೀಶ್ ಸೈಲ್ ಶಾಸಕನಾಗುವ ಜಿದ್ದಿಗೆ ಬಿದ್ದು ಹಣದ ಹಣಾಹಣಿ ನಡೆಸುತ್ತಿದ್ದಾನೆ. ಕಾಂಗ್ರೆಸ್ ಟಿಕೆಟ್‌ಗೆ ತಿಪ್ಪರಲಾಗ ಹಾಕಿದ್ದ ಸೈಲ್ ಈಗ ಕಾರವಾರ-ಅಂಕೋಲಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ. ಯಾವಾಗ ಕಾಂಗ್ರೆಸ್ ಟಿಕೆಟ್ ಸರಳ-ಸಜ್ಜನ ರಮಾನಂದ ನಾಯಕ್‌ಗೆ ಕೊಡಲಾಯ್ತೋ, ಆಗ ಸೈಲ್‌ನ ಅದಿರು ಅವ್ಯವಹಾರ ಪರಿವಾರದಲ್ಲಿ ಪರಿತಾಪ ಶುರುವಾಗಿ ಹೋಯ್ತು. ಕಾಂಗ್ರೆಸ್ ಪ್ರವೇಶ ಸಾಧ್ಯವಾಗದ ಎದುರಾಳಿ ಆನಂದ ಅಸ್ನೋಟಿಕರ್ ಮಾರ್ಗರೆಟ್ ಆಳ್ವ ಮೂಲಕ ಸೈಲ್‌ಗೆ ಟಿಕೆಟ್ ತಪ್ಪಿಸಿದ್ದಾನೆಂಬ ಬೊಬ್ಬೆಯಿದ್ದಿತು.

ಅದೇನೇ ಇರಲಿ, ಈ ಸತೀಶ್ ಸೈಲ್ ಎಮ್ಮೆಲ್ಲೆ ಆಗುವ ಯೋಗ್ಯತೆ ಇರುವಾತನಾ? ಆತ ಗೆದ್ದರೆ ಅಡ್ನಾಡಿ ಆನಂದ ಅಸ್ನೋಟಿಕರ್‌ಗಿಂತ ಬೆಟರ್ ಶಾಸಕನನ್ನು ಪಡೆದಂತಾದೀತಾ? ಎಂಬ ಜಿಜ್ಞಾಸೆ ಈಗ ಕ್ಷೇತ್ರದಾದ್ಯಂತ ಶುರುವಾಗಿದೆ. ಜತೆಜತೆಗೇ ಅದಿರು ಸ್ಮಗ್ಲಿಂಗ್ ಕೇಸ್‌ನಲ್ಲಿ ಸಿಬಿಐಗೆ ಮೋಸ್ಟ್ ವಾಂಟೆಂಡ್ ಆಗಿರುವ ಸೈಲ್‌ನ ಇತಿಹಾಸ-ಭೂಗೋಲದ ಚರ್ಚೆಯೂ ನಡೆದಿದೆ. ಸೈಲ್ ಅಂದರೆ ಸುಮ್ಮನೇ ಮಾತಲ್ಲ! ಕಳೆದ ನಾಲ್ಕೈದು ವರ್ಷದಿಂದ ಕಾರವಾರ-ಅಂಕೋಲೆಯ ರಾಜಕೀಯ - ಸಾಮಾಜಿಕ ರಂಗದಲ್ಲಿ ದೊಡ್ಡ ಮನುಷ್ಯನಾಗಿ ಮೆರೆದಾಡುತ್ತಿರುವಾತ. ಬಳ್ಳಾರಿಯ ಕಬ್ಬಿಣದ ಅದಿರನ್ನು ಹಡಗುಗಟ್ಟಲೆ ಚೀನಾಕ್ಕೆ ಅಹೋರಾತ್ರಿ ಅಕ್ರಮವಾಗಿ ಸಾಗಾಟ ಮಾಡಿ ಕಳ್ಳ ಕುಬೇರನಾದವನು. ಅದಿರು ಅವ್ಯವಹಾರದ ಡಾನ್ ಜನಾರ್ದನ ರೆಡ್ಡಿಯ ಅತ್ಯಾಪ್ತ ಮಿತ್ರನೂ ಹೌದು. ತನ್ನಷ್ಟೇ ಅಪಾಯಕಾರಿಯೂ-ಮಹತ್ವಾಕಾಂಕ್ಷಿಯೂ ಆಗಿರುವ ಎದುರಾಳಿ ಆನಂದ ಅಸ್ನೋಟಿಕರ್‌ಗೆ ನಡು ಬೀದಿಯಲ್ಲೇ ಸೆಡ್ಡು ಹೊಡೆದು ನಿಂತವನು.

ಇವತ್ತು ಸಾವಿರಾರು ಕೋಟಿಗೆ ತೂಗುವ 'ಸಾಹುಕಾರ' ಸತೀಶ್ ಸೈಲ್ ಲೋಕೋಪಯೋಗಿ ಇಲಾಖೆಯ ಬಡ ಓವರ್‌ಸೀಯರ್‌ನ ಮಗ. ಡಿಗ್ರಿ ಮುಗಿಸಿ ಹೊಟ್ಟೆಪಾಡಿಗೆ ಅಂಡಲೆಯುತ್ತಿದ್ದ ಸೈಲ್ ಬಂದರು ನಗರಿ ಗೋವಾದ ಮಡಗಾಂವ್ ಪಾಲಾಗಿದ್ದ. ಅಲ್ಲಾತನಿಗೆ ಶಿಪ್ಪಿಂಗ್ ದೊರೆಯೊಬ್ಬ ತನ್ನ ಕಚೇರಿಯ ದೇಖರೇಖಿ ಉಸ್ತುವಾರಿ ವಹಿಸಿದ್ದ. ಚಾಲಾಕಿ ಸೈಲ್ ನಿಧನಿಧಾನಕ್ಕೆ ಸ್ಟೀವರ್ಡ್ ದಂಧೆ ಶುರು ಹಚ್ಚಿಕೊಂಡ. ಅದೇ ವೇಳೆಗೆ ಮಡಗಾಂವ್ ಬಂದರಿನಲ್ಲಿ ಅದಿರು ಎಕ್ಸ್‌ಪೋರ್ಟ್ ಆರಂಭವಾಯಿತು. ಬಂದರು ದಂಧೆಯ ಅಂದರ್-ಬಾಹರ್ ಅರಿತಿದ್ದ ಸೈಲ್ ಅದಿರು ಹ್ಯಾಂಡಲಿಂಗ್ ಏಜೆಂಟಗಿರಿಗೆ ಇಳಿದ. ಇದು ಪಕ್ಕಾ ಗೋಲ್‌ಮಾಲ್ ದಲ್ಲಾಳಿಗಿರಿ. ಅದಿರನ್ನು ಹಡಗಿಗೇರಿಸಿ ಪರ್ಸೆಂಟೇಜ್ ಪಡೆಯುತ್ತಿದ್ದ ಸೈಲ್ ಅದೇ ಬಂದರಿನಲ್ಲಿ 'ಹೆಸರಾಂ ವಾಸಿ' ಶಿಪ್ಪಿಂಗ್ ಉದ್ಯಮಿಯಾಗಿ ರೂಪಾಂತರಗೊಂಡ. ಇದು ಕೋಟಿ-ಕೋಟಿಯ ಪಕ್ಕಾ ಕಪ್ಪು ವಹಿವಾಟು.

ಅಬ್ಬೇಪಾರಿಯಂತಿದ್ದ ಸೈಲ್ ಆ ನಂತರ ಹಿಂತಿರುಗಿ ನೋಡಿದ್ದೇ ಇಲ್ಲ. ಗೋವಾದ ಪ್ರಮುಖ ಮೈನ್ಸ್ ಎಕ್ಸ್‌ಪೋರ್ಟರ್ ಆಗಿಹೋದ ಈತನ ಕಣ್ಣು ಬೇಲೇಕೇರಿ ಬಂದರಿನ ಮೇಲೆ ಬಿತ್ತು. ದೋಖಾಧೀರರಾದ ಮಂಗಲದಾಸ್ ಕಾಮತ್ ಮತ್ತು ಕೃಷ್ಣ ಕೇಳಸ್ಕರ್ ಜತೆಗೂಡಿ 'ಮಲ್ಲಿಕಾರ್ಜುನ್ ಶಿಪ್ಪಿಂಗ್' ಕಂಪನಿ ಕಟ್ಟಿದ. ಮೈನಿಂಗ್ ದೊರೆ ಜನಾರ್ದನ್ ರೆಡ್ಡಿಯ ದುಷ್ಟಕೂಟದ ಪ್ರಮುಖ ಸದಸ್ಯತ್ವವೂ ಸೈಲ್ ಸಾಹುಕಾರನಿಗೆ ಆ ಹೊತ್ತಿಗೆ ಸಿಕ್ಕಿತು. ಹಾಗಾಗಿ ಸೈಲ್‌ನ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ ಬೇಲೇಕೇರಿ ಬಂದರಿನಲ್ಲಿ ನಿರಂತರ-ನಿರಾತಂಕವಾಗಿ ಅಕ್ರಮ-ಅವ್ಯವಹಾರ ಮಾಡುತ್ತಾ ಹೋಯ್ತು! ಬಂದರು-ಕಸ್ಟಮ್ಸ್ ಅಧಿಕಾರಿಗಳನ್ನೇ ಪಳಗಿಸಿಕೊಂಡು ಕಾನೂನು ಬಾಹಿರ ಕಾರ್ಯಾಚರಣೆ ನಡೆಸಿ ಗೋಣಿ ಚೀಲದಲ್ಲೇ ಹಣ ತುಂಬಲಾರಂಭಿಸಿತು.



ರಮಾನಂದ ನಾಯ್ಕ

ಜನಾರ್ದನ ರೆಡ್ಡಿ ಬಿಜೆಪಿ ಸರ್ಕಾರದ ಸೂತ್ರಧಾರನಾಗಿದ್ದ ದಿನಗಳವು. ಈ ಖದೀಮ ರೆಡ್ಡಿಯ ಕೃಪಾಶೀರ್ವಾದದಿಂದ ಸೈಲ್ ಬೇಲೇಕೇರಿ ಬಂದರಿನಲ್ಲಿ 'ಮಲ್ಲಿಕಾರ್ಜುನ ರಿಪಬ್ಲಿಕ್' ಸ್ಥಾಪಿಸಿಕೊಂಡು ಬಿಟ್ಟಿದ್ದ. ಅದ್ಯಾವ ಪರಿ ಸೊಕ್ಕು ಸೈಲ್‌ನಲ್ಲಿ ತುಂಬಿಕೊಂಡಿತ್ತೆಂದರೆ, ಲೋಕಾಯುಕ್ತಕ್ಕೂ ಕೇರ್ ಮಾಡದೆ ದೋ ನಂಬರ್ ದಂಧೆಯನ್ನು ದಾದಾಗಿರಿಯಿಂದ ನಡೆಸಿಕೊಂಡಿದ್ದ. ಲೋಕಾಯುಕ್ತರ ಆದೇಶದಂತೆ ಅರಣ್ಯಾಧಿಕಾರಿಗಳು ಸೀಜ್ ಮಾಡಿದ್ದ ಅದಿರನ್ನೇ ಹಾಡುಹಗಲು ಸೈಲ್ ಬಳಗ ಕದ್ದು ರಫ್ತು ಮಾಡಿತ್ತು. ಅರಣ್ಯಾಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದ 8.05 ಲಕ್ಷ ಮೆಟ್ರಿಕ್ ಟನ್ ಅದಿರಲ್ಲಿ ಸೈಲ್‌ನ ಕಂಪನಿಯ 2,29,279.02 ಮೆಟ್ರಿಕ್ ಟನ್ (21 ರಫ್ತುಗಾರಿಕೆ) ಸೇರಿತ್ತು, ಇದರಲ್ಲಿ 3.21 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಸೈಲ್ ಚೀನಾಕ್ಕೆ ಕದ್ದು ಸಾಗಾಣಿಕೆ ಮಾಡಿದ್ದ. ಇದರ ಬೆಲೆ ಹೆಚ್ಚು ಕಡಿಮೆ 100 ಕೋಟಿ ರೂ.!!

ಈ ಪಾಪವೇ ಸೈಲ್‌ನ ಕೊರಳಿಗೆ ಉರುಳಾಗಿದೆ. ಬೇಲೇಕೇರಿ ಬಂದರಿನಲ್ಲಿ ಸೈಲ್‌ನ ಮಲ್ಲಿಕಾರ್ಜುನ ಮತ್ತಿತರ ಮೂರು ಕಂಪನಿಗಳು ಸೀಜ್ ಮಾಡಿದ್ದ ಅದಿರನ್ನು ವಿದೇಶಕ್ಕೆ ಕಳಿಸಿದ ಕೇಸ್ ಈಗ ಸಿಬಿಐ ತನಿಖೆಗೆ ಒಳಪಡಿಸಲಾಗಿದೆ. ಯಾವ ಗಳಿಗೆಯಲ್ಲೂ ಸೈಲ್ ಸಾಹುಕಾರ ಸನ್ಮಿತ್ರ ಜನಾರ್ದನ ರೆಡ್ಡಿಯ ಜೈಲ್ ಸೆಲ್ ಸೇರಬಹುದು. ಬಿಜೆಪಿ ಸರ್ಕಾರದ ಪವರ್‌ಫುಲ್ ಮಂತ್ರಿ ಜನಾರ್ದನ ರೆಡ್ಡಿಯೇ ಖುದ್ದು ತನ್ನ ಬೆನ್ನಿಗಿರುವುದರಿಂದ ತನಗ್ಯಾರೂ ಏನೂ ಮಾಡಲಾಗರೆಂಬ ಅಹಂಕಾರ ತಲೆಗೇರಿಸಿಕೊಂಡಿದ್ದ ಸೈಲ್ ಆ ವೇಳೆಗೆ ಕಾರವಾರ ಕಾಂಗ್ರೆಸ್‌ನ ಪೋಷಕ-ಪಾಲಕನಂತಾಗಿ ಹೋಗಿದ್ದ. ಆಪರೇಷನ್ ಕ-ಮಲದಿಂದ ಬಿಜೆಪಿ ಪಾಲಾಗಿದ್ದ ಆನಂದ್ ಅಸ್ನೋಟಿಕರ್ ಎದುರು ಕಾಂಗ್ರೆಸ್ ಕ್ಯಾಂಡಿಡೇಟಾಗಿ ಸೋತಿದ್ದ ಸೈಲ್‌ಗೆ ದೇಶಪಾಂಡೆ ಮತ್ತು ದಿಲ್ಲಿ ಮಟ್ಟದ ಕೆಲವು ಕಾಂಗ್ರೆಸ್ ಲೀಡರ್‌ಗಳ 'ಲಿಂಕ್' ಸಿಕ್ಕಿತ್ತು. ಈ 'ಬಲ'ವೇ ಆತನಿಗೆ ಲೋಕಾಯುಕ್ತದವರು ಸೀಜ್ ಮಾಡಿದ್ದ ಅದಿರನ್ನ ಕದ್ದು ವಿದೇಶಕ್ಕೆ ರಫ್ತು ಮಾಡಲು ಪ್ರಚೋದಿಸಿತ್ತು!

ಯಾವಾಗ ನಿಷ್ಠುರ-ಪ್ರಾಮಾಣಿಕ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಗಣಿ ಕರ್ಮಕಾಂಡದ ವರದಿ ನೀಡಿದರೋ, ಆಗ ಬೇಲೇಕೇರಿ ಬಂದರಿನಲ್ಲಾದ ಕೋಟಿ-ಕೋಟಿಯ ಅದಿರು ಕಳ್ಳತನದ ಹಿಂದಿನ ಹಲವು ಮಜಲುಗಳೂ ತಂತಾನೆ ಬಿಚ್ಚಿಕೊಂಡವು! ಆ ನಂತರ ಸುಪ್ರೀಂಕೋರ್ಟ್‌ನ ಸಿಇಸಿಯೂ ಬೇಲೇಕೇರಿ ಬಂದರಿನಿಂದ ಸಾವಿರಾರು ಕೋಟಿ ಬೆಲೆಯ ಅದಿರು ಅಕ್ರಮವಾಗಿ ಸಮುದ್ರದ ಮೂಲಕ ಹೊರದೇಶಕ್ಕೆ ಹೋಗಿದೆ ಎಂಬ ಸತ್ಯವೂ ಕಂಡುಕೊಂಡಿತು. ಈಗದು ಸಿಬಿಐ ತನಿಖೆಯ ಪ್ರಕರಣವಾಗಿ ದೊಡ್ಡ ಕುತೂಹಲ ಕೆರಳಿಸಿದೆ. ಸೈಲ್‌ಸಂಘವರ ಅಸಲೀ ಅವತಾರವನ್ನು ಅನಾವರಣ ಮಾಡುತ್ತಿದೆ...

ಮಾರ್ಚ್ 20, 2010ರಂದು ಕಾನೂನು ನಿಷ್ಠ ಅರಣ್ಯ ಅಧಿಕಾರಿ ಯು.ವಿ. ಸಿಂಗ್ ರಿಸ್ಕ್ ಲೆಕ್ಕಿಸದೆ ಮಾರುವೇಷದಲ್ಲಿ ಬಂದು ಬೇಲೇಕೇರಿ ಬಂದರಿನ ರಫ್ತುದಾರ ಕಂಪನಿಗಳ ಕಚೇರಿ ಮೇಲೆ ದಾಳಿ ಮಾಡಿದಾಗಲೇ ಸೈಲ್‌ನ ಕಳ್ಳ ದಂಧೆಯ ಹೂರಣ ಹೊರಬಂದಿತ್ತು! ಮಲ್ಲಿಕಾರ್ಜುನ ಮತ್ತಿತರ ರಫ್ತುದಾರ ಕಂಪನಿಗಳ ಕಂಪ್ಯೂಟರ್ ಫೈಲ್ ಇವರೆಂಥ ಪ್ರಳಯಾಂತಕ ಕಳ್ಳರೆಂಬುದನ್ನು ಸಾಬೀತುಪಡಿಸಿತ್ತು. ಲೋಕಾಯುಕ್ತ ವರದಿ ಬರುವ ಮೊದಲೇ ಮತ್ತೊಬ್ಬ ಖಡಕ್ ಅರಣ್ಯ ಅಧಿಕಾರಿ ಡಿಸಿಎಫ್ ಗೋಕುಲ್



ಅಸ್ನೋಟಿಕರ್

ಹೈಕೋರ್ಟಿಗೆ ಕೊಟ್ಟ ಪ್ರಮಾಣಪತ್ರದಲ್ಲಿ ದೊಡ್ಡಮ[...] ಅವ್ಯವಹಾರ ಬೇಲೇಕೇರಿ ಬಂದರಿನಲ್ಲಿ ಆಗಿರುವು[...] ಉಲ್ಲೇಖಿಸಿದ್ದರು. ನವೆಂಬರ್ 2009ರಿಂದ ಫೆಬ್[...] 2010ರ ವರೆಗಿನ 4 ತಿಂಗಳಲ್ಲಿ ಕಾರವಾರ-ಬೇಲೇ[...] ಬಂದರಿಗೆ 35,319 ಲಕ್ಷ ಮೆಟ್ರಿಕ್ ಟನ್ ಅ[...] ಅದಿರು ಬಂದಿದೆ. ಇದರ ಒಟ್ಟು ಬೆಲೆ 1,060 ಕೋ[...] ಎಂದು ಅಂದಾಜಿಸಲಾಗಿದೆ!! 2009-10 ಮತ್ತು 20[...] 11ರಲ್ಲಿ ಬೇಲೇಕೇರಿ ಬಂದರಿನಿಂದ ಆಗಿರುವ ಅ[...] ರಫ್ತು 48,102 ಲಕ್ಷ ಮೆಟ್ರಿಕ್ ಟನ್ ಅದಿರು. [...] ಟನ್‌ಗೆ 3,000 ರೂ. ಎಂದು ಲೆಕ್ಕಹಾಕಿದರೂ [...] ಬರೋಬ್ಬರಿ 1,443 ಕೋಟಿ ರೂ.ಗಳ ಭ[...] ಗೋಲ್‌ಮಾಲ್. ಇದರಲ್ಲಿ ಸೈಲ್ ಪಾಲೂ ದೊಡ್[...] ಪಕ್ಕಾ ಲೆಕ್ಕ ಸಿಬಿಐ ಕೆಲವೇ ದಿನದಲ್ಲಿ ತೆಗೆಯಲಿದೆ.

ಇಂಥ ದಗಾಕೋರ ವ್ಯಾಪಾರಿ ಸೈಲ್ ಶಾಸಕನಾ[...] ಕಾರವಾರ ಉದ್ಧಾರವಾದೀತಾ? ಯಾವುದೇ ಸಾಮಾ[...] ರಾಜಕೀಯ-ಆರ್ಥಿಕ-ಸಾಂಸ್ಕೃತಿಕ ಐಡಿಯಾ, ಸಿದ್[...] ಬದ್ಧತೆಗಳಿಲ್ಲದ ಸೈಲ್ ದುಡ್ಡೇ ಎಮ್ಮೆಲ್ಲೆಗಿರಿಗೆ ಅ[...] ಎಂದು ಭಾವಿಸಿರುವ ಗಂಡಾಗುಂಡಿ ಪುಢಾರಿ. [...] ಎದುರಾಳಿ ಬಿಜೆಪಿಯ ಆನಂದ ಅಸ್ನೋಟಿಕರ[...] ಲಾಭಕೋರ ಬಂದರು ಮಾಫಿಯಾ ದೊರೆ. ಇ[...] ಒಂದೇ ನಾಣ್ಯದ ಎರಡು ಮುಖ. ಈ ಚೋ[...] ಚಂಡಾಲರಿಗಿಂತ ಅನುಭವಿ, ಜನಪರ, ಸರಳ-[...] ರಮಾನಂದ ನಾಯಕ ಶಾಸಕನಾಗುವ ಸಕಲ ಅ[...] ಇರುವಾತ. ಈತ ಗೆದ್ದರೆ ಕಾರವಾರ-ಅಂಕೋಲೆಗೆ ನೆ[...] ನೀಡಲು ಯೋಚಿಸಬಲ್ಲರು. ಮತದಾರರಿಗೆ [...] ಅರ್ಥವಾಗಿದೆಯಾ?

● ಶುದ್ಧೋದನ

6<<< ಮಂಡ್ಯ...

ಮತಗಳಾಗಿ ಪರಿವರ್ತನೆಯಾದರೆ ತಮ್ಮಣ್ಣ ಮತ್ತೊಮ್ಮೆ ಮನೆ ಸೇರುವುದು ಖಚಿತ.

ಸಹೋದರಿ ಎನ್ನುತ್ತಲೇ ಕಲ್ಪನಾರನ್ನು ನಡುನೀರಿನಲ್ಲಿ ಕೈಬಿಟ್ಟ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಸಿಡಿದೆದ್ದಿರುವ ಜೆಡಿಎಸ್ ಮುಖಂಡರಾದ ಅಜ್ಜಹಳ್ಳಿ ರಾಮಕೃಷ್ಣ ಧನಂಜಯ್, ಎಂ.ಐ.ಪ್ರವೀಣ್, ಅಮರ್‌ಬಾಬು ಮೊದಲಾದವರು ಕಲ್ಪನಾ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದಾರೆ. ಮದ್ದೂರು ಕ್ಷೇತ್ರದಲ್ಲಿ ಕಲ್ಪನಾ ಪತಿ ಸಿದ್ದರಾಜು 20 ಸಾವಿರಕ್ಕೂ ಹೆಚ್ಚಿನ ಮತಬ್ಯಾಂಕ್ ನೀಡಿಹೋಗಿದ್ದಾರೆ. ಟಿಕೆಟ್ ಹಂಚಿಕೆಯಲ್ಲಿ ಮಾಜಿ ಸಿಎಂ ಎಸ್.ಎಂ.ಕೃಷ್ಣರನ್ನು ಕಡೆಗಣಿಸಿರುವುದು, ಕಲ್ಪನಾ ಸಿದ್ದರಾಜುರನ್ನು ಕಾಂಗ್ರೆಸ್‌ಗೆ ಕರೆತಂದು ಅಭ್ಯರ್ಥಿಯನ್ನಾಗಿಸುವ ಕೃಷ್ಣರ ಆಸೆಗೆ ಹೈಕಮಾಂಡ್ ನಾಯಕರು ಸೊಪ್ಪು ಹಾಕದಿರುವುದು ಕ್ಷೇತ್ರದಲ್ಲಿರುವ ಅವರ ಬೆಂಬಲಿಗರ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದೆ.

ಚುನಾವಣೆಯ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗುವ ಕಾಂಗ್ರೆಸ್ ಅಭ್ಯರ್ಥಿ ಮಧು ಮಾದೇಗೌಡನನ್ನು ಕಂಡರೆ ಇಲ್ಲಿನವರಿಗೆ ಅಷ್ಟಕಷ್ಟೆ. ತಂದೆ ಮಾದೇಗೌಡರ ಹೆಸರಿನಲ್ಲಿ ರಾಜಕಾರಣ ಮಾಡುವ ಮಧು ಮಾದೇಗೌಡ ಕಾರ್ಯಕರ್ತರ ಕೈಗೆ ಸಿಗುವುದಿಲ್ಲ. ಅಧಿಕಾರಕ್ಕಾಗಿ ಕೋಮುವಾದಿ ಬಿಜೆಪಿಯೊಂದಿಗೆ ಕೈಜೋಡಿಸಿದ್ದ ಅಪ್ಪ-ಮಗನ ಅವಕಾಶ ವಾದಿ ರಾಜಕಾರಣ ಕ್ಷೇತ್ರದ ಜನರಿಗೆ ತಿಳಿದಿದೆ. ಡಿ.ಸಿ.ತಮ್ಮಣ್ಣರನ್ನು ಸೋಲಿಸಲು ಕಲ್ಪನಾ ಸಿದ್ದರಾಜುರಿಂದ ಮಾತ್ರ ಸಾಧ್ಯ, ಹಾಗಾಗಿ ಅವರೇ ಕಾಂಗ್ರೆಸ್ ಅಭ್ಯರ್ಥಿಯಾಗಬೇಕೆಂದು ಎಲ್ಲರ ನಿರೀಕ್ಷೆಯಾಗಿತ್ತು, ಆದರೆ ಅವರಿಗೆ ಕಾಂಗ್ರೆಸ್ ಟಿಕೆಟ್ ಕೂಡ ಕೈತಪ್ಪಿರುವುದು ಅವರ ಪರ ಅನುಕಂಪ ಹೆಚ್ಚಲು ಕಾರಣವಾಗಿದೆ.


1.90 ಲಕ್ಷ ಮತದಾರರಿದ್ದು, 1 ಲಕ್ಷ ಒಕ್ಕಲಿಗ ಮತದಾರರು ಮತ ಮೂವರಲ್ಲಿ ಹಂಚಿಕೆಯಾಗುತ್ತದೆ. ದಲಿತ, ಮುಸ್ಲಿಂ, ಹಿಂದುಳಿದ ಮತಗಳ ಜೊತೆಗೆ 12 ಸಾವಿರದಷ್ಟಿರುವ ಲಿಂಗಾಯತರು ಕಲ್ಪನಾ ಸಿದ್ದರಾಜು ಕೈಹಿಡಿಯುವ ಸಾಧ್ಯತೆಗಳಿವೆ. ಕೆಜೆಪಿಯಿಂದ ಸ್ಪರ್ಧಿಸಿರುವ ಆನಂದ ರೆಡ್ಡಿ ಡಿ.ಸಿ.ತಮ್ಮಣ್ಣನ ಶಿಷ್ಯ ಎಂಬುದು ಯಡ್ಡಿಗೆ ಗೊತ್ತಾಗಿದ್ದು ಇನ್ನೊಂದೆರಡು ದಿನದಲ್ಲಿ ಲಿಂಗಾಯತ ಮುಖಂಡರಿಗೆ ಕಲ್ಪನಾ ಪರ ಮತ ಚಲಾಯಿಸಲು ಸ್ಪಷ್ಟ ನಿರ್ದೇಶನ ನೀಡುವ ಸಾಧ್ಯತೆಗಳಿವೆ.

ಮದ್ದೂರಿನಲ್ಲಿ ತಮ್ಮಣ್ಣ ಹಾಗೂ ಕಲ್ಪನಾ ಸಿದ್ದರಾಜು ನಡುವೆ ಸಮಬಲದ ಹೋರಾಟ ಕಂಡುಬಂದಿದ್ದು ಫೋಟೋ ಫಿನಿಶ್ ಫಲಿತಾಂಶ ಬರಲಿರುವುದು ಖಾತ್ರಿಯಾಗಿದೆ.

ನಾಗಮಂಗಲ: ಸಮಬಲದ ಸಮರ

ಬರಪೀಡಿತ ತಾಲ್ಲೂಕಾದ ನಾಗಮಂಗಲದಲ್ಲಿ ಜೆಡಿಎಸ್‌ನ ಚಲುವರಾಯಸ್ವಾಮಿ V/s ಸುರೇಶ್‌ಗೌಡ ನಡುವೆ ಬಿಗ್‌ಫೈಟ್ ನಡೆಯುತ್ತಿದೆ. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನ ಸುರೇಶ್‌ಗೌಡ ಗೆಲ್ಲುತ್ತಾರೆಂಬ ವಾತಾವರಣವನ್ನು ತನ್ನ ದುಡ್ಡಿನ ಬಲದಿಂದ ಸಮಬಲಕ್ಕೆ ತಂದಿರುವ ಸಂಸದ ಚಲುವರಾಯಸ್ವಾಮಿ ಗೆಲುವಿಗಾಗಿ ಸಾಕಷ್ಟು ಬೆವರು ಹರಿಸುತ್ತಿದ್ದಾರೆ.

ಲೋಕಸಭಾ ಸದಸ್ಯನಾಗಿದ್ದರೂ ರಾಜ್ಯ ರಾಜಕಾರಣದ ಮೇಲೆ ಕಣ್ಣಿಟ್ಟಿರುವ ಚಲುವರಾಯಸ್ವಾಮಿ ಕ್ಷೇತ್ರದಲ್ಲಿ ಸಿಕ್ಕಾಪಟ್ಟೆ ಹಣ ಖರ್ಚು ಮಾಡುತ್ತಿದ್ದಾರೆ. ಎಷ್ಟೇ ಕೋಟಿಗಳು ಖರ್ಚಾದರೂ ಸರಿಯೇ ಎಂಎಲ್‌ಎ ಆಗೇ ತೀರಬೇಕೆಂದು ಪಣತೊಟ್ಟಿರುವ ಚಲುವರಾಯಸ್ವಾಮಿಯ ಹಣದ ಹೊಡೆತಕ್ಕೆ ಸರಿಸಮಾನವಾಗಿ ಸುರೇಶ್‌ಗೌಡ ಕೂಡ ತಯಾರಾಗಿ ನಿಂತಿರುವುದು ಫಲಿತಾಂಶ ರೋಚಕವಾಗುವ ಸೂಚನೆ ನೀಡುತ್ತಿದೆ. ಕಳೆದ ಬಾರಿ ನಾಗಮಂಗಲದ ಜನತೆ ನೀಡಿರುವ ಸೋಲಿನ ಪೆಟ್ಟಿನಿಂದ ಚೇತರಿಸಿಕೊಂಡಿರುವ ಚಲುವರಾಯಸ್ವಾಮಿ ಕಾಂಗ್ರೆಸ್‌ನ ಪ್ರಮುಖ ಮುಖಂಡರನ್ನು ದುಡ್ಡಿನ ಆಮಿಷದಿಂದ ತನ್ನೆಡೆಗೆ ಸೆಳೆದುಕೊಂಡಿದ್ದಾರೆ. ಕಾಂಗ್ರೆಸ್‌ನಲ್ಲಿದ್ದುಕೊಂಡೇ ಹಲವರು ಈ ಬಾರಿ ಸುರೇಶ್‌ಗೌಡನಿಗೆ ಒಳಗೊಳಗೆ ಕೈಕೊಡುವ ಸಾಧ್ಯತೆಗಳು ನಿಚ್ಚಳವಾಗಿದೆ.



ರವೀಂದ್ರ ಶ್ರೀಕಂಠಯ್ಯ

ಕಾಂಗ್ರೆಸ್‌ನೊಳಗೆ ಇಷ್ಟೆಲ್ಲಾ ನಡೆಯುತ್ತಿದ್ದರೂ ಸುರೇಶ್‌ಗೌಡ ಹೆದರಿಲ್ಲ. ತನ್ನ ನಯವಾದ ಮಾತುಗಾರಿಕೆಯಿಂದಲೇ ಕಳೆದ ಚುನಾವಣೆಯಲ್ಲಿ ಚಲುವರಾಯಸ್ವಾಮಿಯನ್ನು ಮಕಾಡೆ ಮಲಗಿಸಿದ್ದರು ಸುರೇಶ್‌ಗೌಡ. ರಾಜಕೀಯ ಚತುರನಾದ ಸುರೇಶ್ ಗೌಡನಿಗೆ ಯಾವ ಹಂತದಲ್ಲಿ ಯಾವ ಪಟ್ಟುಗಳನ್ನು ಹಾಕಬೇಕೆಂಬುದು ಚೆನ್ನಾಗಿ ಗೊತ್ತು. ಸಿದ್ದರಾಮಯ್ಯ ಪ್ರಚಾರ ಮಾಡಿರುವುದರಿಂದ 13,000ಕ್ಕೂ ಹೆಚ್ಚಿರುವ ಕುರುಬ ಮತಗಳು ಕಾಂಗ್ರೆಸ್‌ಗೆ ಬೀಳಲಿದೆ. ಎಸ್.ಎಂ.ಕೃಷ್ಣ ಕೂಡ ಕ್ಷೇ[...] ಬಂದಿರುವುದರಿಂದ 1 ಲಕ್ಷದಷ್ಟಿರುವ ಒಕ್ಕಲಿಗ ಮತಗಳಲ್ಲಿ ಅರ್ಧಭಾಗ ಸುರೇಶ್‌ಗೌಡರಿಗೆ ಬೀಳ[...] ದಲಿತರು, ಮುಸ್ಲಿಮರು, ಇತರೆ ಸಮುದಾಯಗಳ ಸಾವಿರದಷ್ಟು ಮತಗಳಲ್ಲಿ ಯಾರು ಹೆಚ್ಚು ಪಡೆಯುವರೋ ಅವರೇ ಗೆಲುವು ಸಾಧಿಸಲಿದ್ದಾರೆ.

ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡನ ಚುನಾವಣೆಗೆ ಕೆಲವೇ ದಿನಗಳಿದ್ದರೂ ಇನ್ನೂ ಖಚಿತವಾಗಿಲ್ಲ. ಈಗ ಕಾಂಗ್ರೆಸ್ ಪಕ್ಷದಲ್ಲಿರುವ ಶಿವರಾಮೇಗೌಡ ಸುರೇಶ್‌ಗೌಡನ ಪರ ಸಾಥ್ ನೀಡಿದರೆ ಅವರಿಗೆ ಇನ್ನೊಂದು ಚಾನ್ಸ್ ಸಿಗುತ್ತದೆ. ಚಲುವರಾಯಸ್ವಾಮಿಯ ಅಹಂ-ಒಣಪ್ರತಿಷ್ಠೆಯ ರಾಜಕಾರಣದ ವಿರುದ್ಧ ಸುರೇಶ್‌ಗೌಡ ನಯ-ನಾಜೂಕಿನ ರಾಜಕಾರಣದ ಮೂಲಕ ಸವಾಲೆಸೆದಿದ್ದು, ಈ ಸಮಬಲದ ಹೋರಾಟದಲ್ಲಿ ಯಾರೇ ಗೆದ್ದರೂ ಗೆಲುವಿನ ಅಂತರ ಸಾಕಷ್ಟು ಕ[...] ಇರುತ್ತದೆ ಎಂಬ ಚಿತ್ರಣವಿದೆ.

ಕೆಜೆಪಿಯ ಕೃಷ್ಣಪ್ಪ, ಬಿಜೆಪಿಯ ಡಾ.ಪಾರ್ಥಸಾ[...] ಪಾರ್ಟಿಫಂಡಿಗೆ ಸ್ಪರ್ಧಿಸಿರುವ ಗಿರಾಕಿಗಳೆಂದರೆ ತಪ್ಪಾಗಲಾರದು. ಹಾಗಾಗಿ ಅವರಿಲ್ಲಿ ಲೆಕ್ಕಕ್ಕೇ ಇಲ್ಲ.

ಶ್ರೀರಂಗಪಟ್ಟಣ: ರವೀಂದ್ರ ಪರ ಸಿಂಪಥಿ!

ಶ್ರೀರಂಗಪಟ್ಟಣದಲ್ಲಿ ಎರಡು ಬಾರಿ ಕಾಂಗ್ರೆಸ್ ವಂಚಿತರಾದ ರವೀಂದ್ರ ಶ್ರೀಕಂಠಯ್ಯನ ಪರ ಮತ[...]

>>[...]

ಶಿಗ್ಗಾಂವಿ: ಬೊಮ್ಮಾಯಿ ಮುಂದೆ ಕಾಂಗ್ರೆಸ್‌ನ ಖಾದ್ರಿ ಖೇಲ್ ಖತಂ

ಶಿಗ್ಗಾಂವಿ ಮತಕ್ಷೇತ್ರದಲ್ಲಿ ಚುನಾವಣೆಗಳು ನಡೆಯುವ ಮುನ್ನವೇ ಕಾಂಗ್ರೆಸ್ ಅಭ್ಯರ್ಥಿ ಅಜ್ಜಂಪೀರ ಖಾದ್ರಿಯ ಖೇಲ್ ಖತಂ ಆಗಿದೆ. ಹಾಲಿ ಶಾಸಕ ಬಿಜೆಪಿಯ ಬಸವರಾಜ ಬೊಮ್ಮಾಯಿ ಅಬ್ಬರದ ಮುಂದೆ ಕಾಂಗ್ರೆಸ್‌ನ ಮಾಜಿ ಶಾಸಕ ಖಾದ್ರಿ ಅಕ್ಷರಶಃ ತರಗುಟ್ಟಿದ್ದಾರೆ. "ಕ್ಷೇತ್ರದ ಅಭಿವೃದ್ಧಿ ಮಾಡಿದವನ ವಿರುದ್ಧ ಆರೋಪ ಮಾಡುವ ಮುನ್ನ ಐದು ವರ್ಷ ಕಾಣದ ನೀನು ಈಗ ಬಂದು ಓಟಿಗಾಗಿ ಬಾಯಿ ಬಡಿದುಕೊಳ್ಳುತ್ತಿರುವೆ" ಎಂದು ಕ್ಷೇತ್ರದ ಮತದಾರರು ಖಾದ್ರಿಗೆ ಪ್ರಶ್ನೆ ಹಾಕುತ್ತಿದ್ದಾರೆ.


ದೇಶಕ್ಕೆ ಸ್ವತಂತ್ರ ಬಂದನಂತರದ ವರ್ಷಗಳಲ್ಲಿ ಅತಿ ಹೆಚ್ಚು ಬಾರಿ ಕ್ಷೇತ್ರವನ್ನಾಳಿದ ಕಾಂಗ್ರೆಸ್ ಕೇವಲ ಭರವಸೆಗಳಲ್ಲೇ ಕಾಲಹರಣ ಮಾಡಿತ್ತು. ಮಾಜಿ ಶಾಸಕ ಹಾಗೂ ಸಂಸದ ಮಂಜುನಾಥ ಕುನ್ನೂರು ಇದ್ದುದರಲ್ಲೇ ವರದಾ ನದಿಯಿಂದ ಶಿಗ್ಗಾಂವಿ ಮತ್ತು ಸವಣೂರು ತಾಲೂಕುಗಳಿಗೆ ಕುಡಿಯುವ ನೀರು ಪೂರೈಕೆಯ ಯೋಜನೆಯೊಂದಕ್ಕೆ ಚಾಲನೆ ಕೊಟ್ಟಿದ್ದನ್ನು ಬಿಟ್ಟರೆ, ಇನ್ನುಳಿದವರೆಲ್ಲ ಕಮಾಯಿಗಾಗೇ ಗೆದ್ದವರಾಗಿದ್ದರು. ಇವರ ಈ ನಿರ್ಲಕ್ಷ್ಯದ ಮತ್ತು ಸ್ವಹಿತಾಸಕ್ತಿ ರಾಜಕಾರಣದಿಂದ ಶಿಗ್ಗಾಂವಿ ಕ್ಷೇತ್ರ ಎಂದರೆ ನೀರಿಲ್ಲದ ಬರಗಾಲದ ಕ್ಷೇತ್ರ ಎಂದೇ ಕುಖ್ಯಾತಿ ಪಡೆದಿತ್ತು.

2008ರ ಮುನ್ನ ವಿಧಾನ ಪರಿಷತ್ ಸದಸ್ಯರಾಗಿ ರಾಜ್ಯದಲ್ಲಿ ಹೆಸರು ಮಾಡಿದ್ದ ಬೊಮ್ಮಾಯಿ ಶಿಗ್ಗಾಂವಿ ಕ್ಷೇತ್ರಕ್ಕೆ ಅತಿಹೆಚ್ಚು ಅನುದಾನವನ್ನು ನೀಡುವ ಮೂಲಕ ಇಲ್ಲಿಯ ಅಭಿವೃದ್ಧಿಗೆ ಆಗಾಗ ನೆರವಾಗಿದ್ದರು. ಇಲ್ಲಿನ ಅನೇಕ ಸಮಸ್ಯೆಗಳನ್ನು ಸದನದಲ್ಲಿ ಪ್ರಸ್ತಾಪಿಸಿ ಪರಿಹಾರಕ್ಕಾಗಿ ಪ್ರಯತ್ನಿಸುತ್ತಿದ್ದ ಇವರಿಗೆ ಇಲ್ಲಿಯ ಮೂಲ ಸಮಸ್ಯೆಗಳ ಅರಿವು ಕೂಡ ಇತ್ತು.

2008ರಲ್ಲಿ ಇಂತಹ ಬೊಮ್ಮಾಯಿ ಅವರ ರಾಜಕೀಯ ಬದುಕೂ ಬದಲಾವಣೆಯ ಹಂತದಲ್ಲಿತ್ತು. ಅಲ್ಲಿಯತನಕ ಅವರಿದ್ದ ಸಂಯುಕ್ತ ಜನತಾ ದಳ ಅಷ್ಟುಹೊತ್ತಿಗೆ ಹೇಳಹೆಸರಿಲ್ಲದಂತಾಗಿತ್ತು. ಇತ್ತ ಜಾತ್ಯತೀತ ಜನತಾ ದಳ ಅಪ್ಪ-ಮಕ್ಕಳ ಪಕ್ಷವಾಗಿ ಪರಿವರ್ತನೆಗೊಂಡು ಸಿದ್ದರಾಮಯ್ಯ ಮತ್ತು ಎಂ.ಪಿ.ಪ್ರಕಾಶ್ ತರಹದ ಎರಡನೆ ತಲೆಮಾರಿನ ನಾಯಕರಿಗೂ ಅನ್ಯಾಯ-ಅವಮಾನವಾಗಿತ್ತು. ಅತ್ತ ಕಾಂಗ್ರೆಸ್ ಎಂದಿನಂತೆ ವಿವಿಧ ನಾಯಕರ ಗುಂಪಾಗಿತ್ತು. ಅದೇ ಹೊತ್ತಿಗೆ ರಾಜ್ಯದಲ್ಲಿ ಬಿಜೆಪಿ ಪರವಾದ ಯಡಿಯೂರಪ್ಪನ ಅಲೆ ಬೀಸುತ್ತಿತ್ತು. ಆಗ ಬೊಮ್ಮಾಯಿ ಬಿಜೆಪಿ ಸೇರಿ ಚುನಾವಣಾ ಕಣಕ್ಕೆ ಧುಮುಕಲು ನಿರ್ಧರಿಸಿದರು. ಆತ ಅವರು ಆಯ್ಕೆ ಮಾಡಿಕೊಂಡಿದ್ದು ಇದೇ ಶಿಗ್ಗಾಂವಿ ಕ್ಷೇತ್ರವನ್ನು.

ಅಲ್ಪಸಂಖ್ಯಾತ ಹಾಗೂ ಲಿಂಗಾಯತರೇ ಪ್ರಮುಖರಾದ ಶಿಗ್ಗಾಂವಿ ಕ್ಷೇತ್ರದಲ್ಲಿ ಜಾತಿ ಲೆಕ್ಕಾಚಾರದ ಮೇಲೆ ಚುನಾವಣೆ ಜರುಗಿದ್ದೇ ಹೆಚ್ಚು. ಅಲ್ಪಸಂಖ್ಯಾತರು ಇಲ್ಲಿ ಸತತವಾಗಿ ಕಾಂಗ್ರೆಸ್‌ಅನ್ನು ಬೆಂಬಲಿಸುತ್ತ ಬಂದಿದ್ದರಾದರೂ ತಮ್ಮ ಕೋಮಿನ ಅಭ್ಯರ್ಥಿ ಕಣದಲ್ಲಿದ್ದಾಗ ಇನ್ನೊಬ್ಬರಿಗೆ ಎಂದೂ ಅವಕಾಶ ನೀಡಿರಲಿಲ್ಲ.

2008ರಲ್ಲಿ ನೀರಿನ ಸಮಸ್ಯೆ ಮಾತ್ರವಲ್ಲದೆ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಗೆ ಶ್ರಮಿಸುತ್ತೇನೆಂದು ಬೊಮ್ಮಾಯಿ



ಬೊಮ್ಮಾಯಿ


ಮಂಜುನಾಥ್ ಕುನ್ನೂರು


ಖಾದ್ರಿ


ಸುಮಂಗಲ


ಪ್ರೇಮ ಪಾಟೀಲ್


ಬಾಪುಗೌಡ ಪಾಟೀಲ್

ಜನರ ಮನೆಬಾಗಿಲಿಗೆ ಹೋಗಿ ಅವರ ಬೆಂಬಲ ಕೋರಿದರು. ಆ ಸಂದರ್ಭದಲ್ಲೂ ಬೊಮ್ಮಾಯಿಗೆ ಕಾಂಗ್ರೆಸ್‌ನ ಅಜ್ಜಂಪೀರ್ ಖಾದ್ರಿಯೇ ಪ್ರಮುಖ ಎದುರಾಳಿ ಆಗಿದ್ದರು. ಆದರೂ ಇಲ್ಲಿನ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳು ಮತ್ತು ಲಿಂಗಾಯತರು ಬೊಮ್ಮಾಯಿ ಅವರನ್ನು ಬೆಂಬಲಿಸಿದ್ದರಿಂದ ಅವರು 12 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದು ಬಂದಿದ್ದರು.

ಯಾವಾಗ ಬೊಮ್ಮಾಯಿ ಗೆಲುವು ಸಾಧಿಸಿ ಬಿಜೆಪಿ ಸರ್ಕಾರದಲ್ಲಿ ಪ್ರಮುಖ ಖಾತೆಯಾದ ಜಲಸಂಪನ್ಮೂಲ ಇಲಾಖೆಯ ಸಚಿವರಾದರೋ ಆಗ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ಸಿಕ್ಕಲಾರಂಭಿಸಿತು. ಎಲ್ಲಾ ರಂಗಗಳಲ್ಲೂ ಹಿಂದೆ ಬಿದ್ದು ಹಾಳು ಕೊಂಪೆಯಂತಿದ್ದ ಶಿಗ್ಗಾಂವಿ ದಶಕಗಳ ನಂತರ ಅಭಿವೃದ್ಧಿಯನ್ನು ಕಾಣಲಾರಂಭಿಸಿತು.

ಸವಣೂರು ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದ 180ಕ್ಕೂ ಹೆಚ್ಚು ಹಳ್ಳಿಗಳು ಇಂದು ಸ್ವಚ್ಛ ಗ್ರಾಮಗಳಾಗಿವೆ. ಸಂಪರ್ಕ ರಸ್ತೆಗಳು ಕಾಂಕ್ರೀಟಿಕರಣಗೊಂಡಿದ್ದರೆ ಹೊಲಗದ್ದೆಗಳ ರಸ್ತೆಗಳೂ ರಿಪೇರಿ ಆಗಿವೆ. ರಾಜ್ಯ ಹೆದ್ದಾರಿಗಳೆಲ್ಲಾ ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ಆಧುನಿಕತೆಯ ಸ್ಪರ್ಶ ಪಡೆದಿವೆ. ಕೇವಲ ನಾಲ್ಕು ವರ್ಷಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕಿ.ಮೀ. ರಸ್ತೆ ನಿರ್ಮಾಣ ಇಲ್ಲಾಗಿದೆ. ಇದು ದಾಖಲೆಯೇ ಸರಿ.

ಬೊಮ್ಮಾಯಿ ಅವರನ್ನು ಈ ಕ್ಷೇತ್ರದ ಜನ ಈ ಚುನಾವಣೆಯಲ್ಲೂ ಬೆಂಬಲಿಸುವುದಕ್ಕೆ ಮತ್ತೊಂದು ಮುಖ್ಯ ಕಾರಣ ಈ ಪ್ರದೇಶವನ್ನು ಕಾಡುತ್ತಿದ್ದ ಬರವನ್ನು ದೂರವಾಗಿಸಿರುವುದರಿಂದ. ಹತ್ತಿರದಲ್ಲೇ ವರದಾ ನದಿ ಹರಿದು ಹೋಗುತ್ತಿದ್ದರೂ ನೀರಾವರಿಯ ಕಲ್ಪನೆಯನ್ನೂ ಇಲ್ಲಿಯ ಜನ ಊಹಿಸಿರಲಿಲ್ಲ. ಆ ಕಲ್ಪನೆಗೆ ಜೀವ ತುಂಬಿದವರು ಬೊಮ್ಮಾಯಿ. 25 ಸಾವಿರಕ್ಕೂ ಹೆಚ್ಚು ಎಕರೆ ಭೂಮಿಗೆ ನೀರುಣಿಸುವ ಸುಮಾರು 300 ಕೋಟಿ ರೂ.ಗಳ ಶಿಗ್ಗಾಂವಿ ಏತ ನೀರಾವರಿ ಯೋಜನೆಗೆ ಚಾಲನೆ ನೀಡಿದ ಕೇವಲ ಮೂರೇ ವರ್ಷಗಳಲ್ಲಿ ಉದ್ಘಾಟಿಸಿದ್ದು ರಾಜ್ಯದ ನೀರಾವರಿ ಇತಿಹಾಸದಲ್ಲೇ ಮೊದಲನೆಯದ್ದು. ಅಷ್ಟೇ ಅಲ್ಲ, ದೇಶದಲ್ಲಿ ಈಗಿರುವ ಏತನೀರಾವರಿಯಲ್ಲೇ ಇದು ವಿಭಿನ್ನ ಹಾಗೂ ವೈಜ್ಞಾನಿಕವಾದದ್ದು. ಶೇ. 100 ರಷ್ಟು ಪೈಪ್‌ಲೈನ್ ಮೂಲಕ ಹೊಲಗಳಿಗೆ ತುಂತುರು ನೀರಾವರಿ ಮೂಲಕ ನೀರೊದಗಿಸಲಿರುವ ಇದು ನೀರಿನ ಬಳಕೆಯನ್ನು ನಿಯಂತ್ರಿಸುವುದರ ಜೊತೆಗೆ ಸಮೃದ್ಧ ಬೆಳೆ ತೆಗೆಯಲು ಬಹು ಉಪಯೋಗಿಯಾಗಿದ್ದು ಇಲ್ಲಿಯ ರೈತರೆಲ್ಲ ಸದ್ಯ ಶ್ರೀಮಂತ ರೈತರು ಎನಿಸಿಕೊಳ್ಳುವ ಮಟ್ಟಕ್ಕೆ ಬಂದು ನಿಂತಿದ್ದಾರೆ. ಹೀಗಾಗಿ ಕೃಷಿ ಆಧಾರಿತ ಶಿಗ್ಗಾಂವಿಯ ಜನ ಬೊಮ್ಮಾಯಿ ಅವರನ್ನು ಈ ಚುನಾವಣೆಯಲ್ಲೂ ಬೆಂಬಲಿಸಲಿದ್ದಾರೆ.

ಇದರ ಜೊತೆಗೆ 200 ಹಾಸಿಗೆಗಳ ಆಸ್ಪತ್ರೆ, ಎರಡು ಇಂಜಿನಿಯರಿಂಗ್ ಕಾಲೇಜುಗಳು, ಜಾನಪದ ವಿಶ್ವವಿದ್ಯಾಲಯ ಕೂಡ ಬೊಮ್ಮಾಯಿ ಅವರಿಂದಾಗಿ ಇಲ್ಲಿ ತಲೆ ಎತ್ತಿವೆ. ತಮ್ಮ ಈ ಎಲ್ಲ ಸಾಧನೆಗಳೊಂದಿಗೆ ಮುಂದಿನ ಯೋಜನೆಗಳ ಪಟ್ಟಿಯನ್ನೂ ಹಿಡಿದು ಬೊಮ್ಮಾಯಿ ಮತ ಯಾಚಿಸುತ್ತಿದ್ದಾರೆ.

ಗುರುವಿಗೇ ಕೈಕೊಟ್ಟಿದ್ದ ಖಾದ್ರಿ

ಈ ಹಿಂದೆ 2004 ರ ಚುನಾವಣೆಯಲ್ಲಿ ಇದೇ ಬೊಮ್ಮಾಯಿ ಅವರಿಂದ ಜನತಾದಳದ ಬಿ ಫಾರ್ಮ್ ಪಡೆದು ರಾಜಕೀಯಕ್ಕೆ ಎಂಟ್ರಿ ಕೊಟ್ಟಿದ್ದ ಖಾದ್ರಿ ತಮ್ಮ ಮೊದಲ ಪ್ರಯತ್ನದಲ್ಲೇ ಶಾಸಕರಾಗಿ ಆಯ್ಕೆಯಾಗಿದ್ದರು. ಆದರೆ ಗೆದ್ದು ಒಂದೇ ತಿಂಗಳಲ್ಲಿ ದಳ ತೊರೆದ ಖಾದ್ರಿ ಕಾಂಗ್ರೆಸ್ ಸೇರುವ ಮೂಲಕ ಬೊಮ್ಮಾಯಿಗೆ ನಂಬಿಕೆ ದ್ರೋಹ ಮಾಡಿದ್ದರು. ಗುರುವಿಗೇ ತಿರುಗಿ ಬಿದ್ದ ಶಿಷ್ಯ ಖಾದ್ರಿಯನ್ನು ಕಳೆದ ಬಾರಿ ಸೋಲಿಸಿದ್ದ ಬೊಮ್ಮಾಯಿ ಈಗ ಎರಡನೆ ಬಾರಿ ಚುನಾವಣಾ ಸಮರವನ್ನು ಎದುರಿಸುತ್ತಿದ್ದಾರೆ.

ಈ ಚುನಾವಣೆಯಲ್ಲಿ ಬೊಮ್ಮಾಯಿಗೆ ಹೇಳಿಕೊಳ್ಳಲು ವಿಷಯಗಳಿವೆ. ಆದರೆ ಖಾದ್ರಿ ಬಳಿ ಅಂತಹ ಯಾವ ಸಾಧನೆಗಳೂ ಇಲ್ಲ. ಆದ್ದರಿಂದ ಆತ "ಕ್ಷೇತ್ರಕ್ಕೆ ಬಂದ ಸಾವಿರಾರು ಕೋಟಿ ರೂಪಾಯಿ ಅನುದಾನದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ" ಎಂದು ಹೋಗಿಬಂದಲ್ಲೆಲ್ಲ ಆರೋಪಿಸುತ್ತಿದ್ದಾರೆ.

ಆದರೆ ಜನ ಆತನ ಆರೋಪಗಳನ್ನು ನಂಬದೆ ಸೆಡ್ಡು ಹೊಡೆಯುತ್ತಿದ್ದಾರೆ. ಕ್ಷೇತ್ರದಲ್ಲಿ ಪ್ರಮುಖ ವಿರೋಧ ಪಕ್ಷದ ನಾಯಕರಾದ ಖಾದ್ರಿ ತನ್ನ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸುವುದಿರಲಿ, ಕಳೆದ ಬಾರಿ ಸೋತ ನಂತರ ಇಲ್ಲಿಂದ ಐದು ವರ್ಷಗಳ ಕಾಲ ಕಣ್ಮರೆಯಾಗಿದ್ದ ವ್ಯಕ್ತಿ. "ಈಗ ಬಂದು ಸುಳ್ಳು ಆರೋಪಗಳನ್ನು ಮಾಡುವುದಕ್ಕೂ ಮುನ್ನ ದಾಖಲೆ ನೀಡು, ಆಧಾರ ಒದಗಿಸು" ಎಂದೆಲ್ಲ ಕೇಳತೊಡಗಿದ್ದಾರೆ. ಇಂತಹ ಪ್ರಶ್ನೆಗಳಿಗೆ ಉತ್ತರವಿಲ್ಲದೆ ಖಾದ್ರಿ ನಗೆಪಾಟಲಿಗೆ ಗುರಿಯಾಗುತ್ತಿದ್ದಾರೆ.

ಅದರ ಬಗ್ಗೆ ತಲೆ ಕೆಡಿಸಿಕೊಳ್ಳದ ಖಾದ್ರಿ ಇಲ್ಲಿ ಮುಖ್ಯವಾಗಿರುವ ಮುಸಲ್ಮಾನರ ಮತಗಳನ್ನು ಆಧರಿಸಿ ಜಾತ್ರೆಯಲ್ಲಿ ತೊಡಗಿದ್ದಾರೆ. ಜೊತೆಗೆ ಸಿದ್ದರಾಮಯ್ಯನವರ ಕಾರಣಕ್ಕೆ ತನ್ನತ್ತ ಕುರುಬರ ಮತಗಳನ್ನೂ ಸೆಳೆಯಲು ಹರಸಾಹಸ ಮಾಡುತ್ತಿದ್ದಾರೆ. ಕಳೆದ ಐದು ವರ್ಷ ಬೊಮ್ಮಾಯಿ ಬಗಲಲ್ಲಿದ್ದು ಕಟ್ಟುಮಸ್ತಾಗಿ ಮೇಯ್ದು ದುಂಡಗಾಗಿರುವ ಕೆಲ ಮರಾಠ ಮುಖಂಡರುಗಳು ಕಾಂಗ್ರೆಸ್ ಅಂಗಳದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಾದರೂ ಅವರ ಮುಖಕ್ಕೆ ಮತ ಹಾಕಿಸುವ ತಾಕತ್ ಕೂಡ ಇಲ್ಲ ಎಂಬುದು ಖಾದ್ರಿಗೆ ಅರಿವಾಗುತ್ತಿಲ್ಲ.

ಇನ್ನು ಚುನಾವಣಾ ಕಣದಲ್ಲಿ ಕೆಜೆಪಿಯ ಬಾಪುಗೌಡ ಪಾಟೀಲ ಮತ್ತು ರಾಜಕಾರಣದ ಗಂಧಗಾಳಿಯೂ ಗೊತ್ತಿಲ್ಲದ ಜೆಡಿಎಸ್‌ನ ಸುಮಂಗಲಾ ಮೈಸೂರು ಇದ್ದಾರೆ. ಆದರೆ ಇವರಿಬ್ಬರ ಜೊತೆ ಪ್ರಚಾರ ಮಾಡಲೂ ಕಾರ್ಯಕರ್ತರೇ ಇಲ್ಲದಂತಹ ಪರಿಸ್ಥಿತಿಯಲ್ಲಿದ್ದಾರೆ.

ಮೂಲತಃ ಈ ಕ್ಷೇತ್ರದಲ್ಲಿ ಜೆಡಿಎಸ್ ಅನ್ನು ಕಟ್ಟಿ ಬೆಳೆಸಿದ್ದು ಹಿರಿಯ ನ್ಯಾಯವಾದಿ ಎಂ.ಹೆಚ್.ಬೆಂಡಿಗೇರಿ ಮತ್ತು ಕಳೆದ ಚುನಾವಣೆಯಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ಸೋಲು ಕಂಡಿದ್ದ ಮಾಜಿ ಜಿ.ಪಂ ಅಧ್ಯಕ್ಷೆ ಪ್ರೇಮಾ ಪಾಟೀಲ. ಇವರಿಬ್ಬರೂ ಇತ್ತೀಚೆಗೆ ತಮ್ಮ ಸಾವಿರಾರು ಬೆಂಬಲಿಗರೊಂದಿಗೆ ಬಿಜೆಪಿ ಸೇರಿ ಬೊಮ್ಮಾಯಿ ಪರ ಚುನಾವಣಾ ಪ್ರಚಾರಕ್ಕಿಳಿದಿದ್ದಾರೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಖಾದ್ರಿ ಅದೆಷ್ಟೇ ಕಣ್ಣೀರಿಟ್ಟರೂ, ಮೈಕ್ ಹಿಡಿದು ಗೋಳಾಡುತ್ತಾ ಡ್ರಾಮಾ ಆದ್ಯಾವುದೂ ಈ ಬಾರಿ ವರ್ಕೌಟ್ ಆಗಲ್ಲ, ಕಾಂಗ್ರೆಸ್‌ನ ಖಾದ್ರಿಯ ಖೇಲ್ ಈ ಬಾರಿ ಖತಮ್ ಆಗುವುದು ನಿಶ್ಚಿತ ಎಂಬಂತಾಗಿದೆ. ಜನ ಮತ್ತೆ ಬೊಮ್ಮಾಯಿಯನ್ನು ಗೆಲ್ಲಿಸುವ ಮೂಲಕ ಅಭಿವೃದ್ಧಿಯತ್ತ ಮುಖ ಮಾಡುವ ಎಲ್ಲ ಲಕ್ಷಣಗಳು ಸ್ಪಷ್ಟಗೊಂಡಿವೆ.

● ಹುರಳಿಕುಪ್ಪಿ ವಿನಯ್

12<<<

ಸಿಂಪಥಿ ಎದ್ದಿದೆ. ಭ್ರಷ್ಟನೆಂದೇ ಹೆಸರು ಮಾಡಿರುವ ಜೆಡಿಎಸ್‌ನ ರಮೇಶ್‌ಬಾಬು ಬಂಡಿಸಿದ್ದೇಗೌಡ ಶಾಸಕನಾಗಿದ್ದಾಗ ಲೂಟಿ ಮಾಡಿರುವ ಅಕ್ರಮ ಹಣವನ್ನು ಕಾವೇರಿ ನೀರಿಗಿಂತಲೂ ಹೆಚ್ಚಾಗಿಯೇ ಹರಿಸುತ್ತಿದ್ದಾನೆ. 'ಬಾಬುನ ನೋಟು ರವೀಂದ್ರನಿಗೆ ವೋಟು' ಎನ್ನುತ್ತಿರುವ ಮತದಾರ ಮಾತ್ರ ಈ ಬಾರಿ ಬಾಬುನನ್ನು ಮುಳುಗಿಸಲು ಪಣ ತೊಡುತ್ತಿದ್ದಾರೆ.

ಕಳೆದ ಬಾರಿ ಅಂಬರೀಶ್ ಕ್ಷೇತ್ರಕ್ಕೆ ಕಾಲಿಡುವುದಕ್ಕೂ ಮುನ್ನವೇ ಅಕ್ರಮ ಗಣಿಗಾರಿಕೆ, ತಾಯಿ ಶಾಸಕಿಯಾಗಿದ್ದ ಸಂದರ್ಭದಲ್ಲಿ ಮಾಡಿಟ್ಟಿದ್ದ ಕಳಪೆ ಕಾಮಗಾರಿಯ ಹಣವನ್ನು ಸ್ತ್ರೀಶಕ್ತಿ ಸಹಾಯ ಸಂಘ, ಜಾತಿವಾದಿ ಸಂಘಟನೆಗಳಿಗೆ ಹಂಚಿ, ಕಾಂಗ್ರೆಸ್ ಪಕ್ಷದ ಒಡಕಿನ ಲಾಭ ಪಡೆದ ಬಾಬು ನಿರಾಯಾಸವಾಗಿ ಗೆದ್ದುಬಿಟ್ಟ. ಕಳೆದ ಬಾರಿಯಂತೆ ಈ ಬಾರಿಯೂ ಹಣದ ಮೂಲಕವೇ ಎಲ್ಲರನ್ನೂ ಮಾತನಾಡಿಸುತ್ತಿರುವ ರಮೇಶ್‌ಬಾಬು ಹೆಸರು ಸಂಪೂರ್ಣ ಕೆಟ್ಟಿದೆ. ಶಾಸಕನಾಗಿದ್ದ ಸಂದರ್ಭದಲ್ಲಿ ನಡೆಸಿರುವ ಭ್ರಷ್ಟಾಚಾರ, ಕಳಪೆ ರಸ್ತೆ ಕಾಮಗಾರಿ, ಮೂಲಭೂತ ಸೌಲಭ್ಯಗಳ ಕಡೆಗಣನೆಯಿಂದ ಜನರ ಕೋಪಕ್ಕೆ ಗುರಿಯಾಗಿರುವ ಬಾಬು ಈ ಬಾರಿ ಸೋಲುವ ಸಾಧ್ಯತೆಗಳೇ ಅಧಿಕವಾಗಿವೆ. ಕಾಂಗ್ರೆಸ್ ಟಿಕೆಟ್ ರವೀಂದ್ರನಿಗೆ ಸಿಕ್ಕಿದ್ದರೆ ಬಾಬು ಚುನಾವಣೆಗೂ ಮುನ್ನವೇ ಸೋತು ಸುಣ್ಣವಾಗಿರುತ್ತಿದ್ದ.

ಆದರೆ ಶ್ರೀರಂಗಪಟ್ಟಣ ಕ್ಷೇತ್ರದ ಟಿಕೆಟನ್ನು ಕಾಂಗ್ರೆಸ್ ರವೀಂದ್ರನಿಗೆ ತಪ್ಪಿಸಿಬಿಟ್ಟರು. ಕೈಗೆ ಬಂದ ತುತ್ತನ್ನು ರವೀಂದ್ರ ಬಾಯಿಗಿಡುವಷ್ಟರಲ್ಲಿ ಅಂಬಿ ಅದನ್ನು ಕಿತ್ತುಕೊಂಡು ತನ್ನ ಶಿಷ್ಯ ಸಚ್ಚಿದಾನಂದನ ಮಾವ ಎಸ್.ಎಲ್.ಲಿಂಗರಾಜು ಎಂಬ ಸೋಗಲಾಡಿಗೆ ಕೊಡಿಸಿಬಿಟ್ಟರು. ಯಾವಾಗ ಅಂಬಿ ಎರಡನೆ ಬಾರಿಗೆ ರವೀಂದ್ರನಿಗೆ ಟಿಕೆಟ್ ತಪ್ಪಿಸಿದರೋ ಕ್ಷೇತ್ರದ ಜನರೇ ಮುಂದೆ ನಿಂತ ಬಾಬು ವಿರುದ್ಧ ರವೀಂದ್ರನನ್ನು ಪಕ್ಷೇತರನಾಗಿ ನಿಲ್ಲಿಸಿದ್ದಾರೆ. ಕ್ಷೇತ್ರದಲ್ಲಿ ರವೀಂದ್ರನನ್ನು ಸೋಲಿಸಲು ಹಠ ಹಿಡಿದಿರುವ ಅಂಬಿ 2-3 ಬಾರಿ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಸುತ್ತಿ ಲಿಂಗರಾಜುಗೆ ಮತ ನೀಡಿ ಎಂದು ಕೇಳುತ್ತಿರುವುದು ರವೀಂದ್ರನಿಗೆ ಸ್ವಲ್ಪ ಮಟ್ಟಿನ ಡ್ಯಾಮೇಜ್ ಆಗಬಹುದು. ಆದರೆ ಬಾಬುನ ಸೋಗಲಾಡಿತನ, ಭ್ರಷ್ಟಾಚಾರದ ವಿರುದ್ಧ ಜನ ತಿರುಗಿನಿಂತಿದ್ದು ಆತನ ಸೋಲಿಗೆ ಕಾರಣವಾಗಲಿದೆ. ಲಿಂಗರಾಜು ಕೀಳುವ ಓಟುಗಳು ರವೀಂದ್ರನದ್ದೇ ಆಗಿರುವುದರಿಂದ ನಾನೇ ಗೆಲ್ಲುತ್ತೇನೆ ಎಂದು ಬಾಬು ಈಗಾಗಲೇ ಬೊಬ್ಬಿರಿಯುತ್ತಿದ್ದಾನೆ.

ಸರ್ವೋದಯ ಕರ್ನಾಟಕ ಪಕ್ಷದಿಂದ ಸ್ಪರ್ಧಿಸಿರುವ ನಂಜುಂಡೇಗೌಡ ಸರಳ-ಸಜ್ಜನ ಎಂಬುದು ನಿಜ. ಆದರೆ ಹಣವೇ ಮಾನದಂಡವಾಗಿರುವ ಇವತ್ತಿನ ಚುನಾವಣೆಯಲ್ಲಿ ನಂಜುಂಡೇಗೌಡರ ಸ್ಪರ್ಧೆ 3ನೇ ಸ್ಥಾನಕ್ಕಷ್ಟೇ ಮೀಸಲಾಗಿದೆ. ಐದು ಬಾರಿ ಸೋತು ಆರನೆ ಬಾರಿಗೆ ಕಣದಲ್ಲಿರುವ ನಂಜುಂಡೇಗೌಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಜಕ್ಕೂ ಗೆಲ್ಲಬೇಕಾದ ವ್ಯಕ್ತಿ. ಆದರೆ ಇಂದು ನಡೆಯುತ್ತಿರುವ ಹಣಬಲದ ಚುನಾವಣೆಯಲ್ಲಿ ನಂಜುಂಡೇಗೌಡರು ಗೆಲ್ಲಲು ಪವಾಡವೇ ನಡೆಯಬೇಕಾಗಿದೆ.

ಕ್ಷೇತ್ರದಲ್ಲಿ 1.90 ಲಕ್ಷ ಮತದಾರರಿದ್ದು, 80 ಸಾವಿರದಷ್ಟಿರುವ ಒಕ್ಕಲಿಗ ಮತಗಳು ಬಾಬು-ರವೀಂದ್ರ ಹಾಗೂ ನಂಜುಂಡೇಗೌಡರ ಪರ ಹಂಚಿಕೆಯಾಗಲಿದ್ದು, ಸಿದ್ದರಾಮಯ್ಯ ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ಬರದಿರುವುದು 38 ಸಾವಿರದಷ್ಟಿರುವ ಕುರುಬ ಮತಗಳಲ್ಲಿ ಬಹುತೇಕ ಮತ ರವೀಂದ್ರನಿಗೆ ಹರಿದು ಬರಲಿದೆ. ಮುಸ್ಲಿಂ ಮತಗಳು, ಬೆಸ್ತ ನಾಯಕ ಇತರೆ ಜನಾಂಗದ ಮತಗಳು ಅನುಕಂಪದ ಹಿನ್ನೆಲೆಯಲ್ಲಿ ರವೀಂದ್ರರಿಗೆ ಸಿಗಲಿದ್ದು, ಅವರೇ ಫಲಿತಾಂಶದೆಡೆಗೆ ಸಾಗುವಂತೆ ಮಾಡಿದೆ.


ಕೆ.ಆರ್.ಪೇಟೆ: ಅನುಕಂಪದ ಆಸರೆಯಲ್ಲಿ ಕೃಷ್ಣ

ಕೆ.ಆರ್.ಪೇಟೆ ತಾಲ್ಲೂಕು ಚುನಾವಣೆ ಒಂದರ್ಥದಲ್ಲಿ ರಾಜ್ಯದ ಗಮನ ಸೆಳೆದಿದೆ. ಕಾರಣ ಮಾಜಿ ಸ್ಪೀಕರ್ ಕೃಷ್ಣರ ಬಂಡಾಯ ಸ್ಪರ್ಧೆ.

ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ಪ್ರಾಬಲ್ಯ ಇರುವ ಸದರಿ ತಾಲ್ಲೂಕಿನ ರಾಜಕಾರಣದಲ್ಲಿ ಒಕ್ಕಲಿಗ ಜನಾಂಗವೇ ನಿರ್ಣಾಯಕ ಹಂತದಲ್ಲಿದ್ದರೂ ಗಣನೀಯ ಸಂಖ್ಯೆಯಲ್ಲಿರುವ ಕುರುಬ ಹಾಗೂ ಲಿಂಗಾಯತ ಮತದಾರರನ್ನು ಕಡೆಗಣಿಸಲಾಗದು.

ಕೆ.ಆರ್.ಪೇಟೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಹೋಟೆಲ್ ಉದ್ಯಮಿ ಕೆ.ಸಿ.ನಾರಾಯಣಗೌಡ, ಕಾಂಗ್ರೆಸ್‌ನ ಹಾಲಿ ಶಾಸಕ ಕೆ.ಬಿ.ಚಂದ್ರಶೇಖರ್ ಮತ್ತು ಪಕ್ಷೇತರರಾಗಿ ಸ್ಪರ್ಧಿಸಿರುವ ಸರಳ ಸಜ್ಜನಿಕೆಗೆ ಹೆಸರಾದ ಮಾಜಿ ಸ್ಪೀಕರ್ ಕೃಷ್ಣ ಚುನಾವಣಾ ಕಣದಲ್ಲಿರುವುದರಿಂದ ಮೇಲ್ನೋಟಕ್ಕೆ ಇಲ್ಲಿ ತ್ರಿಕೋನ ಸ್ಪರ್ಧೆ ಕಂಡುಬರುತ್ತಿದೆ. ಆದರೆ ಅಂತಿಮವಾಗಿ ಕೃಷ್ಣ ಮತ್ತು ಹಾಲಿ ಶಾಸಕ ಚಂದ್ರಶೇಖರ ನಡುವೆ ಫಲಿತಾಂಶ ನಿರ್ಧಾರವಾಗಲಿದೆ. ಕೃಷ್ಣರಿಗೆ ಬಿ.ಫಾರಂ ಕೈ ತಪ್ಪಿದ ಅನುಕಂಪ ಇದ್ದರೆ, ಕೆ.ಬಿ.ಚಂದ್ರಶೇಖರ್‌ಗೆ ಸಿದ್ದು ಸಿಎಂ ಎಫೆಕ್ಟ್ ಕೈ ಹಿಡಿಯುವ ಸಂಭವವಿದೆ.

ಸದರಿ ಕ್ಷೇತ್ರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸತತವಾಗಿ ಯಾರೂ ಪುನರಾಯ್ಕೆಯಾದ ನಿದರ್ಶನವಿಲ್ಲ. ಆದರೆ ಈ ಬಾರಿ ಜಾ.ದಳ ಒಡಕಿನ ಲಾಭ ಪಡೆಯಲು ಕಾಂಗ್ರೆಸ್‌ನ ಕೆಬಿಸಿ ಮುಂದಾಗಿದ್ದಾರೆ. ಆದರೆ ಚಂದ್ರಶೇಖರ್ ಕುಟುಂಬದ ದಬ್ಬಾಳಿಕೆ ರಾಜಕಾರಣ, ಬೇನಾಮಿ ಗುತ್ತಿಗೆ, ಅಕ್ರಮ ಮರಳು ಲೂಟಿಯಿಂದ ಜನ ಬೇಸತ್ತಿದ್ದಾರೆ. ಸಿದ್ದರಾಮಯ್ಯ ಸಿಎಂ ಆಗುವ ನಿರೀಕ್ಷೆ ಇರುವುದರಿಂದ 32 ಸಾವಿರ ಸಂಖ್ಯೆಯಲ್ಲಿರುವ ಕುರುಬರು ಮತ್ತು 25 ಸಾವಿರ ಸಂಖ್ಯೆಯಲ್ಲಿರುವ ಹಿಂದುಳಿದವರು ಕಾಂಗ್ರೆಸ್‌ಗೆ ನಿಚ್ಚಳವಾಗಿ ಬೆಂಬಲಿಸಿದರೆ ಕೆಬಿಸಿ ಮತ್ತೆ ಗೆಲ್ಲಬಹುದು.


ಕೆ.ಆರ್.ಪೇಟೆ ಕೃಷ್ಣ

● ವರವಿಗಾವ

ತುಮಕೂರು ಜಿಲ್ಲೆ:

ಕಾಂಗ್ರೆಸ್ ಮುನ್ನಡೆ ಜೆಡಿಎಸ್ ಹಿನ್ನಡೆ ಬಿಜೆಪಿ ಮುಕಾಡೆ

ತುಮಕೂರು ಜಿಲ್ಲೆಯಲ್ಲಿ ಮೊದಲಿನಿಂದಲೂ ಒಂದು ಟ್ರೆಂಡ್ ಕೆಲಸ ಮಾಡುತ್ತಿದೆ. ಅದೇನು ಸಂಬಂಧವೋ ಅಥವಾ ಕಾಕತಾಳೀಯವೋ ಗೊತ್ತಿಲ್ಲ; ತುಮಕೂರು ಜಿಲ್ಲೆಯಿಂದ ಹೆಚ್ಚು ಸಂಖ್ಯೆಯಲ್ಲಿ ಆರಿಸಿಹೋದ ಪಕ್ಷವೇ ರಾಜ್ಯದ ಗದ್ದುಗೆ ಹಿಡಿಯುತ್ತದೆ. 1994ರಲ್ಲಿ ದೇವೇಗೌಡರು ಮುಖ್ಯಮಂತ್ರಿಯಾದಾಗ ತುಮಕೂರು ಜಿಲ್ಲೆಯಲ್ಲಿದ್ದ 13 ಮತ ಕ್ಷೇತ್ರಗಳ ಪೈಕಿ 11 ಸ್ಥಾನಗಳಲ್ಲಿ ಜೆಡಿಎಸ್ ಗೆಲುವು ಸಾಧಿಸಿತ್ತು. 1999ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದು ಎಸ್.ಎಂ.ಕೃಷ್ಣ ಸರ್ಕಾರ ರಚನೆಯಾದ ಸಂದರ್ಭದಲ್ಲೂ ತುಮಕೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರದೇ ಕಾರುಬಾರು. 2004ರ ಚುನಾವಣೆಯಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾಗಿ, ನಂತರದ ಅವಧಿಯಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿಯಾದ ವೇಳೆಯಲ್ಲಿ ಜಿಲ್ಲೆಯ ಬಹುತೇಕ ಕ್ಷೇತ್ರಗಳಲ್ಲಿ ಜೆಡಿಎಸ್ ಶಾಸಕರು ಗೆದ್ದಿದ್ದರು. ಕಳೆದ ಬಿಜೆಪಿ ಅಧಿಕಾರಾವಧಿಯಲ್ಲಿ ಬಿಜೆಪಿ ಮೂರು ಕ್ಷೇತ್ರಗಳನ್ನು ಗೆದ್ದುಕೊಂಡು ಬಂಡಾಯ ಅಭ್ಯರ್ಥಿ ವೆಂಕಟರಮಣಪ್ಪ ಮತ್ತು ಜಗ್ಗೇಶ್‌ರನ್ನು ತನ್ನತ್ತ ಸೆಳೆದುಕೊಂಡು ತನ್ನ ಮೇಲುಗೈ ಸಾಧಿಸಿತ್ತು.

ಈ ಬಾರಿ ರಾಜ್ಯದಾದ್ಯಂತ ಕಾಂಗ್ರೆಸ್ ಪರವಾದ ಅರ್ಥಾತ್ ಬಿಜೆಪಿ ವಿರುದ್ಧವಾದ ಅಲೆ ಎದ್ದಿದೆ. ಅದರ ಪ್ರತಿರೂಪದಂತೆ ತುಮಕೂರು ಜಿಲ್ಲೆಯಲ್ಲೂ ಕಾಂಗ್ರೆಸ್‌ನ ಅಲೆ ಇರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಜಿಲ್ಲೆಯಲ್ಲಿ ಒಟ್ಟು 11 ಕ್ಷೇತ್ರಗಳಿದ್ದು ಅದರಲ್ಲಿ ಪಾವಗಡ ಮತ್ತು ಕೊರಟಗೆರೆ ಕ್ಷೇತ್ರಗಳು ಎಸ್‌ಸಿ ಮೀಸಲು ಕ್ಷೇತ್ರಗಳಾಗಿವೆ.

ಕೊರಟಗೆರೆ

ಕಾಂಗ್ರೆಸ್‌ನ ರಾಜ್ಯಾಧ್ಯಕ್ಷ ಹಾಗೂ ಮುಖ್ಯಮಂತ್ರಿ ಪದವಿ ಆಕಾಂಕ್ಷಿ ಡಾ.ಜಿ.ಪರಮೇಶ್ವರ್ ಪ್ರತಿನಿಧಿಸುವ ಕ್ಷೇತ್ರ ಇದು. ಇಲ್ಲಿ ಅವರ ಎದುರಾಳಿಗಳಾಗಿ ಜೆಡಿಎಸ್‌ನಿಂದ ಸುಧಾಕರ್‌ಲಾಲ್ ಮತ್ತು ಕೆಜೆಪಿಯಿಂದ ವಾಲೆ ಚಂದ್ರು ಎಂಬುವವರು ಪೈಪೋಟಿಗೆ ನಿಂತಿದ್ದಾರೆ. ಬಿಜೆಪಿ ಇಲ್ಲಿ ಯಾವ ಲೆಕ್ಕಕ್ಕೂ ಇಲ್ಲ, ಹೀಗಾಗಿ ಇಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಪರಮೇಶ್ವರ್ ಸ್ವಭಾವತಃ ಸಜ್ಜನ, ಯಾರಿಗೂ ಕೇಡು ಬಯಸುವ ವ್ಯಕ್ತಿಯಲ್ಲ, ವಿದ್ಯಾವಂತ, ಸುಸಂಸ್ಕೃತ ಎಂಬ ಹೆಗ್ಗಳಿಕೆಗಳೂ ಇವೆ. ಯಾವುದೇ ಹಗರಣಗಳಿಗೆ, ಭ್ರಷ್ಟಾಚಾರಕ್ಕೆ ಸಿಕ್ಕಿಕೊಂಡವರಲ್ಲ, ಕಳೆದ ಬಾರಿ ಹನ್ನೊಂದುವರೆ ಸಾವಿರ ಮತಗಳಿಂದ ಆರಿಸಿ ಬಂದಿದ್ದರು. ಆದರೆ ಇಂಥಾ ಬಿರುದು ಬಾವಲಿಗಳಿಂದ ಕ್ಷೇತ್ರದ ಮತದಾರರಿಗೆ ಬಂದ ಲಾಭವಾದರೂ ಏನು ಹೇಳಿ? ಈ ಪ್ರಶ್ನೆಯನ್ನು ನಾವು ಕೇಳುತ್ತಿಲ್ಲ, ಕ್ಷೇತ್ರದ ಪ್ರಜ್ಞಾವಂತ ಮತದಾರರು ಕೇಳುತ್ತಿದ್ದಾರೆ.

ಯಾಕೆಂದರೆ ಡಾ.ಜಿ.ಪಿ ಅವರು ರೂಢಿಸಿಕೊಂಡು ಬಂದಿರುವ ರಾಜಕೀಯವೇ ಅಂಥಾದ್ದು, ಮಂಡ್ಯದ ಎಸ್.ಎಂ.ಕೃಷ್ಣನಂತೆ ಇವರೂ ಕೂಡ ಹೈಲೆವೆಲ್, ವೈಟ್‌ಕಾಲರ್ ರಾಜಕಾರಣಿ. ಶಾಸಕರ ಮುಂದೆ ಸಾಮಾನ್ಯ ಮತದಾರರು ತಮ್ಮ ದುಃಖದುಮ್ಮಾನಗಳನ್ನು ಹೇಳಿಕೊಳ್ಳೋಣವೆಂದರೆ ಇವರು ಎಂದಿಗೂ ಅವರ ಕೈಗೆಟುಕುವುದೇ ಇಲ್ಲ, ಪಕ್ಷದ ಕಾರ್ಯಕರ್ತರ ಕೈಗೆ ಸಿಗುವುದೇ ದುರ್ಲಭ ಎಂಬ ಆರೋಪ ವ್ಯಾಪಕವಾಗಿದೆ. ಈ ಅಂಶ ಕಾಂಗ್ರೆಸ್ ಪಕ್ಷದ ಮೇಲೆ ಒಂದಷ್ಟು ನಕಾರಾತ್ಮಕ ಪರಿಣಾಮ ಬೀರಬಹುದು.


ಆದರೆ ಇವರ ಮುಂದೆ ಸ್ಪರ್ಧಿಸಿರುವ ಎದುರಾಳಿಗಳ್ಯಾರೂ ಅಂಥಾ ಪ್ರಭಾವಶಾಲಿಗಳಲ್ಲ ಎಂಬುದು ಇವರಿಗೆ ಪ್ಲಸ್ ಪಾಯಿಂಟ್ ಆಗಲಿದೆ. ಕಳೆದ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿ ಸೋತಿದ್ದ ವಾಲೆ ಚಂದ್ರಯ್ಯ ಈ ಬಾರಿ ಕೆಜೆಪಿಯಿಂದ ಕಣಕ್ಕಿಳಿದಿದ್ದಾರೆ. ಜಿ.ಪಂ.ಸದಸ್ಯ ಸುಧಾಕರ್ ಲಾಲ್ ಈ ಬಾರಿ ಜೆಡಿಎಸ್ ಅಭ್ಯರ್ಥಿ. ಮೇಲುನೋಟಕ್ಕೆ ತ್ರಿಕೋನ ಸ್ಪರ್ಧೆಯಂತೆ ಕಾಣಿಸಿದರೂ ಕಾಂಗ್ರೆಸ್ ಮುಂದಿದೆ. ಈ ಬಾರಿ ಕಾಂಗ್ರೆಸ್ ಸರ್ಕಾರ ಎಂಬ ಅಲೆಯ ಜೊತೆ ಪರಮೇಶ್ವರ್ ಅವರು ಒಂದುವೇಳೆ ಮುಖ್ಯಮಂತ್ರಿಯಾದರೆ, ಅವರು ಎಸಿ ರೂಮ್‌ನಲ್ಲಿ ಕೂತಿದ್ದರೂ ಆಟೋಮ್ಯಾಟಿಕ್ ಆಗಿ ಕ್ಷೇತ್ರ ಅಭಿವೃದ್ಧಿ ಆಗುತ್ತೆ ಎಂಬ ವಾದವೊಂದು ಈಗ ಕ್ಷೇತ್ರದಲ್ಲಿ ಹರಿದಾಡುತ್ತಿದೆ. ಮತದಾರರೂ ಕೂಡ ಈ ವಾದಕ್ಕೆ ಮನಸೋತಂತೆ ಕಂಡುಬರುತ್ತಿದೆ.


ಹೀಗಾಗಿ ಪರಮೇಶ್ವರ್ ಗೆಲ್ಲುತ್ತಾರೆ ಎಂಬುದು ನಿಜವಾದರೂ. ಅದು ಈ ಹಿಂದಿನಂತೆ ಸುಲಭದ ತುತ್ತಾಗಿರುವುದಿಲ್ಲ.

ತುಮಕೂರು ಗ್ರಾಮಾಂತರ

ತುಮಕೂರು ಗ್ರಾಮಾಂತರ 2007ರಲ್ಲಿ ಕ್ಷೇತ್ರ ಪುನರ್‌ವಿಂಗಡಣೆಯ ನಂತರ ರೂಪುಗೊಂಡಿದ್ದು. ಈ ಕ್ಷೇತ್ರ ಹೆಬ್ಬೂರು, ಗೂಳೂರು, ಊರ್ಡಿಗೆರೆ, ಬೆಳ್ಳಾವಿ ಹಾಗೂ ತುಮಕೂರು ಕಸಬಾ ಹೋಬಳಿಗಳನ್ನು ಒಳಗೊಂಡಿದೆ. ಪ್ರಸ್ತುತ 1,66,745 ಮತದಾರರಿದ್ದಾರೆ. ಒಟ್ಟು 15 ಮಂದಿ ಕಣದಲ್ಲಿದ್ದಾರೆ.

ಬಿಜೆಪಿಯಿಂದ ಬಿ.ಸುರೇಶ್‌ಗೌಡ ಪುನರಾಯ್ಕೆ ಬಯಸಿದ್ದರೆ, ಹೆಚ್.ನಿಂಗಪ್ಪ ಈ ಬಾರಿ ಕೆಜೆಪಿಯಿಂದ ಸ್ಪರ್ಧಿಸಿದ್ದಾರೆ. ಜೆಡಿಎಸ್‌ನಿಂದ ಚನ್ನಿಗಪ್ಪನ ಮಗ ಗೌರಿಶಂಕರ್ ಟಿಕೆಟ್ ಗಿಟ್ಟಿಸಿ ಕಣಕ್ಕಿಳಿದಿದ್ದಾರೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸ್ಥಿತಿಯೇ ಶೋಚನೀಯ. ಇಲ್ಲಿನ ಅಭ್ಯರ್ಥಿ ಆಡಿಟರ್ ನಾಗರಾಜು ಯಲಚವಾಡಿ ಎಂಬುವವರು ಪ್ರಭಾವಿ ನಾಯಕರಾಗುವ ಮಾತು ದೂರ ಉಳಿಯಿತು, ಪೈಪೋಟಿ ನೀಡಬಹುದಾದ ರಾಜಕಾರಣಿಯೂ ಅಲ್ಲ.


ಸುರೇಶ್‌ಗೌಡ


ಸೊಗಡು ಶಿವಣ್ಣ


ಗೌರಿ ಶಂಕರ್


ಶ್ರೀನಿವಾಸ್ –ಗುಬ್ಬಿ


ಎಂ.ಟಿ.ಕೃಷ್ಣಪ್ಪ

ಬಿ.ಸುರೇಶ್‌ಗೌಡ ಕಳೆದ ಅವಧಿಯಲ್ಲಿ ಯಡ್ಯೂರಪ್ಪನ ಕಟ್ಟಾ ಅನುಯಾಯಿಯಾಗಿ ಗುರುತಿಸಿಕೊಂಡಿದ್ದರು. ಯಡ್ಡಿ ಪರ ವಕಾಲತ್ತು ವಹಿಸಿ ಗಂಟಲು ವ್ಯಾಯಾಮ ಮಾಡುತ್ತಿದ್ದವರಲ್ಲಿ ಇವರು ಪ್ರಮುಖರು. ಆದರೆ ಯಡ್ಡಿ ಕೆಜೆಪಿ ಕಟ್ಟಿದಾಗ ತನ್ನ ಲಾಭದ ಲೆಕ್ಕಾಚಾರವನ್ನು ತೂಗಿ ಅಳೆದು ಈ ಆಸಾಮಿ ಕೊನೆಗೂ ಯಡ್ಡಿಗೆ ಕೈಕೊಟ್ಟರು. ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಅಲೆಯಿದೆ ಎಂಬುದರ ವಾಸನೆ ಹಿಡಿದ ಈ ಅವಕಾಶವಾದಿ ಕಾಂಗ್ರೆಸ್‌ನ ಬಾಗಿಲು ತಟ್ಟಿದರು. ಆದರೆ ತನ್ನ ಅಧಿಕಾರಾವಧಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹತ್ತಾರು ಸುಳ್ಳು ಕೇಸುಗಳನ್ನು ಹಾಕಿಸಿ ನಾನಾ ಉಪಟಳ ಕೊಟ್ಟಿದ್ದ ಕಾರಣಕ್ಕೆ ಕಾಂಗ್ರೆಸ್‌ನ ಕಾರ್ಯಕರ್ತರು ತೀವ್ರವಾಗಿ ವಿರೋಧಿಸಿದ್ದರ ಪರಿಣಾಮವಾಗಿ ಗತಿಯಿಲ್ಲದೇ ಬಿಜೆಪಿಯಲ್ಲೇ ಉಳಿದುಕೊಂಡಿದ್ದಾರೆ. ಬಿಜೆಪಿ ಕೂಡ ವಿಧಿಯಿಲ್ಲದೆ ಹಣ ಚೆಲ್ಲಬಹುದಾದ ಈ ಕ್ಯಾಂಡಿಡೇಟನ್ನೇ ಉಳಿಸಿಕೊಂಡಿದೆ.

ಯಡ್ಡಿಗೆ ಕೈಕೊಟ್ಟ ಕಾರಣಕ್ಕೆ ಲಿಂಗಾಯತರಲ್ಲಿ ಇವರ ಬಗ್ಗೆ ಅಸಮಾಧಾನವಿದೆ. ತಮ್ಮ ಒಕ್ಕಲಿಗ ಜಾತಿಯನ್ನೇ ಮುಂದುಮಾಡುತ್ತಾರೆ ಎಂಬ ಆರೋಪವೂ ಕೇಳಿ ಬರುತ್ತಿದೆ. ಅಧಿಕಾರಿಗಳ ವರ್ಗಾವಣೆಯಲ್ಲಿ ತಮ್ಮದೇ ಜಾತಿಯವರನ್ನು ತರಬೇಕೆಂದು ಪ್ರಯತ್ನ ಮಾಡಿದ್ದು ಇತರ ಜಾತಿಗಳ ಕಣ್ಣು ಕೆಂಪಗಾಗಿಸಿದೆ.

ತನ್ನ ಕಟ್ಟಾ ಅನುಯಾಯಿಗಳಿರುವ ಕಡೆ ಒಂದಷ್ಟು ಅಭಿವೃದ್ಧಿ ಕಾಮಗಾರಿ ಮಾಡಿಸಿದ್ದರೂ ತಮ್ಮ ವಿರೋಧಿಗಳ ಪ್ರಾಬಲ್ಯವಿರುವ ಕಡೆ ತೀರಾ ಅಧ್ವಾನದ ಪರಿಸ್ಥಿತಿ ಸೃಷ್ಟಿಸಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದಾರೆ. 2008ರ ಚುನಾವಣೆಯಲ್ಲಿ 60,904 ಮತ ಪಡೆದು ಜೆಡಿಎಸ್ ಹೆಚ್.ನಿಂಗಪ್ಪನಿಗಿಂತ ಸುಮಾರು 28 ಸಾವಿರ ಮತಗಳ ಅಂತರದಿಂದ ಸುರೇಶ್ ಗೌಡ ಗೆದ್ದಿದ್ದರೂ ಕೂಡ ಈ ಬಾರಿ ಪರಿಸ್ಥಿತಿ ತೀರಾ ಭಿನ್ನವಾಗಿದೆ. ಕಳೆದ ಬಾರಿ ಸಾರಾಸಗಟು ಲಿಂಗಾಯತ ಮತಗಳು ಇವರ ಪಾಲಾಗಿದ್ದವು. ಆದರೆ ಈ ಬಾರಿ ಕೆಜೆಪಿಯಿಂದ ಪ್ರಬಲ ಅಭ್ಯರ್ಥಿಯೇ ಇರುವುದರಿಂದ ಲಿಂಗಾಯತ ಮತಗಳು ನಿಂಗಪ್ಪನ ಪಾಲಾಗಲಿವೆ.

ಚನ್ನಿಗಪ್ಪನ ಮಗ ಗೌರಿಶಂಕರ್ ಹಣದ ಶಕ್ತಿಯ ಮೇಲೆ ಚುನಾವಣೆ ಗೆಲ್ಲುವ ಉಮೇದಿನಲ್ಲಿ ದುಡ್ಡಿನಕಂತೆಗಳನ್ನು ಹರಡುತ್ತಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಈ ನಾಲ್ಕೂ ಅಭ್ಯರ್ಥಿಗಳೂ ಒಕ್ಕಲಿಗ ಜಾತಿಯವರೇ ಆಗಿದ್ದು ವಕ್ಕಲಿಗ ಮತಗಳು ಒಡೆದುಹೋಗಲಿವೆ.

ಹೀಗಾಗಿ ಇಲ್ಲಿ ಯಾರು ಗೆಲ್ಲುತ್ತಾರೆ ಎಂಬುದನ್ನು ಪಟಾಕಿ ಹೊಡೆದ ಮೇಲಷ್ಟೇ ಹೇಳಲು ಸಾಧ್ಯ.

ಚಿಕ್ಕನಾಯಕನಹಳ್ಳಿ

ಇದು ತಾಲೂಕು ಕೇಂದ್ರವಾದರೂ ಹೆಸರಿಗೆ ತಕ್ಕಂತೆ ಒಂದು ಹಳ್ಳಿಯಂತೆಯೇ ಇದೆ. ನೈಸರ್ಗಿಕವಾಗಿ ಬಹಳ ಸಮೃದ್ಧವಾಗಿದ್ದರೂ ಕೂಡ ಈ ಇಡೀ ಕ್ಷೇತ್ರ ಅಭಿವೃದ್ಧಿಯ ಪಟ್ಟಿಯಲ್ಲಿ ಕೊನೆಯ ಸಾಲಿನಲ್ಲೇ ಇದೆ. ಈ ಬಾರಿ ಬಿಜೆಪಿಯಿಂದ ಮಾಜಿ ಶಾಸಕ ಕಿರಣ್‌ಕುಮಾರ್, ಕಾಂಗ್ರೆಸ್‌ನಿಂದ ಭರವಸೆಯ ಯುವಕ ಸಾಸಲು ಸತೀಶ್, ಜೆಡಿಎಸ್‌ನಿಂದ ಹಾಲಿ ಶಾಸಕ ಸುರೇಶ್‌ಬಾಬು, ಕೆಜೆಪಿಯಿಂದ ಮಾಜಿ ಶಾಸಕ, ಉತ್ತಮ ವಾಗ್ಮಿಯೆಂದು ಹೆಸರಾದ ಜೆ.ಸಿ.ಮಾಧುಸ್ವಾಮಿ ಕಣದಲ್ಲಿರುವ ಪ್ರಮುಖರು.

ಮೇಲುನೋಟಕ್ಕೆ ನೋಡಿದರೆ ಇಲ್ಲಿ ಈ ನಾಲ್ವರ ನಡುವೆ ಚತುಷ್ಕೋನ ಸ್ಪರ್ಧೆ ಇದ್ದಂತೆ ಕಂಡುಬರುತ್ತಿದೆ. ಆದರೆ ವಾಸ್ತವ ಸ್ಥಿತಿಗಳ ಒಳಹೊಕ್ಕು ಪರಿಶೀಲಿಸಿದಾಗ ಪರಿಸ್ಥಿತಿಯು ಬೇರೆ ಬೇರೆ ಆಯಾಮಗಳು ಅನಾವರಣಗೊಳ್ಳುತ್ತವೆ.

ಈ ಕ್ಷೇತ್ರದ ಹಾಲಿ ಶಾಸಕ ಸುರೇಶ್‌ಬಾಬು ಕುರುಬ ಜನಾಂಗಕ್ಕೆ ಸೇರಿದವರು. ತಮ್ಮ ಕ್ಷೇತ್ರ ಹಾಗೂ ಜನರು ಬಹಳ ಹಿಂದುಳಿದಿರುವುದನ್ನು ಕಂಡು ತುಂಬಾ ಬೇಸತ್ತಿದ್ದಾರೆ. ಹೀಗೆ ಬೇಸತ್ತು ಇವರು ಮಾಡಿದ್ದೇನು ಗೊತ್ತೆ? ಈ ಜನರ ಗೊಡವೆಯೇ ಬೇಡ ಅಂತಾ ಮುಂದುವರೆದ ಬೆಂಗಳೂರಿನಲ್ಲೇ ಠಿಕಾಣಿ ಹೂಡಿ ಸೊಂಪಾಗಿದ್ದುಬಿಟ್ಟಿದ್ದಾರೆ. ಚುನಾವಣೆ ಹತ್ತಿರವಾಗುತ್ತಿದ್ದಂತೆ ಮತ್ತೆ ಇವರ ದರ್ಶನ ಭಾಗ್ಯ ಜನರಿಗೆ ಸಿಗುತ್ತಿದೆ. ಆದರೆ ಇವರಿಗೂ ಒಂದು ಅರ್ಹತಾ ಸರ್ಟಿಫಿಕೇಟ್ ಇದೆ. ಅದೇನೆಂದರೆ ದೇವರಾಜ ಅರಸು ಸಂಪುಟದಲ್ಲಿ ಮಂತ್ರಿಯಾಗಿದ್ದ, ನಾಡಿನಾದ್ಯಂತ ಹೆಸರುವಾಸಿಯಾಗಿದ್ದ ಸಜ್ಜನ ಹಾಗೂ ದಕ್ಷ ರಾಜಕಾರಣಿ ಎನ್. ಬಸವಯ್ಯನವರ ಸುಪುತ್ರನೇ ಈ ಆಸಾಮಿ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ಶ್ರೀಯುತ ಬಸವಯ್ಯನವರು ವಿಧಾನಸೌಧದಲ್ಲಿ ನಡೆಸಿದ ಹೋರಾಟ ಇಂದಿಗೂ ಜನಮಾನಸದಲ್ಲಿ ಹಚ್ಚಹಸಿರಾಗಿದೆ. ಆದ್ದರಿಂದ ಎಂಥಾ ತಂದೆಯ ಹೊಟ್ಟೇಲಿ ಎಂಥಾ ಮಗ ಹುಟ್ಟಿದ ನೋಡಿ ಅಂತಾ ಕ್ಷೇತ್ರದ ಜನ ಮಾತಾಡಿಕೊಳ್ಳೋದು ಸಾಮಾನ್ಯ.

ಸದಾ ಶೋಕಿಲಾಲನಂತೆ ತಿರುಗುವ ಸುರೇಶ್ ಬಾಬು ತನ್ನನ್ನು ಗೆಲ್ಲಿಸಿದ ಜನರ ಕೈಗೆ ಸಿಗೋದೇ ಇಲ್ಲ, ಯಾವಾಗ ಫೋನ್ ಮಾಡಿದರೂ 'ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ' ಎಂಬುದೇ ಉತ್ತರ; ಒಂದುವೇಳೆ ರಿಂಗ್ ಆದರೂ ತೆಗೆದುಕೊಳ್ಳುವುದಿಲ್ಲ, ಇಂಥಾ ಸಾಧನೆಗಳ ಫಲವಾಗಿ ಈ ಬಾರಿ ಬಹುಪಾಲು ಮತದಾರರು ಈತನನ್ನು ತಮ್ಮ ವ್ಯಾಪ್ತಿಯಿಂದ ಹೊರಗಿಡಲು ನಿರ್ಧರಿಸಿದ್ದಾರೆ.

ಇನ್ನು ಬಿಜೆಪಿಯ ಕಿರಣ್‌ಕುಮಾರ್ ಒಮ್ಮೆ ಶಾಸಕರಾಗಿದ್ದವರು. ಕ್ಷೇತ್ರದಲ್ಲಿ ರಾಜಕೀಯ, ಆರ್ಥಿಕ ಪ್ರಾಬಲ್ಯ ಹೊಂದಿರುವ ಲಿಂಗಾಯತ ಜಾತಿಗೆ ಸೇರಿದವರು. ಶಾಸಕರಾಗಿದ್ದ ಅವಧಿಯಲ್ಲಿ ಇವರ ಸಾಧನೆಯ ಬಗ್ಗೆ ಇವರೇ ಹೇಳಿಕೊಳ್ಳುವ ಸ್ಥಿತಿಯಲ್ಲಿಲ್ಲ ಎಂದರೆ ನೀವೇ ಅರ್ಥಮಾಡಿಕೊಳ್ಳಿ. ಬದಲಿಗೆ ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೇಮಾವತಿ ನದಿ ಯೋಜನೆಗೆ ಭಾರೀ ಅನುದಾನ ತಂದಿದ್ದೇನೆ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಈ ಯೋಜನೆಗೆ ಶಿಲಾನ್ಯಾಸವಾಗಿದ್ದು ಬಿಟ್ಟರೆ ಇನ್ಯಾವುದೇ ಸಾಧನೆಯಾಗಿಲ್ಲ. ಲಿಂಗಾಯತನಾಗಿದ್ದುಕೊಂಡು ಯಡ್ಡಿಯ ಹಿಂದೆ ಹೋಗದ ಕಾರಣಕ್ಕೆ ಈತನ ಬಗ್ಗೆ ಯಡ್ಡಿ ಸಿಟ್ಟುಗೊಂಡಿದ್ದಾರೆ. ಬಿಜೆಪಿಯನ್ನು ಹೀನಾಯವಾಗಿ ಸೋಲಿಸಲೇಬೇಕೆಂಬ ಹಠದಲ್ಲಿರುವ ಯಡ್ಡಿ ಈ ಕ್ಷೇತ್ರದಲ್ಲಿ ಪ್ರಬಲ ಲಿಂಗಾಯತ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದ್ದಾರೆ. ಅದಕ್ಕಿಂತ ಮುಖ್ಯವಾಗಿ ಇಲ್ಲಿ ಬಿಜೆಪಿಯ ಅಸ್ತಿತ್ವ ಅಷ್ಟಕ್ಕಷ್ಟೆ. ರಾಜ್ಯಾದ್ಯಂತ ಇರುವ ಬಿಜೆಪಿ ವಿರೋಧಿ ಅಲೆಯು ಇವರ ಪಾಲಿಗೆ ಮತ್ತೊಂದು ನಕಾರಾತ್ಮಕ ಅಂಶ. ಹೀಗಾಗಿ ಕಿರಣ್‌ಕುಮಾರ್ ಗೆಲ್ಲಬೇಕೆಂದರೆ ಇಲ್ಲಿ ಭಾರೀ ಪವಾಡವೇ ನಡೆಯಬೇಕು.

ಮತ್ತೊಬ್ಬ ಪ್ರಮುಖ ಅಭ್ಯರ್ಥಿ ಕೆಜೆಪಿಯ ಮಾಧುಸ್ವಾಮಿ. ತನ್ನ ವಾಕ್ಚಾತುರ್ಯದಿಂದ ಉತ್ತಮ ಸಂಸದೀಯ ಪಟು ಎನಿಸಿಕೊಂಡಿರುವ ಮಾಧುಸ್ವಾಮಿ ಮೂಲತಃ ಜೆಡಿಯು ಪಕ್ಷದ ಪಳೆಯುಳಿಕೆ. ತನ್ನ ಪಕ್ಷದ ದುರ್ಗತಿ ಕಂಡ ಮಾಧುಸ್ವಾಮಿ ಈ ಬಾರಿ ಕಾಂಗ್ರೆಸ್‌ನ ಬಾಗಿಲು ತಟ್ಟಿದ್ದರು. ಆದರೆ ಕಾಂಗ್ರೆಸ್‌ನವರು ಬಾಗಿಲು ತೆರೆದು ಬರಮಾಡಿಕೊಳ್ಳಲು ಹಿಂದೆಮುಂದೆ ನೋಡಿದರು ಅಂತಾ ಕಾಣುತ್ತೆ, ಕೊನೆಗೆ ತಮ್ಮ ಜಾತಿಯ ಕಾರ್ಡ್ ಬಳಸಿಕೊಂಡು ಕೆಜೆಪಿ ಅಭ್ಯರ್ಥಿಯಾಗಿಬಿಟ್ಟಿದ್ದಾರೆ.

ಮಾಧುಸ್ವಾಮಿಗಿರುವ ತಿಳಿವಳಿಕೆ, ವಾಕ್ಚಾತುರ್ಯ ಎಲ್ಲವನ್ನು ಬಳಸಿಕೊಂಡು ಕ್ಷೇತ್ರದಲ್ಲಿ ಸಂಘಟನೆ ಮಾಡಿದ್ದೇ ಆಗಿದ್ದಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಬೇರೆಯವರಿಗೆ ಅವಕಾಶವೇ ಇರುತ್ತಿರಲಿಲ್ಲವೇನೋ? ಆದರೆ ಈ ವ್ಯಕ್ತಿಯ ರಾಜಕೀಯದ ಸ್ಟೈಲೇ ಬೇರೆ. ಕೆಲವೇ ಹೊಗಳುಭಟ್ಟರ ಮಧ್ಯೆ ಕಾಲಕಳೆಯುವ ಈತ ಜನಸಾಮಾನ್ಯರನ್ನು, ಕಾರ್ಯಕರ್ತರನ್ನು ತನ್ನ ಹತ್ತಿರ ಸುಳಿಯಗೊಡುವುದಿಲ್ಲ ಎಂದು ಜನರು ಆರೋಪಿಸುತ್ತಿದ್ದಾರೆ. ತನ್ನ ದರ್ಪದ ನಡವಳಿಕೆಯಿಂದಾಗಿ ಇವರು ಹಿಂದುಳಿದ, ದಲಿತರ ಮನಸ್ಸಿನಿಂದ ದೂರವಾಗಿದ್ದಾರೆ ಎಂಬುದು ಎಲ್ಲೆಡೆ ಕೇಳಿಬರುತ್ತಿದೆ. ಈ ಹಿಂದೆ ಅಕ್ರಮ ಗಣಿಗಳ ಬಗ್ಗೆ ಭಾರೀ ವಿರೋಧ ವ್ಯಕ್ತಪಡಿಸಿ ಈಗ ಇದ್ದಕ್ಕಿದ್ದಂತೆ ಮೌನ ವಹಿಸಿದ್ದರ ಬಗ್ಗೆಯೂ ಜನಮನದಲ್ಲಿ ಅನುಮಾನ ಹೊಗೆಯಾಡುತ್ತಿದೆ. ಸದನದಲ್ಲಿ ನೈಸ್ ಯೋಜನೆ ಬಗ್ಗೆ ವಾದ ಮಾಡಿದ್ದಾರೆ, ಇಸ್ಲಾನ್ ಬಗ್ಗೆ ದನಿಯೆತ್ತಿದ್ದಾರೆ, ಆದರೆ ಕ್ಷೇತ್ರದ ಜನರ ಸಮಸ್ಯೆಗಳನ್ನು ಪರಿಹರಿಸಲು ಇವರು ಮಾಡಿದ್ದೇನು? ಎಂಬ ಪ್ರಶ್ನೆ ಉದ್ದಕ್ಕೂ ಕೇಳಿಬರುತ್ತಿದೆ.

ಯಡಿಯೂರಪ್ಪನ ಚುನಾವಣಾ ಪಟ್ಟು, ಹಣದ ಬಲ ಇವರ ಬೆಂಬಲಕ್ಕಿವೆ. ಆದರೆ ಲಿಂಗಾಯತ ಮತಗಳು ಬಿಜೆಪಿ – ಕೆಜೆಪಿ ಮಧ್ಯೆ ಹಂಚಿ ಹೋಗಲಿರುವುದು ಇವರ ಹಾದಿಗೆ ಅಡ್ಡಗಾಲಾಗಲಿದೆ. ಹೀಗಾಗಿ ಜೆ.ಸಿ ವಿಧಾನಸೌಧದ ಮೆಟ್ಟಿಲೇರಲು ಯಾವ ತಂತ್ರಗಳಿಗೆ ಮೊರೆ ಹೋಗುತ್ತಾರೆ ಎಂಬುದೇ ಕುತೂಹಲಕಾರಿ ಪ್ರಶ್ನೆ.

ರಾಜ್ಯಾದ್ಯಂತ ಅನುಕೂಲಕರ ವಾತಾವರಣ ಇರುವ ಕಾಂಗ್ರೆಸ್ ಪಕ್ಷ ಈ ಕ್ಷೇತ್ರದಲ್ಲಿ ಸಾಸಲು ಸತೀಶ್ ಎಂಬ ಯುವ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಮೇಲಿನ ಮೂರು ಅಭ್ಯರ್ಥಿಗಳಿಗೆ ಹೋಲಿಸಿದರೆ ಈತ ರಾಜಕೀಯಕ್ಕೆ ತೀರಾ ಹೊಸಬ. ಮೇಲಿನ ಮೂವರೂ ಈಗಾಗಲೇ ಕ್ಷೇತ್ರದಲ್ಲಿ ಎಂಎಲ್‌ಎಗಳಾಗಿ ಅಧಿಕಾರ ಅನುಭವಿಸಿದವರು. ಹಣ ಬಲದಲ್ಲಿ ಎಲ್ಲರೂ ಭಾರೀ ಕುಳಗಳೇ. ಸಣ್ಣ ರೈತ ಕುಟುಂಬದಿಂದ ಬಂದಿರುವ ಸತೀಶ್ ಮೇಲಿನವರಿಗೆ ಹಣ ಬಲದಲ್ಲಿ ಸಾಟಿಯಲ್ಲ; ಆದರೆ ಈತನಿಗೆ ತನ್ನದೇ ಆದ ಜನ ಬೆಂಬಲವಿದೆ. ಸತೀಶ್ ಮೂಲತಃ ಅಹಿಂದ, ದಲಿತ ಸಂಘರ್ಷ ಸಮಿತಿ ಮುಂತಾದ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದವರು. ಎಂಎ ಪದವಿ ಮುಗಿಸಿ ರೈತರ ಆತ್ಮಹತ್ಯೆಗಳ ಬಗ್ಗೆ ಪಿಎಚ್‌ಡಿ ಮಾಡುತ್ತಿರುವ ಈ ಯುವಕ ಹೋರಾಟದ ಮನೋಭಾವದವರು. ಹೀಗೆ ಚಳವಳಿಯ ಹಿನ್ನೆಲೆಯ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಕಾಂಗ್ರೆಸ್

...ಇರ ಹುಟ್ಟೇರುವಂತೆ ಮಾಡಿದೆ.

ಈ ಅಭ್ಯರ್ಥಿಯ ಜನಪ್ರಿಯತೆಯ ಸಾಕ್ಷಿಯಾಗಿ ನಾಮಪತ್ರ ಸಲ್ಲಿಕೆಯ ದಿನದಂದು ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸ್ ಪರವಾಗಿ ಇಷ್ಟೊಂದು ಜನ ಸೇರಿದ್ದು ಇದೇ ಮೊದಲು. ಇಲ್ಲಿನ ಕುತೂಹಲಕಾರಿ ಅಂಶವೆಂದರೆ ಒಂದೆರಡು ವರ್ಷಕ್ಕೆ ಮೊದಲು ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಬಹುತೇಕ ನಿಷ್ಕ್ರಿಯವಾಗಿತ್ತು. ಸತೀಶ್ ಕಾಂಗ್ರೆಸ್‌ನ ಸಂಘಟನೆಗೆ ತೊಡಗಿದಾಗಿನಿಂದ ಕ್ಷೇತ್ರದಲ್ಲಿ ಕಾಂಗ್ರೆಸ್‌ಪರ ಸಂಚಲನ ಪ್ರಾರಂಭವಾಗಿದೆ. ಈತ ಹಿಂದುಳಿದ ಗೊಲ್ಲರ ಜಾತಿಗೆ ಸೇರಿದ್ದು ಆ ಸಮುದಾಯದ ಸುಮಾರು 20 ಸಾವಿರ ಮತದಾರರು ಕ್ಷೇತ್ರದಲ್ಲಿದ್ದಾರೆ. 30-35 ಸಾವಿರದಷ್ಟು ದಲಿತ ಮತದಾರರಿದ್ದಾರೆ. ಸುಮಾರು 14 ಸಾವಿರ ಮುಸ್ಲಿಂ ಮತದಾರರಿದ್ದಾರೆ. ಇನ್ನು ಉಪ್ಪಾರ, ನಾಯಕ ಮುಂತಾದ ಜಾತಿಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಆದರೆ ಹಿಂದುಳಿದ ಈ ಜಾತಿಗಳಿಗೆ ರಾಜಕೀಯ ಪ್ರಾತಿನಿಧ್ಯ ಇದುವರೆಗೂ ಸಿಕ್ಕಿಲ್ಲ. ಅಪರೂಪಕ್ಕೆ ಒದಗಿಬಂದಿರುವ ಅವಕಾಶವನ್ನು ಬಳಸಿಕೊಂಡು ಇವರೆಲ್ಲರೂ ಒಗ್ಗಟ್ಟಾಗುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಇದರ ಜೊತೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಾರೆ ಎಂಬ ಪ್ರಚಾರದಿಂದ ಕುರುಬ ಮತದಾರರು ಕಾಂಗ್ರೆಸ್‌ನತ್ತ ವಾಲುತ್ತಿದ್ದಾರೆ. ಹೀಗಾಗಿ ಹಾಲಿ ಶಾಸಕ ಸುರೇಶ್‌ಬಾಬುಗೆ ಹೊಡೆತ ಬೀಳುವುದು ಖಚಿತ. ಪರಮೇಶ್ವರ್ ಅಥವಾ ಖರ್ಗೆ ಕೂಡ ಮತ್ತೊಂದು ಅವಧಿಗೆ ಮುಖ್ಯಮಂತ್ರಿ ಎಂಬ ಸುದ್ದಿಯೂ ಹರಿದಾಡುತ್ತಿರುವುದರಿಂದ ಕಾಂಗ್ರೆಸ್‌ನ ಪಾರಂಪರಿಕ ದಲಿತ ಮತಬ್ಯಾಂಕ್ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಮೇಲುನೋಟಕ್ಕೆ ಚತುಷ್ಕೋನ ಸ್ಪರ್ಧೆಯೆಂಬಂತೆ ಕಂಡುಬಂದರೂ ಕಾಂಗ್ರೆಸ್ ಪಕ್ಷ ಇಲ್ಲಿ ಇತರರಿಗಿಂತ ಸಾಕಷ್ಟು ಮುಂದಿದ್ದು ಗೆಲುವಿನ ಹಾದಿಯಲ್ಲಿದೆ ಎಂದು ಹೇಳಬಹುದು.

ತುಮಕೂರು ನಗರ

ಕಳೆದ ಬಾರಿ ಬಿಜೆಪಿ ಶಾಸಕನಾಗಿ, ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದ ಸೊಗಡು ಶಿವಣ್ಣನಿಗೆ ಈ ಬಾರಿ ಸೋಲಿನ ಭೀತಿ ಬೆನ್ನುಹತ್ತಿ ಕಣ್ಣಿಗೆ ನಿದ್ದೆ ಹತ್ತುತ್ತಿಲ್ಲ ಎಂಬ ಮಾತುಗಳನ್ನು ತನ ಅನುಯಾಯಿಗಳೇ ಹೇಳುತ್ತಿದ್ದಾರೆ. 2008ರಲ್ಲಿ ಕಾಂಗ್ರೆಸ್‌ನ ರಫೀಕ್ ಅಹಮದ್ ವಿರುದ್ಧ ಕೇವಲ 1949 ಮತಗಳ ಅಂತರದಿಂದ ಗೆದ್ದು ಹೇಗೋ ವಿಧಾನಸೌಧ ಸೇರಿಕೊಂಡಿದ್ದ ಈ ಆಸಾಮಿ ಕಳೆದ 5 ವರ್ಷಗಳಲ್ಲಿ ಕಡಿದು ಕಟ್ಟೆ ಹಾಕಿದ್ದು ಏನೂ ಇಲ್ಲ. ಇನ್ನೇನು ಚುನಾವಣೆ ಸಮೀಪಿಸುತ್ತಿದ್ದಂತೆ ಗಳಿಸಿದ್ದ ಅಕ್ರಮ ಹಣವನ್ನು ಹರಿಸಲು ಸರ್ವಸನ್ನದ್ಧನಾಗಿ ನಿಂತಿದ್ದಾರೆಂಬ ಸುದ್ದಿಗಳು ಹರಿದಾಡುತ್ತಿವೆ. ಅಧಿಕಾರದ ರುಚಿಯನ್ನು ಚೆನ್ನಾಗಿಯೇ ಉಂಡಿರುವುದರಿಂದ ಮತ್ತೊಂದು ಬಾರಿ ಗೆಲ್ಲಲೇಬೇಕೆಂದು ಶತಾಯಗತಾಯ ಅಖಾಡಕ್ಕಿಳಿದಿದ್ದಾರೆ.

ತನ್ನ ಚುನಾವಣಾ ಪ್ರಚಾರಕ್ಕಾಗಿ ತನ್ನದೇ 'ಸೊಗಡು' ಪತ್ರಿಕೆಯನ್ನು 2 ಪುಟಗಳಿಂದ 4 ಪುಟಗಳಿಗೆ ಏರಿಸಿ, ವರ್ಣಮಯ ಪುಟಗಳನ್ನಾಗಿಸಿ ತನ್ನ ಚುನಾವಣಾ ಜಾಹಿರಾತು ಪತ್ರದಂತೆ ಬಳಸಿಕೊಳ್ಳುತ್ತಿದ್ದಾರೆ ಎಂದು ನಾಗರಿಕರು ತಮಾಷೆ ಮಾಡುತ್ತಿದ್ದಾರೆ.

ಈತನ ಅಬ್ಬರದ ಪ್ರಚಾರಕ್ಕೆ ಪೈಪೋಟಿ ನೀಡುತ್ತಿರುವುದು ಕೆಜೆಪಿ ಕ್ಯಾಂಡಿಡೇಟ್ ಜ್ಯೋತಿ ಗಣೇಶ್. ಸೊಗಡು ಶಿವಣ್ಣನನ್ನು ಸೋಲಿಸಲೆಂದೇ ಮತ್ತೊಬ್ಬ ಲಿಂಗಾಯತ ಕ್ಯಾಂಡಿಡೇಟನ್ನೇ ಯಡ್ಯೂರಪ್ಪ ಕಣಕ್ಕಿಳಿಸಿದ್ದಾರೆಂಬ ಮಾತುಗಳು ಕೇಳಿಬರುತ್ತಿವೆ.

ತನ್ನ ಅಡಿಪಾಯ ಕುಸಿಯುತ್ತಿರುವುದನ್ನು ಕಂಡು ಸೊಗಡು ಮುಸ್ಲಿಂ ವಿರೋಧಿ ಭಾವನೆ ಕೆರಳಿಸಿ ಮತ ಗಳಿಸುವ ತಂತ್ರವನ್ನು ಹೂಡಿ, ಮುಸ್ಲಿಮರಿಂದ ಛೀಮಾರಿಗೆ ಒಳಗಾಗಿದ್ದಾನೆ. "ಮುಸ್ಲಿಮರ ಹಬ್ಬಗಳಲ್ಲಿ ಬಿರಿಯಾನಿ ಉಂಡುಹೋಗಿದ್ದು ಬಿಟ್ಟರೆ ಬಡ ಮುಸ್ಲಿಂ ಮತದಾರರ ಏಳ್ಗೆಗಾಗಿ ಏನು ಮಾಡಿದ್ದೀರಿ" ಎಂದು ಪ್ರಶ್ನಿಸುತ್ತಿದ್ದಾರೆ.

ಇವರುಗಳ ಜೊತೆಗೆ ಜೆಡಿಎಸ್‌ನಿಂದ ರಿಯಲ್ ಎಸ್ಟೇಟ್ ಕುಳ ಗೋವಿಂದರಾಜು ಅಖಾಡದಲ್ಲಿದ್ದಾರೆ. ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಇವರು ಕಳೆದ ಎರಡು ವರ್ಷಗಳಿಂದ ಉಚಿತ ಕುಡಿಯುವ ನೀರಿನ ಸರಬರಾಜು ಮಾಡುತ್ತಾ ಒಂದಷ್ಟು ಸಿಂಪಥಿ ಗಳಿಸಿದ್ದಾರೆ.

ಈ ಎಲ್ಲಾ ಕ್ಯಾಂಡಿಡೇಟುಗಳ ನಡುವೆ ತನ್ನ ಪಾಡಿಗೆ ತಾನು ತಣ್ಣಗಿನ ಪ್ರಚಾರದಲ್ಲಿ ತೊಡಗಿರುವುದು ಕಾಂಗ್ರೆಸ್ ಅಭ್ಯರ್ಥಿ ರಫೀಕ್ ಅಹಮದ್. ಕಳೆದ ಬಾರಿ ಅತ್ಯಂತ ಕಡಿಮೆ ಮತಗಳ ಅಂತರದಿಂದ ಸೋತಿರುವ ಈ ವ್ಯಕ್ತಿಯ ಬಗ್ಗೆ ಒಂದಷ್ಟು ಅನುಕಂಪ ಕೂಡ ಕ್ಷೇತ್ರದಲ್ಲಿದೆ. ಅದರ ಜೊತೆಗೆ ವ್ಯಕ್ತಿಗತವಾಗಿ ಸೌಮ್ಯ ಸ್ವಭಾವದ ಸಜ್ಜನ ಎಂಬ ಹೆಸರೂ ಇದೆ. ಕಾಂಗ್ರೆಸ್ ಅಲೆಯೂ ಸೇರಿಕೊಂಡು ರಫೀಕ್ ಅವರಿಗೆ ಅನುಕೂಲಕರ ವಾತಾವರಣ ಇಲ್ಲಿದೆ.

ತಿಪಟೂರು

ಹಾಲಿ ಎಂಎಲ್‌ಎ ಬಿ.ಸಿ.ನಾಗೇಶ್ ಮೂಲತಃ ಆರೆಸ್ಸೆಸ್‌ನವರು. ಜಾತಿಯಲ್ಲಿ ಬ್ರಾಹ್ಮಣರು. ಕೈಬಾಯಿ ಶುದ್ಧವಾಗಿಟ್ಟುಕೊಂಡಿರುವ ಈ ವ್ಯಕ್ತಿ ಕಳೆದ ಅವಧಿಯಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಆದರೆ ಸಮಸ್ಯೆಯೇನೆಂದರೆ ಇವರ ದುರಾದೃಷ್ಟಕ್ಕೆ ಇವರು ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಬಿಜೆಪಿ ಹೆಸರು ಹೇಳಿ ಓಟು ಕೇಳಲು ಹಾಗೂ ಬಿಜೆಪಿಗೆ ಓಟು ಹಾಕುತ್ತೇವೆ ಎಂದು ಹೇಳಿಕೊಳ್ಳಲು ಮುಜುಗರ ಪಡಬೇಕಾದ ವಾತಾವರಣದಲ್ಲಿ ಈ ಸಭ್ಯ ವ್ಯಕ್ತಿಯ ಭವಿಷ್ಯ ಅಡಕತ್ತರಿಯಲ್ಲಿ ಸಿಲುಕಿದಂತಾಗಿದೆ.

ಕಳೆದ ಚುನಾವಣೆಯಲ್ಲಿ ಇವರಿಗೆ ತೀವ್ರ ಪೈಪೋಟಿ ನೀಡಿದ್ದ ಕಾಂಗ್ರೆಸ್‌ನ ಷಡಕ್ಷರಿ ಈ ಬಾರಿ ಮತ್ತೆ ಸ್ಪರ್ಧಿಸಿದ್ದಾರೆ. ಕಳೆದ ಬಾರಿ ಇವರಿಬ್ಬರ ನಡುವಿನ ಅಂತರ ಕೇವಲ 6866 ಮತಗಳು. ಈ ಇಬ್ಬರೂ ಅಭ್ಯರ್ಥಿಗಳ ಮಧ್ಯೆ ತೀವ್ರ ಪೈಪೋಟಿ ಇದೆ. ಈ ನಡುವೆ ಕೆಜೆಪಿ ಅಭ್ಯರ್ಥಿ ಕೂಡ ಮತಗಳನ್ನು ಒಡೆಯುವ ಲೆಕ್ಕಾಚಾರದಲ್ಲಿದ್ದಾರೆ. ಭವಿಷ್ಯವನ್ನು ಮೇ 8ರಂದೇ ನಿರೀಕ್ಷಿಸಬೇಕು.

ಪಾವಗಡ

ಪಾವಗಡ ಮೀಸಲು ಕ್ಷೇತ್ರದಲ್ಲಿ ಮಾಜಿ ಸಚಿವ ವೆಂಕಟರಮಣಪ್ಪನ ಮಗ ವೆಂಕಟೇಶ್ ಈ ಬಾರಿ ಕಣಕ್ಕಿಳಿದಿದ್ದಾರೆ. ಇಲ್ಲಿ ಕಾಂಗ್ರೆಸ್‌ಗೆ ಪ್ರಬಲ ಪೈಪೋಟಿ ಒಡ್ಡುತ್ತಿರುವುದು ಜೆಡಿಎಸ್‌ನ ಅಭ್ಯರ್ಥಿ, ಮಾಜಿ ಶಾಸಕ ತಿಮ್ಮರಾಯಪ್ಪ ಇನ್ನುಳಿದ ಅಭ್ಯರ್ಥಿಗಳು ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂಥಾ ಸ್ಥಿತಿ.

ಮಧುಗಿರಿ

ಕಳೆದ ಬಾರಿ ಚನ್ನಿಗಪ್ಪನ ಮಗ ಗೌರಿಶಂಕರ್ ಜೆಡಿಎಸ್‌ನಿಂದ ಕೂದಲೆಳೆಯ ಅಂತರದಲ್ಲಿ ಗೆದ್ದು ವಿಧಾನಸಭೆ ಪ್ರವೇಶಿಸಿದ್ದರು. ಇವರ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಕೆ.ಎನ್.ರಾಜಣ್ಣನಿಗೂ ಇವರಿಗೂ ಇದ್ದ ಅಂತರ ಕೇವಲ 563 ಮತಗಳು. ಏನೆಲ್ಲಾ ರಗಳೆಗಳು ನಡೆದ ನಂತರ ಮತ್ತೆ ಮಧುಗಿರಿಯ ಮತದಾರರನ್ನು ಎದುರಿಸಲಾಗದೆ ಗೌರಿಶಂಕರ್ ಪಲಾಯನ ಮಾಡಿದ್ದರೆ, ಅವರ ಸ್ಥಾನದಲ್ಲಿ ಕುಂಚಿಟಿಗ ಒಕ್ಕಲಿಗ ಜಾತಿಯ ನಿವೃತ್ತ ಐಎಎಸ್ ಅಧಿಕಾರಿ ವೀರಭದ್ರಯ್ಯರನ್ನು ಕಣಕ್ಕಿಳಿಸಿದ್ದಾರೆ. ಕೆ.ಎನ್.ರಾಜಣ್ಣ ನಾಯಕ ಜಾತಿಗೆ ಸೇರಿದ್ದು ಕ್ಷೇತ್ರದಲ್ಲಿ ತಮ್ಮದೇ ಆದ ಮತಗಳನ್ನು ಹೊಂದಿದ್ದಾರೆ. ಇವರಿಬ್ಬರ ನಡುವೆ ಪೈಪೋಟಿ ಇದ್ದಂತೆ ಕಂಡುಬಂದರೂ ಬಹುಶಃ ರಾಜಣ್ಣ ಅಸೆಂಬ್ಲಿ ಪ್ರವೇಶಿಸುವ ಸಾಧ್ಯತೆಗಳು ಹೆಚ್ಚಾಗಿವೆ.

ಗುಬ್ಬಿ

ಗುಬ್ಬಿ ಕ್ಷೇತ್ರದಲ್ಲಿ ಕೆಜೆಪಿಯಿಂದ ಬೆಟ್ಟಸ್ವಾಮಿಯೆಂಬ ಗೊಲ್ಲರ ಅಭ್ಯರ್ಥಿ ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್‌ನಿಂದ [illegible] ಹೊನ್ನಗಿರಿಗೌಡ ಮತ್ತು ಜೆಡಿಎಸ್‌ನಿಂದ ಎಸ್.ಆರ್.ಶ್ರೀನಿವಾಸ್ ಕಣದಲ್ಲಿದ್ದಾರೆ. ಬೆಟ್ಟಸ್ವಾಮಿ ಹಾಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿದ್ದು ಹೆಚ್ಚು ಮತಗಳನ್ನು ಸೆಳೆಯುವ ಸಾಧ್ಯತೆಯಿದೆ. ಜೊತೆಗೆ ಗೊಲ್ಲ, ತಿಗಳ ಮುಂತಾದ ಹಿಂದುಳಿದ ಜಾತಿಗಳ ಹಾಗೂ ಲಿಂಗಾಯತ ಜಾತಿಯ ಮತಗಳ ಬೆಂಬಲ ಸಿಗಲಿದೆ. ಇವರಿಗೆ ಪ್ರಬಲ ಪೈಪೋಟಿಯೆಂದರೆ ಜೆಡಿಎಸ್ ಮಾತ್ರ. ಆದರೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳಿಬ್ಬರೂ ಒಕ್ಕಲಿಗ ಅಭ್ಯರ್ಥಿಗಳನ್ನೇ ನಿಲ್ಲಿಸಿರುವುದರಿಂದ ಮತಗಳು ಹಂಚಿಹೋಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹೀಗಾಗಿ ಇಲ್ಲಿ ಇನ್ನೂ ಅನಿಶ್ಚಿತತೆ ಮುಂದುವರೆದಿದೆ.

ತುರುವೇಕೆರೆ


ತುರುವೇಕೆರೆಯಲ್ಲಿ ಜಗ್ಗೇಶ್ ಕಾಂಗ್ರೆಸ್‌ಗೆ ಕೈಕೊಟ್ಟ ನಂತರ ಇಲ್ಲಿ ಕಾಂಗ್ರೆಸ್ ಇನ್ನೂ ಗಟ್ಟಿಯಾಗಿ ನೆಲೆ ನಿಂತಿಲ್ಲ. ಹೀಗಾಗಿ ಈ ಚುನಾವಣೆಯಲ್ಲಿ ಕೆಜೆಪಿ ಮತ್ತು ಜೆಡಿಎಸ್‌ಗಳ ನಡುವೆಯೇ ಪೈಪೋಟಿ ಇರುವುದು ಕಂಡು ಬರುತ್ತದೆ. ಕೆಜೆಪಿಯಿಂದ ಮಸಾಲೆ ಜಯರಾಂ ಮತ್ತು ಜೆಡಿಎಸ್‌ನಿಂದ ಶಾಸಕ ಎಂ.ಟಿ.ಕೃಷ್ಣಪ್ಪ ಕಣದಲ್ಲಿದ್ದಾರೆ, ಇಲ್ಲಿ ಕೆಜೆಪಿ ಖಾತೆ ತೆರೆದರೂ ಆಶ್ಚರ್ಯವಿಲ್ಲ.


ಸಿರಾ

ಬರ ಪೀಡಿತ ಸಿರಾ ತಾಲೂಕಿನಲ್ಲಿ ಮಾಜಿ ಸಚಿವ ಹಾಲಿ ಶಾಸಕ ಟಿ.ಬಿ.ಜಯಚಂದ್ರ ಕಣದಲ್ಲಿದ್ದಾರೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್‌ನ ಅಭ್ಯರ್ಥಿ ಸತ್ಯನಾರಾಯಣ ವಿರುದ್ಧ 26 ಸಾವಿರ ಮತಗಳ ಅಂತರದಿಂದ ಜಯಚಂದ್ರ ಆರಿಸಿ ಬಂದಿದ್ದರು. ಈ ಬಾರಿಯೂ ಇದೇ ಎರಡು ಪಕ್ಷಗಳ ನಡುವೆ ಸ್ಪರ್ಧೆಯಿದ್ದು ಕಾಂಗ್ರೆಸ್ ಗೆಲ್ಲುವುದು ಬಹುತೇಕ ಖಚಿತವಾದಂತಿದೆ.


ಹೀಗೆ ಜಿಲ್ಲೆಯಲ್ಲಿ ಕಾಂಗ್ರೆಸ್ ಹಲವಾರು ಕ್ಷೇತ್ರಗಳಲ್ಲಿ ಮುಂದಿದ್ದು ಹೆಚ್ಚಿನ ಸ್ಥಾನಗಳನ್ನು ಗಳಿಸಲಿದೆ. ಜೆಡಿಎಸ್ ಸ್ಥಾನಗಳನ್ನು ಉಳಿಸಿಕೊಳ್ಳಲು ಹೆಣಗುತ್ತಿದ್ದರೂ ಇರುವ ಕ್ಷೇತ್ರಗಳಲ್ಲಿ ಒಂದೆರಡನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ. ಒಟ್ಟಾರೆ ತುಮಕೂರು ಜಿಲ್ಲೆಯಲ್ಲಿ ಬಿಜೆಪಿ ಸಂಪೂರ್ಣ ನೆಲಕಚ್ಚುವುದು ಖಚಿತವಾಗಿದೆ. ಇಲ್ಲಿ ಬಿಜೆಪಿ ಖಾತೆ ತೆರೆಯದೇ ಹೋದರೂ ಆಶ್ಚರ್ಯವಿಲ್ಲ.


• ದೊಡ್ಡಿಪಾಳ್ಯ ನರಸಿಂಹಮೂರ್ತಿ


ಪರಮೇಶ್ವರ್



ಗೋವಿಂದ ರಾಜು ಎನ್


ಎಚ್.ವಿ.ವೆಂಕಟೇಶ್



ಹೊನ್ನಗಿರಿ ಗೌಡ


ಕೆ.ಎನ್.ರಾಜಣ್ಣ


ಕೆ.ಷಡಕ್ಷರಿ


ನಾಗರಾಜ್ ಯಲ್ವಾಡಿ


ಸತೀಶ್ ಸಾಸಲು


ಟಿ.ಬಿ.ಜಯಚಂದ್ರ


ರಫೀಕ್ ಅಹ್ಮದ್


ರಾಮಸ್ವಾಮಿ ಗೌಡ



ಗೀತಾ ರಾಜಣ್ಣ

ಎಡೆಗೆ ಬಿದ್ದ ಅಕ್ಷರಗಳು ಪದಗಳೇಕಾಗುತ್ತಿಲ್ಲ?

[illegible] ಬಿದ್ದ ಬೀಜ ಮೊಳಕೆಯೇಕೆ ಒಡೆಯುತ್ತಿಲ್ಲ?
ಎಡೆಗೆ ಬಿದ್ದ ಅಕ್ಷರಗಳು ಕೂಡಿ ಪದಗಳೇಕಾಗುತ್ತಿಲ್ಲ?

ಬೋರುಗಳ ಕೊರೆದು ಅಂತರ್ಜಲವನ್ನೂ ಬಸಿದವರೇ
ಬರಿದಾದ ಜಲಾಶಯದ ಹೂಳೆತ್ತುವ ಕಾಂಟ್ರಾಕ್ಟರುಗಳಾಗುತ್ತಾರೆ
[illegible] ಉಸ್ತುವಾರಿಯಲ್ಲಿ ನಡೆಯುವ ಜಾತ್ರೆಯಲ್ಲಿ
[illegible] ದೇವರುಗಳೇ ಮೈನೆರೆತು [illegible] ಹಾಕುತ್ತಾರೆ

[illegible] ಪ್ರಜಾತಂತ್ರ, ಜಾರಿಯಲ್ಲಿದೆ
[illegible]
[illegible] ಆದರೆ ಭೂಮಿ?
[illegible] ತೆರೆದಿದೆ. ಆದರೆ [illegible]?



ಅಕ್ಕರೆಯಿಂದ ಅಂಗಳದಲ್ಲಿ ಬೆಳೆಸಿದ ಮರ ನೆರಳ ನೀಡುವ ಬದಲು
ಉಪ್ಪರಿಗೆಯೆತ್ತರ ಬೆಳೆದು ರಾಜನಿಗೆ ಚಾಮರ ಬೀಸುತ್ತಿದೆ
ಹಳೆಯ ಕಳೆ ತೆಗೆದು ನಿಸೂರಾಗುವ ಹೊತ್ತಿಗೆ
ಬೀಜದೊಳಗೆ ಕಸಿಯಾಗಿರುವ ಕಳೆ ಹೂ ಬಿಟ್ಟು ಹಂಗಿಸುತ್ತದೆ

ಅರವತ್ತು ವರ್ಷ ಕಳೆದರೂ ಹುದಿಯಾಗದ ಹೆಬ್ಬಂಡೆ
ಬಡಿದ ಸಿಡಿಲಿಗೊಮ್ಮೆ ಬಿರುಕುಬಿಟ್ಟರು ಮಳೆಗೆ ಮೆತುವಾಗಲಿಲ್ಲ
ಎರವಲು ತಂದ ಎರೆಮಣ್ಣಿಗೆ ನೆಲದ ನಂಟೇ ಕುದುರಲಿಲ್ಲ
ಕುಂಟುಕುದುರೆಯ ತೊರೆದರೂ, ಏರಿದ್ದು ಮರದ ಕುದುರೆಯೆಂದು ಗೊತ್ತಾಗುತ್ತಿಲ್ಲ


ಸಿಡಿಸಬೇಕು ಬಂಡೆ, ಕಣ್ಣೀರಿಗೆ ಕರಗುವುದಿಲ್ಲ
[illegible] ಬೀಜ, ಕಳೆ ತೆಗೆದರೆ ಸುಗ್ಗಿಯಾಗುವುದಿಲ್ಲ
ಧಾಪಿಸುವ ರಕ್ತದ ಕಾವು ಬೇಕು ಅಕ್ಷರಕ್ಕೆ,
ಎಡೆಗೆ ಬಿದ್ದ ಮಾತ್ರಕ್ಕೆ ಪದವಾಗುವುದಿಲ್ಲ

– ಶಿವಸುಂದರ್


ಗಾರುಡಿಗರ ಮೇಳದಲ್ಲಿ ಪ್ರಜ್ಞಾವಂತರ ಪಾತ್ರವೇನು?



ಡಾ.ಬಿ.ಆರ್.ಅಂಬೇಡ್ಕರ್



ಮಾರ್ಕ್ಸ್



ವಿ.ಐ.ಲೆನಿನ್

ಕರ್ನಾಟಕದಲ್ಲಿ ಪ್ರಜಾತಂತ್ರದ 29ನೇ (ವಿಧಾನಸಭೆ ಮತ್ತು ಲೋಕಸಭೆ ಒಟ್ಟು ಚುನಾವಣೆಗಳು) ಯಶಸ್ವೀ ಪ್ರದರ್ಶನ ನಡೆಯುತ್ತಿದೆ. ವಿಶೇಷವೆಂದರೆ ಇಷ್ಟೊಂದು ಪ್ರದರ್ಶನಗಳನ್ನು ಕಂಡಿದ್ದರೂ ಪ್ರೇಕ್ಷಕರಿಗೇನೂ ಕೊರತೆಯಾಗಿಲ್ಲ. ಇನ್ನೂ ಆಶ್ಚರ್ಯಕರ ವಿಚಾರವೆಂದರೆ ಪ್ರತಿಬಾರಿಯೂ ನೀಡಿದ ಭರವಸೆಗಳನ್ನು, ಇಟ್ಟ ನಿರೀಕ್ಷೆಗಳನ್ನು ಹುಸಿಗೊಳಿಸುತ್ತಲೇ ಸಾಗಿದ್ದರೂ ಪ್ರದರ್ಶನದ ಆಕರ್ಷಣೆ ಮಾತ್ರ ಕಡಿಮೆಯಾಗಿಲ್ಲ. ಪ್ರತಿಫಲ ನೀಡದೆಯೂ ಪ್ರೇಕ್ಷಕರನ್ನು ಉಳಿಸಿಕೊಳ್ಳುವ ಕಲೆ ಭಾರತದ ಪ್ರಜಾಪ್ರಭುತ್ವಕ್ಕೆ ಕರಗತವಾಗಿದೆ. ಇಂತಹ ವಿಷಾದನೀಯ ವಿಪರ್ಯಾಸಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ನೋಡುವುದಾದರೆ -

• ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವದಲ್ಲೇ ಪ್ರಪಂಚದ ಅತಿಹೆಚ್ಚು ಬಡವರು ವಾಸಿಸುತ್ತಾರೆ. ಪ್ರಪಂಚದ ಒಟ್ಟು ಬಡವರಲ್ಲಿನ ಅರ್ಧದಷ್ಟು ಜನತೆ ಈ ಪ್ರಜಾತಂತ್ರದ ಚಾವಣಿಯಡಿಯೇ ವಾಸಿಸುತ್ತದೆ.

• ಪ್ರಜೆಗಳ ಪ್ರಭುತ್ವ ಎಂದು ಹೇಳಿಕೊಳ್ಳುತ್ತಿದ್ದರೂ ಇದುವರೆಗೆ ಪ್ರಜಾ ಕಂಟಕರು ಅಧಿಕಾರಕ್ಕೆ ಬಂದಿದ್ದಾರೆಯೇ ಹೊರತು, ಸಾಮಾನ್ಯ ಪ್ರಜೆಗಳ ಸರ್ಕಾರ ಎಲ್ಲೂ ಅಧಿಕಾರಕ್ಕೆ ಬಂದಿಲ್ಲ. ಕೆಲವೆಡೆ ದುಡಿಯುವ ವರ್ಗದ ಪರ, ದಲಿತ/ಹಿಂದುಳಿದ ಸಮುದಾಯಗಳ ಪರ, ಪ್ರಾದೇಶಿಕ ಹಿತಾಸಕ್ತಿಯ ಪರ ಎಂದು ಹೇಳಿಕೊಳ್ಳುವ ಪಕ್ಷಗಳು ಅಧಿಕಾರಕ್ಕೆ ಬಂದಿದ್ದರೂ ಸಣ್ಣಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ ಎಲ್ಲೂ ಕಡೇಪಕ್ಷ ಸ್ವಘೋಷಿತ ಉದ್ದೇಶದ ನಿಟ್ಟಿನಲ್ಲೂ ಯಾವ ಮೂಲಭೂತ ಬದಲಾವಣೆಯನ್ನೂ ತಂದಿಲ್ಲ.

• ಅಧಿಕಾರದಲ್ಲಿ ಅಸ್ಪೃಶ್ಯರನ್ನು ತರುವ ಉದ್ದೇಶಕ್ಕಾಗಿ ಹೋರಾಡಿ ಮೀಸಲಾತಿಯನ್ನು ಜಾರಿಗೆ ತಂದ ಅಂಬೇಡ್ಕರ್‌ರನ್ನೇ ಮೀಸಲು ಕ್ಷೇತ್ರದಲ್ಲೇ ಸೋಲಿಸಿ ಅಧಿಕಾರಕ್ಕೆ ಬರದಂತೆ ಅವರಿಗೆ ಬಲವಾಗಿ ಅಡ್ಡಗಾಲು ಹಾಕಿದ್ದು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೇ.

• ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಅಡಿಗಲ್ಲಾದ ಸಂವಿಧಾನವು ಜಾತ್ಯತೀತತೆಯನ್ನು ಪ್ರತಿಪಾದಿಸಿದರೆ ಜಾತಿ ಎಂಬುದು ಸಮಾಜದ, ಅಧಿಕಾರದ, ಚುನಾವಣೆಯ ಒಂದು ಮುಖ್ಯ ನಿರ್ಧಾರಕ ಸೂತ್ರವಾಗಿಯೇ ಉಳಿದುಕೊಂಡಿದೆ. ಸಮಾನತೆಯನ್ನು ಪ್ರತಿಪಾದಿಸುತ್ತಿದ್ದರೂ ಕೋಟ್ಯಾಧಿಪತಿಗಳ ಹಾಗೂ ಕಡುಬಡವರ ನಡುವಿನ ಅಂತರ ವರ್ಷವರ್ಷಕ್ಕೂ ಹೆಚ್ಚಾಗುತ್ತಿದೆ. ಸೌಹಾರ್ದತೆಯನ್ನು ಪ್ರತಿಪಾದಿಸುತ್ತಿದ್ದರೂ ಅದನ್ನು ಕದಡುವ ಶಕ್ತಿಗಳು ದೇಶಾದ್ಯಂತ ಬಲಗೊಂಡು ನಿಂತಿವೆ. ಸ್ವಾತಂತ್ರ್ಯದ ಪ್ರತಿಪಾದನೆ ಶೋಷಕರಿಗೆ ಮುಕ್ತ ಅವಕಾಶನೀಡುವ ಮಂತ್ರವಾಗಷ್ಟೇ ಕೆಲಸ ಮಾಡುತ್ತಿದೆ.

• ಭಾರತ 'ಮಾತೆ'ಯನ್ನು 'ಆರಾಧಿಸುವ' ನಾಡಿನಲ್ಲಿ ಪ್ರತಿ ಅರ್ಧ ಗಂಟೆಗೊಂದರಂತೆ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತದೆ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಗೆ ಅಧಿಕಾರದಲ್ಲಿ ಮೂರನೇ ಒಂದು ಭಾಗದಷ್ಟು ಸ್ಥಾನ ನೀಡಲೂ 'ಪಿತಾ'ಮಹರಿಗೆ ಒಪ್ಪಿಗೆ ಇಲ್ಲವಾಗಿದೆ.

• ಅಸ್ಪೃಶ್ಯ ಸಮುದಾಯದ ಪ್ರತಿನಿಧಿಯ ಅಧ್ಯಕ್ಷತೆಯಲ್ಲಿ ರೂಪಿಸಲ್ಪಟ್ಟ ಸಂವಿಧಾನವು ಅಸ್ಪೃಶ್ಯತೆಯನ್ನು ಸ್ಪಷ್ಟವಾಗಿ ಕಾನೂನುಬಾಹಿರಗೊಳಿಸಿದ್ದರೂ, ಈ ಬೃಹತ್ ಪ್ರಜಾಪ್ರಭುತ್ವವು ಇಷ್ಟು ವರ್ಷಗಳಾದರೂ ಅತ್ಯಂತ ಅಮಾನವೀಯವಾದ ಅಸ್ಪೃಶ್ಯತೆಯನ್ನಾದರೂ ತೊಲಗಿಸುವಲ್ಲಿ ವಿಫಲಗೊಂಡಿದೆ.

ಈ ರೀತಿಯ ವಿಪರ್ಯಾಸಗಳ ಪಟ್ಟಿಯನ್ನು ಎಷ್ಟು ಬೇಕಾದರೂ ಬೆಳೆಸಬಹುದು. ಸಾರಾಂಶದಲ್ಲಿ 'ಆಡುವುದೊಂದು ಮಾಡುವುದೊಂದು' ಇದೇ ಈ ಪ್ರಜಾಪ್ರಭುತ್ವದ ಸಾರವಾಗಿದೆ.

ಬಲಾಢ್ಯ ಜಾತಿಗಳಿಗೆ ಸೇರಿದ, ಹಣಬಲವನ್ನು ಹೊಂದಿರುವ, ಪಟ್ಟಭದ್ರ ಶಕ್ತಿಗಳ ಜೊತೆ ನಿಕಟ ಸಂಬಂಧವನ್ನು ಹೊಂದಿರುವ ಭ್ರಷ್ಟ, ಶೋಷಕ ಪಕ್ಷಗಳು ಹಾಗೂ ವ್ಯಕ್ತಿಗಳೇ ಪ್ರಜಾತಂತ್ರದ ಪ್ರದರ್ಶನಗಳಲ್ಲಿ ಬಹುತೇಕ ಗೆದ್ದು ಬರುತ್ತಿದ್ದಾರೆ. ಬಡವರು, ದುಡಿಯುವವರು, ನಿಜವಾಗಿಯೂ ಜಾತಿಶ್ರೇಣಿಯಲ್ಲಿ ಕೆಳಗೆ ಒತ್ತಲ್ಪಟ್ಟವರು, ಮಹಿಳೆಯರು, ಅಲ್ಪಸಂಖ್ಯಾತರು ಅಧಿಕಾರದಿಂದ ಬಹಳ ದೂರ ಇರಿಸಲ್ಪಟ್ಟಿದ್ದಾರೆ. ಮೀಸಲಾತಿ ಕ್ಷೇತ್ರದಿಂದ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟಿಗೆ ಸೇರಿದ ವ್ಯಕ್ತಿಗಳೇ ಗೆದ್ದು ಬರುತ್ತಿದ್ದರೂ ಇವರಲ್ಲಿ ಬಹುತೇಕರು 'ಸಜ್ಜನ'(ಸಮೃದ್ಧ ಜನರ) ಜೊತೆ ಸಂಬಂಧ ಇಟ್ಟುಕೊಂಡಿರುವ ಬಲಿತರೇ ಹೊರತು ನಿಜವಾದ ದಲಿತರಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಿದೆ. ಇದಕ್ಕೆ ಅಪವಾದವೆಂಬಂತೆ ಕೆಲವೆಡೆ ಕೆಲವರು ದಮನಿತ ಸಮುದಾಯಗಳ ಪ್ರತಿನಿಧಿಗಳು ಗೆದ್ದು ಬಂದಿದ್ದರೂ ಸ್ಥಾಪಿತ ವ್ಯವಸ್ಥೆಯ ರಚನೆಯನ್ನು ಅಲುಗಾಡಿಸಲು ಸಹ ಸಾಧ್ಯವಾಗದೆ ಕ್ರಮೇಣ ತಾವೂ ಅದರ ಫಲಾನುಭವಿ ವರ್ಗವಾಗಿ ಮಾರ್ಪಟ್ಟಿದ್ದಾರೆ ಅಥವಾ ಮಾಡಿದ ಸಣ್ಣಪುಟ್ಟ ಕೆಲಸಗಳಲ್ಲೇ ತೃಪ್ತಗೊಂಡು ಸುಮ್ಮನಾಗಿದ್ದಾರೆ ಅಥವಾ ಭ್ರಮನಿರಸನಗೊಂಡು ಹತಾಶರಾಗಿದ್ದಾರೆ.

ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಜೆಗಳನ್ನು ಅಧಿಕಾರದಿಂದ ದೂರವಿಟ್ಟಿರುವ ಅಥವಾ ಅಸಹಾಯಕರನ್ನಾಗಿಸಿರುವ, ಪ್ರಜಾಕಂಟಕರ ಗೆಲುವಿಗೆ ಕಾರಣವಾಗಿರುವ, ಶೋಷಕ ವ್ಯವಸ್ಥೆಯನ್ನು ಸುಭದ್ರವಾಗಿ ಕಾಪಾಡುತ್ತಿರುವ ಈ ಪ್ರಜಾತಂತ್ರದ ಪ್ರದರ್ಶನಗಳನ್ನು ಏನೆಂದು ಕರೆಯಬೇಕು? ಇವು ಪ್ರಜಾತಂತ್ರದ ಸೋಗಿನಲ್ಲಿ ನಡೆಯುವ ಪ್ರಜಾಪೀಡಕರ ಗಾರುಡಿಗ ಮೇಳಗಳಲ್ಲದೆ ಮತ್ತೇನು? ಗಾರುಡಿಗ ಮೇಳವೆಂದ ಮಾತ್ರಕ್ಕೆ ಇದು ಜಾದೂಗಾರರು ಜನರನ್ನು ರಂಜಿಸಲು ನೀಡುವ ಪ್ರದರ್ಶನಗಳಂತಲ್ಲ, ಬದಲಿಗೆ ಜನರನ್ನು ಸುಲಿಯಲು ಶೋಷಕರು ಆಯೋಜಿಸುವ ಕಪಟ ಮೋಡಿಯಾಟ.

ಮಾನವರ ಇತಿಹಾಸದಲ್ಲಿ ಮೇಲುಕೀಳೆಂಬ ವರ್ಗ ಸಮಾಜಗಳು ಅವತರಿಸಿದಾಗಿನಿಂದ ಬಲಾಢ್ಯರು ಆಳುವ ಅಧಿಕಾರವನ್ನು ಉಳಿಸಿಕೊಳ್ಳಲು ನಾನಾ ವಿಧಾನಗಳನ್ನು ಅಳವಡಿಸಿದ್ದಾರೆ. ಒಂದು ಕಾಲದಲ್ಲಿ ಅದು ಗರಡಿ ಮನೆಯಂತಿದ್ದರೆ, ಮತ್ತೊಂದು ಕಾಲದಲ್ಲಿ ಗರ್ಭಗುಡಿಯಾಗಿದೆ. ಈಗ ಗಾರುಡಿ ಪ್ರದರ್ಶನವಾಗಿ ಪರಿವರ್ತನೆಯಾಗಿದೆ. ಅಂದರೆ ವರ್ಗ ಸಮಾಜದ ಆರಂಭಿಕ ಕಾಲಘಟ್ಟದಲ್ಲಿ ಗರಡಿ ಮನೆಯಂತೆ ಮಿಕ್ಕವರನ್ನು ಮಣಿಸಿ ಮೇಲೇರುವ ಬಲವಂತರೇ ಆಳುವವರಾಗಿದ್ದರು. ಊಳಿಗಮಾನ್ಯ ಸಮಾಜದಲ್ಲಿ ಅಧಿಕಾರವನ್ನು ಉಳಿಸಿಕೊಳ್ಳಲು ಜಾತಿ ಹಾಗೂ ಧರ್ಮದ ಆಸರೆ ಪಡೆದಾಗ ಅಧಿಕಾರವೆಂಬುದು ಶಾಶ್ವತವಾಗಿ ರಾಜನ ವಂಶಾವಳಿಗೆ ಮಾತ್ರ ಪ್ರವೇಶವಿರುವ 'ಗರ್ಭಗುಡಿ'ಯಾಗಿ ಪರಿವರ್ತನೆಯಾಯಿತು. ಬಂಡವಾಳಶಾಹಿ ಸಮಾಜ ಅಸ್ತಿತ್ವಕ್ಕೆ ಬಂದನಂತರ ಚುನಾವಣೆಗಳನ್ನು ನಡೆಸಿ, ಜನರಿಂದಲೇ 'ಮತ' ಹಾಕಿಸಿ, ಜನಶತ್ರುಗಳನ್ನು ಅಧಿಕಾರಕ್ಕೆ ತರುವ ಗಾರುಡಿಯಾಟವಾದ ಸಂಸದೀಯ ಪ್ರಜಾತಂತ್ರ ಅಸ್ತಿತ್ವಕ್ಕೆ ಬಂದಿತು.

'ಗರಡಿಮನೆ'ಗಿಂತ, 'ಗರ್ಭಗುಡಿ'ಗಿಂತ, ಈ 'ಗಾರುಡಿಯಾಟ' ಒಂದಷ್ಟು ಉತ್ತಮವಾದುದೇ. ಈ ಮಾರ್ಪಾಡು ಸಹ ಜನರ ಹೋರಾಟದಿಂದಾಗಿ ಬಂದಿರುವುದೇ. ತೋರಿಕೆಗಾದರೂ ಇದು ಜನರ ಅಧಿಕಾರವನ್ನು, ಜನರ ಹಕ್ಕನ್ನು ಮಾನ್ಯ ಮಾಡುತ್ತದೆ. ಆದರೆ ಸಾರದಲ್ಲಿ ಅದು ಜಾರಿಯಾಗದಂತೆ ವಂಚಿಸುತ್ತದೆ. ಈ ವಂಚನೆಗಾಗಿ ಅದು ಕೋಆಪ್ಷನ್, ಕೊಯರ್ಷನ್, ಕರಪ್ಷನ್ (ಒಡಗೂಡಿಸಿಕೊಳ್ಳುವ, ಬಲ ಪ್ರಯೋಗಿಸುವ, ಭ್ರಷ್ಟಗೊಳಿಸುವ) ಈ ಮೂರೂ ವಿಧಾನಗಳನ್ನು ಬಳಸುತ್ತದೆ. ಒಂದು ಸಂದರ್ಭದಲ್ಲಿ ಎದುರಾಳಿಗಳನ್ನು ಬೆದರಿಸಿ ಚುನಾವಣಾಕಣದಿಂದಲೇ ಓಡಿಸುವ, ಇಂಥವರಿಗೇ ಓಟು ಹಾಕಬೇಕೆಂದು ಭೂಮಾಲೀಕರ ಮೂಲಕ, ಗೂಂಡಾಗಳ ಮೂಲಕ ಜನರನ್ನು ಬಲವಂತ ಪಡಿಸುವ ಅಥವಾ 'ಬೂತ್ ಕ್ಯಾಪ್ಚರ್' ಮಾಡುವ ಬಲಪ್ರಯೋಗದ ವಿಧಾನ ಗೆಲ್ಲುವ ಪ್ರಧಾನ ಸೂತ್ರವಾಗಿತ್ತು. ಮತ್ತೊಂದು ಕಾಲದಲ್ಲಿ ವಿವಿಧ ಸಮುದಾಯಗಳ ಮುಖಂಡರಿಗೆ ವ್ಯವಸ್ಥೆಯಲ್ಲಿ, ಪಕ್ಷದಲ್ಲಿ, ಸರ್ಕಾರದಲ್ಲಿ ವಿವಿಧ ಸ್ಥಾನಗಳನ್ನು ಕಲ್ಪಿಸಿ (ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಇತ್ಯಾದಿಗಳ ಸದಸ್ಯರನ್ನಾಗಿ ಮಾಡಿ, ಪಕ್ಷದೊಳಗಿನ ದಲಿತ, ಅಲ್ಪಸಂಖ್ಯಾತ, ಮಹಿಳಾ ಇತ್ಯಾದಿ ಸೆಲ್‌ಗಳನ್ನು ರಚಿಸಿ, ಸರ್ಕಾರದಡಿ ವಿವಿಧ 'ಅಭಿವೃದ್ಧಿ ಮಂಡಳಿ'ಗಳನ್ನು ರೂಪಿಸಿ) ಒಡಗೂಡಿಸಿಕೊಳ್ಳುವ ವಿಧಾನ ಹೆಚ್ಚು ಬಲ ಪಡೆಯಿತು. ಈಗ ಹಣ ಹಾಗೂ ಜಾತಿ ಹೆಸರಿನಲ್ಲಿ ಭ್ರಷ್ಟಗೊಳಿಸಿ ಮತ ಪಡೆಯುವ ವಿಧಾನ ಪ್ರಧಾನ ರೂಪವಾಗಿ ಮುಂದೆ ಬಂದಿದೆ.

ಚುನಾವಣಾರಂಗದಲ್ಲಿ ಕೇವಲ ಆಳುವ ವರ್ಗದ ಪ್ರತಿನಿಧಿಗಳು ಮಾತ್ರವಲ್ಲ, ಜನಸ್ತೋಮದೊಳಗಿಂದ ಬೆಳೆದುಬರುತ್ತಿರುವ ಅವಕಾಶವಾದಿಗಳೂ ಇದ್ದಾರೆ, ಒಂದಷ್ಟು ಆದರ್ಶವಾದಿಗಳೂ ಸಹ ಇದ್ದಾರೆ. ಆಳುವವರ ವಿಧಾನ ಬಂಡವಾಳ ಹೂಡಿ ಲಾಭ ಬಾಚುವುದು. ಚುನಾವಣೆಯಲ್ಲಿ ಅವರು ಅದನ್ನೇ ಮಾಡುತ್ತಿದ್ದಾರೆ. ವಿವಿಧ ಜಾತಿ, ಊರು, ಕೇರಿ, ಏರಿಯಾ, ಸಮುದಾಯ, ಫ್ಯಾಕ್ಟರಿ, ಕಾಲೇಜು ಇತ್ಯಾದಿಗಳಲ್ಲಿನ ಜನರ ಜೊತೆ ಒಡನಾಟ ಇಟ್ಟುಕೊಂಡಿರುವ ಮುಖಂಡರುಗಳು ಸ್ವಹಿತಾಸಕ್ತಿಯನ್ನು ಒಳಗಿಟ್ಟುಕೊಂಡು ಜನರ ಹೆಸರಿನಲ್ಲಿ ಅಥವಾ ಸಿದ್ಧಾಂತದ ಮುಸುಕಿನಲ್ಲಿ ವಿವಿಧ ಆಳುವ ಪಕ್ಷಗಳ ಅವಕಾಶವಾದಿ ಬಾಲಂಗೋಚಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಶೋಷಕರ ಮತ್ತು ಸಾಮಾನ್ಯರ ನಡುವಿನ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ. ಜನರ ನಡುವೆ ನೈತಿಕ ಭ್ರಷ್ಟಾಚಾರವನ್ನು ಹರಡುವುದರಲ್ಲಿ ಇವರ ಪಾತ್ರ ಬಹಳ ಮುಖ್ಯವಾದುದಾಗಿದೆ. ಇದಲ್ಲದೆ ಚುನಾವಣೆಯಲ್ಲಿ ಗೆದ್ದುಬಂದರೆ ತನ್ನ ಜನರಿಗೆ ಏನಾದರೂ ಒಳ್ಳೆಯದನ್ನು ಮಾಡಬಹುದು ಎಂಬ ಆದರ್ಶವನ್ನಿಟ್ಟುಕೊಂಡು ಸ್ಪರ್ಧಿಸುತ್ತಿರುವವರೂ ಕೆಲವರಿದ್ದಾರೆ. ಗೆದ್ದುಬರುವುದು ಸುಲಭವಿಲ್ಲ, ಗೆದ್ದುಬಂದರೂ ಹೆಚ್ಚಿಗೆ ಸಾಧಿಸುವುದು ಸಾಧ್ಯವಿಲ್ಲ ಎಂಬುದು ಕಣ್ಣ ಮುಂದಿನ ಸತ್ಯವಾದರೂ, ಸರ್ವಸ್ವವನ್ನೂ ಪಣಕ್ಕೊಡ್ಡಿ ಅಖಾಡಕ್ಕಿಳಿದವರೂ ಇದ್ದಾರೆ.



ಮತ ಹಾಕುವ ಜನರು ಒಂದು ರೀತಿಯಲ್ಲಿ ಹೆಚ್ಚಿನ ಭ್ರಮೆಯಲ್ಲೇನೂ ಇಲ್ಲ. ಯಾರು ಬಂದರೂ ತಮ್ಮ ಬದುಕಿನ ಕಷ್ಟಗಳು ಬಗೆಹರಿಯುತ್ತವೆ ಎಂಬ ಭ್ರಮೆಯೂ ಯಾರಿಗೂ ಇಲ್ಲ. ಎಲ್ಲರೂ ಗೆಲ್ಲಲು ಹವಣಿಸುತ್ತಿರುವುದು ಗಳಿಸಲಿಕ್ಕಾಗಿ ಎಂಬಷ್ಟು ಅರಿವಂತೂ ಬಂದಿದೆ. ಆದರೂ ಚುನಾವಣೆಯಲ್ಲಿ ಆಸಕ್ತಿ ಉಳಿಸಿಕೊಂಡಿದ್ದಾರೆ. ಯಾರು ಬಂದರೆ ತಮಗೆ ಸಹಾಯವಾಗಬಹುದು ಎಂಬ ಲೆಕ್ಕಾಚಾರ ಹಾಕುತ್ತಾರೆ. ತಮಗೆ ಸಂಪರ್ಕವಿರುವ ಪುಡಿ ಪುಢಾರಿ ಯಾವ ಅಭ್ಯರ್ಥಿಯ ಜೊತೆ ಸಂಬಂಧ ಹೊಂದಿದ್ದಾನೋ ಆ ಅಭ್ಯರ್ಥಿ ಗೆದ್ದರೆ ತಮಗೆ ಉಪಯೋಗವಾಗಬಹುದು ಎಂದು ನಿರೀಕ್ಷಿಸುತ್ತಾರೆ. ಇಲ್ಲವೇ ತಮ್ಮ ಜಾತಿಯವರೇ ಗೆಲ್ಲಲಿ ಎಂದು ಬಯಸುತ್ತಾರೆ. ಸತ್ಯ-ನ್ಯಾಯದ ವಿವೇಚನೆಗಿಂತ ಲಾಭ-ನಷ್ಟದ, ಜಾತಿ-ಧರ್ಮದ ಲೆಕ್ಕಾಚಾರಗಳು ಹೆಚ್ಚು ಕೆಲಸ ಮಾಡುತ್ತವೆ. ಈ ಯಾವ ಗೋಜಿಗೂ ಹೋಗದೆ ಕಾಸು ಕೊಟ್ಟವರಿಗೆ ಹಾಕಿದರಾಯಿತು ಎನ್ನುವವರೂ ಇದ್ದಾರೆ. ಯಾರು ಬಂದರೂ ಏನು ಲಾಭ ಎಂದು ಚುನಾವಣೆ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೆ, ಮತ ಹಾಕಲೂ ಹೋಗದೆ, ತಮ್ಮ ಕೆಲಸದಲ್ಲಿ ತಾವು ಮುಳುಗಿರುವವರೂ ಇದ್ದಾರೆ.

ಇದು ಅಭ್ಯರ್ಥಿಗಳು ಹಾಗೂ ಮತದಾರರು ವಹಿಸುತ್ತಿರುವ ಪಾತ್ರವಾದರೆ ಸಮಾಜದ ಸಾಕ್ಷಿಪ್ರಜ್ಞೆಯಾಗಿರುವ ವಿಚಾರವಂತರು ಹಾಗೂ ಜನಪರ ಸಂಘಟನೆಗಳು ಈ ಸಂದರ್ಭದಲ್ಲಿ ಮಾಡುತ್ತಿರುವ ಕೆಲಸವೇನು? ಪ್ರಜಾತಂತ್ರದ ನಾಲ್ಕನೇ ಅಂಗವೆಂದು ಕರೆದುಕೊಳ್ಳುವ ಮಾಧ್ಯಮಗಳು ವಹಿಸುತ್ತಿರುವ ಪಾತ್ರವೇನು? ಜನರ (ದಲಿತರ, ಬಡವರ, ಹಿಂದುಳಿದವರ, ಅಲ್ಪಸಂಖ್ಯಾತರ ಇತ್ಯಾದಿ) ಹಿತಾಸಕ್ತಿಯನ್ನು ಕಾಯಲಿಕ್ಕಾಗಿ ಚುನಾವಣಾ ಕಣದಲ್ಲಿರುವುದಾಗಿ ಹೇಳಿಕೊಳ್ಳುವ ಪಕ್ಷಗಳು ಮುಂದೆ ತರುತ್ತಿರುವ ಜನಾಗ್ರಹಗಳೇನು?

ನಮ್ಮ ಪ್ರಕಾರ ಚುನಾವಣೆಯ ಸಂದರ್ಭದಲ್ಲಿ ಜನಪರ ಶಕ್ತಿಗಳಿಗೆ ಎರಡು ಕರ್ತವ್ಯಗಳಿರುತ್ತವೆ. ಒಂದು - ಪ್ರಸ್ತುತ ಪ್ರಜಾಪ್ರಭುತ್ವದ ಸೋಗಲಾಡಿತನವನ್ನು ಬಯಲುಗೊಳಿಸಿ, ನಿಜವಾಗಿಯೂ ಜನಪರವಾಗಿರುವ ಪ್ರಜಾತಂತ್ರಕ್ಕಾಗಿನ ದನಿಯನ್ನು ಬಲಗೊಳಿಸುವುದು. ಎರಡನೆಯದು - ತಕ್ಷಣಕ್ಕೆ ಎದುರಿಗಿರುವ ಚುನಾವಣೆಯಲ್ಲಿ ಏನು ಮಾಡಿದರೆ ಇದ್ದುದರಲ್ಲೇ ಒಳ್ಳೆಯದೆಂಬ ಸಲಹೆಯನ್ನು ಜನರ ಮುಂದಿಡುವುದು. ಇದರಲ್ಲಿ ಎರಡನೆಯದಕ್ಕಿಂತ ಮೊದಲನೆ ಕರ್ತವ್ಯ ಬಹಳ ಪ್ರಾಮುಖ್ಯತೆ ಉಳ್ಳದ್ದು. ಏಕೆಂದರೆ ಮೊದಲನೆಯದು ಪ್ರಜಾಪ್ರಭುತ್ವ ರಚನೆಯಲ್ಲಿ ಜನಪರವಾದ ಮೂಲಭೂತ ಬದಲಾವಣೆಗಳಿಗಾಗಿ ನಡೆಯುವ ಪ್ರಯತ್ನವಾದರೆ, ಎರಡನೆಯದು ಆಳುವ ವರ್ಗಗಳು ನೀಡಿರುವ ಸೀಮಿತ ಅವಕಾಶಗಳನ್ನು ಬಳಸಿಕೊಳ್ಳುವ ಕ್ಷೀಣ ಪ್ರಯತ್ನ. ಆದರೆ ಮೊದಲನೆಯ ಬಹುಮುಖ್ಯ ಕರ್ತವ್ಯದತ್ತ (ಕೆಲವು ಬರಹಗಾರರ ಹಾಗೂ ಕೆಲವು ಸಂಘಟನೆಗಳ ಸಣ್ಣ ಪ್ರಯತ್ನವನ್ನು ಹೊರತುಪಡಿಸಿ) ಕರ್ನಾಟಕದ ಯಾವೊಂದು ಪಕ್ಷಗಳೂ, ವಿಚಾರವಂತರೂ, ಸಂಘಟನೆಗಳೂ ಮಾಧ್ಯಮಗಳೂ ಕಿಂಚಿತ್ತೂ ಗಮನವನ್ನು ನೀಡುತ್ತಿಲ್ಲ. "ಅತ್ಯಂತ ಪ್ರತಿಗಾಮಿಯಾದ ಬಿಜೆಪಿಯನ್ನು ಸೋಲಿಸಬೇಕಿರುವುದರಿಂದ ಸದ್ಯಕ್ಕೆ ಏಕೈಕ ಪರ್ಯಾಯವಾಗಿ ಕಾಣುತ್ತಿರುವ ಕಾಂಗ್ರೆಸ್ ಅನ್ನು ಬೆಂಬಲಿಸುವುದು ಸರಿಯಲ್ಲವೆ?", "ಪಕ್ಷಗಳ ಲೆಕ್ಕಾಚಾರಕ್ಕೆ ಹೋಗದೆ ಇದ್ದಿದ್ದರಲ್ಲಿ ಉತ್ತಮ ಎನಿಸುವ ಅಭ್ಯರ್ಥಿಯನ್ನು ಬೆಂಬಲಿಸಬೇಕಲ್ಲವೆ?", "ಏನಿದ್ದರೂ ಎಡ ಹಾಗೂ ಜಾತ್ಯತೀತ ಶಕ್ತಿಗಳನ್ನು ಬೆಂಬಲಿಸುವುದೇ ಸರಿಯಾದ ನಿಲುವಲ್ಲವೆ?", "ಎಲ್ಲ ಜಾತಿಗಳಲ್ಲೂ ಮೇಲ್ಜಾತಿ ನಾಯಕತ್ವವೇ ಹೆಚ್ಚಿರುವುದರಿಂದ ದಲಿತ, ಅಲ್ಪಸಂಖ್ಯಾತ ನಾಯಕತ್ವದಲ್ಲಿರುವ ಪಕ್ಷಗಳನ್ನು ಬೆಂಬಲಿಸುವುದು ಸರಿಯಲ್ಲವೆ?" ಇತ್ಯಾದಿ ಚರ್ಚೆಗಳು ಹಾಗೂ ಅದಕ್ಕೆ ತಕ್ಕ ನಿಲುವುಗಳನ್ನು ನಾವು ಕಾಣುತ್ತೇವೆ.

ಆದರೆ, ಈ ಚುನಾವಣೆಗಳಲ್ಲಿ ದಮನಿತ ಸಮುದಾಯದ ನಿಜವಾದ ಪ್ರತಿನಿಧಿಗಳು ಗೆದ್ದುಬರಲು ಆಗುತ್ತಿಲ್ಲ, ಅದಕ್ಕೇನು ಮಾಡುವುದು? ಒಂದಿಬ್ಬರು ಗೆದ್ದುಬಂದರೂ ಏನು ಮಾಡಲಾಗುವುದಿಲ್ಲ ಏಕೆ? ನಿಜವಾದ ಪ್ರಜಾಪ್ರಭುತ್ವದ ಮಾದರಿ ಏನು? ಅದಕ್ಕಾಗಿ ಮುಂದಿಡಬೇಕಾದ ಪರ್ಯಾಯಗಳೇನು? ಅವು ವಿಶಾಲ ಜನತೆಯ ಬೇಡಿಕೆಯಾಗುವಂತೆ ಮಾಡುವುದು ಹೇಗೆ? ದಮನಿತ ಜನರ ಪ್ರಜಾಪ್ರಭುತ್ವ ಜಾರಿಗೆ ಬರಲು ಸಾಧ್ಯವೆ? ಹೌದಾದರೆ ಹೇಗೆ? ಈ ಪ್ರಶ್ನೆಗಳ ಸುತ್ತ ಚರ್ಚೆಗಳೇ ಕಾಣೆಯಾಗಿವೆ.

. ಏಕೆಂದರೆ ಸಾಮಾಜಿಕ ಕಾಳಜಿಯುಳ್ಳವರು ಸಹ ಪ್ರಸ್ತುತ ಚಾಲ್ತಿಯಲ್ಲಿರುವ ಪ್ರಜಾಪ್ರಭುತ್ವಕ್ಕೆ ಪರ್ಯಾಯವಿಲ್ಲ ಎಂ

ನಿಲುವಿಗೆ ತಲುಪಿಬಿಟ್ಟಿದ್ದೇವೆ. ಈ ಪ್ರಜಾಪ್ರಭುತ್ವದ ಜನವಿರೋಧಿ ಸ್ವರೂಪದ ಬಗ್ಗೆ ಮೌನವನ್ನು ಧರಿಸಿಬಿಟ್ಟಿದ್ದೇವೆ. ನಾವು ನಂಬಿದ ಸಿದ್ಧಾಂತಗಳ ಕರ್ತೃಗಳ ಮಾತುಗಳೇ ನಮಗೆ ಮರೆತುಹೋಗಿವೆ.

• ಮಾರ್ಕ್ಸ್, ಈ ವ್ಯವಸ್ಥೆಯನ್ನು "ಪ್ರಜಾತಂತ್ರದ ಸೋಗಿನಲ್ಲಿರುವ ಬಂಡವಾಳಶಾಹಿ ವರ್ಗದ ಸರ್ವಾಧಿಕಾರ" ಎಂದು ಕರೆಯುತ್ತಾರೆ. ಲೆನಿನ್ "ಪ್ರಜಾಪ್ರಭುತ್ವವೆಂಬುದು ಜನರನ್ನು ವಂಚಿಸಿ ಆಳಲು ಆಳುವ ವರ್ಗಗಳು ಕಂಡುಕೊಂಡಿರುವ ಅತ್ಯಂತ ಚಾಣಾಕ್ಷ ವಿಧಾನ" ಎನ್ನುತ್ತಾರೆ. ಎಂಗೆಲ್ಸ್ ಪ್ರಜಾತಂತ್ರದ ಕಾರ್ಯವೈಖರಿಯನ್ನು ವಿವರಿಸುತ್ತಾ "ಇಲ್ಲಿ ಸಂಪತ್ತು ನಿಖರವಾಗಿ, ಆದರೆ ಪರೋಕ್ಷ ರೀತಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸುತ್ತದೆ" ಎನ್ನುತ್ತಾರೆ; "ಮೊದಲಿಗೆ ನೇರವಾಗಿ ಅಧಿಕಾರಿಗಳನ್ನು ಭ್ರಷ್ಟಗೊಳಿಸುವ ಮೂಲಕ", ಎರಡನೆಯದಾಗಿ "ಸರ್ಕಾರ ಮತ್ತು ಸ್ಟಾಕ್ ಮಾರ್ಕೆಟ್ ನಡುವಿನ ಮೈತ್ರಿಯ ಮೂಲಕ" ಎಂದು ವಿವರಿಸುತ್ತಾರೆ.

• ಅಂಬೇಡ್ಕರ್, "ಸಂಸದೀಯ ಪ್ರಜಾತಂತ್ರದ ಬಗ್ಗೆ ಎಚ್ಚರದಿಂದಿರಿ. ಇದು ಮೇಲ್ನೋಟಕ್ಕೆ ಕಾಣುವಂತೆ ಅತ್ಯುತ್ತಮವಾದುದಲ್ಲ" ಎಂದು ಎಚ್ಚರಿಸುತ್ತಾರೆ. ಮುಂದುವರೆದು "ಎಲ್ಲಿ ಸಾಮಾಜಿಕ, ಆರ್ಥಿಕ ಸಮಾನತೆ ಇಲ್ಲವೋ ಅಲ್ಲಿ ರಾಜಕೀಯ ಸಮಾನತೆಯು ಯಶಸ್ವಿಗೊಳ್ಳಲು ಸಾಧ್ಯವಿಲ್ಲ" ಎನ್ನುತ್ತಾರೆ. ಈಗ ಇರುವ ರೀತಿಯ ಮೀಸಲು ಕ್ಷೇತ್ರಗಳ ಬಗ್ಗೆ ಪ್ರತಿಕ್ರಿಯಿಸುತ್ತಾ "ಅಲ್ಲಿ ಅಸ್ಪೃಶ್ಯರು ಅಲ್ಪಸಂಖ್ಯಾತರಾಗಿದ್ದು ಸ್ಪೃಶ್ಯರು ಬಹುಸಂಖ್ಯಾತರಾಗಿರುವು ದರಿಂದ, ತಾನು ಸವರ್ಣೀಯರ 'ಆಯ್ಕೆ'ಯಾಗದಿರಲು, ಅವರ ಸಾಧನವಾಗದಿರಲು ಒಪ್ಪದ ಯಾವ ಅಸ್ಪೃಶ್ಯನೂ ಅದರಲ್ಲಿ ಗೆದ್ದುಬರಲು ಸಾಧ್ಯವೇ ಇಲ್ಲ" ಎಂದು ಭವಿಷ್ಯ ನುಡಿಯುತ್ತಾರೆ. "ಮೀಸಲು ಕ್ಷೇತ್ರವೆಂಬುದು ನಾಮಮಾತ್ರಕ್ಕೆ ಅಸ್ಪೃಶ್ಯನಾಗಿರುವ, ವಾಸ್ತವದಲ್ಲಿ ಸವರ್ಣೀಯರ ಸಾಧನವಾಗಿ ರುವವರನ್ನೇ ನೇಮಕ ಮಾಡುವ ಮತಕ್ಷೇತ್ರ" ಎನ್ನುತ್ತಾರೆ.

• ಮಾರ್ಕ್ಸ್‌ವಾದವು 'ಶೋಷಕ ವರ್ಗಗಳನ್ನು ಚುನಾವಣಾ ಕಣದಿಂದ ನಿಷೇಧಿಸಬೇಕು, ಜನಸಾಮಾನ್ಯರಿಗೆ ಮಾತ್ರ ಸ್ಪರ್ಧಿಸುವ ಅವಕಾಶವಿರಬೇಕು' ಎನ್ನುತ್ತದೆ. ಗೆದ್ದವರು ಗೆಲ್ಲಿಸಿದವರ ಹಿತಾಸಕ್ತಿ ಕಾಯುತ್ತಿಲ್ಲ ಎನಿಸಿದರೆ ಹಿಂದಕ್ಕೆ ಕರೆಸಿಕೊಳ್ಳಬಹುದಾದ ವಿಧಾನವನ್ನು ಪ್ರತಿಪಾದಿಸುತ್ತದೆ. ಶಾಸಕಾಂಗ ಮಾತ್ರವಲ್ಲದೆ, ಅಧಿಕಾರಶಾಹಿಯನ್ನು ಸಹ ಆಯ್ಕೆ ಮಾಡುವ ವಿಧಾನವನ್ನು ಮುಂದಿಡುತ್ತದೆ. ಅಂಬೇಡ್ಕರ್ ಅವರು ಅಸ್ಪೃಶ್ಯ ಸಮುದಾಯಕ್ಕೆ ಪ್ರತ್ಯೇಕ ಮತದಾನವನ್ನು ಪ್ರತಿಪಾದಿಸುತ್ತಾರೆ. ಕ್ಷೇತ್ರವಾರು ಮತದಾನಕ್ಕಿಂತ ವಿವಿಧ ಸಮುದಾಯವಾರು ಪ್ರಾತಿನಿಧ್ಯವನ್ನು ಪರಿಶೀಲಿಸುವ ಕಡೆ ಗಮನ ಸೆಳೆಯುತ್ತಾರೆ.

ಲೆನಿನ್ ಅಥವಾ ಅಂಬೇಡ್ಕರ್ ಸಹ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು ಎಂದು ಹೇಳಿ ತಮ್ಮ ಸ್ಪರ್ಧೆಗೆ ಸಮರ್ಥನೆಯನ್ನು ಪಡೆದುಕೊಳ್ಳಲು ಮಾತ್ರ ಈ ಮಹಾನ್ ಚಿಂತಕರನ್ನು ಬಳಸಿಕೊಳ್ಳಲಾಗುತ್ತಿದೆಯೇ ಹೊರತು, ಅವರು ಪ್ರಜಾಪ್ರಭುತ್ವದ ಬಗ್ಗೆ ಮಾಡಿದ ವಿಮರ್ಶೆಯ ಕಡೆಯಾಗಲಿ, ಅವರು ಪ್ರತಿಪಾದಿಸಿದ ಪರ್ಯಾಯದ ಬಗ್ಗೆಯಾಗಲಿ ತಲೆ ಕೆಡಿಸಿಕೊಳ್ಳುತ್ತಿಲ್ಲ. ಹಾಗೆಯೇ ವಿವಿಧ ಧಾರೆಯ 'ಸಮಾಜವಾದಿಗಳು' ಸಹ ಅಸಮಾನತೆ ಭೂತಾಕಾರವಾಗಿ ಬೆಳೆಯುತ್ತಿದ್ದರೂ ಆತಂಕಿತರಾಗಿಲ್ಲ. ಪ್ರಜಾಪ್ರಭುತ್ವದ ಅಪಹಾಸ್ಯ ನಡೆಯುತ್ತಿದ್ದರೂ ಪ್ರಜಾತಂತ್ರವಾದಿಗಳು ನಿಜವಾದ ಪ್ರಜಾಪ್ರಭುತ್ವಕ್ಕಾಗಿ ದನಿ ಎತ್ತುತ್ತಿಲ್ಲ. ದಮನಿತ ಜಾತಿಯ ಹೆಸರಿನಲ್ಲಿ ಆಯಾಜಾತಿಗಳ ಬಲಿತರನ್ನು ಗಟ್ಟಿಗೊಳಿಸುವ ಕೆಲಸ ಮಾತ್ರ ಮಾಡುತ್ತಿದ್ದೇವೆ. ಮಹಿಳಾ ಹಕ್ಕಿನ ಪ್ರತಿಪಾದನೆಯನ್ನಂತೂ ಮರೆತು ಕೂತಿದ್ದೇವೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಆಚರಣೆಯಲ್ಲಿರುವ ಪ್ರಜಾಪ್ರಭುತ್ವದ ಹಿಂದಿನ ಕುತಂತ್ರದ ಬಗ್ಗೆ ದನಿ ಕುಗ್ಗಿಹೋಗಿದೆ, ಪರ್ಯಾಯದ ಬಗ್ಗೆ ಕ್ಷೀಣಸ್ವರವೂ ಇಲ್ಲವಾಗಿದೆ.

ಏನಾದರೂ ಒಂದಷ್ಟು ಅಪಸ್ವರ ಕೇಳಿಬಂದರೆ ಅದು ಚುನಾವಣಾ ಆಯೋಗದ್ದು ಮಾತ್ರ. ಚುನಾವಣಾ ಆಯೋಗವು ಚುನಾವಣಾ ಸಂದರ್ಭದಲ್ಲಿ ನಡೆಯುವ ಹಣ ಹಾಗೂ ಅಧಿಕಾರದ ದುರ್ಬಳಕೆಯ ಮೇಲೆ ನಿಯಂತ್ರಣಗಳನ್ನು ಹಾಕುತ್ತಿದೆ. ಈ ಮೊದಲಿನ ರೀತಿ ಅಷ್ಟು ಮನಸ್ಸಿಗೆ ಬಂದಂತೆ ಬಳಸಲು ಅವಕಾಶ ಸಿಗುತ್ತಿಲ್ಲ ಎಂದು ಅಭ್ಯರ್ಥಿಗಳು ಕೊಸರಾಡುತ್ತಿರುವುದಿದೆ. ಆದರೆ ಅದರಿಂದೆಲ್ಲ ಚುನಾವಣಾ ಫಲಿತಾಂಶಗಳ ಮೇಲೆ ಪರಿಣಾಮ ಉಂಟಾಗುತ್ತದೆಯಾ? ಬಲಾಢ್ಯರ ಬದಲು ದುರ್ಬಲರು ಗೆಲ್ಲುತ್ತಾರಾ? ಶೋಷಕರ ಬದಲು ಶೋಷಿತರು ಅಧಿಕಾರಕ್ಕೆ ಬರಲಾಗುತ್ತದೆಯಾ? ಖಂಡಿತ ಇಲ್ಲ. ಪ್ರಜಾತಂತ್ರದ ಪ್ರದರ್ಶನ ಸಾಧ್ಯವಾದಷ್ಟೂ ಸ್ವಚ್ಛ ರೀತಿಯಲ್ಲಿ ಕಾಣುವಂತೆ ಮಾಡಿ ಅದರ ಕೆಡಿಬಲಿಟಿಯನ್ನು ಉಳಿಸಲು ಇದು ಸಹಾಯಕವಾಗುತ್ತದೆಯೇ ವಿನಃ ಶೋಷಕರನ್ನು/ಬಲಾಢ್ಯರನ್ನು ಅಧಿಕಾರದಿಂದ ದೂರವಿಡಲು ಹಾಗೂ ಶೋಷಿತರು, ದುರ್ಬಲರು, ವಂಚಿತರು, ದಮನಿತರು ಅಧಿಕಾರಕ್ಕೆ ಬರಲು ಸಹಕಾರಿಯಾಗುವುದಿಲ್ಲ.

ನಮ್ಮ ಮಹಾನ್ ಪ್ರಜಾಪ್ರಭುತ್ವವನ್ನು ಉಳಿಸುವ ಕೆಲಗಳು ಮಾತ್ರ ರಾರಾಜಿಸುತ್ತಿವೆ. "ಮತ ಹಾಕಿ ಪ್ರಜಾತಂತ್ರವನ್ನು ಬಲಪಡಿಸಿ" ಎಂಬುದೇ ಅದರ ಏಕೈಕ ಘೋಷಣೆಯಾಗಿದೆ. ಆಳುವ ವರ್ಗಗಳಿಗೆ ಬೇಕಿರುವುದು ಅಷ್ಟೇ: ಜನ ಮತ ಹಾಕಬೇಕು. ಪ್ರಜಾತಂತ್ರದ ಶೋ ನಡೆಯಬೇಕು. ಅಷ್ಟೇ. ಆದರೆ ಜನಪರ ಕಾಳಜಿಯುಳ್ಳವರು ಈ ಪ್ರದರ್ಶನದೊಳಗೇ ಪರ್ಯಾಯವನ್ನು ಹುಡುಕುವುದಲ್ಲ, ಇಂತಹ ದುಃಸ್ಥಿತಿಗೆ ಕಾರಣವಾದ ಮೂಲಭೂತ ಸಂರಚನೆಯಲ್ಲೇ ಬದಲಾವಣೆ ತರುವಂತಹ ಪರ್ಯಾಯಗಳನ್ನು ಮುಂದಿಡಬೇಕು. ಈ ನಿಟ್ಟಿನಲ್ಲಿ ಈ ಕೆಳಕಂಡ ಅಂಶಗಳ ಕಡೆ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ.

1. ರಾಜಕೀಯ ಸಮಾನತೆ ಯಶಸ್ವಿಯಾಗಬೇಕಾದರೆ ಅಂಬೇಡ್ಕರ್ ಹೇಳಿದಂತೆ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆ ಜಾರಿಗೆ ಬರಬೇಕು. ಅಂದರೆ ವಿವಿಧ ಜಾತಿಗಳ ನಡುವೆ, ಧರ್ಮಗಳ ನಡುವೆ, ಲಿಂಗಗಳ ನಡುವೆ, ಪ್ರದೇಶಗಳ ನಡುವೆ ಹಾಗೂ ವರ್ಗಗಳ ನಡುವೆ ಇರುವ ಅಸಮಾನತೆ ಅಂತ್ಯಗೊಳ್ಳಬೇಕು. ಇದಕ್ಕಾಗಿನ ನೀತಿ ಕೇವಲ ಘೋಷಣೆಯಾಗದೆ ಸರ್ಕಾರ ಉತ್ತರದಾಯಿಯಾಗಿರಬೇಕಾದ ಕಡ್ಡಾಯ ಕರ್ತವ್ಯವಾಗಬೇಕು.

2. ಆ ನೀತಿ ವಾಸ್ತವಕ್ಕೆ ಬರಬೇಕಾದರೆ ಆರ್ಥಿಕವಾಗಿ-ಸಾಮಾಜಿಕವಾಗಿ ಹಿಂದುಳಿದಿರುವ ಜನಸಮುದಾಯಗಳು ಅಧಿಕಾರಕ್ಕೆ ಬರಬೇಕು. ಅಸಮಾನತೆಯಿಂದ ಕೂಡಿರುವ ಸಮಾಜದಲ್ಲಿ ಸಮಾನ ಸ್ಪರ್ಧೆಯನ್ನು ಎತ್ತಿಹಿಡಿಯುವ ಪ್ರಸ್ತುತ ಸಾರ್ವತ್ರಿಕ ಮಾದರಿಯು ದಮನಿತರಪರವಾದ ಫಲಿತಾಂಶವನ್ನು ನೀಡಲು ಸಾಧ್ಯವಿಲ್ಲ. ಹಾಗಾಗಿ ಸಾರ್ವತ್ರಿಕ ಮತದಾನವನ್ನು ರದ್ದು ಮಾಡಿ, ಸಾಮಾಜಿಕ-ಆರ್ಥಿಕ-ಪ್ರಾದೇಶಿಕ ಅಸಮಾನತೆಯನ್ನು ಗಮನದಲ್ಲಿಟ್ಟುಕೊಂಡು ಪ್ರಾತಿನಿಧಿಕ ಚುನಾವಣಾ ಮಾದರಿಯನ್ನು ಜಾರಿಗೆ ತರುವಂತೆ ಆಗ್ರಹಿಸಬೇಕು. ಕಾರ್ಮಿಕರಿಗೆ, ಬಡ ರೈತರಿಗೆ, ಮಧ್ಯಮ ವರ್ಗಕ್ಕೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ಪ್ರದೇಶಗಳವರಿಗೆ ಪ್ರತ್ಯೇಕ ಮೀಸಲಾತಿಯನ್ನು ನೀಡಿ, ಆಯಾ ಜನಸಮುದಾಯಗಳು ತಮ್ಮ ಪ್ರತಿನಿಧಿಯನ್ನು ತಾವೇ ಆಯ್ಕೆ ಮಾಡುವಂಥ ಪದ್ಧತಿ ಜಾರಿಗೆ ತರಬೇಕು. ಇದರ ಮೂಲಕ ಸ್ವಯಂ ಕಾರ್ಮಿಕರಾಗಿರುವವರು, ರೈತರಾಗಿರುವವರು, ದೀನದಲಿತರಾಗಿರುವವರು, ದಮನಿತ ಮಹಿಳೆಯರಾಗಿರುವವರು ಅಧಿಕಾರಕ್ಕೆ ಬರುವಂತೆ ಇದನ್ನು ರೂಪಿಸಬೇಕು. ಮೇಲ್ಜಾತಿಯವರು, ಮೇಲ್ವರ್ಗದವರು ಅವರ ಜನಸಂಖ್ಯೆಗನುಗುಣವಾಗಿ ಮಾತ್ರ ಅಧಿಕಾರದಲ್ಲಿರಬೇಕು. ಅಂದರೆ ಸಮಾಜದಲ್ಲಿ ಅಲ್ಪಸಂಖ್ಯಾತರಾಗಿರುವ ಅವರು ಅಧಿಕಾರದಲ್ಲೂ ಅಲ್ಪಸಂಖ್ಯಾತರಾಗಿರಬೇಕು. ಬಹುಸಂಖ್ಯಾತರಾಗಿರುವ ಜನಸಾಮಾನ್ಯರು ಅದರೊಳಗಿನ ಒಳವಿಭಾಗಗಳಿಗನುಸಾರ ಬಹುಸಂಖ್ಯಾತರಾಗೇ ಇರಬೇಕು. ಅರ್ಧದಷ್ಟಿರುವ ಮಹಿಳೆಯರು ಅಧಿಕಾರದಲ್ಲೂ ಅರ್ಧಪಾಲನ್ನು ಪಡೆಯಬೇಕು. ಮಹಿಳೆಯರಲ್ಲೂ ಇರುವ ವರ್ಗ ಮತ್ತು ಜಾತಿ ವಿಭಜನೆಯನ್ನೂ ಪರಿಗಣನೆಗೆ ತೆಗೆದುಕೊಂಡು ದಮನಿತ ವರ್ಗ ಮತ್ತು ಜಾತಿಗಳ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಕ್ಕೆ ಬರುವಂತಾಗಬೇಕು.

3. ಚುನಾವಣೆಗಳು ಬೃಹತ್ ಮತಕ್ಷೇತ್ರಗಳಿಗಾಗಿ ನಡೆಯದೆ ಸಣ್ಣ ಪ್ರಮಾಣದ ವಸತಿ/ಕೆಲಸ ಆಧಾರಿತ ಪ್ರದೇಶಗಳಿಗೆ ನಡೆಯಬೇಕು.

4. ತಳಮಟ್ಟದಲ್ಲಿ ಗೆದ್ದಿರುವವರಿಂದ ಪ್ರಾರಂಭವಾಗಿ ಮೇಲಿನ ತನಕ, ಕೆಳ ಸ್ತರವು ಮೇಲು ಸ್ತರವನ್ನು ಆಯ್ಕೆ ಮಾಡುವಂಥ ಕ್ಯುಮುಲೇಟಿವ್ ಮತದಾನ ಮಾದರಿ ಜಾರಿಯಾಗಬೇಕು. ಪ್ರತಿಯೊಬ್ಬರೂ ತಳದುಟ್ಟದ ಚುನಾವಣೆಯಿಂದ ಗೆದ್ದುಬರಬೇಕಾದ ವಿಧಾನವಿದ್ದಾಗ ಮಾತ್ರ ತಳಸಮುದಾಯಗಳ ಕೈಗೆ ಹೆಚ್ಚಿನ ಬಲ ಬಂದಂತಾಗುತ್ತದೆ. ಗೆದ್ದು ಹಿತಕಾಯದವರನ್ನು ಹಿಂದಕ್ಕೆ ಕರೆಸಿಕೊಳ್ಳಲಿಕ್ಕೂ ಸಾಧ್ಯವಾಗುತ್ತದೆ. ಅಂತಹ ವ್ಯವಸ್ಥೆ/ಸಂರಚನೆಯನ್ನು ಸಹ ರೂಪುಗೊಳಿಸಬೇಕು.

5. ಸಂಪತ್ತಿನ ಮರುಹಂಚಿಕೆ ನಡೆಯಬೇಕು. ಭೂಮಿತಿ ಕಾಯ್ದೆಯಂತೆ ಗರಿಷ್ಠ ಆಸ್ತಿ ಕಾಯ್ದೆ ಜಾರಿಯಾಗಬೇಕು. ಹೆಚ್ಚುವರಿಯಾಗಿರುವವರ ಆಸ್ತಿ ಕಳೆದುಕೊಂಡಿರುವವರಿಗೆ ಹಂಚಿಕೆಯಾಗುವಂಥ ಕ್ರಮಗಳು ಜಾರಿಗೆ ಬರಬೇಕು. ಕನಿಷ್ಠ ವೇತನವನ್ನು ಹೆಚ್ಚಿಸುವ, ಗರಿಷ್ಠ ವೇತನವನ್ನು ತಗ್ಗಿಸುವ ಕೆಲಸವಾಗಬೇಕು.



ಇವೇನು ಸಾಧ್ಯವಾಗದ ಪರ್ಯಾಯಗಳಲ್ಲ. ಇವನ್ನು ಈಗಾಗಲೇ ಬೇರೆ ಬೇರೆ ರೀತಿಯಲ್ಲಿ ಹಲವಾರು ಸಮಾಜವಾದಿ ದೇಶಗಳು ಹಾಗೂ ನಮಗಿಂತ ಉತ್ತಮವಾದ ಪ್ರಜಾಪ್ರಭುತ್ವವನ್ನು ಹೊಂದಿರುವ ದೇಶಗಳು ಆಚರಣೆಗೆ ತಂದಿವೆ. ಹಲವಾರು ದೇಶಗಳಲ್ಲಿ ಸಂಪತ್ತಿನ ಮರುಹಂಚಿಕೆ ನಡೆದಿದೆ. ಆಸ್ತಿಗೆ ಮಿತಿಯನ್ನು ಹಾಕಲಾಗಿದೆ. ಪಕ್ಕದ ನೇಪಾಳದಲ್ಲೇ ಒಂದು ಮಟ್ಟದ ಸಾಮುದಾಯಿಕ ಪ್ರಾತಿನಿಧ್ಯವನ್ನು ಜಾರಿಗೆ ತರಲಾಗಿದೆ. ಕೆಲವು ದೇಶಗಳಲ್ಲಿ ಶೇ. 50ಕ್ಕಿಂತ ಹೆಚ್ಚು ಮತ ಗಳಿಸಿದವರು ಮಾತ್ರ ಆಯ್ಕೆಯಾಗಬಹುದಾದ, ಚುನಾವಣೆಗೆ ನಿಂತ ಅಭ್ಯರ್ಥಿಗಳೆಲ್ಲರನ್ನೂ ಮತದಾರರು ತಿರಸ್ಕರಿಸಬಹುದಾದ ವಿಧಾನಗಳು ಸಹ ಆಚರಣೆಯಲ್ಲಿವೆ. ನಾವು ಪೂರ್ವಗ್ರಹಗಳನ್ನು ಬಿಟ್ಟು, ಪರ್ಯಾಯ ಪ್ರಯತ್ನಗಳನ್ನು ನಡೆಸಿರುವ ದೇಶಗಳ ಮಾದರಿಗಳನ್ನು ಅಧ್ಯಯನ ಮಾಡಿ, ಮಾರ್ಕ್ಸ್, ಲೆನಿನ್, ಅಂಬೇಡ್ಕರ್ ಮುಂತಾದವರು ಮುಂದಿಟ್ಟ ಪ್ರಸ್ತಾಪಗಳ ಧಾರೆಯನ್ನು ಹಿಡಿದು, ಇಂದಿನ ಪರಿಸ್ಥಿತಿಗೆ ಸಾಟಿಯಾಗುವ ಪರ್ಯಾಯಗಳನ್ನು ಅಭಿವೃದ್ಧಿಪಡಿಸುವ ಎಲ್ಲಾ ಸಾಧ್ಯತೆಗಳೂ ಇವೆ. ಪ್ರಜ್ಞಾವಂತರ ಚರ್ಚೆ ಈ ನಿಟ್ಟಿನಲ್ಲಿ ಕೇಂದ್ರೀಕರಣಗೊಳ್ಳಬೇಕೇ ಹೊರತು ಇದ್ದಿದ್ದರಲ್ಲೇ ಒಬ್ಬರನ್ನು ಆಯ್ಕೆ ಮಾಡುವ ಮಟ್ಟಕ್ಕೆ ಮಾತ್ರ ಸೀಮಿತಗೊಳ್ಳಬಾರದು.

ಪ್ರಸ್ತುತ ವ್ಯವಸ್ಥೆ ಹಾಗೂ ಚುನಾವಣಾ ಮಾದರಿ ಜನಪರವಾಗಿಲ್ಲದಿರುವುದರಿಂದ ಇದನ್ನು ಸಾರಾಸಗಟು ಬಹಿಷ್ಕರಿಸಿ ನಿಜವಾದ ಪರ್ಯಾಯಕ್ಕಾಗಿ ಹೋರಾಡುವುದನ್ನು ಮಾತ್ರ ಮಾಡಬೇಕೆಂದು ಕೆಲವು ಮಾವೋವಾದಿ ಪಕ್ಷಗಳು ವಾದಿಸುತ್ತವೆ. ಇದು ಮತ್ತೊಂದು ಅತಿರೇಕದ ವಾದವಾಗುತ್ತದೆ. ಸದ್ಯದ ಚುನಾವಣೆಗಳನ್ನು ಜನರ ಹಿತಕ್ಕನುಗುಣವಾಗಿ ಎಷ್ಟು ಬಳಸಿಕೊಳ್ಳಲು ಸಾಧ್ಯವೋ ಅದನ್ನು ಮಾಡುವ ಆಗತ್ಯವಿದೆ. ಚುನಾವಣಾ ಸಂದರ್ಭದಲ್ಲಿ ಪ್ರಗತಿಪರ ಶಕ್ತಿಗಳು ಏನು ನಿಲುವು ತಾಳಬೇಕು ಎಂಬುದನ್ನು ಆಯಾ ರಾಜಕೀಯ ಸಂದರ್ಭ ಹಾಗೂ ಜನಪರ ಶಕ್ತಿಗಳ ಸಾಮರ್ಥ್ಯಕ್ಕನುಗುಣವಾಗಿ ತೀರ್ಮಾನಿಸಬೇಕಾಗುತ್ತದೆ. ಕೆಲವೊಮ್ಮೆ ಅತ್ಯಂತ ಅಪಾಯಕಾರಿಯಾದವರನ್ನು ಸೋಲಿಸಲು ಪರ್ಯಾಯ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಲುವು ತೆಗೆದುಕೊಳ್ಳಬೇಕಾಗಬಹುದು. ಕೆಲವೊಮ್ಮೆ ಜನರ ಗಂಭೀರ ಬೇಡಿಕೆಯತ್ತ ಗಮನ ಸೆಳೆಯುವುದಕ್ಕಾಗಿ, ಸಾರಾಸಗಟಾಗಿ ಅಲ್ಲದೆ ಅಲ್ಲಲ್ಲಿಗೆ ಅನ್ವಯವಾಗುವಂತೆ, ಚುನಾವಣಾ ಬಹಿಷ್ಕಾರದ ಕರೆ ನೀಡಬೇಕಾಗಬಹುದು. ಕೆಲವೊಮ್ಮೆ ಪ್ರಜಾತಾಂತ್ರಿಕ/ಎಡಪಂಥೀಯ/ಜಾತ್ಯತೀತ ಶಕ್ತಿಗಳನ್ನು ಬೆಂಬಲಿಸುವ ನಿಲುವು ತೆಗೆದುಕೊಳ್ಳಬೇಕಾಗಬಹುದು. ಇನ್ನೊಂದು ಸಂದರ್ಭದಲ್ಲಿ ಜನರ ಹಕ್ಕೊತ್ತಾಯಗಳನ್ನು ಶಾಸನ ಸಭೆಗಳಿಗೂ ಒಯ್ಯಲು ತಮ್ಮವರನ್ನೇ ಚುನಾವಣೆಗೆ ನಿಲ್ಲಿಸಲೂ ಬೇಕಾಗಬಹುದು. ಇವೆಲ್ಲವೂ ಜನಹಿತವನ್ನು ಹಾಗೂ ಬಲಾಬಲವನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳಬೇಕಾದ ನಿಲುವುಗಳು.

ಅಂದರೆ ಪರಿಸ್ಥಿತಿಗೆ ತಕ್ಕಂತೆ ವಿವೇಕ ಬಳಸಿ ಅತ್ಯಂತ ಪ್ರತಿಗಾಮಿಯಾದವರನ್ನು ತಿರಸ್ಕರಿಸುವ, ಪರವಾಗಿಲ್ಲ ಎಂಬಂಥವರಿಗೆ ಶರತ್ತುಬದ್ಧ ಬೆಂಬಲ ವ್ಯಕ್ತಪಡಿಸುವ, ಸಮಸ್ಯೆಯೊಂದನ್ನೋ ಅಥವಾ ವ್ಯವಸ್ಥೆಯ ಕ್ರೂರತೆಯನ್ನೋ ಬಯಲಿಗೆಳೆಯಲು ಚುನಾವಣೆಯನ್ನೇ ಬಹಿಷ್ಕರಿಸುವ, ಪರ್ಯಾಯ ದನಿಯನ್ನು ಬಲಪಡಿಸಲು ಸಹಾಯಕವಾಗುವಂತಿದ್ದರೆ ಚುನಾವಣೆಗೇನೇ ಅಭ್ಯರ್ಥಿಗಳನ್ನು ನಿಲ್ಲಿಸುವ ನಿಲುವುಗಳನ್ನು ತೆಗೆದುಕೊಳ್ಳಬೇಕಾಗಿ ಬರಬಹುದು. ಆದರೆ ಇದನ್ನು ಮಾಡುವಾಗ ಕೆಲವು ವಿಶೇಷ ಎಚ್ಚರಿಕೆಗಳನ್ನು ತೆಗೆದುಕೊಳ್ಳುವ ಆಗತ್ಯವಿದೆ.

1. ಇದೇ ಚುನಾವಣಾ ವ್ಯವಸ್ಥೆಯೊಳಗೆ ಏನೇ ಸರ್ಕಸ್ ನಡೆಸಿದರೂ ಅದರ ಪೂರಕ ಫಲಿತಾಂಶ ತುಂಬಾ ಸೀಮಿತವಾದುದು ಎಂಬ ವಾಸ್ತವ ಸದಾ ಗಮನದಲ್ಲಿರಬೇಕು. ಹಾಗಾಗಿ ಇದರ ಹಿಂದೆಯೇ ಬಿದ್ದು ನಿಜವಾದ ಪರ್ಯಾಯಕ್ಕಾಗಿ ಶ್ರಮಿಸುವ ಕರ್ತವ್ಯವನ್ನು ನಿರ್ಲಕ್ಷಿಸಬಾರದು.

2. ಚುನಾವಣಾ ಸಂದರ್ಭದಲ್ಲಿ ತೆಗೆದುಕೊಳ್ಳುವ ನಿಲುವು ಸಂಘಟನೆಯೊಳಗೆ ಮನಸ್ತಾಪ ಮೂಡಲು ಕಾರಣವಾಗದಂತೆ ಎಚ್ಚರಿಕೆ ವಹಿಸಬೇಕು. ಏನೇ ಆದರೂ ಒಮ್ಮತದ ನಿಲುವು ತೆಗೆದುಕೊಳ್ಳಬೇಕೇ ಹೊರತು ವಿಭಜನೆಗೆ ದಾರಿಯಾಗದಂತೆ ನೋಡಿಕೊಳ್ಳಬೇಕು.

3. ಚುನಾವಣೆಯಲ್ಲಿ ಬೆಂಬಲಿಸುವ ಅಥವಾ ಸ್ಪರ್ಧಿಸುವ ಸಂದರ್ಭದಲ್ಲಿ ಅವಕಾಶವಾದ ತಲೆ ಎತ್ತದಂತೆ ಎಚ್ಚರಿಕೆ ವಹಿಸಬೇಕು. ಚಳವಳಿ ದುರ್ಬಲವಾಗಿದ್ದಾಗ ಚುನಾವಣೆಗಳಲ್ಲಿ ಸ್ಪರ್ಧಿಸಬಾರದು. ಚಳವಳಿ ಬಲವಾಗಿದ್ದಾಗ ಅದರ ಒಂದು ಸಣ್ಣ ವಿಭಾಗವನ್ನು ಚುನಾವಣೆಗೆ ಕಳಿಸಿದರೂ ಅದರ ಮೇಲೆ ಚಳವಳಿಯ ನಿಯಂತ್ರಣವಿರಬೇಕು. ಇದು ಅನಗತ್ಯ ಆತಂಕವಲ್ಲ, ಅಧಿಕಾರದ ಸುಳಿಯು ತಂದಿರುವ ನಾಶದ ಅನುಭವದ ಪಾಠ.

4. ಆಳುವ ವರ್ಗದ ಚುನಾವಣಾ ಮಾದರಿಯಲ್ಲಿ ಇಳಿದಾಗ ಗೆಲ್ಲಲು ಅದರದೇ ವಿಧಾನಗಳನ್ನು ಅಳವಡಿಸುವುದು ಅನಿವಾರ್ಯವಾಗುತ್ತದೆ. ಜಾಗ್ರತೆ ತಪ್ಪಿದರೆ ಅದು ಅವನತಿಯತ್ತ ಕೊಂಡೊಯ್ಯುತ್ತದೆ.

ಪ್ರಜಾಪ್ರಭುತ್ವ ಎಂಬುದು ಅದ್ಭುತವಾದ ಪರಿಕಲ್ಪನೆ, ಮೌಲ್ಯ, ನೀತಿ, ಸಂಸ್ಕೃತಿ ಹಾಗೂ ವಿಧಾನ. ಆದರೆ ಆಳುವ ವರ್ಗಗಳು ಕುಬ್ಜಗೊಳಿಸಿರುವಂತೆ ಪ್ರಜಾಪ್ರಭುತ್ವ ಎಂದರೆ ಚುನಾವಣೆಯಲ್ಲ, ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಪ್ರಭುತ್ವ; ಪ್ರಜೆಗಳು ಸಮಾಜದ ನಿರ್ಣಾಯಕ ಸ್ಥಾನಗಳಲ್ಲಿ ಇರಬೇಕು ಎಂದು ಅರ್ಥ. ಇಲ್ಲದಿದ್ದಾಗ ಅದು ಕೇವಲ ಹೆಸರು ಮಾತ್ರವೇ ಹೊರತು ಹೂರಣವಲ್ಲ. ಪ್ರಜೆಗಳೇ ಪ್ರಭುಗಳಾಗಿರುವ ನಿಜವಾದ ಪ್ರಜಾಪ್ರಭುತ್ವ ಬರಬೇಕು. ಶೋಷಕರ ಮೇಲೆ ನಿಯಂತ್ರಣಗಳನ್ನು ಹೇರದೆ, ಜನಸಾಮಾನ್ಯರಿಗೆ ವಿಶೇಷ ಅಧಿಕಾರಗಳನ್ನು, ಅವಕಾಶಗಳನ್ನು ನೀಡದೆ, ಸಂಪತ್ತಿನ ಮರುಹಂಚಿಕೆಯಾಗದೆ ನಿಜವಾದ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ. ನಮ್ಮ ದೇಶದ ಸಂಸದೀಯ ಪ್ರಜಾಪ್ರಭುತ್ವವೆಂಬುದು ದಂಧೆ ನಡೆಸುವವರ ವ್ಯಭಿಚಾರದ ಅಡ್ಡೆಯಾಗಿ ಪರಿವರ್ತನೆಯಾಗಿರುವಾಗ ಪ್ರಜ್ಞಾವಂತರ, ಪ್ರಗತಿಪರರ ಪಾತ್ರ ಬಹಳ ನಿರ್ಣಾಯಕವಾದುದಾಗಿದೆ. ನಿಜವಾದ ಪ್ರಜಾಪ್ರಭುತ್ವಕ್ಕಾಗಿನ, ನಿಜವಾದ ಪರ್ಯಾಯಕ್ಕಾಗಿನ ಕೆಲಸದತ್ತ ತಮ್ಮೆಲ್ಲಾ ಗಮನವನ್ನು ಕೇಂದ್ರೀಕರಿಸಬೇಕಿದೆ.

● ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್

ಜಮೀರ್ ಸಾಹೇಬರ ರಾಮನವಮಿ

ಅಣಕ



• ಎಚ್.ಎಲ್.ಕೇಶವಮೂರ್ತಿ

ವಾಲ್ಮೀಕಿ ನಗರ ನೆಮ್ಮದಿಯಾಗಿತ್ತು.

ಶ್ರೀರಾಮನವಮಿ ಬಂದಿತು.

ಹಬ್ಬದ ಆಚರಣೆಗೆ ಮಾರಿಯಮ್ಮ ಗುಡಿ ಸಿದ್ಧವಾಗಿತ್ತು.

ಶುಚಿರ್ಭೂತರಾದ ಭಕ್ತರು ಗುಡಿಗೆ ಬಂದರು.

ಅಲ್ಲಿ ನೀಡುತ್ತಿದ್ದ ಕೋಸಂಬರಿ ಕೇವಲ ಕೋಸಂಬರಿ ಅಲ್ಲ. ಪಾನಕ, ಮಜ್ಜಿಗೆ ಕೇವಲ ಅವೇ ಅಲ್ಲ. ಶ್ರೀರಾಮಚಂದ್ರನ ವರ ಪ್ರಸಾದ!

ಕೋಸಂಬರಿ ಸ್ವೀಕರಿಸಿದರು. ಪಾನಕ, ಮಜ್ಜಿಗೆ ಸೇವಿಸಿದರು. ಸಾರ್ಥಕತೆ ಮೆರೆದರು! ಮನೆಗೆ ತೆರಳಬೇಕು, ಆದರೆ ಆಗುತ್ತಿಲ್ಲ.

ಗುಡಿಯಿಂದ ಆಸ್ಪತ್ರೆಗೆ ಅವರ ಪಯಣ!

ಎಲ್ಲರಿಗೂ ವಾಂತಿ ಬೇಧಿ!

ಒಂದು ಮಗು ಅಸು ನೀಗಿತ್ತು!

ಎಲ್ಲವೂ ಕೋಸಂಬರಿ, ಪಾನಕ, ಮಜ್ಜಿಗೆ ಮಹಿಮೆ!

ವಿಷಯ ತಿಳಿದು ಮರುಗಿತು ಶಾಸಕ ಜಮೀರ್ ಅಹಮದ್ ಖಾನ್ ಅವರ ಜೀವ. ನೇರವಾಗಿ ಆಸ್ಪತ್ರೆಗೆ ಹೋದರು. ನೊಂದವರಿಗೆ ಸಾಂತ್ವನ ಹೇಳಿದರು.

ಅಸುನೀಗಿದ ಮಗುವಿನ ಪೋಷಕರಿಗೆ ಇಷ್ಟು ಸಾಕೆ?

ಜಮೀರ್ ಸಾಹೇಬರು ಮಂತ್ರಿಯಾಗಿದ್ದವರು. ಜನಪ್ರಿಯ ಸರ್ಕಾರಗಳ ನೀತಿ ಅರೆದು ಕುಡಿದಿದ್ದವರು.

ಏನು ನೀತಿ ಅದು?

ಯಾವುದೇ ದುರಂತ ಸಂಭವಿಸಲಿ. ಬದುಕುಳಿದವರಿಗೆ ಪರಿಹಾರ!

ಸತ್ತವರಿಗೆ?

ಸತ್ತವನು ಸತ್ತ. ಅವನ ಹತ್ತಿರದ ಸಂಬಂಧಿಕರಿಗೆ ಪರಿಹಾರ!

ದುರಂತಕ್ಕೆ ಹೊಣೆಗಾರಿಕೆ ಬೇಡವೆ?

ಬೇಕು ಬೇಕು. ಅದನ್ನು ನಿರ್ಧರಿಸಲು ಸಮಿತಿ ನೇಮಕ!

ಜಮೀರ್ ಅಹಮದ್ ಅವರೂ ಅದನ್ನೇ ಮಾಡಿದರು. ಸತ್ತ ಮಗುವಿನ ಪೋಷಕರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ನೀಡಿದರು!

ಹಣ ಕೊಟ್ಟದ್ದು ನಿಜ. ಪ್ರಚಾರ ಬೇಡವೆ?

ಬಲಗೈ ಮಾಡಿದ ದಾನ ಎಡಗೈಗೂ ತಿಳಿಯಬಾರದು ಎಂಬುದು ಆ ಕಾಲ. ಅವರಿಗೆ ಎಲ್ಲವೂ ಗೋಪ್ಯವಾಗಿರಬೇಕು. ಈಗ ಹಾಗಿಲ್ಲ, ಸರ್ವವೂ ಪಾರದರ್ಶಕವಾಗಿರಬೇಕು. ಕೊಟ್ಟದ್ದು ಜನರಿಗೆ ತಿಳಿಯಬೇಕು. ಆಗಲೇ ಅದರ ಸಾರ್ಥಕತೆ!

ಪ್ರಚಾರ ಮಾಡಲು ವಿಡಿಯೋಗ್ರಾಫರ್‌ಗಳೇ ಇರಲಿಲ್ಲ.

ಅವರಿಗೆ ತಿಳಿಸಿರಲಿಲ್ಲ ಅಂತ ಅಲ್ಲ, ಬರುವುದು ತಡವಾಗಿದೆ ಅಷ್ಟೆ.


ನಿಧಾನಸ್ಥರು ಜಮೀರ್ ಸಾಹೇಬರು. ಅವರು ಬರುವವರೆವಿಗೂ ಕಾಯ್ದು ಕುಳಿತರು.

ಅವರೇನೋ ಬಂದರು. ಆದರೆ ಹಣವನ್ನು ಆಗಲೇ ಪರಭಾರೆ ಮಾಡಿ ಆಗಿತ್ತು!

ಜಮೀರ್ ಸಾಹೇಬರು ಸಂಪನ್ಮೂಲ ವ್ಯಕ್ತಿ. ಕೊಟ್ಟಿದ್ದ ಹಣ ಹಿಂಪಡೆದರು. ಹಣ ನೀಡುವ ಕ್ರಿಯೆ ಪುನರ್ ಸೃಷ್ಟಿಯಾಯಿತು.

ಟಿವಿಗಳಲ್ಲಿ ಪತ್ರಿಕೆಗಳಲ್ಲಿ ಮಿಂಚಿದರು ಸಾಹೇಬರು!

ಇಲ್ಲಿಯವರೆವಿಗೆ ಎಲ್ಲವೂ ತೃಪ್ತಿದಾಯಕವಾಗಿತ್ತು. ನಂತರ ಏನಾಯಿತು ಅಂದರೆ... ಚುನಾವಣಾ ನೀತಿಸಂಹಿತೆ ಜಾರಿಯಲ್ಲಿ ಇರುವಾಗ ಹೀಗೆ ಹಣ ನೀಡುವುದು ಅಪರಾಧ ಅಂತೆ! ಚುನಾವಣಾ ಆಯುಕ್ತರು ಸಾಹೇಬರ ಮೇಲೆ



ಕೇಸು ಜಡಿದಿದ್ದಾರಂತೆ! 'ಅರೆ ಅದು ನಮ್ಮ ಸ್ವಂತದ್ದು ದುಡ್ಡು, ನಮ್ಮ ಕೊಟ್ಟಿದೆ' ಅಂತ ಜಮೀರ್ ಸಾಹೇಬರು ಬೊಂಬ್ಡ ಬಜಾಯಿಸುತ್ತಿದ್ದಾರಂತೆ!

ಹಣಾತ್ಮ ಸಭೆ

ಅರವತ್ತರ ದಶಕದ ಮಾತು. ನಮ್ಮಲ್ಲಿ ಒಬ್ಬರು ಆಗರ್ಭ ಶ್ರೀಮಂತರಿದ್ದರು. ಬಸ್ಸು ಸಾಹುಕಾರರು ಎಂದೇ ಹೆಸರುವಾಸಿಯಾಗಿದ್ದರು. ಅವರನ್ನು ರಾಜಕೀಯ ಸೆಳೆಯಿತು. ಆಗ ಕಾಂಗ್ರೆಸ್ ಪಕ್ಷ ಎಂದರೆ ಸ್ವರಾಜ್ಯ ತಂದವರು ಎಂದೇ ಜನರು ನಂಬಿದ್ದರು. ಆ ಪಕ್ಷದ ಟಿಕೇಟು ಸಿಕ್ಕಿದರೆ ಶಾಸಕರಾದರು ಎಂದೇ ಅರ್ಥ. ನಮ್ಮ ಸಾಹುಕಾರರು ವಿರೋಧ ಪಕ್ಷದಲ್ಲಿದ್ದರು. ಚುನಾವಣೆಗೆ ನಿಂತರು, ಸೋತರು. ಸೋಲಾಯಿತೆಂದು ಜನಸಂಪರ್ಕ ನಿಲ್ಲಿಸಲಿಲ್ಲ. ಒಳ್ಳೆಯದಕ್ಕೆ ಕೆಟ್ಟದ್ದಕ್ಕೆ ಎಲ್ಲದಕ್ಕೂ ಜನರೊಡನೆ ಬೆರೆತರು. ಜನಸೇವೆ ಹೆಚ್ಚಿದಂತೆ ಆಸ್ತಿ ಕರಗುತ್ತಾ ಬಂತು. ಮತ್ತೆ ಚುನಾವಣೆಗೆ ನಿಂತರು. ಅವರ ವಿರೋಧಿಗಳು ಬಹಿರಂಗ ಸಭೆಗಳಲ್ಲಿ 'ಅಪ್ಪ ಕೊಟ್ಟ ಆಸ್ತಿಯನ್ನೇ ನಿಭಾಯಿಸಲಾರದೆ ಕಳ್ಕತ್ತಾ ಕುಂತವ್ನೆ. ಇಂತೋನ ಕೈಗೆ ದೇಶ ಕೊಟ್ಟರೆ ಅದ್ನೂ ಮಾರಾಕ್ತಾನೆ' ಅಂತಿದ್ದರು! ಸಭಿಕರಲ್ಲಿ ಕೆಲವರು ಈ ಮಾತನ್ನು ಚಪ್ಪರಿಸಿಕೊಂಡು ಮಜ ತೆಗೆದುಕೊಳ್ಳುತ್ತಿದ್ದರು. ಅಂತೂ ಕೊನೆಗೂ ಶಾಸಕರಾದರು. ಒಂದಲ್ಲ ಎರಡು ಸಲ... ಅವರು ಸಾಯುವ ವೇಳೆಗೆ ಮೈತುಂಬ ಸಾಲ ಮೆತ್ತಿಕೊಂಡಿತ್ತು. ಮನೆ ದುಡ್ಡು ಸುರ್ದು ಜನಸೇವೆ ಮಾಡಿದ ಮುತ್ಯಾಳರು ಆಗ ಮಾತ್ರ ಇದ್ದರು ಅಂತಿಲ್ಲ, ಈಗಲೂ ಇದ್ದಾರೆ. ಬರಾಕ್ ಒಬಾಮಾ ಇದಾರಲ್ಲ, ಅದೇ ಅಮೆರಿಕಾದ ಅಧ 2008ರಲ್ಲಿ ಪ್ರಥಮ ಬಾರಿಗೆ ಅಧ್ಯಕ್ಷರಾದರು. 2013ರಲ್ಲಿ ಪುನರಾಯ್ಕೆಯಾದರು. ಈ ಅವಧಿ ಅವರ ಆಸ್ತಿ ಮೊದಲಿಗಿಂತ ಕಡಿಮೆಯಾಗಿದೆಯಂತೆ!

ಜನಸೇವೆ ಮಾಡ್ತೀವಿ ಅಂತ ಹೋಗಿ ಇದ್ದಬದ್ದ ಆಸ್ತಿನೆಲ್ಲ ಬರ್ಬಾದು ಮಾಡಿಕೊಂಡಿರೋ ಇಂತಹವರೆಲ್ಲ ನಮ್ಮ ನಾಯಕರಿಂದ ಕಲೀಬೇಕು. ಏನು ಜಾಣರು ಅಂತೀರಿ ನಮ್ಮೋರು. ಇತ್ತೀಚೆಗೆ ಆಸ್ತಿ ಘೋಷಣೆ ಮಾಡಿಕೊಂಡಿದಾರಲ್ಲ ಅದನ್ನ ನೋಡಿದರೇ ಸಾಕು. ಇದುವರೆವಿಗೂ ಜನಸೇವೆ ಮಾಡಿದಾರಲ್ಲ ಅವರಲ್ಲಿ ಔಷಧಿಗೆ ಅಂತ ತಡಕಿದರೂ ಆಸ್ತಿ ಕಡಿಮೆ ಮಾಡಿಕೊಂಡಿರೋರು ಒಬ್ಬರೂ ಸಿಗುವುದಿಲ್ಲ. ಎಲ್ಲ ಅದೆಷ್ಟೋ ಪಟ್ಟು ಹೆಚ್ಚು ಆಸ್ತಿ ಮಾಡವ್ರಂತೆ. ಜಾಣತನ ಅಂದ್ರೆ ಹಿಂಗಿರಬೇಕು! ಜನಸೇವೆ ಮಾಡಿದೋರು ಮಾತ್ರ ಹಿಂಗೆ ಬುದ್ಧಿವಂತರಾಗವ್ರೆ ಅಂತ ಅಲ್ಲ. ಜನಸೇವೆ ಮಾಡೋಕೆ ರೆಡಿಯಾಗಿರೋವ್ರೂ ಅವರನ್ನ ಮೀರಿಸುತ್ತಾರಂತೆ. ಅದು ಯಾರೋ ಅಡಿಗೆಯವನೂ ಕೋಟ್ಯಾಧೀಶನಾಗಿ ಚುನಾವಣೆಗೆ ನಿಂತವ್ನೆ ಅಂತಿದ್ದರು. ಮದುವೆ, ತಿಥಿ ಅಂತ ಯಾರಾದ್ರೂ ಅವನತ್ರ ಹೋದರೆ ಸಾಕು. 'ತಗಳಿ' ಅಂತ ಧಾರಾಳವಾಗಿ ದುಡ್ಡು ಹರಿಸುತ್ತಾನಂತೆ. ದೇವಸ್ಥಾನ ಕಟ್ಟಿಸಬೇಕು ಅಂದ್ರೆ ಕೊಡುಗೈ ದಾನಿ ಅಂತೆ. ಅಂತೂ ಇವನ್ನ ಆಧುನಿಕ ದಾನಶೂರ ಕರ್ಣ ಅಂದ್ರೂ ತಪ್ಪಿಲ್ಲವಂತೆ. ಇದನ್ನೆಲ್ಲ ಮಾಡ್ತಿರೋದು ಆಳವಾದ ಕಾಳಜಿಯಿಂದ ಅಲ್ಲ, ಚುನಾವಣೆಗೋಸ್ಕರ ಅನ್ನುವವರೂ ಇದ್ದಾರೆ. ಕಾರಣ ಏನೇ ಇರಬಹುದು. ಹಣ ಹರಿಸುತ್ತಿರೋದು ನಿಜ ತಾನೆ. ಬೆಳಕಾದರೆ ಇಂತೋರ್ನ 'ಚುನಾವಣಾ ದಾನಶೂರ ಕರ್ಣ' ಎನ್ನೋಣವಂತೆ. ಆಗಬಹುದಾ?

ಇಂತಹ ಜಾಣರೇ ತುಂಬಲಿರುವ- ಮುಂದಿನ ವಿಧಾನಸಭೆಗೆ 'ಹಣಾತ್ಮ ಸಭೆ' ಎಂದು ನಾಮಕರಣ ಮಾಡಬಹುದಲ್ಲವಾ...!

ದೇವರೂ ಬೇಸತ್ತಿರಬೇಕು!

ಚುನಾವಣೆ ಬರುತ್ತೆ. ಪಕ್ಷಗಳ ಟಿಕೆಟುಗಳಿಗೆ ಹೋರಾಟಾನೆ ನಡೆಯುತ್ತೆ. ಟಿಕೆಟು ಹಂಚುವವರಿಗೆ ಶಾನೆ ಕಷ್ಟದ ಕಾಲ ಅಂದರೆ ಇದು. ನಿಜ. ಒಂದೊಂದು ಕ್ಷೇತ್ರದಲ್ಲೂ ನಾಲ್ಕು ಐದು ಜನರಿಗೆ 'ಜನ ಕಟ್ಟುವ ಕೆಲಸ ಮಾಡು. ನೀನೇ ಪಕ್ಷದ ಅಭ್ಯರ್ಥಿ' ಅಂತ ಭರವಸೆ ನೀಡಿರುತ್ತಾರೆ. ಪಕ್ಷ ಅಧಿಕಾರಕ್ಕೆ ಬರಬೇಕಾದರೆ ಹಿಂಗೆಲ್ಲ ಮಾಡಲೇಬೇಕಾಗುತ್ತೆ ಅಂತ ಹಿಂಗಂದಿರ್ತಾರೆ. ಅದನ್ನೇ ಪಟ್ಟಾಗಿ ಹಿಡಿದುಕೊಂಡು 'ನನಗೆ ಟಿಕಿಟು ಕೊಡಿ', 'ನನಗೆ ಬಿ. ಫಾರಂ ಕೊಡಿ' ಅಂತ ಪ್ರಾಣ ತಿನ್ತಾವೆ. 'ನಿನಗೆ ಕನ ಹೋಗೊ', 'ಅವರಿಗೊಂದು ಮಾತು ಹೇಳಿಸ್ಬುಡು', 'ಶಾಸ್ತ್ರ ಕೇಳಿದೀನಿ... ನಿನ್ನ ಹೆಸರು ಬಲ ಹಸಂದಾಗದೆ. ನಿನಗೇ ಟಿಕಿಟು' ಅಂತೆಲ್ಲ ತಲೆ ಸವರಬೇಕಾಗುತ್ತೆ. ಆದ್ರೆ ಬಿ.ಫಾರಂ ಕೊಡೋಕಾಗೋಲ್ಲ. ತತ್ವ ಸಿದ್ಧಾಂತ ಬೇಕು ನಿಜ. ಅದಕ್ಕಿಂತಲೂ ಗೆಲುವು ಮುಖ್ಯ. ಇತರೆ ಪಕ್ಷಗಳು ತಿರಸ್ಕರಿಸಿದವರ ತೂಕ ನೋಡಬೇಕಾಗುತ್ತೆ. ವಜನ್ ಜೋರಾಗೇ ಅದೆ ಅಂದ್ರೆ ಹಾರಿಸಿಕೊಂಡು ಬರಬೇಕಾಗುತ್ತೆ. ಇದನ್ನೆಲ್ಲ ಯಾರೂ ಅರ್ಥ ಮಾಡಿಕೊಳ್ಳುವುದೇ ಇಲ್ಲ. ಇದೆಲ್ಲ ಮುಗಿದ ಮೇಲೆ ಯಾರಿಗೋ ಒಬ್ಬರಿಗೆ ಬಿ.ಫಾರಂ ನೀಡಲಾಗುತ್ತೆ. ದಕ್ಕಿಸಿಕೊಂಡವನು 'ಪಕ್ಷದ ನಿಷ್ಠೆಗೆ', 'ಜನಪ್ರಿಯತೆಗೆ' ಸಂದ ಪುರಸ್ಕಾರ ಅಂತ ಪುಂಗಿ ಊದುತ್ತಾನೆ. ದೊರೆಯದವನು 'ಟಿಕಿಟು ಮಾರಾಟ ಆಗಿದೆ' ಅಂತ ಹುಯಿಲು ಎಬ್ಬಿಸುತ್ತಾನೆ. ಹೋದಹೋದ ಕಡೆ ಎಲ್ಲ ಮಾರಾಟ ಮಾಡವ್ರೆ ಅಂದೋರ 'ಏನ್ರಿ ಹಿಂಗಂತಲ್ಲ!' ಅಂತ ಕೇಳ್ತಾರೆ. ಪಕ್ಷ ಕಟ್ಟೋದು, ನಡೆಸೋದು ಅಂದ್ರೆ ಪುಗಸಟ್ಟೆ ಪುನುಗಲ್ಲ. ಹಿಂಗೂ ಮಾಡಬೇಕಾಯ್ತದೆ. ಆದ್ರೆ ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳುವಂತಿಲ್ಲ. ಆಗ ಏನು ಮಾಡಬೇಕಾಗುತ್ತೆ? 'ದುಡ್ಡು ತೆಗೊಂಡವ್ರೆ ಅನ್ನೋರು ದೇವರ ಮೇಲೆ ಆಣೆ ಇಡಲಿ' ಅಂತ ದೇವರ ನ್ಯಾಯ ಪಂಚಾಯ್ತಿಗೆ ಕರೆಯಬೇಕಾಗುತ್ತೆ!

ದೇವರಿಗೂ ರೋಸೋಗಿರಬೇಕು!

ಶೋಭಕ್ಕ ವಾರ್ತೆ!

ಸುಳ್ಳು ಆರೋಪ ಮಾಡಿ ಜೈಲಿಗೆ ಕಳಿಸಿದರು, ಬೆನ್ನಿಗೆ ಚೂರಿ ಹಾಕಿದರು ಅಂತೆಲ್ಲ ಯಡ್ಯೂರಪ್ನೋರು ಬಡಕಲು ಗ್ರಾಮಾಫೋನ್ ಪ್ಲೇಟಿನಂತೆ ಗೋಳಾಡುತ್ತಿದ್ದರಲ್ಲಾ, ಈಗ ನೋಡಿದರೆ ಅದು ಹಂಗಲ್ಲವಂತೆ. ತಿಂದದ್ದು ಸಾಲದು ಅಂತ ಅಳತೆ ಮೀರಿ ಕಬಳಿಸೋಕೆ ಹೋಗಿ ತಗುಲಾಕಿಕೊಂಡರಂತೆ. ಅದು ಅವರ ಸ್ವಯಂಕೃತಾಪರಾಧ ಅಂತ ಜಗದೀಶ ಶೆಟ್ಟರು ಹೇಳ್ತಿದಾರೆ. ಅದನ್ನು ಕೇಳಿಸಿಕೊಂಡ ಶೋಭಕ್ಕಾರು ಕೆಂಡಾಮಂಡಲ ಆದರಂತೆ. ಶೆಟ್ಟರನ್ನ ಮುಖ್ಯಮಂತ್ರಿಯ ಮಾಡಿದ್ದೇ ಯಡ್ಯೂರಪ್ನೋರು. ಅಂತೋರ ಬಗ್ಗೆ ಹಿಂಗೆಲ್ಲ ಮಾತಾಡಕೂಡದು ಅಂತ ಅದ್ರು ಮಾಡವ್ರಂತೆ. ಅದು ಸರಿ ಅಕ್ಕಾರೆ, ಭ್ರಷ್ಟಾಚಾರದ ಬಗ್ಗೆ ಏನು ಹೇಳ್ತೀರಿ ಅಂತ ಯಾರಾದ್ರೂ ಕೇಳಿದ್ರೆ 'ಭ್ರಷ್ಟಾಚಾರಿ ಅವರೊಬ್ಬರೇ ಅಲ್ಲ ಕಣ್ರೀ' ಅಂತಿದ್ದರೋ ಏನೋ ತಿಳೀದು!

(ಅ)ನೀತಿ: ಅಧಿಕಾರಕ್ಕೆ ತಂದವರ ಭ್ರಷ್ಟಾಚಾರ ಮುಚ್ಚಿಡಬೇಕು!

ಲಲ್ಲೂ ಸೂತ್ರ!

ಭಾಜಪ ಪರಿಶುದ್ಧ ಆತ್ಮಗಳ ಪಕ್ಷ..

ಭ್ರಷ್ಟಾಚಾರಿಗಳಿಲ್ಲವೆ?

ಅವರೆಲ್ಲ ಹೊರಗೆ ಹೋಗಿದ್ದಾರೆ.

'ಭ್ರಷ್ಟಾಚಾರಿಗಳಿಗೆ ಪಕ್ಷದ ಟಿಕೆಟು ಇಲ್ಲ' ಪರಿಶುದ್ಧ ಆತ್ಮಗಳ ಘೋಷಣೆ.

ಸಂಪಂಗಿ ಭಾಜಪ ಶಾಸಕರು. ಲಂಚ ತಿಂದ ಆರೋಪದ ಮೇಲೆ ಜೈಲು ಸೇರಿದರು. ಬೇಲಿನ ಮೇಲೆ ಬಂದಿದ್ದಾರೆ.

ಅವರಿಗೆ ಟಿಕೆಟು ಇಲ್ಲ!

ಭೇಷ್ ಅನ್ನಬೇಕು ಭಾಜಪಗೆ!

ಸ್ವಲ್ಪ ನಿಧಾನಿಸಿ.

ಸಂಪಂಗಿ ತಾಯಿ ಭಾಜಪ ಅಭ್ಯರ್ಥಿ!

ಅಳಿಯ ಅಲ್ಲ ಮಗಳ ಗಂಡ! ●


ಪಾಕಿಸ್ತಾನದ ಥೆರೇಸಾ


ಬಾಂಗ್ಲಾ ದೇಶದಲ್ಲಿ ಗ್ರಾಮೀಣ ಬ್ಯಾಂಕ್ ಆರಂಭಿಸಿ ಲಕ್ಷಾಂತರ ಹೆಣ್ಣುಮಕ್ಕಳಿಗೆ ಆತ ನೆಮ್ಮದಿ ತಂದ. ಹೆಣ್ಣುಮಕ್ಕಳಿಗೆ ಆರ್ಥಿಕ ಸ್ವಾತಂತ್ರ್ಯ



ಮಗುವನ್ನು ಸಾಕುವ ಅವಕಾಶ, ಗಂಡನಿಗೆ ಒಪ್ಪತ್ತಾದರೂ ಉಣ್ಣಿಸುವ ಸುಖ ಈ ಬ್ಯಾಂಕ್‌ನಿಂದ ದೊರೆಯಿತು. ಅಂಥದೇ ಇನ್ನೊಂದು ಕತೆ ಪಾಕಿಸ್ತಾನದಿಂದ ಬಂದಿದೆ. ಆತನ ಹೆಸರು ಅಬ್ದುಲ್ ಸತ್ತಾರ್ ಏಧಿ. ಈತನನ್ನು ಪಾಕಿಸ್ತಾನದ 'ಫಾದರ್ ಥೆರೇಸಾ' ಎಂದು ಕರೆಯುವವರುಂಟು. ಅಸಹಾಯಕರಿಗೆ ನೆರವಾಗುವ, ಗಾಯಗೊಂಡವರಿಗೆ ಔಷಧಿ ನೀಡುವ, ಪಾಕಿಸ್ತಾನದ ಹಿಂಸೆ ಮತ್ತು ಅನ್ಯಾಯದ ಬದುಕಿನಲ್ಲಿ ಜನಕ್ಕೆ ಪ್ರೀತಿಯನ್ನು ಒದಗಿಸುವ ಮನುಷ್ಯ ಈತ. ಮದರ್ ಥೆರೇಸಾಳಂತೆ ಪ್ರಚಾರಕ್ಕಾಗಿ ಕಾತರಿಸುವ ವ್ಯಕ್ತಿಯಲ್ಲ; ವಿವಾಹಿತನಾದ ಏಧಿ ಎಲ್ಲರ ಅಣ್ಣ ಮತ್ತು ತಂದೆ. ಆತನ ಪ್ರೀತಿ ಮತ್ತು ಔದಾರ್ಯದಲ್ಲಿ ಜನಕ್ಕೆ ಎಷ್ಟು ನಂಬಿಕೆಯೆಂದರೆ ಪಾಕಿಸ್ತಾನದ ಉದ್ದಗಲಕ್ಕೆ ಜನ ಆತನಿಗೆ ವರ್ಷಕ್ಕೆ ಕೋಟ್ಯಂತರ ಹಣ ನೀಡಿ ಕೃತಕೃತ್ಯಭಾವನೆ ಪಡೆಯುತ್ತಾರೆ. ಆತ ಒಂದು ಪೈಸೆಯನ್ನೂ ಪೋಲು ಮಾಡುವುದಿಲ್ಲ; ಸ್ವಾರ್ಥಕ್ಕಾಗಿ ಬಳಸುವುದಿಲ್ಲ, ಎಲ್ಲೆಲ್ಲಿ ಜನ ರೋಗ, ಹಿಂಸೆ, ನೋವು, ಅನ್ಯಾಯದಿಂದ ಬಳಲುತ್ತಿದ್ದಾರೋ ಅಲ್ಲಲ್ಲಿ ಏಧಿ ನಿಂತು ವೈದ್ಯ, ವಕೀಲ, ತಾಯಿ ಎಲ್ಲವೂ ಆಗಿ ನೆರವಾಗುತ್ತಾನೆ. ಆತನ ಸಜ್ಜನಿಕೆ, ಪ್ರೇಮ ಮತ್ತು ಜನಸಂಪರ್ಕ ನೋಡಿ ಅಸೂಯೆ ಪಡುವ ಧಾರ್ಮಿಕ ಮುಲ್ಲಾಗಳು, ರಾಜಕೀಯದ ನೀಚರು ಅವನನ್ನು ಕೊಂದುಹಾಕಲು ಯತ್ನಿಸಿದ್ದಾರೆ. ಆದರೆ ಏಧಿಯನ್ನು ಕೊಲ್ಲುವುದು ಕಷ್ಟ ಎಂದು ಅವರಿಗೆ ಗೊತ್ತಿದೆ. ಅರವತ್ತೊಂಭತ್ತು ವರ್ಷದ ಏಧಿ 'ನನ್ನ ಬದುಕು ಪೂರ್ಣವಾಗಿದೆ, ನಾನು ಸಾವಿಗೆ ಹೆದರಬೇಕಾದ್ದಿಲ್ಲ' ಎಂದು ಯಾವುದೇ ರಕ್ಷಣೆ ಇಲ್ಲದೆ ಜನರ ಹತ್ತಿರ ಇರುತ್ತಾನೆ. ಗೂಂಡಾಗಳು, ಕೊಲೆಗಡುಕರು ಕೂಡ ಏಧಿಯನ್ನು ರಕ್ಷಿಸಿದ ಸಂದರ್ಭಗಳಿವೆ. ಒಂದು ಸಲ ಸಶಸ್ತ್ರ ರೌಡಿಯೊಬ್ಬ ಏಧಿಯ ಮೇಲೆ ಬಿದ್ದು ಅವನನ್ನು ಗುಂಡಿನಿಂದ ರಕ್ಷಿಸಿ ಅಸುನೀಗಿದ. 'ಇದು ದೇವರ ಪವಾಡ' ಎಂದು ಸರಳವಾಗಿ ಹೇಳಿದ ಏಧಿ ಯಾವ ಪ್ರಚಾರವನ್ನೂ ಬಯಸಲಿಲ್ಲ.

ಅಹಂಕಾರ, ವಿಮರ್ಶೆ






ತಮ್ಮ ಪಾಂಡಿತ್ಯದ ಅಹಂಕಾರದಿಂದಲೇ ತುಂಬಿಹೋಗಿರುವ ಜನಕ್ಕೆ ಕಣ್ಣೆದುರಿನ ಸರಳ ಸಂಗತಿಗಳೂ ಕಾಣಿಸುವುದಿಲ್ಲ, ತಾವು ಸ್ವಯಂರೂಪಿತ ಸಂಗೀತಜ್ಞ, ರಸಿಕರೆಂದು ತಿಳಿದಿದ್ದ ಡಿ.ವಿ. ಗುಂಡಪ್ಪನವರು ಅನೇಕ ರೀತಿಯಲ್ಲಿ ವಿಶಿಷ್ಟ ವ್ಯಕ್ತಿಯಾಗಿದ್ದುದು ನಿಜ. ಅವರು ರಾಜಕಾರಣಿ; ಆದರೆ ಅದು ಗೋಪಾಲಕೃಷ್ಣ ಗೋಖಲೆಯವರ 'ಮಾಡರೇಟ್ ರಾಜಕೀಯ'ಕ್ಕೇ ಸೀಮಿತವಾಯಿತು; ಅವರು ಕವಿ, ಆದರೆ ಅವರ ಕವಿತ್ವ ಸರ್ವಜ್ಞನ ಹೇಳಿಕೆಗಳ ಮಟ್ಟದಲ್ಲೇ ಸ್ಥಗಿತಗೊಂಡಿತು. ಅವರು ಬುದ್ಧಿಜೀವಿ; ಆದರೆ ಆ ಬೌದ್ಧಿಕತೆ ಸಾಮಾಜಿಕವಾಗಿ ಸ್ವೀಕೃತವಾದ ಮೌಲ್ಯವನ್ನು ಮೀರಿ ಬೆಳೆಯಲಿಲ್ಲ, ಅದೆಲ್ಲ ಇರಲಿ, ಅವರು ಅನೇಕ ಸಂದರ್ಭಗಳಲ್ಲಿ ತ್ಯಾಗರಾಜರ ಕೀರ್ತನೆಗಳನ್ನು ಕೇಳಿ ಆತನ ಹೇಳಿಕೆಗಳಿಂದ ಸ್ಫೂರ್ತಿ ಪಡೆಯುತ್ತಿದ್ದರು. ಅವರ ಪ್ರಕಾರ ಆತನ ಮಾತು ಮತ್ತು ಸಂಗೀತ ಸರ್ವಶ್ರೇಷ್ಠ.

ಆದರೆ ರಾಳ್ಳಪಳ್ಳಿ ಅನಂತಕೃಷ್ಣ ಶರ್ಮ ಎಂಬ ವಿದ್ವಾಂಸರು ತ್ಯಾಗರಾಜರ ರಚನೆಗಳ ಭಾಷೆ, ಶೈಲಿ ಅಪಕ್ವವಾದವು ಎಂದು ಉದಾಹರಣೆಗಳೊಂದಿಗೆ ವಿವರಿಸಿದರು. ಇದು ಪಾಂಡಿತ್ಯದಲ್ಲಿ ಮತ್ತು ಗುಂಡಪ್ಪನವರ ಆರಾಧನೆಯಲ್ಲಿ ಮುಳುಗಿಹೋದವರ ಗಮನಕ್ಕೆ ಬರಲಿಲ್ಲ, ಹಾಗೆಯೇ ಅವರ ಜ್ಞಾಪಕ ಚಿತ್ರಗಳ ಏಕಮುಖತೆ ಮತ್ತು ವ್ಯಕ್ತಿಗಳನ್ನು ಪೂರ್ಣವಾಗಿ ಗ್ರಹಿಸಲಾರದ ಅಸೂಕ್ಷ್ಮತೆ ಅವರ ಅಭಿಮಾನಿಗಳ ಗಮನಕ್ಕೆ ಬರಲಿಲ್ಲ.

ಇದನ್ನೆಲ್ಲ ನಾನು ಯಾರನ್ನೂ ಗೇಲಿ ಮಾಡಲು ಹೇಳುತ್ತಿಲ್ಲ. **Self-obsessed** ಆದ ಜನರು ಹೇಗೆ ತಮ್ಮ ಭಟ್ಟಂಗಿತನದ ಮೂಲಕ ವಿಮರ್ಶಾತ್ಮಕ ಅಭಿರುಚಿಯನ್ನೇ ಅರಿಯಲಾರದವರಾಗುತ್ತಾರೆ ಎಂದು ಮಾತ್ರ ಸೂಚಿಸುತ್ತಿದ್ದೇನೆ. ಗುಂಡಪ್ಪನವರು ರಾಜಕಾರಣಿಯಾಗಿದ್ದಾಗ, ತಮ್ಮ ಕೃತಿಗಳನ್ನು ರಚಿಸುತ್ತಿದ್ದಾಗ ಇಲ್ಲಿ ವಿಮರ್ಶೆ ಇದ್ದಿದ್ದರೆ ಇನ್ನೂ ಚೆನ್ನಾಗಿ ಗ್ರಹಿಸುತ್ತಿದ್ದರು, ಬರೆಯುತ್ತಿದ್ದರು- ಎಂದು ಮಾತ್ರ ಸೂಚಿಸುತ್ತಿದ್ದೇನೆ.

● ಮಾರ್ಚ್ 18, 1998




ಉಪ್ಪಿ-ಬ್ರಹ್ಮ-ಬೃಹಸ್ಪತಿ

ಈ ಹಿಂದೆ ಉಪೇಂದ್ರ ಅನೇಕ ನಿರ್ದೇಶಕರ ಪಾಲಿಗೆ ಕೈಗೆಟುಕದ ದ್ರಾಕ್ಷಿಯಂತಿದ್ದರು. ಉಪ್ಪಿ ಚಿತ್ರವನ್ನು ನಿರ್ದೇಶಿಸುವುದೆಂದರೆ ಕಷ್ಟದ ಮತ್ತು ಸವಾಲಿನ ಕೆಲಸ ಎಂದೇ ಬಹಳಷ್ಟು ಜನ ಭಾವಿಸಿದ್ದರು. ಆದರೀಗ ಉಪ್ಪಿ ಬದಲಾಗಿದ್ದಾರೋ ಅಥವಾ ಕಾಲವೇ ಅಂತಹದ್ದೋ ಗೊತ್ತಿಲ್ಲ, ಉಪ್ಪಿ ಈಗ ಗಾಂಧಿನಗರದಲ್ಲಿ ...ರಿಗೂ ಸುಲಭವಾಗಿ ಸಿಗುವ ನಾಯಕನಟನಾಗಿ ಕಾಣಿಸುತ್ತಿದ್ದಾರೆ.

ಅದಕ್ಕೆ ಸಾಕ್ಷಿ ಆರ್. ಚಂದ್ರು ನಿರ್ದೇಶಿಸಲಿರುವ 'ನಾನೇ ಬ್ರಹ್ಮ' ಎಂಬ ...ದಲ್ಲಿ ಉಪ್ಪಿ ನಟಿಸಲು ಒಪ್ಪಿಕೊಂಡಿರುವುದು. ಇದರ ಮುಹೂರ್ತ ಬರುವ ...ವಾರ ನಡೆಯಲಿದೆ. ಅಷ್ಟೇ ಅಲ್ಲ, ಇದೀಗ ಬಂದ ಸುದ್ದಿಯ ಪ್ರಕಾರ ...ನಾರಾಯಣ್ ನಿರ್ದೇಶಿಸಲಿರುವ 'ಬೃಹಸ್ಪತಿ' ಎಂಬ ಚಿತ್ರದಲ್ಲೂ ನಟಿಸಲು ...ಪ್ಪಿ ಒಪ್ಪಿದ್ದಾರಂತೆ.

...ನಾರಾಯಣ್ ಈಗಾಗಲೇ ಸಾಲುಸಾಲು ಸೋಲಿನ ಚಿತ್ರಗಳನ್ನು ನೀಡಿದ ...ರ್ದೇಶಕರೆಂಬ ಪಟ್ಟಿಯಲ್ಲಿದ್ದಾರೆ. ಅದೇ ರೀತಿ ಚಂದ್ರು ಪ್ರಚಾರಪ್ರಿಯ ...ರ್ದೇಶಕನಾಗಿ ಮೂಡಿಬಂದಿದ್ದಾರೆಯೇ ಹೊರತು ಅವರಿನ್ನೂ ಅಂತಹ ಸೂಪರ್ ...ಟ್ ಚಿತ್ರವನ್ನು ಕೊಟ್ಟಿಲ್ಲ. ಹಾಗೆಯೇ ಸ್ವತಃ ಉಪೇಂದ್ರ ಕೂಡ ಸೋಲಿನ ...ಸುಳಿಯಲ್ಲಿ ಸಿಲುಕಿ ಹಾಕಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಉಪೇಂದ್ರ ...ದಿಡಿ ಹೊಸ ತಲೆಮಾರಿನ ನಿರ್ದೇಶಕರಾದ ಆರ್.ಚಂದ್ರು ಜೊತೆ ಹಾಗೆಯೇ ... ತಲೆಮಾರಿನ ನಾರಾಯಣ್ ಜೊತೆ ನಟಿಸುತ್ತಿರುವುದು ನಿಜಕ್ಕೂ ಸೋಜಿಗದ ...ಗತಿಯಾಗಿದೆ.

ಹೊಸಬರ ಗೆಲುವು, ...ಬೇಡದ ಅನುಕರಣೆ



...ಇತ್ತೀಚೆಗೆ ಹೊಸಬರೇ ಮಾಡಿದ್ದ 'ಸಿಂಪಲ್ಲಾಗ್ ...ದ್ ಲವ್ ಸ್ಟೋರಿ' ಎಂಬ ಪಡ್ಡೆ ಹುಡುಗರ ... ಸೂಪರ್ ಹಿಟ್ ಆಗಿದೆ. ಸುಮಾರು 7-8 ...ಗಳ ಹಿಂದೆ 'ಮುಂಗಾರು ಮಳೆ' ಎಂಬ ...ಸಬರೇ ಇದ್ದ ಚಿತ್ರ ಕೂಡ ಇದೇ ರೀತಿ ...ಕ್ಸ್ ಆಫೀಸ್‌ನಲ್ಲಿ ಭರ್ಜರಿಯಾದ ಜಯಭೇರಿಯನ್ನು ಭಾರಿಸಿತ್ತು.

...ಆದರೆ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ'ಗೂ 'ಮುಂಗಾರು ...'ಗೂ ಹೋಲಿಸುವ ಉದ್ದೇಶ ನಮ್ಮದಲ್ಲ. ಆದರೆ ...ಮುಂಗಾರು ಮಳೆ' ಹಿಟ್ ಆದ ನಂತರ ಅದೇ ಮಾದರಿಯ ...ತ್ರಗಳು ಒಂದೇ ಸಮನೆ ಹೀಗೆ ...ಆರಂಭಗೊಳ್ಳಲಾರಂಭಿಸಿದವೋ ಈಗ ಅದೇ ...ಯಲ್ಲಿ 'ಸಿಂಪಲ್ಲಾಗ್...' ಮಾದರಿಯ ...ಗಳು ಆರಂಭಗೊಳ್ಳುತ್ತಿವೆ.

...ದಕ್ಕೆ ಉದಾಹರಣೆ ಮುಂದಿನ ವಾರ ...ಭವಾಗಲಿರುವ 'ಕಿತ್ತು ಹೋದ ಲವ್ ...ರಿ' ಎಂಬ ಚಿತ್ರ. ಈ 'ಕಿತ್ತುಹೋದ...' ...ದಲ್ಲೂ ಕೂಡ ರಾಕೇಶ್ ಅಡಿಗ ಮತ್ತು ...ಲ್ ಪೂವಯ್ಯ ಎಂಬ ಇಬ್ಬರೇ ಇಬ್ಬರು ...ಖ ನಾಯಕಿಯರು ನಟಿಸಲಿದ್ದಾರಂತೆ. ಉತ್ತರ ...ಟಕದ ಶಿರಸಿಯ ಕಾಡುಗಳಲ್ಲಿ ಈ ಚಿತ್ರದ ...ಕರಣ ನಡೆಯಲಿದ್ದು ಇದನ್ನು ಶಿರಸಿಯ ...ತುಂಗ ಜಗ್ಗು ಶಿರಸಿ ಎಂಬುವವರು ...ರ್ದೇಶಿಸಲಿದ್ದಾರೆ.

...ಒಂದು ವೇಳೆ 'ಕಿತ್ತು ಹೋದ ಲವ್ ಸ್ಟೋರಿ' ಬಾಕ್ಸ್ ಆಫೀಸ್‌ನಲ್ಲಿ ಗೆದ್ದರೆ ಮುಂದಿನ ದಿನಗಳಲ್ಲಿ ಇನ್ನು ಎಂತೆಂತಹ ಲವ್ ಸ್ಟೋರಿಗಳು ತೆರೆಗೆ ಬರುತ್ತವೋ ಎಂದು ಊಹಿಸಲು ಸದ್ಯಕ್ಕೆ ಸಾಧ್ಯವಿಲ್ಲ.



ಟ್ರೈನ್ ಹೋದ ಮೇಲೆ....




ಕೋಟಿ ವೀರ ರಾಮು ನಿರ್ಮಾಣದ ಓಂಪ್ರಕಾಶ್ ರಾವ್ ನಿರ್ದೇಶಿಸಿರುವ, ರಾಮು ಅವರ ಪ್ರೀತಿಯ ಮಡದಿ ಮಾಲಾಶ್ರೀ ನಾಯಕಿಯಾಗಿ ನಟಿಸಿರುವ 'ಎಲೆಕ್ಷನ್' ಎಂಬ ಚಿತ್ರ ಮುಂದಿನ ವಾರ ತೆರೆ ಕಾಣಲಿದೆ. ಇದು ಕೋಟಿ ವೀರ ರಾಮು ನಿರ್ಮಾಣ ಸಂಸ್ಥೆಯಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ಮತ್ತು ಕಡಿಮೆ ಬಜೆಟ್‌ನಲ್ಲಿ ನಿರ್ಮಾಣವಾಗಿರುವ ಚಿತ್ರ ಎಂದು ಹೇಳಬಹುದು.

ಆದರೆ ಈ ಚಿತ್ರವನ್ನು ಚುನಾವಣೆಯ ಮೊದಲು ಬಿಡುಗಡೆ ಮಾಡಬೇಕೆಂಬುದು, ಆ ಮೂಲಕ ಕರ್ನಾಟಕದ ಮತದಾರರಲ್ಲಿ ಜಾಗೃತಿಯನ್ನು ಮೂಡಿಸಬೇಕೆಂಬುದು ರಾಮು ಅವರ ಉದ್ದೇಶವಾಗಿತ್ತು, ಆದರೀಗ ಮತದಾನದ ಮುನ್ನ ಈ ಚಿತ್ರವನ್ನು ಬಿಡುಗಡೆ ಆಗುತ್ತಿದೆ ಎಂಬ ಸಣ್ಣ ತೃಪ್ತಿಯಷ್ಟೆ ಅವರಿಗೆ ಸಿಗಲಿದೆ. ಯಾಕೆಂದರೆ ಚುನಾವಣೆ ನಡೆಯುವುದು ಮೇ 5 ರಂದು. ಈ 'ಎಲೆಕ್ಷನ್' ಎಂಬ ಚಿತ್ರ ಬಿಡುಗಡೆಯಾಗುತ್ತಿರುವುದು ಮೇ 3 ರಂದು. ಅಂದರೆ ಕೇವಲ 2 ದಿನಗಳಲ್ಲಿ ಈ ಚಿತ್ರವನ್ನು ವೀಕ್ಷಿಸಿ ನಮ್ಮ ಮತದಾರರು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾರೆ ಎಂದು ರಾಮು ಊಹಿಸಿದರೆ ಅವರ ಊಹೆ ತಪ್ಪು.

ವಿಷಯ ಅದಲ್ಲ. ಕನಿಷ್ಠವೆಂದರೂ ಚುನಾವಣೆ ನಡೆಯುವ ಒಂದು ತಿಂಗಳು ಮೊದಲಾದರು ಈ ಚಿತ್ರವನ್ನು ಬಿಡುಗಡೆ ಮಾಡಬೇಕೆಂಬುದು ರಾಮು ಅವರ ಯೋಚನೆಯಾಗಿತ್ತು. ಆದರೆ ವಿಳಂಬ ನೀತಿಗೆ ಹೆಸರಾದ ನಿರ್ದೇಶಕ ಓಂಪ್ರಕಾಶ್ ಇದನ್ನು ನಿಗದಿತ ಸಮಯದಲ್ಲಿ ಸಂಪೂರ್ಣ ಮಾಡಿಕೊಟ್ಟಿಲ್ಲ, ಹೀಗಾಗಿ ಈಗ ರಾಮು ಪಾಲಿಗೆ 'ಎಲೆಕ್ಷನ್' ಎಂಬ ಚಿತ್ರದ ಬಿಡುಗಡೆ ರೈಲು ಹೋದನಂತರ ಟಿಕೆಟ್ ಪಡೆದುಕೊಂಡಂತೆ ಆಗಿದೆ.

ಅನುಕರಣನೀಯ ಕಾರ್ಯ?



ತನ್ನ ಜೊತೆಗಿರುವ ತಂತ್ರಜ್ಞರಿಗಾಗಿ ಚಿತ್ರ ಮಾಡಿಕೊಡುವ ಉದಾತ್ತ ಮನೋಭಾವವನ್ನು ಪ್ರದರ್ಶಿಸಿರುವ ಚಾಲೆಂಜಿಂಗ್ ಸ್ಟಾರ್ ದರ್ಶನ್ ಈಗ 'ಬುಲ್‌ಬುಲ್' ಚಿತ್ರವನ್ನು ಸಂಪೂರ್ಣಗೊಳಿಸಿದ್ದಾರೆ. ಎಲ್ಲರಿಗೂ ಗೊತ್ತಿರುವ ಹಾಗೆ ಛಾಯಾಗ್ರಾಹಕ ಕೃಷ್ಣಕುಮಾರ್, ಗೀತ ರಚನಕಾರ ಕವಿರಾಜ್, ನಿರ್ದೇಶಕ ಎಂ.ಡಿ. ಶ್ರೀಧರ್, ಸಂಗೀತ ನಿರ್ದೇಶಕ ಹರಿಕೃಷ್ಣ ಹಾಗು ದರ್ಶನ್ ಸಹೋದರ ದಿನಕರ್ ಇವರೆಲ್ಲರು ಈ ಚಿತ್ರದ ನಿರ್ಮಾಪಕರಾಗಿದ್ದಾರೆ. ಈ ರೀತಿ ಜನಪ್ರಿಯ ನಟನೊಬ್ಬ ತನ್ನ ಜೊತೆಗೆ ಕೆಲಸ ಮಾಡಿದ ತಂತ್ರಜ್ಞರಿಗಾಗಿ ಸಿನಿಮಾವನ್ನು ಮಾಡಿಕೊಡುವುದು ಹೊಸ ವಿಷಯವೇನೂ ಅಲ್ಲ. ಈ ಹಿಂದೆ ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ತಮ್ಮ ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗ ಇದೇ ರೀತಿಯ ಹಲವರಿಗೆ ಚಿತ್ರ ಮಾಡಿಕೊಟ್ಟಿದ್ದರು. ಆದರೆ ಆಗ ಆ ಚಿತ್ರಗಳು ನಿರ್ಮಾಪಕರಿಗೆ ಆರ್ಥಿಕವಾಗಿ ಅಷ್ಟೇನು ಲಾಭ ತಂದುಕೊಟ್ಟಿರಲಿಲ್ಲ. ಆದರೆ 'ಬುಲ್‌ಬುಲ್' ಚಿತ್ರ ಬಿಡುಗಡೆಗೊಳ್ಳುವ ಮೊದಲೇ ಎಲ್ಲ ಪಾಲುದಾರರಿಗೆ ಲಾಭವನ್ನು ತಂದುಕೊಟ್ಟಿದೆ ಎಂಬುದೇ ಹೆಗ್ಗಳಿಕೆ ವಿಷಯ. ದರ್ಶನ್ ವೃತ್ತಿಜೀವನದ ಆರಂಭದ ದಿನಗಳಿಂದಲೂ ಇವರೆಲ್ಲರು ಅವರಿಗೆ ಸಹಕಾರ ನೀಡಿದ್ದರಿಂದಲೇ ಅವರಿಗಾಗಿ ದರ್ಶನ್ ಈ ರೀತಿ ಸಹಾಯಹಸ್ತ ಚಾಚಿದ್ದಾರೆ ಎನ್ನಲಾಗಿದೆ. ಅದೇನೇ ಇರಲಿ, ತಂತ್ರಜ್ಞರ ಸಹಾಯಕ್ಕಾಗಿ ದರ್ಶನ್ ಮುಂದೆ ಬಂದಿರುವುದು ಸಂತೋಷದ ವಿಷಯ.

ಯಾರು ತಿಳಿಯರು ವಿಜಯಗಳ ಮರ್ಮ

ಗಾಂಧಿನಗರದಲ್ಲಿ ಈಗ ಸ್ಥಾನಪಲ್ಲಟ ಅಥವಾ ವಿವಿಧ ಕ್ಷೇತ್ರಗಳಿಗೆ ಪಕ್ಷಾಂತರ ಜೋರಾಗಿಯೇ ನಡೆಯುತ್ತಿದೆ. ಅಂತಹ ಬದಲಾವಣೆಗಳ ಹಲವು ಸ್ಯಾಂಪಲ್‌ಗಳು ಇಲ್ಲಿವೆ ನೋಡಿ.

ಇಲ್ಲಿಯತನಕ ಸಂಗೀತ ನಿರ್ದೇಶಕರಾಗಿದ್ದ ಹರಿಕೃಷ್ಣ ಇತ್ತೀಚೆಗೆ ಡಿ.ಬಿಟ್ಸ್ ಎಂಬ ಕ್ಯಾಸೆಟ್ ಕಂಪನಿಯನ್ನು ಆರಂಭಿಸಿದ್ದಾರೆ. ಈಗಾಗಲೇ ಅವರು ತಮ್ಮ ಕಂಪನಿಯಿಂದ ಸುಮಾರು 6-7 ಚಿತ್ರಗಳ ಕ್ಯಾಸೆಟ್ ಬಿಡುಗಡೆಯನ್ನು ಮಾಡಿದ್ದಾರೆ. ಆನಂದ್ ಆಡಿಯೋ ಕ್ಯಾಸೆಟ್ ಕಂಪನಿಯ ಮಾಲೀಕರಾದ ಮೋಹನ್ ಅವರು ಹಾಸ್ಯ ನಟ ಶರಣ್ ಅವರನ್ನು ಹಾಕಿಕೊಂಡು 'ವಿಕ್ಟರಿ' ಎಂಬ ಚಿತ್ರದ ನಿರ್ಮಾಣದ ಜವಾಬ್ದಾರಿಯನ್ನು ಹಮ್ಮಿಕೊಂಡಿದ್ದಾರೆ. ಈ ಚಿತ್ರದ ಚಿತ್ರೀಕರಣ ಈಗಾಗಲೇ ಮುಗಿಸಿರುವ ಮೋಹನ್ ಸದ್ಯದಲ್ಲೇ ಅದನ್ನು ಬಿಡುಗಡೆ ಮಾಡಲಿದ್ದಾರೆ.

ಚಾಲೆಂಜಿಂಗ್ ಸ್ಟಾರ್ ದರ್ಶನ್ ತೂಗುದೀಪ ಡಿಸ್ಟ್ರಿಬ್ಯೂಷನ್ ಎಂಬ ಸಂಸ್ಥೆಯನ್ನು ಆರಂಭಿಸಿ ಅದರ ಮುಖಾಂತರ 'ಬುಲ್ ಬುಲ್' ಚಿತ್ರದ ಹಂಚಿಕೆಯ ಕೆಲಸಕ್ಕೆ ಕೈಹಾಕಿದ್ದಾರೆ. ಈ ಹಿಂದೆ ಸಂಗೀತ ನಿರ್ದೇಶಕ ಹಂಸಲೇಖ ಆರಂಭಿಸಿದ್ದ ಕ್ಯಾಸೆಟ್ ಕಂಪನಿ ಅವರಿಗೆ ಲಾಭ ತಂದಿರಲಿಲ್ಲ, ಅದೇರೀತಿ ಝೇಂಕಾರ ಆಡಿಯೋದವರು ನಿರ್ಮಿಸಿದ್ದ ಒಂದೆರಡು ಚಿತ್ರಗಳು ಹಿಟ್ ಆದರೆ ಮತ್ತೆರಡು ಸಿನಿಮಾಗಳು ನೆಲ ಕಚ್ಚಿದ್ದವು. ನಾಯಕ ನಟನೇ ಹಂಚಿಕೆದಾರನಾಗುವುದು ಕೂಡಾ ಹೊಸ ವಿಷಯವೇನಲ್ಲ, ಆದರೂ ಗಾಂಧಿನಗರದಲ್ಲಿ ಈ ರೀತಿಯ ಬದಲಾವಣೆಯನ್ನು ನಿರ್ಮಾಪಕರು ಮತ್ತು ಹಂಚಿಕೆದಾರರು ಅತ್ಯಂತ ಆತಂಕ ಮತ್ತು ಕುತೂಹಲದಿಂದ ನೋಡುತ್ತಿದ್ದಾರೆ ಎಂಬುದು ಮಾತ್ರ ನಿಜ. ಯಾರ್ಯಾರು ಎಲ್ಲೆಲ್ಲಿ ಗೆಲುವು ಸಾಧಿಸಿ ಹೊಸ ಅವತಾರದಲ್ಲಿ ಗಾಂಧಿನಗರದಲ್ಲಿ ವಿಜೃಂಭಿಸುತ್ತಾರೋ ನೋಡಬೇಕು.

ಹೊಸ ಹಾಡು-ಹೊಸ ಪಾತ್ರ!

ಸೂರಿ ನಿರ್ದೇಶನದ 'ಕಡ್ಡಿಪುಡಿ' ಚಿತ್ರ ಬಿಡುಗಡೆಗೆ ರೆಡಿಯಾಗಿದೆ. ಈ ಚಿತ್ರದ ಕೆಲವು ಸ್ಪೆಷಲ್ ಡಿಟೈಲ್ಸ್ ಇಲ್ಲಿದೆ. ಸೂರಿ ಚಿತ್ರ ಅಂದಮೇಲೆ ಅದರಲ್ಲಿ ಯೋಗರಾಜ್ ಭಟ್ ಮತ್ತು ಜಯಂತ್ ಕಾಯ್ಕಿಣಿಯವರ ಸಾಹಿತ್ಯವು ಇದ್ದೇ ಇರುತ್ತದೆ. ಇಲ್ಲಿ ಯೋಗರಾಜ್ ಭಟ್ ಗೀತರಚನೆಯ ಜೊತೆಗೆ ಮೊದಲ ಬಾರಿಗೆ ಹಿನ್ನೆಲೆ ಗಾಯಕರಾಗಿಯೂ ಕಾಣಿಸಿಕೊಂಡಿದ್ದಾರೆ.

ಅದೇರೀತಿ ಈ ಚಿತ್ರದಲ್ಲಿ ಐಂದ್ರಿತಾ ರೈ ಒಂದು ಐಟಂ ಸಾಂಗ್‌ನಲ್ಲಿ ಕಾಣಿಸಿಕೊಂಡಿದ್ದರೂ ಅದಕ್ಕೆ ಶಾಸ್ತ್ರೀಯ ಸಂಗೀತದ ಮಾದರಿಯ ಹಾಡನ್ನು ನೀಡಲಾಗಿದೆ. ಅಂದರೆ ಅಲ್ಲಿ ಐಂದ್ರಿತಾ ರಿದಂ ಸಾಂಗಿಗೆ ಮೈಮಾಟ ಕುಲುಕಿಸುವುದಿಲ್ಲ ಎಂದಾಯಿತು. ನಾಯಕಿ ರಾಧಿಕಾ ಪಂಡಿತ್ ಈ ಚಿತ್ರದಲ್ಲಿ ಟೋಟಲ್ಲಾಗಿ ಡಿಗ್ಲಾಮರ್ಸ್ ಆಗಿ ಕಾಣಿಸಿಕೊಂಡಿದ್ದಾರೆ. ನಾಯಕ ಶಿವರಾಜ್‌ಕುಮಾರ್ ರೌಡಿ ಪಾತ್ರದಲ್ಲಿ ನಟಿಸಿದ್ದರೂ ಚಿತ್ರದಲ್ಲಿ ರೌಡಿಸಂನ ಬರ್ಬರತೆಯನ್ನು ತೋರಿಸಿಲ್ಲವಂತೆ. ಅಂದರೆ ಶಿವರಾಜ್‌ಕುಮಾರ್ ಪಾತ್ರಕ್ಕೆ ಹೊಸ ರೂಪವನ್ನು ಸೂರಿ ಕೊಟ್ಟಿದ್ದಾರಂತೆ.

ಹರಿಕೃಷ್ಣ ಅವರಿಂದ ಹೊಸ ರೀತಿಯ ಸಂಗೀತವನ್ನು ಪಡೆದಿರುವ ನಿರ್ದೇಶಕ ಸೂರಿ 'ಕಡ್ಡಿಪುಡಿ'ಯಲ್ಲಿ ಅನೇಕ ಹೊಸತನಗಳಿಗೆ ಕೈಹಾಕಿದ್ದಾರೆ ಎನ್ನಬಹುದು. ಈ ಹೊಸತನ ಸೂರಿಗೆ ಬ್ರೇಕ್ ನೀಡುತ್ತೊ ಅಥವಾ 'ಕಡ್ಡಿಪುಡಿ' ಚಿತ್ರಕ್ಕೆ ಬಾಕ್ಸ್ ಆಫೀಸ್‌ನಲ್ಲಿ ಗಳಿಕೆ ತಂದುಕೊಡುತ್ತೊ ನೋಡಬೇಕು. ●

...ಈ ಬಾರಿ ಕಾಗೇರಿ ಸೋಲಲೇಬೇಕು

...ರಾಜ್ಯ ಪ್ರೌಢಶಿಕ್ಷಣ ಸಚಿವರಾಗಿದ್ದ ವಿಶ್ವೇಶ್ವರ ಹೆಗಡೆ ...ರಿಯವರು ಮತ್ತೆ ಶಾಸಕರಾಗಲು ಸಿರ್ಸಿ-ಸಿದ್ದಾಪುರ ...ನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಆದರೆ ಕಾಗೇರಿ ...ಬಾರಿ ಸೋಲಲೇಬೇಕು. ಅದಕ್ಕೆ ಹಲವಾರು ...ಣಗಳಿವೆ. ಅವುಗಳಲ್ಲಿ ಹಲವು ಇಲ್ಲಿವೆ:

1) ವಿದ್ಯಾರ್ಥಿಗಳಿಗೆ ಯೂನಿಫಾರ್ಮ್, ಪುಸ್ತಕಗಳನ್ನು ...ಯ ವರ್ಷವೂ ಸಕಾಲದಲ್ಲಿ ಒದಗಿಸಲಾಗಲಿಲ್ಲ. ...ಗಳಲ್ಲಿ ಕೆಲವು ಪುಟಗಳು ಪ್ರಿಂಟೇ ಆಗಿರಲಿಲ್ಲ.

2) ಸಿಸಿಇ ಬಂದರೂ ಶಾಲೆಗಳನ್ನು ಸರಿಯಾಗಿ ...ಗಿಸದೇ, ಒಂದು ವರ್ಷ ಹಾಗೇ ಕಳೆದರು. ಖಾಸಗಿ ...ಗಳು, ಸರಕಾರಿ ಶಾಲೆಗಳೆಂದು ಮಾಡಿ ಶಿಕ್ಷಕರು, ...ಷಕರು, ಪಾಲಕರು, ವಿದ್ಯಾರ್ಥಿಗಳನ್ನು ಗೋಳಿಗೆ ...ಸಿದರು.

3) ಪ್ರಾಥಮಿಕ-ಪ್ರೌಢ ಸರಕಾರಿ ಶಾಲೆಗಳಲ್ಲಿ ಹೆಚ್ಚುವರಿ ... ನಾಟಕದ ಪ್ರದರ್ಶನ. ಸರಕಾರವೇ ನೀಡಿದ ಸ್ಥಳದಲ್ಲಿ ...'ಹೆಚ್ಚುವರಿ' ಎಂದು ಗುರುತಿಸಿ ಶಿಕ್ಷಕರಿಗೆ ತೊಂದರೆ ...ದ್ದಾರೆ. ಅದೇ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ...ಗಳಿಗೆ ಹೊಂದಾಣಿಕೆ ಮಾಡದೇ ಶಿಕ್ಷಕರಿಗೆ ತೊಂದರೆ ...ವುದೇ ಉದ್ದೇಶ.

4) 'ಹೆಚ್ಚುವರಿ'ಗೆ ಗುರುತಿಸುವಾಗ ಪ್ರತಿ ವಿಷಯಕ್ಕೆ (...ವಿಷಯಗಳು, 1 ಕ್ರಾಫ್ಟ್, 1 ಪಿಟಿ) ಒಬ್ಬರಂತೆ ...ವ ಪದ್ಧತಿಯನ್ನು ಮರೆತೇ ಬಿಟ್ಟಿದ್ದರು.

5) ಪ್ರೌಢಶಾಲೆಗಳಿಂದ ಪಿಯು ಕಾಲೇಜುಗಳಿಗೆ ...ಬಡ್ತಿ ನೀಡುವಾಗ, ಅಂತರಿಕ ಸ್ನಾತಕೋತ್ತರ ಪದವಿ ...ರರಿಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕೆಂಬ ಸಾಮಾನ್ಯ ...ವನ್ನು ಪರಿಗಣಿಸಲಿಲ್ಲ, ಕಾರಣ ಜಾತಿವಾದ. ...ತ್ರಿಯ ಉದ್ಯೋಗಿಗಳಿಗೆ ಮತ್ತೆ ಕಾನೂನು ...ವಾಗಿ ಅನುಕೂಲ ಮಾಡಿಕೊಡುವುದು.

6) ರಾಜ್ಯದ ದೊಡ್ಡ ಬ್ಲಾಕ್‌ಗಳಲ್ಲಿ ಒಂದಾಗಿರುವ ಕುಂದಾಪುರದಲ್ಲಿ ಬಿಇಓರನ್ನೇ ಮೂರುವರ್ಷದಿಂದ ತಾಲ್ಲೂಕ್ ಕಾರ್ಯ ನಿರ್ವಹಣಾಧಿಕಾರಿಯಾಗಿ ಪ್ರಭಾರೆ ನೀಡಿದ್ದು ಅವರು ಸಮೃದ್ಧ ಕ್ಷೇತ್ರ ಬಿಟ್ಟು ಬರಲಾಗದೇ ಬಿಇಓ ಕಾರ್ಯ ನಿರ್ಲಕ್ಷಿಸಿದ್ದಾರೆ. ಈ ಕುರಿತು ತಿಳಿಸಿದರೂ ಮಂತ್ರಿಗಳಿಗೆ ಯಾವುದೇ ಪ್ರಜ್ಞೆಯೇ ಇಲ್ಲ!

7) ಇವತ್ತಿಗೂ ಸರಕಾರಿ ಪ್ರೌಢಶಾಲೆಗಳಲ್ಲಿ 8ನೇ ತರಗತಿ ಇರುತ್ತದೆಯೇ? ಅಥವಾ 11ನೇ ತರಗತಿ ಪ್ರಾರಂಭಿಸುವರೇ? ಯಾವುದೇ ಸ್ಪಷ್ಟತೆಯಿಲ್ಲ.

8) ತನ್ನ 'ನಾಜೂಕಯ್ಯ'ತನದಿಂದ ಹೊರಟ್ಟಿಯಂಥ ವರೊಂದಿಗೆ ಪರಸ್ಪರ ಬೆನ್ನು ಚಪ್ಪರಿಸಿಕೊಳ್ಳುವ ಕೆಲಸ ಮಾಡುತ್ತಾ ಶಿಕ್ಷಣ ರಂಗವನ್ನು ಅಧೋಗತಿಗೆ ತಳ್ಳಿದ್ದಾರೆ.

ಇಂತಹ ಉಸರವಳ್ಳಿ ರಾಜಕಾರಣಿ ಜನ ಪ್ರತಿನಿಧಿಯಾಗಬಾರದು.

– ಕೇಶವ ನಾರಾಯಣ ಪೂಜಾರಿ, ಕುಂದಾಪುರ

ಯಾವುದೋ ಉಗ್ರಗಾಮಿ ಬಾಂಬ್ ಸ್ಫೋಟಿಸಿದರೆ ನೂರಾರು ಜನ ಸಾಯುತ್ತಾರೆ; ಆದರೆ ಸಾಮರಸ್ಯ ಕದಡುವ ಅಶಾಂತಿ ಬಾಂಬ್ ಸ್ಫೋಟವಾದರೆ ಲಕ್ಷಾಂತರ ಜನರು ಹೊಡೆದಾಡಿ, ಬಡಿದಾಡಿ ಸಾಯುತ್ತಾರೆ. ಎರಡೂ ಅಪರಾಧಗಳೇ. ಆದರೆ ಎರಡನೆಯದ್ದು ಮಹಾಪರಾಧ. ಉದ್ದೇಶಪೂರ್ವಕವಾಗಿಯೇ ಯಾರೋ ಮಾಡಿದ್ದಾರೆ ಎಂದೆ ಹೇಳುವುದಾದರೆ... ಬಾಂಬ್‌ನಿಂದ ಮತಗಳು ಗಳಿಸಲು ಸಾಧ್ಯವಿಲ್ಲ.

ಇವತ್ತಿಗೂ ರಾಜ್ಯದಲ್ಲಿ ಅದೆಷ್ಟೊ ಮಕ್ಕಳಿಗೆ ಬಟ್ಟೆಯಿಲ್ಲ ... ಶಿಕ್ಷಣವಿಲ್ಲ. ಇಂತಹ ಸಂದರ್ಭದಲ್ಲಿ ಕೇಸರಿಯುತ ಶಿಕ್ಷಣ ಯಾವ ... ಮಗನಿಗೆ ಬೇಕು? ಎಲ್ಲರಿಗೂ ಬೇಕಾದದ್ದು ಶಾಂತಿಯುತ, ದಾರಿದ್ರ್ಯ ರಹಿತ, ಸುಪೋಷಿತ ಶಿಕ್ಷಣ.

ಶಿಕ್ಷಣದ ಪ್ರಣಾಳಿಕೆಯನ್ನು ತೋರುವುದರಲ್ಲಿ ಎಲ್ಲ ಪಕ್ಷಗಳು ಮುಗ್ಗರಿಸಿವೆ... ಕಾಂಗ್ರೆಸ್ ಸ್ವಲ್ಪ ಸಮಾಧಾನಕರವಾಗಿ ಕಂಡುಬಂದಿದೆಯಾದರೂ ಎಷ್ಟರ ಮಟ್ಟಿಗೆ ಅದು ಜಾರಿಯಾಗಲಿದೆ ಎನ್ನುವುದು ಕುತೂಹಲ.

-ಅಭಿನಂದರ ಬಳ್ಳಾರಿ. ಬೆಂಗಳೂರು

ಚುನಾವಣಾ ಬಿಸಿಯಲ್ಲಿ ಪ್ರಕಟಗೊಂಡ ಪತ್ರಿಕೆಯ ಮೇ 8, 2013ರ ಸಂಚಿಕೆ ತುಂಬಾ ಚೆನ್ನಾಗಿತ್ತು, ಸಿ.ಟಿ.ರವಿ ಮತ್ತು ಶಾಮನೂರು ಶಿವಶಂಕರಪ್ಪನವರನ್ನು ಕುರಿತ ವರದಿಗಳು ಸಕಾಲಿಕವಾಗಿದ್ದವು.



ಹೊಗಳಿಕೆ ತೆಗಳಿಕೆ

ವಚನಗಳ ಕುರಿತು ವಾದವಿವಾದಗಳು ನಡೆಯುತ್ತಿರುವ ಈ ದಿನಗಳಲ್ಲಿ ಡಾ. ಶಿವಗಂಗಾ ರುಮ್ಮಾ ಅವರ 'ಸ್ವದೇಶಿ ಮತ್ತು ವಿದೇಶಿ ಸುಲಿಗೆಕೋರರ ಕೂಡಿಕೆಗೆ ಸಂಶೋಧನೆಯೆಂಬ ಕಿರೀಟ' ಲೇಖನ ಸೂಪರ್ಬ್ ಆಗಿತ್ತು. ಧನ್ಯವಾದಗಳು.

-ಜಂಗಮ, ಎಸ್‌ಎಂಎಸ್ ಮೂಲಕ

ಪತ್ರಿಕೆಯಲ್ಲಿ 2011ರಿಂದ ಮಾಜಿ ಸಚಿವ ರಾಮದಾಸರನ್ನು ಕುರಿತು ಪ್ರಕಟಗೊಂಡ ಎಲ್ಲಾ ವರದಿಗಳ ಪ್ರತಿಗಳನ್ನು ಯಾರೋ ಸಂಗ್ರಹಿಸಿ ಅವುಗಳ ಜೆರಾಕ್ಸ್ ಕಾಪಿಗಳನ್ನು ಕ್ಷೇತ್ರದ ತುಂಬ ಮನೆಮನೆಗಳಿಗೆ ಹಂಚುತ್ತಿದ್ದಾರೆ. ಆ ಮೂಲಕ ಈ ಭ್ರಷ್ಟನನ್ನು ಮನೆಗೆ ಕಳುಹಿಸುವ ಕೆಲಸ ಮಾಡುತ್ತಿದ್ದಾರೆ.

ರಾಮದಾಸನ ಅವ್ಯವಹಾರಗಳನ್ನು ಕುರಿತು ಸತತವಾಗಿ ವರದಿಗಳನ್ನು ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

-ಪತ್ರಿಕೆಯ ಅಭಿಮಾನಿ, ಮೈಸೂರು

ಊರಿಗೆ ಬಂದೋಳು ನೀರಿಗೆ ಬಾರದೆ ಇರುತ್ತಾಳಾ ಅನ್ನೋದು ಕನ್ನಡದ ಹಳೇ ಮಾತು.

'ತಿರುಪತಿ ಲಾಡು ಹಂಚಿದೋನು ಹಂಗನಾಮ ಹಾಕದೆ ಇರುತ್ತಾನಾ' ಅನ್ನೋದು ಕೃಷ್ಣಯ್ಯ ಶೆಟ್ಟಿ ... ಹೊಸ ಮಾತು!

- ... ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ... ಮತ್ತು ... ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly. Price Rs. 14/- 15-05-2013

ನನ್ನಿಷ್ಟ, ನನ್ನ ಸ್ಟೈಲ್ - ದರ್ಶನ್

ಸಂದರ್ಶನ

ಇತ್ತೀಚೆಗೆ ಸಿನಿಮಾ ರಂಗದಲ್ಲಿ ವಿವಾದಗಳ ಕೇಂದ್ರಬಿಂದುವಾಗಿದ್ದ ಚಾಲೆಂಜಿಂಗ್ ದರ್ಶನ್ ಈಗ ರಾಜ್ಯ ರಾಜಕೀಯದಲ್ಲೂ ಸುಂಟರಗಾಳಿ ಎಬ್ಬಿಸಿದ್ದಾರೆ. ದರ್ಶನ್ ಇತ್ತೀಚೆಗೆ ಚುನಾವಣಾ ಕಣದಲ್ಲಿರುವ ಜೆಡಿಎಸ್ ಮತ್ತು ಬಿಜೆಪಿಯ ಅಭ್ಯರ್ಥಿಗಳಿಗೂ ಪ್ರಚಾರ ಮಾಡಿರುವುದು ಕೆಲ ಕಾಂಗ್ರೆಸ್ಸಿಗರ ಕಣ್ಣು ಕೆಂಪಾಗಿಸಿದೆ. ಈ ಹಿನ್ನೆಲೆಯಲ್ಲಿ ಈ ಕುರಿತು ದರ್ಶನ್ ಜೊತೆ ಹರಟೆ ಹೊಡೆದದ್ದು ಇಲ್ಲಿದೆ.

ಪ್ರ: ಜೆಡಿಎಸ್ ಮತ್ತು ಬಿಜೆಪಿ ಅಭ್ಯರ್ಥಿಗಳಿಗೂ ನೀವು ಪ್ರಚಾರ ಮಾಡಿದ್ದರಿಂದ ಕಾಂಗ್ರೆಸ್ ಹೈಕಮಾಂಡ್ ನಿಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತಿದೆಯಂತೆ ಹೌದಾ?

ಉ: ಅದೇನು ಶಿಸ್ತು ಕ್ರಮ ಕೈಗೊಳ್ಳುತ್ತಾರೋ ನಾನು ನೋಡ್ತೀನಿ.

ಪ್ರ: ನೀವು ಪಕ್ಷದ ಶಿಸ್ತನ್ನು ಉಲ್ಲಂಘಿಸಿದ್ದೀರಿ ಎಂಬ ಆಪಾದನೆ ಇದೆಯಲ್ಲವೆ?

ಉ: ನಾನು ಯಾವಾಗ ಕಾಂಗ್ರೆಸ್ ಪಕ್ಷ ಸೇರಿದೆ ಎಂದು ಅವರು ಸ್ಪಷ್ಟ ಪಡಿಸಲಿ. ಅವರಷ್ಟಕ್ಕೆ ಅವರು ನನ್ನ ಹೆಸರನ್ನು ಸೇರಿಸಿಕೊಂಡಿದ್ದರೆ ಅದಕ್ಕೆ ನಾನು ಜವಾಬ್ದಾರನಲ್ಲ.

ಪ್ರಶ್ನೆ: ನಿಮ್ಮ ತಾಯಿ ಕಾಂಗ್ರೆಸ್ ಪಕ್ಷ ಸೇರಿದ್ದಾರಲ್ಲವೇ?

ಉ: ಹೌದು, ನಮ್ಮ ತಾಯಿ ಸೇರಿದ್ದಾರೆ. ಅದರರ್ಥ ನಾನು ಸೇರಿದ್ದೇನೆ ಅಂತ ಅಲ್ಲ, ಅಪ್ಪ ಮತ್ತು ಅಮ್ಮ, ಅಪ್ಪ ಮತ್ತು ಮಗ ಬೇರೆ ಬೇರೆ ಪಕ್ಷಗಳಲ್ಲಿ ಇರುವ ಎಷ್ಟು ಉದಾಹರಣೆಗಳು ರಾಜ್ಯದಲ್ಲಿ ಇಲ್ಲ ನೀವೇ ಹೇಳಿ.

ಪ್ರ: ನಿಮ್ಮ ರಾಜಕೀಯ ಸಿದ್ಧಾಂತ ಏನು?

ಉ: ನಾನು ಯಾವುದೇ ರಾಜಕೀಯ ಪಕ್ಷ ಸೇರಿದವನಲ್ಲ, ನನ್ನಿಷ್ಟ ನನ್ನ ಸ್ಟೈಲ್ ಬೇರೆ. ನಾನು ಪಕ್ಷಕ್ಕಿಂತ ವ್ಯಕ್ತಿಯನ್ನು ನೋಡಿ ಪ್ರಚಾರ ಮಾಡುತ್ತಿದ್ದೇನೆ.

ಪ್ರ: ಈ ಬಾರಿ ಚುನಾವಣೆಯಲ್ಲಿ ಯಾರು ಯಾರಿಗೆ ಯಾವ್ಯಾವ ಕಾರಣಕ್ಕೆ ಪ್ರಚಾರ ಮಾಡುತ್ತಿದ್ದೀರಿ?

ಉ: ಅಂಬರೀಶಣ್ಣ ನನಗೆ ಅಪ್ಪಾಜಿ ಇದ್ದ ಹಾಗೆ. ಹೀಗಾಗಿ ಮಂಡ್ಯಕ್ಕೆ ಹೋಗಿ ಪೊಕಂ ಹೊಡುತ್ತೇನೆ. ಆನಂದ ಅಪ್ಪುಗೋಳು ನನ್ನ 'ಸಂಗೊಳ್ಳಿ ರಾಯಣ್ಣ' ಚಿತ್ರದ ಫೇವರೆಟ್ ನಿರ್ಮಾಪಕ. ಅದಕ್ಕಾಗಿ ಅವರ ಪರ ಕಿತ್ತೂರಿನಲ್ಲಿ ಪ್ರಚಾರ ಮಾಡುತ್ತಿದ್ದೇನೆ. ಧಾರವಾಡದಲ್ಲಿ ವಿನಯ್ ಕುಲಕರ್ಣಿಯವರ ಪರ ಪ್ರಚಾರ ಮಾಡಲು ಕಾರಣ ನಾನು ಆರಂಭದ ದಿನಗಳಲ್ಲಿ ಅವರಿಂದಲೇ ಹಸುಗಳನ್ನು ಖರೀದಿಸುತ್ತಿದ್ದೆ. ಬೆಂಗಳೂರಿನ ಮಹಾದೇವಪುರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿರುವ ಮಾಜಿ ಸಚಿವ ಅರವಿಂದ್ ಲಿಂಬವಳಿ ನನ್ನ ಕಟ್ಟಾ ಅಭಿಮಾನಿ. ನನ್ನ ಚಿತ್ರದ ಬ್ಯಾನರ್‌ಗಳನ್ನು ಕೂಡ ಅವರು ಕಟ್ಟಿದ್ದರು. ಅದಕ್ಕಾಗಿ ಅವರ ಪರ ಪ್ರಚಾರ ಮಾಡುತ್ತೇನೆ.

ಪ್ರ: ಅಂದರೆ ನಿಮ್ಮ ನಿಷ್ಠೆ ಏನಿದ್ದರೂ ವ್ಯಕ್ತಿಗೆ ಮಾತ್ರ?



ಉ: ಅದು ನಿಜ, ಅದರಲ್ಲೂ ನನ್ನ ಕಷ್ಟದ ಕಾಲದ ದಿನಗಳಲ್ಲಿ ನನಗೆ ಸಹಾಯ ಮಾಡಿದವರಿ... ನಾನು ಸಹಾಯ ಮಾಡುವುದು ನನ್ನ ಧರ್ಮ. ದರ್ಶನ್ ಪ್ರಚಾರಕ್ಕೆ ಬರುತ್ತಾನೆ ಎಂದ... ಈಗ ಚುನಾವಣಾ ಕಣದಲ್ಲಿರುವ ಅನೇಕ ಸಿನಿಮಾ ನಟರು, ರಾಜಕಾರಣಿಗಳ... ಕರೆಯಲಾರಂಭಿಸಿದ್ದಾರೆ. ಅವರೆಲ್ಲರಿಗೂ ನಾನು 'ನೋ' ಎಂದು ಹೇಳಿದ್ದೇನೆ. ... ದರ್ಶನ್‌ನನ್ನು ಖರೀದಿಸಲು ಯಾರಿಂದಲೂ ಸಾಧ್ಯವಿಲ್ಲ.

ಪ್ರ: ಈ ಪ್ರಚಾರಕ್ಕಾಗಿ ನೀವು ಅಭ್ಯರ್ಥಿಗಳಿಂದ ಹಣ ಪಡೆದುಕೊಂಡಿದ್ದೀರಿ... ಎಂಬ ಮಾತು ಕೇಳಿಬರುತ್ತಿದೆಯಲ್ಲವೇ?

ಉ: ನಾನು ಈ ನಾಲ್ಕು ಅಭ್ಯರ್ಥಿಗಳಿಂದ ಒಂದೇ ಒಂದು ಪೈ... ಪಡೆದಿಲ್ಲ, ಡೀಸೆಲ್ ಖರ್ಚು, ಹೋಟೆಲ್ ಬಿಲ್ ಎಲ್ಲವನ್ನೂ ನಾನೆ... ನನ್ನ ಕೈಯಿಂದಲೇ ಹಾಕಿದ್ದೇನೆ. ಹಣಕ್ಕಾಗಿ ಚುನಾವಣೆ ಪ್ರಚಾ... ಮಾಡುವ ಅನಿವಾರ್ಯತೆ ನನಗಿಲ್ಲ.

ಪ್ರ: ಹೀಗೆ ಒಂದೊಂದು ಕ್ಷೇತ್ರದಲ್ಲಿ ಒಂದೊಂದು... ಪಕ್ಷದ ಅಭ್ಯರ್ಥಿಗೆ ಮತ ಕೇಳುವಾಗ ಕಷ್ಟ ಆಗುವುದಿಲ್ಲವೇ...

ಉ: ನಾನು ಎಲ್ಲೂ ಜಾಸ್ತಿ ಚುನಾವಣಾ ಪ್ರಚಾ... ಮಾಡುವುದಿಲ್ಲ, ಮೇಲಾಗಿ ಭಾಷಣ ಮಾಡುವಾ... ಈ ವ್ಯಕ್ತಿ ತುಂಬಾ ಒಳ್ಳೆಯವರು, ಇವರಿಗೆ ಮತ... ನೀಡಿ ಎಂದು ಹೇಳುತ್ತೇನೆಯೇ ವಿನಃ ಎಲ್ಲೂ... ಅವರ ಪಕ್ಷದ ಹೆಸರನ್ನು, ಅದರ ಚಿಹ್ನೆಯನ್ನು... ಕೂಡ ಹೇಳುವುದಿಲ್ಲ.

ಪ್ರ: ನಿಮಗೆ ಕಾಂಗ್ರೆಸ್ ಪಕ್ಷದಿಂದ ನೋಟಿಸ್... ಬಂದಿದೆಯಾ?

ಉ: ನಾನು ಆಗಲೇ ಹೇಳಿದ್ದೇನೆ ನನ... ನೋಟಿಸ್ ಕೊಡಲು ಅವರು ಯಾರು... ಅವರು ದೊಡ್ಡವರು, ಅವರ ಬಗ್ಗೆ ಹಗುರವಾಗಿ... ಮಾತನಾಡುವುದಿಲ್ಲ, ನೋಟಿಸ್ ಬರಲಿ... ಆಮೇಲೆ ಉತ್ತರಿಸುತ್ತೇನೆ.

ಹೀಗೆ ಈ ಬಾರಿಯ ಚುನಾವಣೆಯಲ್ಲಿ... ಕಾಂಗ್ರೆಸ್, ಬಿಜೆಪಿ ಮತ್ತು ದಳ ಮೂರು ಪಕ್ಷಗಳ... ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡುತ್ತಾ... ಸುಂಟರಗಾಳಿ ಎಬ್ಬಿಸಿರುವ ದರ್ಶನ್ ರಾಜಕೀಯದಲ್ಲಿ... ಚರ್ಚೆಯ ಕೇಂದ್ರಬಿಂದುವಾಗಿದ್ದಾರೆ.



ಫಾಸ್ಟೆಸ್ಟ್ ಮ್ಯೂಸಿಕ್ ಡೈರೆಕ್ಟರ್

ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಪ್ರತಿಭಾವಂತ ಸಂಗೀತ ನಿರ್ದೇಶಕ ಲಭಿಸಿದಂತಾಗಿದೆ. ಆತನ ಹೆಸರು ಅರ್ಜುನ್ ಜನ್ಯ.

ಮೂಲ ಹೆಸರು ಅರ್ಜುನ್ ಎಂದಿತ್ತಾದರೂ 'ಕೆಂಪೇಗೌಡ' ಚಿತ್ರದಲ್ಲಿ ಕೆಲಸ ಮಾಡಿದ ನಂತರ ನಟ ಸುದೀಪ್ ಇವರಿಗೆ ಅರ್ಜುನ್ ಜನ್ಯ ಎಂದು ಮರು ನಾಮಕರಣ ಮಾಡಿದ್ದಾರೆ.

ದುನಿಯಾ ವಿಜಿ ನಾಯಕತ್ವದ 'ಯುಗ' ಚಿತ್ರದ ಮೂಲಕ ಸಂಗೀತ ನಿರ್ದೇಶನಕ್ಕೆ ಕಾಲಿರಿಸಿದ ಅರ್ಜುನ್ ಜನ್ಯ ಅಲ್ಪ ಕಾಲಾವಧಿಯಲ್ಲೇ 25 ಸಿನಿಮಾಗಳಿಗೆ ಸಂಗೀತ ನೀಡುವ ಮೂಲಕ ಸ್ಯಾಂಡಲ್‌ವುಡ್ ಮಟ್ಟಿಗೆ ದಾಖಲೆಯನ್ನೇ ನಿರ್ಮಿಸಿದ್ದಾರೆ.

ಹಂಸಲೇಖ, ಗುರುಕಿರಣ್‌ರಂತವರೇ ಇಷ್ಟು ಕಡಿಮೆ ಅವಧಿಯಲ್ಲಿ 25 ಸಿನಿಮಾ ಮುಗಿಸಿಲ್ಲ ಎನ್ನುವುದೇ ವಿಶೇಷ.

ವಿ. ಮನೋಹರ್ ಮತ್ತು ಕೆ. ಕಲ್ಯಾಣ್‌ರವರ ಸಹಾಯಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು ಸಂಗೀತ ನಿರ್ದೇಶನವಲ್ಲದೆ 30 ಕ್ಕೂ ಹೆಚ್ಚು ಚಿತ್ರಗಳಿಗೆ ಕೀ-ಬೋರ್ಡ್ ಪ್ಲೇಯರ್ ಆಗಿಯೂ ಕೆಲಸ ಮಾಡಿದ್ದಾರೆ.

ಅವರೇ ಹೇಳುವಂತೆ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಜೊತೆಗಿನ ಭೇಟಿ ಅವರ ಜೀವನಕ್ಕೆ ದೊಡ್ಡದೊಂದು ಬ್ರೇಕ್ ನೀಡಿತಂತೆ.

'ಅಲೆಮಾರಿ', 'ಕೆಂಪೇಗೌಡ', 'ಜರಾಸಂಧ', 'ರ್‍ಯಾಂಬೊ', 'ಆಟೋ ರಾಜ' ತರಹದ ಸಾಲು ಸಾಲು ಹಿಟ್ ಚಿತ್ರಗಳಿಗೆ ಅವರು ಸಂಗೀತ ನೀಡಿದ್ದಾರೆ. ಇವರು ಸಂಗೀತ ನಿರ್ದೇಶಕ ಮಾತ್ರವಲ್ಲದೆ ಅದ್ಭುತ ಗಾಯಕರೂ ಹೌದು. ಕನ್ನಡ ಚಿತ್ರರಂಗದ ಪಾಲಿಗೆ ಇವರೊಬ್ಬ ಅಪರೂಪದ ಪ್ರತಿಭಾವಂತನೇ ಸರಿ.

'ಚೆಲುವಿನ ಚಿತ್ತಾರ'ದ ನಾಯಕಿ ಅಮೂಲ್ಯ ಈಗ ನಿಧಾನವಾಗಿ ಮತ್ತೆ ಲೈಮ್‌ಲೈಟಿಗೆ ಬರುತ್ತಿದ್ದಾಳೆ. 'ಚೆಲುವಿನ ಚಿತ್ತಾರ'ದಲ್ಲಿ ಗೋಲ್ಡನ್ ಸ್ಟಾರ್ ಗಣೇಶನ ಜೊತೆ ನಟಿಸಿ ರಾತ್ರಿ ಬೆಳಗಾಗುವುದರೊಳಗೆ ಕರ್ನಾಟಕದ ಮನೆ ಮಾತಾಗಿದ್ದ ಅಮೂಲ್ಯ ಕನ್ನಡ ಚಿತ್ರರಂಗದಲ್ಲಿ ನಂ.1 ನಾಯಕಿ ಪಟ್ಟವನ್ನು ಅಲಂಕರಿಸಬಹುದು ಎಂದು ಹಲವರು ಭವಿಷ್ಯ ನುಡಿದಿದ್ದರು.

ಆದರೆ ದುಂಡುಮುಖದ, ಬೊಗಸೆ ಕಣ್ಣಿನ ಈ ಯುವತಿಯ ಎರಡು ಮೂರು ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಒಂದೇ ಸಮನೆ ಮುಗ್ಗರಿಸಿದ್ದವು. ಅದರಲ್ಲೂ ಆಕೆಯ ಸಹೋದರ ದೀಪಕ್ ನಿರ್ದೇಶಿಸಿದ 'ಮನಸಾಲಜಿ' ಮತ್ತು ರತ್ನಜ ನಿರ್ದೇಶಿಸಿದ 'ಪ್ರೇಮಿಸಂ' ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ್ದು ಆಕೆಯ ಪಾಲಿಗೆ ದೊಡ್ಡ ಆಘಾತವಾಗಿತ್ತು. ಇದರ ಜೊತೆಜೊತೆಗೆ ಎಸ್. ನಾರಾಯಣ್ ಪುತ್ರ ಪಂಕಜ್ ಜೊತೆ ನಟಿಸುವಾಗ ಆತನ ಜೊತೆ ಗಾಸಿಪ್‌ನಲ್ಲಿ ಈಕೆಯ ಹೆಸರು ಕೇಳಿಬಂದಿದ್ದು ಮತ್ತು ಅದರ ಬೆನ್ನಿಗೆ ನಿರ್ದೇಶಕ ರತ್ನಜ ಜೊತೆಯಲ್ಲಿನ ಮತ್ತೊಂದು ಅವಾಂತರ ಆಕೆಗೆ ಸಿನಿಮಾ ಬದುಕೇ ಬೇಡ ಎಂಬಷ್ಟು ಕಿರಿಕಿರಿ ಉಂಟುಮಾಡಿದ್ದವು.

ಆದರೆ ಈಗ ಅಮೂಲ್ಯ ಹಳೆಯದನ್ನು ಮರೆತು ಮತ್ತೆ ಹೊಸ ಜೀವನಕ್ಕೆ ಕಾಲಿರಿಸಿದ್ದಾಳೆ. ಛಾಯಾಗ್ರಾಹಕ ಕೃಷ್ಣ ಅವರ ನಿರ್ದೇಶನದ 'ಗಜಕೇಸರಿ'ಯಲ್ಲಿ ಯಶ್ ಜೊತೆ ನಾಯಕಿಯಾಗಿ ನಟಿಸಲು ಅಮೂಲ್ಯ ಆಯ್ಕೆಯಾಗಿದ್ದಾಳೆ. ಸದ್ಯಕ್ಕೆ ಯುವ ನಾಯಕ ನಟರುಗಳಲ್ಲಿ ಯಶ್ ಮೊದಲ ಪಂಕ್ತಿಯಲ್ಲಿರುವುದರಿಂದ ಈ ಚಿತ್ರ ಅಮೂಲ್ಯ ಪಾಲಿಗೆ ಹೊಸ ತಿರುವು ನೀಡಿದರೂ ಆಶ್ಚರ್ಯ ಪಡಬೇಕಾಗಿಲ್ಲ.



ಇನ್ನು ಹೊಸಜೀವನ

ಕುಮಾರ ಗೋವಿಂದು ಎಂಬ ನಟ, ನಿರ್ಮಾಪಕ ಕಂ ನಿರ್ದೇಶಕ ಮತ್ತೆ ಗಾಂಧಿನಗರದಲ್ಲಿ ಪ್ರತ್ಯಕ್ಷರಾಗಿದ್ದಾರೆ. ಈ ಹಿಂದೆ ಇವರು ನಿರ್ದೇಶಿಸಿದ್ದ 'ಸತ್ಯ' ಎಂಬ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಸುಮಾರಾಗಿಯೇ ನಡೆದಿತ್ತು. ಆಗ ಗಾಂಧಿನಗರದ ಜನರು ಕುಮಾರ ಗೋವಿಂದು ಅವರನ್ನು ಸುಮಾರು ಗೋವಿಂದು ಎಂದು ಲೇವಡಿ ಮಾಡಿದ್ದರು.

ಈಗ ಇದೇ ಗಾಂಧಿನಗರದ ಜನರ ಲೇವಡಿಗೆ ಉತ್ತರ ನೀಡುವಂತೆ ಕುಮಾರ ಗೋವಿಂದು ಭಾರಿ ಸಿದ್ಧತೆಯಿಂದ ಭರ್ಜರಿಯಾಗಿ ಪುನಃ ಗಾಂಧಿನಗರಕ್ಕೆ ಬರುತ್ತಿದ್ದಾರೆ. ಅವರು ನಿರ್ಮಿಸಿ ಮತ್ತು ನಿರ್ದೇಶಿಸಲಿರುವ 'ಮಾಸ್ಟರ್ ಮೈಂಡ್' ಎಂಬ ಹೊಸ ಚಿತ್ರದ ಮಹೂರ್ತದ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಗಾಂಧಿನಗರದಲ್ಲಿ ಹಂಚಿದ್ದಾರೆ. ವಿಶೇಷವೆಂದರೆ ಈ ಬಾರಿ ಕುಮಾರ ಗೋವಿಂದು ತಾವೇ ನಾಯಕನಾಗಿ ನಟಿಸುವ ಬದಲು ಹೊಸ ಯುವಕನನ್ನು ನಾಯಕನಾಗಿ ಪರಿಚಯಿಸುತ್ತಿದ್ದಾರೆ. ಅಂದರೆ ತನ್ನ ನಿರ್ದೇಶನದ ವೃತ್ತಿಯನ್ನು ಕುಮಾರ ಗೋವಿಂದು ತುಂಬಾ ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂದಾಯಿತು. ಚಿತ್ರದ ಹೆಸರೆ ಸೂಚಿಸುವಂತೆ ಇದೊಂದು ಸಸ್ಪೆನ್ಸ್ ಮತ್ತು ಕುತೂಹಲ ಕೆರಳಿಸುವ ಚಿತ್ರವಂತೆ. 'ಮಾಸ್ಟರ್ ಮೈಂಡ್' ಬಗ್ಗೆ ಸದ್ಯಕ್ಕೆ ಇಷ್ಟು ಮಾತ್ರ ಸುದ್ದಿ ತಿಳಿದು ಬಂದಿದೆ.

● ಶೆಣೆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com